ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮೆಕ್ಸಿಕೋದ ಫಾತಿಮಾ ಭುವನಸುಂದರಿ

74ನೇ ಭುವನ ಸುಂದರಿಯಾಗಿ ಮೆಕ್ಸಿಕೋದ ಫಾತಿಮಾ ಬಾಷ್ ಹೊರ ಹೊಮ್ಮಿದ್ದಾರೆ. ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ನಡೆದ 2025ರ ಭುವನ ಸುಂದರಿ ಸ್ಪರ್ಧೆಯಲ್ಲಿ 25 ವರ್ಷದ ಫಾತಿಮಾ ಯುವತಿಯರ ಸಬಲೀಕರಣ ಬಗ್ಗೆ ನೀಡಿದ ಉತ್ತರ ತೀರ್ಪುಗಾರರ ಗಮನ ಸೆಳೆಯಿತು. ಇದು ಮೆಕ್ಸಿಕೋಕ್ಕೆ ಒಲಿದ 4ನೇ ಕಿರೀಟ.

ಸೊಂಪಾದ ಪುಟಗಳು

ರೋಮ್‌ನ ಭೂಮಿಯೊಳಗಿನ ಪ್ರಪಂಚ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ಆರೋಗ್ಯದಲ್ಲಿ ವೈಜ್ಞಾನಿಕತೆ ಎಂದರೆ- ವೈಯಕ್ತಿಕತೆ!
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ಜೀವನದಲ್ಲಿ ಎಷ್ಟೇ ತಪ್ಪು ಮಾಡಿದರೂ ತಿದ್ದಿಕೊಳ್ಳಲು ಅವಕಾಶವಿರುತ್ತದೆ. ಹಾಗೆಂದು ತಪ್ಪು ಮಾಡುವುದನ್ನೇ ಅಭ್ಯಾಸ ಮಾಡಬಾರದು.

ವಕ್ರತುಂಡೋಕ್ತಿ



ವಿಶ್ವಕೋಶದಲ್ಲಿ ಎಲ್ಲ ಜ್ಞಾನವೂ ಇರುತ್ತವೆ. ಓದದಿದ್ದರೆ ಅವು ಅಲ್ಲಿಯೇ ಇರುತ್ತವೆ.

10 ಲಕ್ಷ ಟನ್ ಜೋಳ ಖರೀದಿಗೆ ಸಿಎಂ ಆದೇಶ

ಮೈಸೂರು: ಮೆಕ್ಕೆ ಜೋಳ ಬೆಲೆ ಕುಸಿತದಿಂದ ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಎಲ್ಲ ರೀತಿಯ ನೆರವು ಒದಗಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮೈಸೂರಿನ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ಒಂದು ಕ್ವಿಂಟಾಲ್ ಮೆಕ್ಕೆ ಜೋಳಕ್ಕೆ 2400 ರು. ಎಂಎಸ್‌ಪಿ ನಿಗದಿಯಾಗಿದೆ. ಇದುವರೆಗೆ ಖರೀದಿ ಕೇಂದ್ರ ಪ್ರಾರಂಭವಾಗಿಲ್ಲ, ರೈತರು ಅಂದಾಜು 55 ಲಕ್ಷ ಮೆಟ್ರಿಕ್ ಟನ್ ಮೆಕ್ಕೆ ಜೋಳ ಬೆಳೆಯುವ ನಿರೀಕ್ಷೆಯಿದೆ, ರೈತರಿಂದ 10 ಲಕ್ಷ ಮೆ.ಟನ್ ಖರೀದಿಗೆ ರಾಜ್ಯ ಸರಕಾರ ನಿರ್ಧರಿಸಿದೆ ಎಂದು ಹೇಳಿದ್ದಾರೆ.

ಪಾಲಕರೆದುರೇ ಮಗುವನ್ನು ಹೊತ್ತೊಯ್ದ ಚಿರತೆ

ತರೀಕೆರೆ (ಚಿಕ್ಕಮಗಳೂರು): ತಾಲೂಕಿನ ಶಿವಪುರ ಸಮೀಪದ ನವಿಲುಗುಡ್ಡದ ಬಂಡೆಯ ಬಳಿ ತೋಟದ ಮನೆಯ ಎದುರು ಆಟವಾಡುತ್ತಿದ್ದ ಐದು ವರ್ಷದ ಮಗುವನ್ನು ಚಿರತೆ ಹೊತ್ತೊಯ್ದಿದೆ. ಬೆಂಗಳೂರಿನ ರಾಮಚಂದ್ರಪ್ಪ ಎಂಬುವವರಿಗೆ ಸೇರಿದ ಅಡಿಕೆ ತೋಟದಲ್ಲಿ ಬಸವರಾಜ ಮತ್ತು ರೇಣುಕಾ ದಂಪತಿ ಕೆಲಸ ಮಾಡುತ್ತಿದ್ದಾರೆ. ಇವರ ಪುತ್ರಿ ಸಾನ್ವಿಯೇ ಚಿರತೆ ಪಾಲಾದ ದುರದೃಷ್ಟವಂತ ಮಗು. ಗುರುವಾರ ಸಂಜೆ 6 ಗಂಟೆಗೆ ಘಟನೆ ನಡೆದಿದೆ. ಪಕ್ಕದಲ್ಲೇ ಇದ್ದ ತಂದೆ ಹಿಂದೆ ಓಡಿ ಹೋದರೂ, ಚಿರತೆ ಮಗುವಿನೊಂದಿಗೆ ನಾಪತ್ತೆಯಾಗಿದೆ. ಸ್ಥಳಕ್ಕೆ ಬೀರೂರು ಠಾಣೆ ಪೊಲೀಸರು, ಅರಣ್ಯ ಇಲಾಖೆ ಸಿಬ್ಬಂದಿ ತೆರಳಿದ್ದು, ಮಗುವಿಗಾಗಿ ಶೋಧ ನಡೆಸುತ್ತಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

'ರಾಜ್ಯದಲ್ಲಿ ಗರಿಗೆದರಿದ ಬಣ ರಾಜಕೀಯ'



ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಭೇಟಿಗೆ ಡಿಕೆ ಬಣ ಪ್ರಯತ್ನ
ಇಂದು ಖರ್ಗೆ-ಸಿದ್ದು ಭೇಟಿ | ಸಿಎಂ, ಡಿಸಿಎಂ ಆಪ್ತರಿಂದ ಸರಣಿ ಸಭೆ

ಅಡಕತ್ತರಿಯಲ್ಲಿ ಹೈಕಮಾಂಡ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆಯ ಕೂಗು ತಗ್ಗುವ ಮೊದಲೇ ಡಿ.ಕೆ.ಶಿವಕುಮಾರ್ ಆಪ್ತರ ದೆಹಲಿ ಪೆರೇಡ್, ಮತ್ತೊಂದು ಸುತ್ತಿನ ಗೊಂದಲಕ್ಕೆ ಎಡೆಮಾಡಿಕೊಟ್ಟಿದೆ. ಈ ಬೆಳವಣಿಗೆಯ ಬೆನ್ನಲ್ಲೇ ಸಿಎಂ-ಡಿಸಿಎಂ ಆಪ್ತರ ಸರಣಿ ಸಭೆಗಳು ಪಕ್ಷದ ಹೈಕಮಾಂಡ್ ಅನ್ನು ಅಡ್ಡಕತ್ತರಿಗೆ ಸಿಲುಕುವಂತೆ ಮಾಡಿದೆ.

ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶದ ಬಳಿಕ ಕಾಂಗ್ರೆಸ್ ನಾಯಕರು ದೆಹಲಿ ಪೆರೇಡ್ ನಡೆಸಿದ್ದರೂ, ಸದ್ಯಕ್ಕೆ ಯಾವುದೇ ಬದಲಾವಣೆಯಿಲ್ಲ ಎಂದು ಹೈಕಮಾಂಡ್ ಸಂದೇಶ ನೀಡಿದ್ದರಿಂದ ಎಲ್ಲವೂ ತಣ್ಣಗಾಗಿತ್ತು. ಆದರೆ ಗುರುವಾರ ತಡರಾತ್ರಿ ಶಿವಕುಮಾರ್ ಆಪ್ತರು ದೆಹಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್‌ರನ್ನು ಭೇಟಿಯಾಗಲು ಪ್ರಯತ್ನಿಸಿರುವ ನಡೆ, ಸಿದ್ದರಾಮಯ್ಯ ಬಣ ಸಕ್ರಿಯವಾಗುವಂತೆ ಮಾಡಿದೆ.

ದೆಹಲಿಗೆ ತೆರಳಿದ್ದ ಶಾಸಕರ್‍ಯಾರು?

ಸಚಿವರಾದ ಚಲುವರಾಯಸ್ವಾಮಿ, ಶಿವಾನಂದ ಪಾಟೀಲ್, ಶಾಸಕರಾದ ಕುಣಿಗಲ್ ರಂಗನಾಥ್, ನೆಲಮಂಗಲ ಶ್ರೀನಿವಾಸ್, ಗುಬ್ಬಿ ಶ್ರೀನಿವಾಸ್, ಗಣಿಗ ರವಿ, ಮದ್ದೂರಿನ ಉದಯ್ ಕದಲೂರು, ಶೃಂಗೇರಿಯ ರಾಜೇಗೌಡ, ಆನೇಕಲ್ ಶಿವಣ್ಣ, ಕುಡುಚಿಯ ಮಹೇಂದ್ರ ತಮ್ಮಣ್ಣನವರ್, ಶರತ್ ಬಚ್ಚೇಗೌಡ, ಮೇಲ್ಮನೆ ಸದಸ್ಯರಾದ ರವಿ, ದಿನೇಶ್ ಗೂಳಿಗೌಡ ಸೇರಿದಂತೆ ಹಲವರಿದ್ದರು.

ಈ ಬೆಳವಣಿಗೆಯ ಬೆನ್ನಲ್ಲೇ ಸಿದ್ದರಾಮಯ್ಯ ಆಪ್ತರು ಸರಣಿ ಸಭೆಗಳನ್ನು ನಡೆಸಿದ್ದಾರೆ. ಡಿ.ಕೆ.ಶಿವಕುಮಾರ್ ಅಧಿಕೃತವಾಗಿ ಯಾರೊಂದಿಗೂ ಸಭೆ ನಡೆಸಿದ್ದರೂ ಸಹೋದರ ಡಿ.ಕೆ.ಸುರೇಶ್ ಹಾಗೂ ಆಪ್ತ ಶಾಸಕರ ಮೂಲಕ ತಮ್ಮ ಸಂದೇಶವನ್ನು ರವಾನಿಸುವ ಪ್ರಯತ್ನ ಮಾಡಿದ್ದಾರೆ. ಈ ಬೆಳವಣಿಗೆಯ ಬೆನ್ನಲ್ಲೇ ಪರ-ವಿರೋಧ ಚರ್ಚೆ ಹೆಚ್ಚಾಗುತ್ತಿದ್ದಂತೆ ಹೈಕಮಾಂಡ್ ಮಧ್ಯಪ್ರವೇಶಿಸಿ, ಯಾವುದೇ ಹೇಳಿಕೆ ನೀಡದಂತೆ ಮತ್ತೊಮ್ಮೆ ಎಚ್ಚರಿಕೆ ನೀಡಿದೆ.

ಗುರುವಾರ ಸಂಜೆ ದೆಹಲಿಗೆ ಆಗಮಿಸಿದ್ದ ಡಿಕೆ ಆಪ್ತರು, ರಾತ್ರಿ 10.30ರ ವೇಳೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯನ್ನು ಭೇಟಿ ಮಾಡಿದ್ದಾರೆ. ಬಳಿಕ ತಡರಾತ್ರಿ ವೇಣುಗೋಪಾಲ್‌ರನ್ನು ಭೇಟಿ ಮಾಡಿದ್ದಾರೆ. ಇಬ್ಬರ ಬಳಿಯೂ ನಾಯಕತ್ವ ಬದಲಾವಣೆ ಗೊಂದಲ ಹಾಗೂ ಸಂಪುಟ ಪುನಾರಚನೆ ಬಗ್ಗೆ ಚರ್ಚಿಸಿದ್ದಾರೆ. ಈ ಬೆನ್ನಲ್ಲೇ ಸಿದ್ದರಾಮಯ್ಯ ಅವರು ತಮ್ಮ ಆಪ್ತ ಸಚಿವರೊಂದಿಗೆ ಗುರುವಾರ ಸಂಜೆ ಹಾಗೂ ಶುಕ್ರವಾರ ಬೆಳಗ್ಗೆ ಸಭೆ ನಡೆಸಿದ್ದಾರೆ. ಇದು ರಾಜ್ಯ ಕಾಂಗ್ರೆಸ್‌ನಲ್ಲಿ 'ಬೂದಿ ಮುಚ್ಚಿದ ಕೆಂಡವಾಗಿದ್ದ' ನಾಯಕತ್ವ ಬದಲಾವಣೆ ಚರ್ಚೆಗೆ ಮತ್ತೆ ಕಿಡಿ ಹೊತ್ತಿಸಿದೆ.

ಇಂದು ಸಿಎಂ-ಖರ್ಗೆ ಭೇಟಿ?: ನಾಯಕತ್ವ ಬದಲಾವಣೆ ಕುರಿತು ದಿನದಿಂದ ದಿನಕ್ಕೆ ಗೊಂದಲಗಳು ಹೆಚ್ಚಾಗುತ್ತಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಶನಿವಾರ ಭೇಟಿಯಾಗುವ ಸಾಧ್ಯತೆಯಿದೆ. →10

ಸಿಎಂ VS ಡಿಸಿಎಂ

ಸಿದ್ದರಾಮಯ್ಯ ಹೇಳಿದ್ದು	ಶಿವಕುಮಾರ್ ಹೇಳಿದ್ದು
ಐದು ವರ್ಷ ನಾನೇ ಸಿಎಂ; ಮುಂದಿನ ಬಜೆಟ್‌ಗಳನ್ನೂ ನಾನೇ ಮಂಡಿಸುವೆ	5 ವರ್ಷ ನಾನೇ ಮುಖ್ಯಮಂತ್ರಿ ಎಂದಿರುವ ಸಿದ್ದರಾಮಯ್ಯಗೆ ಆಲ್ ದಿ ಬೆಸ್ಟ್
ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆಗೆ ವರಿಷ್ಠರ ಮಾತೇ ಅಂತಿಮ	ಸಿಎಂ ಸಂಪುಟ ಪುನಾರಚನೆ ಬಗ್ಗೆ ಹೇಳಿದ್ದಕ್ಕೆ ಕೆಲವರು ದಿಲ್ಲಿ ಪರೇಡ್ ಮಾಡಿದ್ದಾರೆ
ಡಿಸಿಎಂ ಶಿವಕುಮಾರ್ ಅವರೇ ಹೇಳಿದಂತೆ ನಾನೆಂದೂ ಮಾತಿಗೆ ತಪ್ಪುವುದಿಲ್ಲ.	ಗುಂಪುಗಾರಿಕೆ ನನ್ನ ರಕ್ತದಲ್ಲೇ ಇಲ್ಲ, ನಾನು 140 ಶಾಸಕರ ಗುಂಪಿಗೆ ಸೇರಿದವನು

ಯಾವ ಸಂದೇಶ ನೀಡುತ್ತಿದ್ದೀರಿ?: ಖರ್ಗೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಯಾಗಲು ಡಿ.ಕೆ.ಶಿವಕುಮಾರ್ ಆಪ್ತರ ನಿಯೋಗ ದೆಹಲಿಗೆ ತೆರಳಿ ದ್ದಕ್ಕೆ ಖರ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಕರ್ನಾಟಕದಲ್ಲಿ ಸ್ಥಿರ ಸರಕಾರ ವಿರುವ ಈ ಸಮಯದಲ್ಲಿ ಈ ರೀತಿಯ ಬಣ ಪ್ರದರ್ಶನದ ಅಗತ್ಯ ವೇನಿದೆ? ಈಗಾಗಲೇ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಭೇಟಿ ನೀಡಿದ ಸಮಯ ದಲ್ಲಿ ನೀಡಬೇಕಾದ 'ಸೂಚನೆ'ಗಳನ್ನು ನೀಡಲಾಗಿದೆ. ಆದರೆ ಪುನಃ ಈ ರೀತಿ ದೆಹಲಿಗೆ ಬಂದರೆ ಕೆಟ್ಟ ಸಂದೇಶ ರವಾನೆಯಾಗಲಿದೆ. ದಿಲ್ಲಿಗೆ ಬಂದು ಯಾವ ಸಂದೇಶ ನೀಡುತ್ತಿದ್ದೀರಿ ಎಂದು ನಾಯಕರನ್ನು ಪ್ರಶ್ನಿಸಿದ್ದಾರೆ ಎನ್ನಲಾಗಿದೆ.

> ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಸಿಎಂ ಅಥವಾ ಡಿಸಿಎಂಗೆ ಹೇಳುವಷ್ಟು ದೊಡ್ಡವನಲ್ಲ. ಇಬ್ಬರೂ ಕುಳಿತು ಸಮಸ್ಯೆ ಬಗೆಹರಿಸಿಕೊಳ್ಳುವುದು ಸೂಕ್ತ. ಅನಗತ್ಯವಾಗಿ ಬಿಜೆಪಿಗರು ಇದನ್ನು ಮುಂದಿಟ್ಟು ಚರ್ಚಿಸುತ್ತಿದ್ದಾರೆ. ಈ ವಿಷಯದಲ್ಲಿ ಗೊಂದಲ ಬಗೆಹರಿಸಿಕೊಳ್ಳಬೇಕು
> – **ಸತೀಶ್ ಜಾರಕಿಹೊಳಿ**, ಸಚಿವ

ತಟಸ್ಥ ಬಣದಲ್ಲಿ ಹಲವು ಹಿರಿಯ ಶಾಸಕರು
ಹೈಕಮಾಂಡ್ ಮಾತಿಗೆ ಇನ್ನೂ ಕೆಲವರ ನಿಷ್ಠೆ

ಬಣದಿಂದ ಅಂತರಕ್ಕೆ ಶರಣಾದ ಹಲವರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರಕ್ಕೆ ಎರಡೂವರೆ ವರ್ಷ ತುಂಬಿದ ಬೆನ್ನಲ್ಲೇ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಬಣ ತಮ್ಮದೇಯಾದ ರಾಜಕೀಯ ದಾಳಗಳನ್ನು ಉರುಳಿಸುತ್ತಿದ್ದರೆ, ಇನ್ನೊಂದೆಡೆ ಹಲವರು ಯಾವುದೇ ಬಣದೊಂದಿಗೆ ಕಾಣಿಸಿಕೊಳ್ಳದೇ 'ಏನಾಗಬಹುದು' ಎನ್ನುವ ಗೊಂದಲದಲ್ಲಿಯೇ 'ತಟಸ್ಥ'ರಾಗಿ ಉಳಿದಿದ್ದಾರೆ.

140 ಸಂಖ್ಯಾಬಲದ ಕಾಂಗ್ರೆಸ್ ಸರಕಾರದಲ್ಲಿ ಸಿದ್ದರಾಮಯ್ಯ ಅವರ ಬೆಂಬಲವಾಗಿ ಹಲವು ನಾಯಕರು ಬ್ಯಾಟ್ ಬೀಸುತ್ತಿದ್ದಾರೆ. ಹಳೇ ಮೈಸೂರು ಭಾಗದ ಶಾಸಕರು ಡಿ.ಕೆ.ಶಿವಕುಮಾರ್ ಪರವಾಗಿ ವಕಾಲತ್ತು ವಹಿಸುತ್ತಿದ್ದಾರೆ. ಡಿ.ಕೆಗೆ ಹೋಲಿಸಿದರೆ ಸಿದ್ದರಾಮಯ್ಯ ಪರವಾಗಿ ಬಹಿರಂಗ ಹೇಳಿಕೆ ನೀಡುವ ಶಾಸಕರ ಹಾಗೂ ಸಚಿವರ ಸಂಖ್ಯೆ ದೊಡ್ಡದಾಗಿದೆ. ಆದರೆ ಈ ಎರಡು ಬಣ ಮೀರಿ 'ತಟಸ್ಥ' ಬಣದ ಸಂಖ್ಯಾ ಬಲ ಹೆಚ್ಚಾಗಿದೆ ಎನ್ನುವುದು ಕಾಂಗ್ರೆಸ್‌ನಲ್ಲಿ ಕೇಳಿಬರುತ್ತಿರುವ ಚರ್ಚೆಯಾಗಿದೆ.

ತಟಸ್ಥ ಬಣದಲ್ಲಿರುವ ಬಹುತೇಕ ಶಾಸಕರು ಎರಡೂ ಬಣಗಳಿಂದ ಸಮಾನ ಅಂತರ ಕಾಯ್ದುಕೊಳ್ಳುತ್ತಿದ್ದು, ಯಾವುದೇ ವಿಷಯ ಮುನ್ನೆಲೆಗೆ ಬಂದರೂ ಹೈಕಮಾಂಡ್‌ನತ್ತ ಬೊಟ್ಟು ತೋರಿಸುತ್ತಿದ್ದಾರೆ. ಈ ಬಣದಲ್ಲಿರುವ ಶಾಸಕರು ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಎನ್ನದೇ ಹೈಕಮಾಂಡ್ ತೋರಿಸುವ ನಾಯಕ ನಿಗೆ ನಮ್ಮ ಬಲ ಎನ್ನುವ ಮನಸ್ಥಿತಿಯಲ್ಲಿದ್ದಾರೆ. ಈ ಮೂಲಕ ಯಾರಿಗೂ ಕೆಟ್ಟವರಾಗದಂತೆ ಎಚ್ಚರಿಕೆಯ ಹೆಜ್ಜೆ ಇಡುತ್ತಿದ್ದಾರೆ ಎನ್ನುವುದು ಸ್ಪಷ್ಟ. →10

ಸಿಎಂ ಆಪ್ತರಿಂದ ಸರಣಿ ಸಭೆ

ಗುರುವಾರ ಚಾಮರಾಜನಗರ ಜಿಲ್ಲಾ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಜೆ ಬೆಂಗಳೂರಿಗೆ ಆಗಮಿಸುತ್ತಿದ್ದಂತೆ ಆಪ್ತರ ಸಚಿವರೊಂದಿಗೆ ಸಭೆ ನಡೆಸಿದರು. ಬಳಿಕ ಶುಕ್ರವಾರ ಮೈಸೂರಿಗೆ ತೆರಳುವ ಮೊದಲು ಬೈರತಿ ಸುರೇಶ್, ಜಮೀರ್ ಅಹ್ಮದ್ ಸೇರಿದಂತೆ ಹಲವು ಆಪ್ತರೊಂದಿಗೆ ಸಭೆ ನಡೆಸಿ ದೆಹಲಿ ಬೆಳವಣಿಗೆಗೆ ಸಂಬಂಧಿಸಿದ ಚರ್ಚಿಸಿದ್ದಾರೆ ಎನ್ನಲಾಗಿದೆ. ರಾಜಕೀಯವಾಗಿ ಈ ಸಭೆಗಳು ಮಹತ್ವ ಪಡೆದುಕೊಂಡಿವೆ.

ಮತ್ತೊಂದು ಭೋಜನ ಕೂಟ

ಡಿಕೆ ಆಪ್ತರು ದೆಹಲಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ಭೇಟಿಗೆ ಪ್ರಯತ್ನಿಸುತ್ತಿದ್ದಂತೆ, ಇತ್ತ ಸಿದ್ದರಾಮಯ್ಯ ಆಪ್ತರು ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಮತ್ತೊಂದು ಭೋಜನ ಕೂಟದ ಜೊತೆ ಸಭೆ ನಡೆಸಿದ್ದಾರೆ. ಈ ಸಭೆಯಲ್ಲಿ ಎಚ್.ಸಿ.ಮಹದೇವಪ್ಪ, ಪರಮೇಶ್ವರ್, ದಿನೇಶ್ ಗುಂಡೂರಾವ್, ಕೆ.ವೆಂಕಟೇಶ್, ಮಾಜಿ ಸಚಿವ ಕೆ.ಎನ್.ರಾಜಣ್ಣ ಪಾಲ್ಗೊಂಡಿದ್ದರು. ಇದಕ್ಕೂ ಮೊದಲು ಸಿದ್ದರಾಮಯ್ಯ ಅವರ ನಿವಾಸದಲ್ಲಿ ಸಿದ್ದು ಆಪ್ತರು ಸಭೆ ನಡೆಸಿದ್ದರು.

ಮಲ್ಪೆಯಲ್ಲಿ ಗುತ್ತಿಗೆ ನೌಕರರ ಬಂಧನ

ಪಾಕ್ ಪರ ಬೇಹುಗಾರಿಕೆ: ಉ.ಪ್ರ.ದ ಇಬ್ಬರ ಬಂಧನ

ಮಲ್ಪೆ (ಉಡುಪಿ): ಮಲ್ಪೆಯ ಕಂಪನಿಯೊಂದರಲ್ಲಿ ನೌಕರಿ ಮಾಡುತ್ತಿದ್ದ ಇಬ್ಬರು ಪಾಕಿಸ್ತಾನಕ್ಕೆ ಗೌಪ್ಯ ಮಾಹಿತಿ ರವಾನಿಸಿದ ಆರೋಪ ಎದುರಿಸುತ್ತಿದ್ದು, ಅವರನ್ನು ಉಡುಪಿ ಪೊಲೀಸರು ಬಂಧಿಸಿದ್ದಾರೆ. ಉತ್ತರಪ್ರದೇಶದ ರೋಹಿತ್ (29) ಮತ್ತು ಸಂತ್ರಿ (37) ಬಂಧಿತರು ಎಂದು ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್ ತಿಳಿಸಿದ್ದಾರೆ.

ಮಲ್ಪೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಉಡುಪಿ ಕೊಚ್ಚಿನ್ ಶಿಪ್‌ಯಾರ್ಡ್‌ನ ಸಿಇಒ ನೀಡಿದ ದೂರು ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಅವರ ಕಂಪನಿಯಲ್ಲಿ ಗುತ್ತಿಗೆ ಯಾಧಾರಿತವಾಗಿ ಕೆಲಸ ಮಾಡುತ್ತಿರುವ ಒಬ್ಬ ವ್ಯಕ್ತಿ ಸಂಶಯಾ ಸ್ಪದವಾಗಿ ಉಡುಪಿ ಕೊಚ್ಚಿನ್ ಶಿಪ್‌ಯಾರ್ಡ್ ಹಾಗೂ ಇದಕ್ಕೂ ಮುಂಚೆ ಕೇರಳ ರಾಜ್ಯದ ಕೊಚ್ಚಿಯಲ್ಲಿರುವ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ಕೆಲಸ ಮಾಡುತ್ತಿದ್ದ. 2 ಕಡೆ ಇದ್ದಾಗಲೂ ಭಾರತೀಯ ನೌಕಾಪಡೆ, ಹಡಗುಗಳ ನಿರ್ಮಾಣ, ಏನೆಲ್ಲಾ ದುರಸ್ತಿ ಆಗುತ್ತಿದೆ ಎಂಬ ಮಾಹಿತಿ ಪಡೆದು, ಅದನ್ನು ಅನ್ಯದೇಶದಲ್ಲಿ ಇರುವ ವ್ಯಕ್ತಿಗಳಿಗೆ ನೀಡಿ, ಹಣ ಪಡೆದುಕೊಂಡಿದ್ದಾನೆ ಎಂಬ ಅನುಮಾನ ನಮಗೆ ಇದೆ ದೂರು ನೀಡಿದ್ದರು. ಆ ದೂರಿನ ಮೇರೆಗೆ ಮಲ್ಪೆ ಪಿಎಸ್‌ಐ ಹಾಗೂ ಎಎಸ್‌ಪಿಯವರ ನೇತೃತ್ವದಲ್ಲಿ ಒಂದು ತಂಡ ಈ ಪ್ರಕರಣವನ್ನು ತನಿಖೆ ಮಾಡಿದೆ. →10

ದ.ಆಫ್ರಿಕಾದಲ್ಲಿ ಪ್ರಧಾನಿ ನರೇಂದ್ರ ಮೋದಿ

ದ.ಆಫ್ರಿಕಾದ ಜೊಹಾನ್ಸ್‌ಬರ್ಗ್‌ನಲ್ಲಿ ಶನಿವಾರ, ಭಾನುವಾರ ನಡೆಯಲಿರುವ ಜಿ20 ರಾಷ್ಟ್ರಗಳ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು, ಭಾರತದ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಏರ್ ಇಂಡಿಯಾ ವಿಮಾನದಲ್ಲಿ ಪ್ರಿಟೋರಿಯಾಕ್ಕೆ ತೆರಳಿದರು. ಈ ವೇಳೆ ಜೊಹಾನ್ಸ್‌ಬರ್ಗ್‌ನಲ್ಲಿ ಭಾರತೀಯ ಸಮುದಾಯ ಮೋದಿಗೆ ಆತ್ಮೀಯ ಸ್ವಾಗತ ನೀಡಿ, ಸಂವಾದ ನಡೆಸಿತು.

ಗಾಜಾದಲ್ಲಿ ಹಮಾಸ್ ಉಗ್ರರ 7 ಕಿ.ಮೀ. ಸುರಂಗ ಪತ್ತೆ

ಗಾಜಾ: ಹಮಾಸ್ ಕಮಾಂಡರ್‌ಗಳು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು, ದಾಳಿಗಳ ಯೋಜನೆ ಮಾಡಲು, ಬಂಧಿತರನ್ನು ಇಡಲು ಬಳಸುತ್ತಿದ್ದ ಅತೀ ದೊಡ್ಡ ಪ್ರಮಾಣದ ಸುರಂಗವೊಂದನ್ನು ಇಸ್ರೇಲ್ ಪತ್ತೆ ಹಚ್ಚಿದೆ. ಗಾಜಾ ಪಟ್ಟಿಯಲ್ಲಿರುವ ಸರಿಸುಮಾರು 7 ಕಿ.ಮೀ. ಉದ್ದ, 25 ಮೀಟರ್ ಆಳವಿರುವ ಈ ಸುರಂಗದಲ್ಲಿ ಒಟ್ಟು 80 ಕೊಠಡಿಗಳಿವೆ. 2023ರ ಇಸ್ರೇಲ್-ಹಮಾಸ್ ಯುದ್ಧಕ್ಕೆ ಈ ಸುರಂಗದಿಂದಲೇ ದಾಳಿ ನಡೆಸಲಾಗಿತ್ತು. ಹಮಾಸ್ ಬಂಧಿಸಿದ್ದ ಲೆಫ್ಟಿನೆಂಟ್ ಗೋಲ್ಡಿನ್ ಅವಶೇಷ ಕೂಡ ಇದರಲ್ಲಿ ಪತ್ತೆಯಾಗಿದೆ.

ಮಕ್ಕಳ ಕೊಂದು ತಂದೆಯ ಆತ್ಮಹತ್ಯೆ

ಧಾರವಾಡ: ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಶರಣಾಗಿರುವ ದುರಂತ ಘಟನೆ ಧಾರವಾಡ ತಾಲೂಕಿನ ಚಿಕ್ಕಮಲ್ಲಿಗವಾಡ ಗ್ರಾಮದಲ್ಲಿ ನಡೆದಿದೆ. ಮೊದಲು ಇಬ್ಬರು ಮೊಮ್ಮಕ್ಕಳನ್ನು ಕೊಂದು ಅಜ್ಜ ವಿಠ್ಠಲರಾವ್ (85) ಮತ್ತು ಪುತ್ರ ನಾರಾಯಣ ಶಿಂಧೆ (42) ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಕ್ಕಳಾದ ಶಿವರಾಜ(12), ಶ್ರೀನಿಧಿ(10) ಮೃತಪಟ್ಟವರು. ಕೌಟುಂಬಿಕ ಸಮಸ್ಯೆ ಹಿನ್ನೆಲೆಯಲ್ಲಿ ಆತ್ಮಹತ್ಯೆಗೆ ಶರಣಾಗಿರಬಹುದು ಎಂದು ಶಂಕಿಸಲಾಗಿದೆ. ನಾರಾಯಣ ಅನೇಕ ಕಡೆಗಳಲ್ಲಿ ಸುಮಾರು 15 ಲಕ್ಷ ರು. ಸಾಲ ಮಾಡಿದ್ದು, ಇದನ್ನು ತೀರಿಸುವ ಮಾರ್ಗದ ಬಗ್ಗೆ ಆತಂಕ ಹೊಂದಿದ್ದರು ಎನ್ನಲಾಗಿದೆ.

ಕೊಲೆ ಯತ್ನ ಆರೋಪ: ಮಣಿಕಂಠ ಬಂಧನ

ಕಲಬುರಗಿ: ಚಿತ್ತಾಪುರದಲ್ಲಿ ಪ್ರಿಯಾಂಕ್ ಖರ್ಗೆ ವಿರುದ್ಧ ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಅವರನ್ನು ಜಿಲ್ಲೆಯ ನೆಲೋಗಿ ಠಾಣೆ ಪೊಲೀ ಸರು ಬಂಧಿಸಿದ್ದಾರೆ. ಕೊಲೆಯತ್ನದ ಆರೋಪದಡಿ ರಾಠೋಡ ಅವರನ್ನು ಗುರುವಾರ ತಡರಾತ್ರಿ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಜೇವರ್ಗಿ ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ ನಾಟಿ ಔಷಧಿ ನೀಡುತ್ತಿದ್ದ ರಶೀದ್ ಮುತ್ಯಾ ಎಂಬುವವರ ಗ್ರಾಮಕ್ಕೆ ತೆರಳಿ, ಮುತ್ಯಾ ಬಂಧನಕ್ಕೆ ಆಗ್ರಹಿಸಿದ್ದರು. ಈ ವೇಳೆ ಮುತ್ಯಾ ಚಾಲಕನ ತಲೆಗೆ ಕಲ್ಲೇಟು ಬಿದ್ದಿತ್ತು.

ಈ ಘಟನೆಗೆ ಸಂಬಂಧಿಸಿದಂತೆ, ರಶೀದ್ ಮುತ್ಯಾ ಅವರ ಚಾಲಕ ನೀಡಿದ ದೂರಿನ ಮೇರೆಗೆ ನೆಲೋಗಿ ಠಾಣೆಯಲ್ಲಿ ಮಣಿಕಂಠ ರಾಠೋಡ ವಿರುದ್ಧ ಕೊಲೆಯತ್ನದ ಆರೋಪದಡಿ ನೆಲೋಗಿ ಠಾಣೆಯಲ್ಲಿ ದೂರು ದಾಖಲಾಗಿತ್ತು.

5.30 ಕೋಟಿ ರು. ನಗದು ಸಹಿತ 8 ಮಂದಿ ಬಂಧನ
ದರೋಡೆಯ ರೂವಾರಿ ಪೊಲೀಸ್ ಪೇದೆ ಅಣ್ಣಪ್ಪ

ದರೋಡೆ: ಪೇದೆ ಸೆರೆ

ಬೆಂಗಳೂರು: ಹಾಡಹಗಲೇ ನಡೆದಿದ್ದ 7.11 ಕೋಟಿ ರು. ದರೋಡೆ ಪ್ರಕರಣದ ಸೂತ್ರಧಾರ ಪೊಲೀಸ್ ಪೇದೆ ಎಂಬುದು ತನಿಖೆಯಿಂದ ಬೆಳಕಿಗೆ ಬಂದಿದೆ. ಪ್ರಕರಣ ಸಂಬಂಧ 8 ಮಂದಿ ಬಂಧನ, 5.5 ಕೋಟಿ ರು. ವಶಪಡಿಸಿಕೊಳ್ಳಲಾಗಿದೆ. ಗೋವಿಂದಪುರ ಪೊಲೀಸ್ ಠಾಣೆಯಲ್ಲಿ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಣ್ಣಪ್ಪ ನಾಯ್ಕ ಎಂಬಾತನೇ ದರೋಡೆಯ ರೂವಾರಿ ಎಂದು ತನಿಖೆಯಲ್ಲಿ ದೃಢಪಟ್ಟಿದೆ.

ತನಿಖಾಧಿಕಾರಿಗಳು ಅಣ್ಣಪ್ಪ ನಾಯ್ಕ ಅವರನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಅಣ್ಣಪ್ಪ ನಾಯ್ಕ ಹಿಂದೆ ಕುಂಬಳಗೋಡು ಸೇರಿದಂತೆ ನಗರದ ವಿವಿಧ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಕಳ್ಳತನ ನಡೆದ ನಂತರ ಪೊಲೀಸರು ಯಾವ ರೀತಿ ತನಿಖೆ ನಡೆಸುತ್ತಾರೆ, ಮೊಬೈಲ್ ಟವರ್ ಲೊಕೇಶನ್ ಹೇಗೆ ಟ್ರ್ಯಾಕ್ ಮಾಡುತ್ತಾರೆ ಮತ್ತು ಪೊಲೀಸರ ಬಲೆಯಲ್ಲಿ ಬೀಳದಂತೆ ಹೇಗೆ ತಪ್ಪಿಸಿಕೊಳ್ಳಬೇಕು ಎನ್ನುವ ಎಲ್ಲಾ ತಾಂತ್ರಿಕ ವಿಚಾರ ಅಣ್ಣಪ್ಪ ತನ್ನ ಸಹಚರರಿಗೆ ಮನದಟ್ಟು ಮಾಡಿಕೊಟ್ಟಿದ್ದರು.

ಈ ಪ್ರಕರಣದಲ್ಲಿ ಅಣ್ಣಪ್ಪ ನಾಯ್ಕ ನೇರವಾಗಿ ಭಾಗಿಯಾಗದೆ, ಕೃತ್ಯ ಎಸಗಲು ಬೇರೊಂದು ತಂಡ ತಯಾರು ಮಾಡಿದ್ದರು. ಕಮ್ಮನಹಳ್ಳಿ ಮತ್ತು ಕಲ್ಯಾಣನಗರ ಭಾಗದ ಸ್ಥಳೀಯ ಯುವಕರ ತಂಡವೊಂದನ್ನು ಇದಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. ದರೋಡೆ ಮಾಡುವುದು ಹೇಗೆ ಎಂದು ಎಲ್ಲಾ ಮಾಹಿತಿ ನೀಡಲಾಗಿತ್ತು.

ಏನಿದು ಪ್ರಕರಣ?

ಬೆಂಗಳೂರಿನ ಸೌತ್ ಎಂಡ್ ಸರ್ಕಲ್‌ನಲ್ಲಿ ನ.19ರಂದು ಹಗಲು ಹೊತ್ತಿನಲ್ಲಿ ಎಟಿಎಂಗೆ ಹಣ ಹಾಕಲು ಹೊರಟಿದ್ದ ಸಿಎಂಎಸ್ ವಾಹನ ತಡೆದು 7.11 ಕೋಟಿ ರು. ದರೋಡೆ ಮಾಡಲಾಗಿತ್ತು.

ವಿಶ್ವದ ಬೃಹತ್ ವೈಮಾನಿಕ ಪ್ರದರ್ಶನದಲ್ಲಿ ಎಚ್‌ಎಎಲ್ ವಿಮಾನ ಪತನ | ಪೈಲಟ್ ನಿಧನ

ದುಬೈನಲ್ಲಿ ತೇಜಸ್ ಯುದ್ಧ ವಿಮಾನ ಪತನ

ದುಬೈ: ದುಬೈಯಲ್ಲಿ ನಡೆಯುತ್ತಿರುವ ವೈಮಾನಿಕ ಪ್ರದರ್ಶನದಲ್ಲಿ ಭಾರತದ ತೇಜಸ್ ಯುದ್ಧ ವಿಮಾನ ಪತನವಾಗಿದೆ. ಎಚ್‌ಎಎಲ್ ನಿರ್ಮಿತ ಈ ಲಘುಯುದ್ಧ ವಿಮಾನ (ಎಲ್‌ಸಿಎ) ಶುಕ್ರವಾರ ಮಧ್ಯಾಹ್ನ ಏಕಾಏಕಿ ಭೂಮಿಗೆ ಅಪ್ಪಳಿಸಿದೆ. ಪೈಲಟ್ ಮೃತಪಟ್ಟಿದ್ದಾರೆ. ದುಬೈನ ಅಲ್ ಮಕ್ತೂಮ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪ ತೇಜಸ್ ಪತನವಾಗುತ್ತಿದ್ದಂತೆ ದಟ್ಟ ಹೊಗೆ ವ್ಯಾಪಿಸಿದ್ದು, ವಿಡಿಯೋ ವೈರಲ್ ಆಗಿದೆ. ಘಟನೆಗೆ ಕಾರಣ ಇನ್ನೂ ಗೊತ್ತಾಗಿಲ್ಲ. ಭಾರತೀಯ ವಾಯುಪಡೆ ತನಿಖೆಗೆ ಆದೇಶ ನೀಡಿದೆ. 2 ವರ್ಷಗಳ ಅವಧಿಯಲ್ಲಿ ತೇಜಸ್ 2ನೇ ಬಾರಿಗೆ ಪತನವಾದ ಉದಾಹರಣೆಯಿದು.

ವಿಶ್ವದ ಅತಿದೊಡ್ಡ ವೈಮಾನಿಕ ಪ್ರದರ್ಶನಗಳಲ್ಲಿ ಒಂದಾದ, 2 ವರ್ಷಕ್ಕೊಮ್ಮೆ ನಡೆಯುವ ದುಬೈ ಏರ್ ಶೋ ವೇಳೆ ಈ ಅಪಘಾತ ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ. ಈ ಏರ್ ಶೋ 5 ದಿನಗಳಿಂದ ನಡೆಯುತ್ತಿದೆ. 'ವೈಮಾನಿಕ ಪ್ರದರ್ಶನದ ವೇಳೆ ಪೈಲಟ್ ಮರಣ ಹೊಂದಿದ್ದಾರೆ. ಈ ದುಃಖದ ಸಮಯದಲ್ಲಿ ಮೃತರ ಕುಟುಂಬದೊಂದಿಗೆ ನಾವು ನಿಲ್ಲುತ್ತೇವೆ ಎಂದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೇಜಸ್ 4.5 ತಲೆಮಾರಿನ ಯುದ್ಧ ವಿಮಾನವಾಗಿದ್ದು, ಹಾರಾಟದ ವೇಳೆ ಇಂಧನ ತುಂಬಿಸಿಕೊಳ್ಳುವ ಸಾಮರ್ಥ್ಯ ಹೊಂದಿದೆ. ಟೇಕಾಫ್ ಅಥವಾ ಲ್ಯಾಂಡಿಂಗ್ ಸಮಯದಲ್ಲಿ ಪೈಲಟ್ ಸುರಕ್ಷಿತವಾಗಿ ಹೊರಬರುವಂತೆ ಸೀಟ್ ವಿನ್ಯಾಸಗೊಳಿಸಲಾಗಿದೆ.

2 ವರ್ಷಗಳಲ್ಲಿ 2ನೇ ಬಾರಿ ಪತನ

ಎಚ್‌ಎಎಲ್ (ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್) ಅಭಿವೃದ್ಧಿಪಡಿಸಿದ ಲೈಟ್ ಕಾಂಬ್ಯಾಟ್ ಏರ್‌ಕ್ರಾಫ್ಟ್ ಆಗಿರುವ ಈ ಏಕಾಸನದ ತೇಜಸ್ ಫೈಟರ್ ಜೆಟ್ ಪತನವಾಗುತ್ತಿರುವುದು ಇದು 2ನೇ ಬಾರಿ. ಮಾರ್ಚ್ 2024ರಲ್ಲಿ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ತೇಜಸ್ ಪತನಗೊಂಡಿತ್ತು. ಇಲ್ಲಿ ಪೈಲಟ್ ಜೀವಾಪಾಯದಿಂದ ಪಾರಾಗಿದ್ದರು. ಕಳೆದ ಸೆಪ್ಟೆಂಬರ್‌ನಲ್ಲಿ ಕೇಂದ್ರ ಸರ್ಕಾರವು ಎಚ್‌ಎಎಲ್ ನೊಂದಿಗೆ 97 ಹೆಚ್ಚುವರಿ ತೇಜಸ್ ವಿಮಾನಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿದ್ದು, 2027ರಿಂದ ವಿತರಣೆ ಆರಂಭ ವಾಗುವ ನಿರೀಕ್ಷೆಯಿದೆ.

ತೇಜಸ್ ವಿಶೇಷತೆಗಳೇನು?

1. 4.5ನೇ ತಲೆಮಾರಿನ ಸೂಪರ್‌ಸಾನಿಕ್ ಸಾಮರ್ಥ್ಯದ ಒಂದೇ ಎಂಜಿನ್ ಹೊಂದಿರುವ, ಲಘುತೂಕದ, ಬಹುಮಾದರಿಯಲ್ಲಿ ಕಾರ್ಯನಿರ್ವಹಿಸಬಲ್ಲ ಯುದ್ಧ ವಿಮಾನ.
2. ಸುಮಾರು ನಾಲ್ಕು ಸಾವಿರ ಕೆಜಿವರೆಗೆ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಹಾರಾಟದ ಮಧ್ಯದಲ್ಲೇ ಇಂಧನವನ್ನು ತುಂಬಿಸಿಕೊಳ್ಳಬಲ್ಲದು.
3. ಡಿಆರ್‌ಡಿಒದ ಅಂಗಸಂಸ್ಥೆ ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ ನೇತೃತ್ವದಲ್ಲಿ ವಿನ್ಯಾಸಗೊಂಡಿದೆ. ಎಚ್‌ಎಎಲ್‌ನಿಂದ ನಿರ್ಮಾಣ.
4. 1980ರ ದಶಕದಿಂದ ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಳೆಯ ಮಿಗ್-21 ಯುದ್ಧವಿಮಾನಕ್ಕೆ ಪರ್ಯಾಯವಾಗಿ ಕಾರ್ಯನಿರ್ವಹಣೆ.

ಈ ವರ್ಷದ ಇತರೆ ವೈಮಾನಿಕ ದುರಂತ

- ಭಾರತೀಯ ವಾಯುಪಡೆಯ ಪಿಸಿ-7 ತರಬೇತಿ ಯುದ್ಧ ವಿಮಾನ ನ.14ರಂದು ಚೆನ್ನೈನ ತಾಂಬರಂನಲ್ಲಿ ಪತನಗೊಂಡಿತ್ತು. ಪೈಲಟ್ ಪಾರಾಗಿದ್ದರು.
- ರಾಜಸ್ಥಾನದ ಚುರು ಜಿಲ್ಲೆಯ ಸೂರತ್‌ಗಢ ನಿಲ್ದಾಣದಲ್ಲಿ ಜು.9ರಂದು ಮೇಲಕ್ಕೆ ಜಿಗಿದ ಜಾಗ್ವಾರ್ ತರಬೇತಿ ವಿಮಾನ ಪತನ. ಇಬ್ಬರು ಪೈಲಟ್ ನಿಧನ.
- ಗುಜರಾತ್‌ನ ಜಾಮನಗರದಲ್ಲಿ ಜಾಗ್ವಾರ್ ಯುದ್ಧವಿಮಾನ ಏ.3ರಂದು ಪತನ. ಒಬ್ಬ ಪೈಲಟ್ ಪಾರು, ಇನ್ನೊಬ್ಬರು ನಾಪತ್ತೆ, ತನಿಖೆ ಚಾಲ್ತಿಯಲ್ಲಿ.
- ಮಧ್ಯಪ್ರದೇಶದಲ್ಲಿ ಶಿವಪುರಿಯಲ್ಲಿ ಫೆ.6ರಂದು ಮಿರಾಜ್-2000 ಪತನ. ವಿಮಾನದಲ್ಲಿ ಕಾಣಿಸಿಕೊಂಡ ದೋಷವೇ ಕಾರಣ. ಇಬ್ಬರೂ ಪೈಲಟ್‌ಗಳು ಸುರಕ್ಷಿತ.

ಸಮಾಚಾರ ಸಣ್ಣದಲ್ಲ

ನೌಕರರ ಸಂಘದ ಸಭೆ ನಾಳೆ:ಸ್ಥಳ ಬದಲಾವಣೆ

ಶಿವಮೊಗ್ಗ: ಕರ್ನಾಟಕ ರಾಜ್ಯ ಗಂಗಾಮತ ನೌಕರರ ಕ್ಷೇಮಾಭಿವೃದ್ಧಿ ಸಂಘದ 26ನೇ ಸಾಲಿನ ಸರ್ವ ಸದಸ್ಯರ ವಿಶೇಷ ಸಭೆ ನ.23ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಶೇಷಾದ್ರಿಪುರಂನಲ್ಲಿರುವ ಭಾಸ್ಯಮಗಜಿ ಆರ್ಕಿಡ್ ಹೋಟೆಲ್ ನಲ್ಲಿ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ.ಹಾಲೇಶಪ್ಪ ತಿಳಿಸಿದ್ದಾರೆ. ಈ ಮೊದಲು ಈ ಸಭೆಯು ಆನಂದರಾವ್ ವೃತ್ತದ ಹತ್ತಿರದಲ್ಲಿರುವ ಕೆಇಬಿ ಎಂಜಿನಿಯರ್‌ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ತಿಳಿಸಲಾಗಿತ್ತು. ಆದರೆ, ಅನಿವಾರ್ಯ ಕಾರಣಗಳಿಂದ ಸ್ಥಳವನ್ನು ಬದಲಾವಣೆ ಮಾಡಲಾಗಿದೆ. ಸಂಘದ ಸದಸ್ಯರು ಸರಿಯಾದ ಸಮಯಕ್ಕೆ ಆಗಮಿಸಬೇಕು ಎಂದು ತಿಳಿಸಿದ್ದಾರೆ. ಸಂಘದ ಅಧ್ಯಕ್ಷ ಎಂ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ನಾಡೋಜ ಡಾ.ಜಿ.ಶಂಕರ್ ಸಭೆ ಉದ್ಘಾಟಿಸಲಿದ್ದು, ಮಾಜಿ ಸಚಿವ ಪ್ರಮೋದ್ ಮಧ್ವರಾಜ್, ಸರಕಾರದ ಅಪರ ಕಾರ್ಯದರ್ಶಿ ಡಾ.ನಾಗೇಂದ್ರ ಎಫ್.ಹೊನ್ನಾಳಿ, ರೇಷ್ಮೆ ಮಂಡಳಿ ಅಧ್ಯಕ್ಷ ಎಸ್.ಗಂಗಾಧರ್,ಶಿವಮೊಗ್ಗ ಜಿಲ್ಲಾಧ್ಯಕ್ಷ ಚಂದ್ರಶೇಖರ್‌ಎಚ್.ಎಸ್. ಸೇರಿದಂತೆ ಎಲ್ಲ ಜಿಲ್ಲೆಯ ಅಧ್ಯಕ್ಷರು, ಸಮಾಜದ ಗಣ್ಯರು ಭಾಗವಹಿಸಲಿದ್ದು, ಶಿವಮೊಗ್ಗ ಮತ್ತು ಸುತ್ತಮುತ್ತಲ ಜಿಲ್ಲೆಗಳ ಸಂಘದ ಸದಸ್ಯರು ಸಭೆಗೆ ತಪ್ಪದೇ ಹಾಜರಾಗಬೇಕು ಎಂದು ಕೋರಲಾಗಿದೆ.

ಆಂಜನೇಯ ಸ್ವಾಮಿಗೆ ವಿಶೇಷ ಅಭಿಷೇಕ

ಶಿವಮೊಗ್ಗ: ಕಾರ್ತಿಕ ದೀಪೋತ್ಸವದ ಪ್ರಯುಕ್ತ ಸಾಗರ ರಸ್ತೆ ಎಪಿಎಂಸಿ ಮುಂಭಾಗದಲ್ಲಿರುವ ಪುರಾತನವಾದ ಶ್ರೀ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ನಡೆದ ಅದ್ದೂರಿ ಪೂಜೆ ಕಾರ್ಯಕ್ರಮದಲ್ಲಿ ಚಾಲಕರೆಲ್ಲರೂ ಸೇರಿ ದೀಪ ಹಚ್ಚುವ ಮೂಲಕ ಸ್ವಾಮಿಗೆ ಪೂಜೆ ಅಭಿಷೇಕ ಪಂಚಾಮೃತ ಹಾಗೂ ಸಾರ್ವಜನಿಕರಿಗೆ ಭಕ್ತಾದಿಗಳಿಗೆ ಪ್ರಸಾದ ಹಂಚುವುದರ ಮೂಲಕ ಈ ವರ್ಷ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿಸ ಲಾಯಿತು. ಈ ಕಾರ್ಯಕ್ರಮದ ವಿಶೇಷವೇನೆಂದರೆ ಗೋಪಾಲಗೌಡ ಬಡಾವಣೆಯವರಾದ ರಂಗನಾಥ್ ಹಾಗೂ ತಂಡದವರಿಂದ ಭಜನಾ ಕಾರ್ಯಕ್ರಮ ವಿಶೇಷ ಮೆರುಗು ಕೊಡುವುದರ ಮೂಲಕ ಜನರಲ್ಲಿ ಭಕ್ತಿ ಬಾವಕ್ಕೆ ಸಾಕ್ಷಿಯಾಯಿತು.ಈ ಒಂದು ಅದ್ದೂರಿ ಕಾರ್ಯಕ್ರಮದಲ್ಲಿ ಪ್ರಮುಖರಾದ ಪ್ರಫುಲ್ಲ ಚಂದ್ರ. ಹೆಚ್(ಅಧ್ಯಕ್ಷರು ಎಪಿಎಂಸಿ ಆಟೋ ಚಾಲಕರ ಸಂಘ. ಹಾಗೂ ಹಿಂದೂ ಜನಜಾಗೃತಿ ಸಮಿತಿ ಸದಸ್ಯರು) ಹಾಗೂ ಚಂದ್ರಪ್ಪ (ಗೌರವಾಧ್ಯಕ್ಷರು) ಪ್ರಕಾಶ್ ಟಿ (ಪ್ರಧಾನ ಕಾರ್ಯದರ್ಶಿ) ನಾಗೇಶ್. ಪ್ರವೀಣ್ ಕುಮಾರ್.ಯತೀಶ. ಹೊನ್ನಪ್ಪ. ಪರಶುರಾಮ್. ಕುಮಾರ. ವಸಂತಣ್ಣ (ಮಂಜುನಾಥ ಬಸ್ ಮಾಲೀಕರು) ಭಾಗವಹಿಸಿದ್ದರು.

ಚಾರು ಕೀರ್ತಿ ಶ್ರೀಗಳ ಮಂಗಲ ಪುರ ಪ್ರವೇಶ

ಸಾಗರ: ಶ್ರೀಕ್ಷೇತ್ರ ಶ್ರವಣಬೆಳಗೊಳ ದಿಗಂಬರ ಜೈನ ಮಹಾಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು

ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾ ರ್ಯವರ್ಯ ಮಹಾಸ್ವಾ ಮಿಗಳ ಮಂಗಲ ಪುರ ಪ್ರವೇಶ ಕಾರ್ಯಕ್ರಮ ಸಾಗರದಲ್ಲಿ ನ.26 ರಂದು ನಡೆಯಲಿದೆ. ಶ್ರೀಗಳವರ ಜನ್ಮಭೂಮಿಯಾಗಿರುವ ಸಾಗರಕ್ಕೆ ಪ್ರಪ್ರಥಮ ಬಾರಿಗೆ ಆಗಮಿಸುತ್ತಿರುವ ಅವರನ್ನು ಶ್ರೀಸರ್ವ ತೋಭದ್ರ ಜೈನ ಸಮಾಜದ ವತಿಯಿಂದ ಸ್ವಾಗತಿಸಲಾಗುತ್ತಿದೆ. ಶ್ರೀಕ್ಷೇತ್ರ ಹೊಂಬುಜ ಮಠದ ಜಗದ್ಗುರು ಡಾ.ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮಿಗಳ ದಿವ್ಯ ಮಾರ್ಗ ದರ್ಶನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅಂದು ಬೆಳಗ್ಗೆ 8.30ಕ್ಕೆ ಸಾಗರ ನಗರದ ಶ್ವೇತಾಂಬರ ಜೈನ ಮಂದಿರಕ್ಕೆ ತ್ಯಾಗರ್ತಿ ವೃತ್ತದಿಂದ ಬೈಕ್ ರ್ಯಾಲಿ ಮೂಲಕ ಕರೆ ತರಲಾಗುವುದು ನಂತರ ಸಾಗರದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಲಿದೆ ಹಾಗೂ ನೆಹರೂ ಮೈದಾನದ ದಿಗಂಬರ ಜೈನ ಮಂದಿರಕ್ಕೆ ಪ್ರವೇಶ ಮಾಡಲಿದ್ದಾರೆ. ಮಧ್ಯಾಹ್ನ 12.30ಕ್ಕೆ ಭಗವಾನ್ ಶ್ರೀ 1008 ಆದಿನಾಥ ತೀರ್ಥಂಕರರಿಗೆ ಪಂಚಾಮೃತ ಅಭಿಷೇಕ ಹಾಗೂ ರಜತ ಪ್ರಭಾವಳಿ ಸಮರ್ಪಣೆ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಹಾಗೂ 2.30ಕ್ಕೆ ಕ್ಕೆ ಗುರುವಂದನಾ ಕಾರ್ಯಕ್ರಮ ಜರುಗಲಿದ್ದು ಹೊಂಬುಜ ಮಠ ಹಾಗೂ ಸೋಂದಾ ಮಠದ ಶ್ರೀಗಳವರ ಗೌರವ ಉಪಸ್ಥಿತಿ ಇರಲಿದೆ. ಮಂಗಲ ಪುರಪ್ರವೇಶ ಕಾರ್ಯಕ್ರಮಕ್ಕೆ ಸರ್ವರು ಆಗಮಿಸಬೇಕೆಂದು ಶ್ರೀ ಸರ್ವತೋಮುಖ ಜೈನ ಸಮಾಜ ವಿನಂತಿಸಿದೆ.

ವಲ್ಲಭಬಾಯಿ ಪಟೇಲರ 150 ನೇ ಜನ್ಮದಿನೋತ್ಸವ| ಏಕತಾ ನಡಿಗೆ ಜಾಥಾಗೆ ಸಂಸದ ಬಿ.ವೈ.ರಾಘವೇಂದ್ರ ಚಾಲನೆ

ಸದೃಢ ಭಾರತ ಕಟ್ಟಲು ಯುವಜನ ಕೈ ಜೋಡಿಸಲಿ

ಶಿವಮೊಗ್ಗ: ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ ನಾಯಕರನ್ನು ಸ್ಮರಿಸಿಕೊಂಡು ನಾವೆಲ್ಲ ಅವರ ಮಾರ್ಗದಲ್ಲಿ ಸಾಗುವ ಮೂಲಕ ಅವರಿಗೆ ಗೌರವವನ್ನು ಸಲ್ಲಿಸಬೇಕು ಎಂದು ಸಂಸದ ಬಿ.ವೈ.ರಾಘವೇಂದ್ರ ಕರೆ ನೀಡಿದರು.

ಶುಕ್ರವಾರ ನಗರದ ನೆಹರು ಕ್ರೀಡಾಂಗಣದಲ್ಲಿ ಸರ್ದಾರ್‌ವಲ್ಲಭಬಾಯಿ ಪಟೇಲರ 150 ನೇ ಜನ್ಮದಿನೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಏಕತಾ ನಡಿಗೆ ಜಾಥಾವನ್ನು ಗೋವು ಪೂಜೆ ಮಾಡುವ ಮೂಲಕ ಚಾಲನೆ ನೀಡಿದರು.

ಇಂದಿನ ಯುವ ಸಮೂಹವು ನಮ್ಮ ಸ್ವಾತಂತ್ರ್ಯ ಯೋಧರು ಮತ್ತು ಹೆಮ್ಮೆಯ ಸೈನಿಕರನ್ನು ಗೌರವಿಸಬೇಕು. ಈ ದೇಶದ ಮಣ್ಣಿನಲ್ಲಿ ಎಲ್ಲ ರೀತಿಯ ಶಕ್ತಿಯಿದೆ. ಅದನ್ನು ಸರಿಯಾದ ರೀತಿಯಲ್ಲಿ ನಾವೆಲ್ಲ ಬಳಸಿಕೊಳ್ಳಬೇಕು. ಹಾಗೂ ಒಂದಾಗಿ ಸದೃಢ ಭಾರತ ದೇಶವನ್ನು ನಿರ್ಮಾಣ ಮಾಡುವಂತಹ ಕೆಲಸ ಮಾಡಬೇಕಿದೆ ಎಂದರು.

ಶಾಸಕರಾದ ಎಸ್ ಎನ್ ಚನ್ನಬಸಪ್ಪ ಮಾತಾನಾಡಿ,

ಸರ್ದಾರ್‌ವಲ್ಲಭಬಾಯಿ ಪಟೇಲರ 150 ನೇ ಜನ್ಮದಿನೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಏಕತಾ ನಡಿಗೆ ಜಾಥಾ ಕಾರ್ಯಕ್ರಮದಲ್ಲಿ ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದವರನ್ನು ಸ್ಮರಿಸಿಕೊಳ್ಳುವ ಸಲುವಾಗಿ ಪ್ರಧಾನಿ ನರೇಂದ್ರ ಮೋದಿಯವರು ಸರ್ದಾರ್‌ವಲ್ಲಭಬಾಯಿ ಪಟೇಲರ ಏಕತಾ ಪ್ರತಿಮೆಯನ್ನು ನಿರ್ಮಾಣ ಮಾಡಿದರು ಎಂದ ಅವರು ದೇಶಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ ಭಗತ್ ಸಿಂಗ್, ರಾಜಗುರು, ಸುಖದೇವ್, ಚಂದ್ರಶೇಖರ್‌ಆಜಾದ್ ಅವರಂತಹ ನಾಯಕರ ಜೀವನ ಚರಿತ್ರೆಯನ್ನು ಇಂದಿನ ಯುವಕರು ತಿಳಿದುಕೊಳ್ಳುವ ಅವಶ್ಯಕತೆಯಿದೆ ಎಂದರು.

ವಿಧಾನ ಪರಿಷತ್ ಶಾಸಕರಾದ ಡಾ. ಧನಂಜಯ ಸರ್ಜಿ ಮಾತಾನಾಡಿ, ನಾವೆಲ್ಲಾ ಒಂದೇ ಎಂದು ಹೇಳಲು ಕಾರಣ ಪಟೇಲರು.

1928ರಲ್ಲಿ ಗುಜರಾತಿನಲ್ಲಿ ನಡೆದ ಬಾರ್ಡೋಲಿ ರೈತ ಚಳುವಳಿಯಲ್ಲಿನ ವಲ್ಲಭಬಾಯಿ ಪಟೇಲರ ನಾಯಕತ್ವವನ್ನು ಮೆಚ್ಚಿ ಬಾರ್ಡೋಲಿಯ ರೈತರು ಅವರಿಗೆ ''ಸರ್ದಾರ್' ಎಂಬ ಬಿರುದು ನೀಡಿದರು. ಭಾರತದ ಪ್ರಥಮ ಗೃಹ ಸಚಿವರಾಗಿ ದೇಶದ ಎಲ್ಲಾ ರಾಜ್ಯಗಳನ್ನು ಒಗ್ಗೂಡಿಸುವ ಕೆಲಸವನ್ನು ಮಾಡಿದರು. ಇದರ ಫಲವಾಗಿ 'ನಾವೆಲ್ಲಾ ಒಂದೇ' ಎಂಬ 'ಏಕ್ ಭಾರತ್ ಶ್ರೇಷ್ಠ ಭಾರತ್' ಏಕತಾ ನಡಿಗೆ ಮಾಡುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ನಾವೆಲ್ಲ ಒಂದೇ ಎಂಬ ಹಾಗೂ ನಶೆಮುಕ್ತ ಭಾರತ್ ಅಭಿಯಾನದ ಪ್ರತಿಜ್ಞಾವಿಧಿಗಳನ್ನು ಬೋಧಿಸಲಾಯಿತು.

ಜಾಥಾ ನಗರದ ನೆಹರು ಸ್ಟೇಡಿಯಂನಿಂದ ಹೊರಟು ಮಹಾವೀರ ಸರ್ಕಲ್, ಜೈಲ್ ಸರ್ಕಲ್, ದುರ್ಗಿಗುಡಿ ಮಾರ್ಗವಾಗಿ ಫ್ರೀಡಂ ಪಾರ್ಕ್ ತಲುಪಿತು. 'ಭಾರತ್ ಮಾತಾಕೀ ಜೈ' ಎಂಬ ಘೋಷಣೆ ಮೂಲಕ ಯುವಜನರಲ್ಲಿ ದೇಶ ಪ್ರೇಮದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಏಕತಾ ಜಾಥಾದಲ್ಲಿ ಅಪರ ಜಿಲ್ಲಾಧಿಕಾರಿ ಅಭಿಷೇಕ್ ವಿ, ಅಧಿಕಾರಿಗಳು, ವಿವಿಧ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

> ಭಾರತ ದೇಶ ಸ್ವತಂತ್ರಗೊಂಡ ನಂತರ ದೇಶದ 552 ಸಂಸ್ಥಾನಗಳನ್ನು ಒಟ್ಟುಗೂಡಿಸಿದ ಕೀರ್ತಿ ದೇಶದ ಉಕ್ಕಿನ ಮನುಷ್ಯ ಎಂದೇ ಖ್ಯಾತಿಯಾಗಿರುವ ಸರ್ದಾರ್‌ವಲ್ಲಭಬಾಯಿ ಪಟೇಲರಿಗೆ ಸಲ್ಲುತ್ತದೆ. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಕಾಶ್ಮೀರದ ರಾಜಾ ಹರಿಸಿಂಗ್ ಅವರ ಮನವೊಲಿಸಿ ಕಾಶ್ಮೀರವನ್ನು ಭಾರತ ದೇಶದ ಸಂವಿಧಾನದ ಅಡಿಯಲ್ಲಿ ಸೇರ್ಪಡೆ ಮಾಡಲಾಯಿತು.
>
> **- ಬಿ.ವೈ.ರಾಘವೇಂದ್ರ, ಸಂಸದ**

ನಾನಾ ಸಾಂಸ್ಕೃತಿಕ ಸ್ಪರ್ಧೆಗಳು ನ.24ರಂದು

ಶಿವಮೊಗ್ಗ: ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ)ಶಿವಮೊಗ್ಗ ಶಾಖೆಯ ಶರಾವತಿ ನಗರದ ಶ್ರೀ ಆದಿಚುಂಚನಗಿರಿ ಸ್ವತಂತ್ರ ಪದವಿಪೂರ್ವ ಕಾಲೇಜು, ಶಿವಮೊಗ್ಗ ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಶಿವಮೊಗ್ಗ. ಇವರುಗಳ ಸಂಯುಕ್ತ ಆಶ್ರಯದಲ್ಲಿ ನ.24ರಂದು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗಿದೆ ಎಂದು ಶ್ರೀ ಆದಿಚುಂಚನಗಿರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್.ವಿ. ಗುರುರಾಜ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಜಿ.ಎಫ್.ಕುಟ್ರಿ ಅವರು, ಪ್ರತಿವರ್ಷದಂತೆ ಈ ವರ್ಷವೂ ಸಹ ಶಾಲಾ ಶಿಕ್ಷಣ ಇಲಾಖೆಯ ಸಹ ಯೋಗದಲ್ಲಿ ಶರಾವತಿ ನಗರದ ಶ್ರೀ ಆದಿಚುಂಚನಗಿರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಅಂದು ಬೆಳಗ್ಗೆಯಿಂದ ಸ್ಪರ್ಧೆಗಳು ಪ್ರಾರಂಭವಾಗುತ್ತವೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪ ನಿರ್ದೇಶಕರಾದ ಚಂದ್ರಪ್ಪ ಎಸ್. ಗುಂಡಪಲ್ಲಿ, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ನ ಆಡಳಿತ ಮಂಡಳಿಯ ಸದಸ್ಯರು ಹಾಗೂ ವಿವಿಧ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಉಪಸ್ಥಿತರಿರುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಆದಿಚುಂಚನಗಿರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್ .ವಿ.ಗುರುರಾಜ್ ವಹಿಸಲಿರುವರು.

ಪತ್ರಿಕಾಗೋಷ್ಠಿಯಲ್ಲಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್.ವಿ. ಗುರುರಾಜ್ ಮಾತನಾಡಿದರು.

ಸ್ವಾಮೀಜಿಗಳಿಂದ ಚಾಲನೆ

ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರು ವಹಿಸಲಿದ್ದು, ಶ್ರೀ ಆದಿಚುಂಚನಗಿರಿ ಶಿವಮೊಗ್ಗ ಶಾಖಾಮಠದ ಶ್ರೀ ನಾದಮಯಾನಂದನಾಥ ಸ್ವಾಮೀಜಿಯವರು ಉಪಸ್ಥಿತಿ ವಹಿಸುವರು.

> ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸುವ ಉದ್ದೇಶದಿಂದ ರಸ ಪ್ರಶ್ನೆ ಸ್ಪರ್ಧೆ,ಕನ್ನಡ ಪ್ರಬಂಧ ಸ್ಪರ್ಧೆ,ಇಂಗ್ಲಿಷ್ ಪ್ರಬಂಧಸ್ಪರ್ಧೆ,ಕನ್ನಡ ಚರ್ಚಾ ಸ್ಪರ್ಧೆ,ಇಂಗ್ಲಿಷ್ ಚರ್ಚಾ ಸ್ಪರ್ಧೆ,ಏಕಪಾತ್ರ ಅಭಿನಯ, ಭಾವಗೀತೆ, ಜನಪದ ಗೀತೆ, ಚಿತ್ರಕಲೆ, ವಿಜ್ಞಾನ ಮಾದರಿ ತಯಾರಿಕೆ, ಈ ಬಾರಿ ವಿಶೇಷವಾಗಿ ಏಕವ್ಯಕ್ತಿ ಜಾನಪದ ನೃತ್ಯವನ್ನು ನಡೆಸುತ್ತಿರುವುದು ಎಲ್ಲರ ಕುತೂಲವನ್ನು ಹೆಚ್ಚಿಸಿದೆ.
>
> **- ಎಸ್.ವಿ. ಗುರುರಾಜ್, ಪ್ರಾಚಾರ್ಯ**

ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭವು ಅಂದು ಸಂಜೆ 4 ಗಂಟೆಗೆ ಆದಿಚುಂಚನಗಿರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಅವರಣದಲ್ಲಿ ನಡೆಯಲಿದ್ದು, ಅಂದು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪ್ರಧಾನ ಕಾರ್ಯ ದರ್ಶಿಗಳಾದ ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರ, ಪೂಜ್ಯ ಶ್ರೀ ಶ್ರೀ ನಾದಮಯಾನಂದನಾಥ ಸ್ವಾಮೀಜಿ ಯವರ ಹಾಗೂ ಮುಖ್ಯ ಅತಿಥಿಗಳ ಸಮ್ಮುಖದಲ್ಲಿ ನಡೆಯಲಿದ್ದು ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿಜೇತ ಸ್ಪರ್ಧಾಳುಗಳಿಗೆ ಬಹುಮಾನಗಳನ್ನು ನೀಡಲಾಗುವುದು. ಅತಿ ಹೆಚ್ಚು ಸ್ಪರ್ಧಾಂಕ ಪಡೆದ ಕಾಲೇಜಿಗೆ ಇದೇ ಮೊದಲ ಬಾರಿಗೆ ಸಮಗ್ರ ಪ್ರಶಸ್ತಿಯನ್ನು ನೀಡಿ ಪೂಜ್ಯರಿಂದ ಗೌರವಿಸಲಾಗುವುದು.

ಪತ್ರಿಕಾ ಗೋಷ್ಠಿಯಲ್ಲಿ ಪ್ರಾಂಶುಪಾಲರಾದ ಜಿ.ಎಫ್.ಕುಟ್ರಿ, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಡಳಿತ ಮಂಡಳಿ ಸದಸ್ಯರು, ಬಿಜಿಎಸ್ ಗುರುಪುರ ಶಾಲಾ ಕಾಲೇಜಿನ ಪ್ರಾಂಶುಪಾಲರಾದ ಸುರೇಶ್ ಎಸ್.ಎಚ್. ನಟರಾಜ್ ಉಪಸ್ಥಿತರಿದ್ದರು.

ಅದ್ದೂರಿ ವಾರ್ಷಿಕ ಕಾರ್ತಿಕ ದೀಪೋತ್ಸವ

ಶಿಕಾರಿಪುರ: ಕಾರ್ತಿಕ ಮಾಸದ ಕಡೆಯ ದಿನವಾದ ಗುರುವಾರ ಸಂಜೆ ಪಟ್ಟಣದ ರಥಬೀದಿಯಲ್ಲಿನ ಶ್ರೀ ಮಾರಿಕಾಂಬ ಗದ್ದುಗೆ ಬಳಿ ವಾರ್ಷಿಕ ಕಾರ್ತಿಕ ದೀಪೋತ್ಸವ ಅತ್ಯಂತ ಅದ್ದೂರಿಯಾಗಿ ನಡೆಯಿತು.

ದೀಪೋತ್ಸವದ ಅಂಗವಾಗಿ ಬೆಳಗ್ಗೆ ದೇವಿಗೆ ವಿಶೇಷ ಪೂಜೆ, ಅಲಂಕಾರ ಜರುಗಿತು. ಸಂಜೆ ವೇಳೆಯಲ್ಲಿ ಗದ್ದುಗೆ ಬಳಿ ಬೃಹತ್ ಬಣ್ಣದ ರಂಗೋಲಿ ಜತೆಗೆ ಸಂಪರ್ಣ ರಥಬೀದಿಯಲ್ಲಿನ ಪ್ರತಿ ಮನೆ ಮುಂಭಾಗ ದೀಪವನ್ನು ಹಚ್ಚಲಾಯಿತು. ಪುರೋಹಿತ್ ಶಿವರಾಂ ಭಟ್ ಮಹಾಮಂಗಳಾರತಿ ಮಂತ್ರಪಠಣ, ವೇದಘೋಷದೊಂದಿಗೆ ಕಾರ್ತಿಯನ್ನು ಬೆಳಗಿಸಿದರು. ಧಗಧಗಿಸಿದ ಕಾರ್ತಿ ಮತ್ತು ಭಕ್ತರು ಹಚ್ಚಿದ್ದ ಸಹಸ್ರಾರು ದೀಪದ ಬೆಳಕಿನಲ್ಲಿ ಸಂಪೂರ್ಣ ಪ್ರದೇಶ ಕೆಂಪು ಬಣ್ಣದಲ್ಲಿ ಕಂಗೊಳಿಸುತ್ತಿತ್ತು.

ಈ ಸಂದರ್ಭದಲ್ಲಿ ಕ್ಷೇತ್ರ ದೇವತೆ ಶ್ರೀ ಹುಚ್ಚುರಾಯಸ್ವಾಮಿ ಪಲ್ಲಕ್ಕಿ ಉತ್ಸವ ಆಗಮಿಸಿ ಕಾರ್ತಿಕೋತ್ಸವದ ಮೆರಗು ಇಮ್ಮಡಿಯಾಯಿತು. ರಕ್ಷಾಧಾರಣೆಯ ನಂತರ ಆಗಮಿಸಿದ್ದ ನೂರಾರು ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಕಾರ್ತಿಕ ಮಾಸದ ಕಡೆಯ ದಿನದ

ಶಿಕಾರಿಪುರದ ರಥಬೀದಿಯಲ್ಲಿನ ಮಾರಿಕಾಂಬ ಗದ್ದುಗೆ ಬಳಿ ನಡೆದ ಕಾರ್ತಿಕ ದೀಪೋತ್ಸವ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಪಾಲ್ಗೊಂಡಿದ್ದರು.

ಹಿನ್ನೆಲೆಯಲ್ಲಿ ಪಟ್ಟಣದ ಬಹುತೇಕ ದೇವಾಲಯಗಳಲ್ಲಿ ವಿಶೇಷ ಪೂಜೆ, ದೀಪೋತ್ಸವ ಅತ್ಯಂತ ಸಡಗರ ಸಂಭ್ರಮದಿಂದ ನಡೆಯಿತು. ಹಿರಿಯರು, ಮಹಿಳೆಯರು,ಮಕ್ಕಳ ಸಹಿತ ಭಕ್ತ ಗರ್ಗ ಶ್ರದ್ಧಾ ಭಕ್ತಿಯಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳಿಗೆ ಆಗಮಿಸಿ ಶರ್ನ ಪಡೆದು ಪುನೀತರಾದರು.

ರಥಬೀದಿಯ ಕಾರ್ತಿಕೋತ್ಸವದ ಯಶಸ್ಸಿಗೆ ಸ್ಥಳೀಯ ಎಸ್.ವಿ ಮಹೇಂದ್ರ, ಸೋಮಶೇಖರ್,ಸುಕನ್ಯಾ, ಕಾಶೀಬಾಯಿ, ಪ್ರವೀಣ, ಕರಿಬಸಪ್ಪ, ರೋಹನ್, ಸುಧನ್ವ ಬಾಟ್ನಿ ಶ್ರಮಿಸಿದ್ದರು.

ಮುಖಂಡ ಗುರುಮೂರ್ತಿ,ಚನ್ನವೀರಪ್ಪ, ವಸಂತಗೌಡ, ಪ್ರಕಾಶ್ ಜಿನ್ನು, ಎಸ್.ವಿ.ಕೆ ಮೂರ್ತಿ ಸಹಿತ ನೂರಾರು ಪ್ರಮುಖರು ಭೇಟಿ ನೀಡಿದ್ದರು.

ನಗರದ ಶಾಂತಿ ಕದಡದಂತೆ ವರ್ತಿಸಿ

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಯುವ ಮುಖಂಡ ಪಾಲಿಕೆ ಮಾಜಿ ಸದಸ್ಯ ಎಚ್.ಸಿ.ಯೋಗೀಶ್ ಮಾತನಾಡಿದರು.

ಶಿವಮೊಗ್ಗ: ಶಿವಮೊಗ್ಗ ನಗರದ ಶಾಂತಿಯನ್ನು ಕದಡದಂತೆ ವರ್ತಿಸಿ ಎಂದು ಶಾಸಕ ಎಸ್. ಎನ್.ಚನ್ನಬಸಪ್ಪ ಅವರಿಗೆ ಕಾಂಗ್ರೆಸ್ ಯುವ ಮುಖಂಡ ಪಾಲಿಕೆ ಮಾಜಿ ಸದಸ್ಯ ಎಚ್ .ಸಿ.ಯೋಗೀಶ್ ಸಲಹೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಚನ್ನಬಸಪ್ಪ ಅವರಿಗೆ ತಾಳ್ಮೆ, ಸಹನೆ ಕಡಿಮೆ ಇದೆ. ನಗರದಲ್ಲಿ ಯಾವುದೇ ರೀತಿಯ ಘಟನೆಯಾದರೂ ಯೋಚನೆ ಮಾಡದೇ ಅದನ್ನು ಕೋಮು ಬಣ್ಣಕ್ಕೆ ತಿರುಗಿಸಿಬಿಡುತ್ತಾರೆ. ಧರ್ಮದ ಲೇಪನ ಹಚ್ಚುತ್ತಾರೆ. ಇತ್ತೀಚೆಗೆ ನಗರದ ಮಾರ್ನಾಮಿಬೈಲ್ ನಲ್ಲಿ ನಡೆದ ಗಲಾಟೆಯೇ ಇದಕ್ಕೆ ಸಾಕ್ಷಿ ಎಂದರು.

ಈ ಹಲ್ಲೆ ಮಾಡಿದವರಲ್ಲಿ ಒಂದೇ ಧರ್ಮದವರು ಇಲ್ಲ ಎಂದು ಈಗ ಈ ಘಟನೆ ಗೊತ್ತಾದ ತಕ್ಷಣ ಘಟನೆಯನ್ನೇ ಬೇರೆ ಕಡೆಗೆ ತಿರುಗಿಸಿ ಗಾಂಜಾವನ್ನೇ ಪ್ರಮುಖವಾಗಿ ಬಿಂಬಿಸುತ್ತಿದ್ದಾರೆ ಎಂದು ಆರೋಪಿಸಿದರು.

ಶಾಸಕರಾದವರು ಎಲ್ಲರನ್ನೂ ಪ್ರೀತಿಸಬೇಕು. ಎಲ್ಲ ಧರ್ಮದವರಿಗೂ ಅವರೇ ಶಾಸಕರು. ಶಿವಮೊಗ್ಗದಲ್ಲಿ ಕೋಮುಗಲಭೆಯಂತಹ ವಾತಾವರಣ ಬಿಂಬಿಸುವಂತಹ ಹೇಳಿಕೆಗಳನ್ನು ನೀಡಬಾರದು.

> ಶಿವಮೊಗ್ಗ ನಗರದಲ್ಲಿ ಗಣಪತಿ ಸೇರಿದಂತೆ ಎಲ್ಲ ಹಬ್ಬಗಳು ಶಾಂತಿಯುತವಾಗಿವೆ. ಒಂದು ಸುಂದರ ನಗರವಾಗಿ ಶಿವಮೊಗ್ಗ ಬೆಳೆಯುತ್ತಿದೆ. ಇಲ್ಲಿ ವಾಸ ಮಾಡಬೇಕೆಂದೇ ಹಲವು ಜಿಲ್ಲೆಯವರು ಶಿವಮೊಗ್ಗ ನಗರ ಆಯ್ಕೆ ಮಾಡಿಕೊಳ್ಳುತ್ತಾರೆ. ಯಾವ ಹಿಂದೂಗಳು ಶಿವಮೊಗ್ಗ ನಗರವನ್ನು ಬಿಟ್ಟು ಹೋಗಿದ್ದಾರೆ. ಯಾಕೆ ಈ ರೀತಿಯ ಸುಳ್ಳನ್ನು ಹೇಳುತ್ತಾರೆ? ಶಾಸಕರು ತಮ್ಮ ಜವಾಬ್ದಾರಿಯನ್ನು ಮರೆತಂತೆ ಕಾಣುತ್ತದೆ.
>
> **- ಎಚ್.ಸಿ.ಯೋಗೀಶ್, ಮಾಜಿ ಸದಸ್ಯ**

ಯಾವ ತುಷ್ಟೀಕರಣವೂ ಇಲ್ಲಿ ಇಲ್ಲ. ಎಲ್ಲರಿಗೂ ಒಂದೇ ಕಾನೂನು. ಧರ್ಮಕ್ಕಿಂತ ಕಾನೂನೇ ಮುಖ್ಯವಾಗಿರುತ್ತದೆ. ಶಾಂತಿಗಾಗಿ ಹೋರಾಟ ಮಾಡಬೇಕೆ ಹೊರತೂ ನಗರವನ್ನು ಕಲುಷಿತಗೊಳಿಸಲು ಅಲ್ಲ. ಇದೇ ನಗರದಲ್ಲಿ ಮೇಲ್ಸೇತುವೆಯಲ್ಲಿ ಖಾಸಗಿ ಬಸ್ ಡಿಕ್ಕಿಯಾಗಿ ಒಬ್ಬ ಯುವಕ ಅಪಘಾತದಲ್ಲಿ ಸಾವು ಕಾಣುತ್ತಾನೆ. ಈ ಯುವಕ ಬೇರೆ ಧರ್ಮಕ್ಕೆ ಸೇರಿದವನು ಎಂಬ ಒಂದೇ ಕಾರಣಕ್ಕೆ ಅವರ ಮನೆಗೆ ಹೋಗಿ ಸಾಂತ್ವನ ಹೇಳಿಲ್ಲ. ಗಾಯಗೊಂಡವರನ್ನು ವಿಚಾರಿಸಿಯೂ ಇಲ್ಲ. ಯಾಕೆ ಈ ಅಧರ್ಮ ಎಂದು ಪ್ರಶ್ನಿಸಿದರು.

ಅವರು ಆರೋಪಿಸಿದಂತೆ ಶಿವಮೊಗ್ಗದಲ್ಲಿ ಗಾಂಜಾ ಹಾವಳಿ ಇದೆ. ಗಾಂಜಾ ತಡೆಗಟ್ಟಲು ನಾವು ಕೂಡ ಒತ್ತಾಯ ಮಾಡುತ್ತೇವೆ. ಗಾಂಜಾ ಸಾಗಣೆ, ಸೇವನೆಗೆ ಯಾವ ಧರ್ಮವೂ ಸೇರಿಲ್ಲ, ಆರೋಪಿಗಳು ಯಾರೇ ಆಗಲಿ ಅವರಿಗೆ ತಕ್ಕ ಶಿಕ್ಷೆ ಆಗಲೇಬೇಕು. ಯಾವ ಸರಕಾರಗಳು ಬಂದರೂ ಗಾಂಜಾ, ಒಸಿ ಮುಂತಾದ ಅಕ್ರಮ ದಂಧೆಗಳು ಇದ್ದೇ ಇರುತ್ತವೆ. ಇವುಗಳನ್ನು ನಾವಂತೂ ಸಹಕಾರ ನೀಡುವುದಿಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ದಕ್ಷಿಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಲೀಂ ಪಾಷಾ, ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಎಸ್.ಟಿ. ಚಂದ್ರಶೇಖರ್,ಪ್ರಮುಖರಾದ ಎಚ್. ಪಾಲಾಕ್ಷಿ, ವಿಶ್ವನಾಥ್ ಕಾಶಿ, ಯಮುನಾ ರಂಗೇಗೌಡ, ನಾಗರಾಜ್ ಕಂಕಾರಿ, ಚರಣ್, ಮುನ್ನ, ಶರತ್, ಆಸೀಫ್, ಮಧು, ಪವನ್ ಇದ್ದರು.

ಕಣಿವೆ, ಜೀವವೈವಿಧ್ಯ ರಕ್ಷಣಾ ಅಭಿಯಾನ

ಸೊರಬ: ಜೀವವೈವಿಧ್ಯತೆಯ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ, ನ್ಯಾಯ ಸಮ್ಮತ ಹಂಚಿಕೆ ಹಾಗೂ ಜನತಾ ಜೀವವೈವಿಧ್ಯತೆ ದಾಖಲಾತಿ ರಚನೆ ಪ್ರತಿ ಗ್ರಾಪಂ ಜೀವವೈವಿಧ್ಯ ಸಮಿತಿಯ ಜವಾಬ್ದಾರಿಯಾಗಿರುತ್ತದೆ. ಮನುಷ್ಯತ್ವವನ್ನು ಅರ್ಥೈಸಿಕೊಂಡರೆ ಪರಿಸರ ನಾಶವಾಗುವುದಿಲ್ಲ, ಜೀವವೈವಿಧ್ಯತೆ ಸರಪಳಿಯಲ್ಲಿ ಮಾನವ ನಿಲ್ಲದೆ ಉಳಿದೆಲ್ಲ ಸಸ್ಯ ಪ್ರಾಣಿ ವರ್ಗ ಬದುಕಬಲ್ಲವು, ಆದರೆ, ಅವುಗಳಿಲ್ಲದೆ ಮನುಷ್ಯ ಬದುಕಲಾರ ಎಂದು ರಾಜ್ಯ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಜಗದೀಶ್ ವಡ್ನಾಳ್ ಹೇಳಿದರು.

ತಾಪಂ ಜೀವವೈವಿಧ್ಯ ನಿರ್ವಹಣಾ ಸಮಿತಿ, ವೃಕ್ಷಲಕ್ಷ ಆಂದೋಲನ ಮತ್ತು ಪರಿಸರ ಜಾಗೃತಿ ಟ್ರಸ್ಟ್, ಸರ್ವೋದಯ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಸಂಯುಕ್ತವಾಗಿ ಹುನವಳ್ಳಿ ಹುಲಿಕಣಿವೆಯಲ್ಲಿ ಆಯೋಜಿಸಿದ್ದ ಕಣಿವೆ ಸಂರಕ್ಷಣೆ, ದೇವರಕಾಡು, ಜೀವವೈವಿಧ್ಯ ರಕ್ಷಣಾ ಅಭಿಯಾನದಲ್ಲಿ ಉದ್ಘಾಟಿಸಿದರು.

ಕಣಿವೆಯಲ್ಲಿ ವೃಕ್ಷಪೂಜೆ, ವೃಕ್ಷಾರೋಪಣ ನೆರವೇರಿತು. ಇಂಡುವಳ್ಳಿ ಗ್ರಾಪಂ ಕಚೇರಿಯಲ್ಲಿ ಜೀವವೈವಿಧ್ಯ ಹಾಗೂ ಪಂಚಾಯತ ಸಮಿತಿಯ ಜತೆ

ಹುನವಳ್ಳಿ ಹುಲಿಕಣಿವೆಯಲ್ಲಿ ಆಯೋಜಿಸಿದ್ದ ಕಣಿವೆ ಸಂರಕ್ಷಣೆ, ದೇವರಕಾಡು, ಜೀವವೈವಿಧ್ಯ ರಕ್ಷಣಾ ಅಭಿಯಾನ ಹಮ್ಮಿಕೊಳ್ಳಲಾಯಿತು.

ಜೀವವೈವಿಧ್ಯ ರಕ್ಷಣೆಯ ಕುರಿತು ನಡೆಸಬಹುದಾದ ಕಾರ್ಯಚಟುವಟಿಕೆಗಳ ಕುರಿತು ಸಮಾಲೋಚನೆ, ಇಲ್ಲಿಯವರೆಗಿನ ತಾಪಂ ಬಿಎಂಸಿಯ ಕಾರ್ಯಚಟುವಟಿಕೆಯ ವರದಿ, ದಂಡಾವತಿ ನದಿ ಅಭಿಯಾನದ ಜೀವವೈವಿಧ್ಯ ದಾಖಲೆ ಬಿಡುಗಡೆ ನಡೆಸಲಾಯಿತು. ನಂತರ ತಂಡ ಹುನವಳ್ಳಿ ಅರಣ್ಯ, ಕಾನಳ್ಳಿ ಅರಣ್ಯಕ್ಕೆ ಭೇಟಿ ನೀಡಿತು.

ಮಂಡಳಿಯ ಅಧಿಕಾರಿ ಕೆ.ಪವಿತ್ರಾ , ಮಂಡಳಿಯ ಸೌಲಭ್ಯ, ಸಮಿತಿಗಳು ಅನುಸರಿಸಬೇಕಾದ ನಿಯಮ, ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಅಭಿಯಾನದ ಸಂಚಾಲಕ ಶ್ರೀಪಾದ ಬಿಚ್ಚುಗತ್ತಿ ಕಾರ್ಯಕ್ರಮದ ಉದ್ದೇಶ, ದಂಡಾವತಿ ನದಿ ಅಭಿಯಾನದ ದಾಖಲಾತಿ ಕುರಿತಂತೆ ಮಾತನಾಡಿದರು. ದಂಡಾವತಿ ಅಭಿಯಾನದ ಸಂಚಾಲಕ ವಕೀಲ ಎಚ್.ಎಂ.ಪ್ರಶಾಂತ್ ಮಾತನ್ನಾಡಿದರು.ಸಭೆಯಲ್ಲಿ ತಾಪಂ ಇಒ ಶಶಿಧರ್ ,ಅಕ್ಷರ ದಾಸೋಹ ಅಧಿಕಾರಿ ಶ್ರೀಕಾಂತ್, ಅರಣ್ಯಾಧಿಕಾರಿಗಳಾದ ಎಸಿಎಫ್ ಸುರೇಶ್ ಕುಳ್ಳಳ್ಳಿ, ಆರ್‌ಎಫ್ಒ ಶ್ರೀಪಾದ ನಾಯ್ಕ್, ಡಿವೈಆರ್‌ಎಫ್ಒ ಪ್ರವೀಣ್, ಯೋಗರಾಜ್, ಪಿಡಿಒ ಸಂತೋಷ್, ಪ್ರಸನ್ನ, ಪಿಎಸ್ ಮಧು, ಗ್ರಾಪಂ ಅಧ್ಯಕ್ಷ ವೇದಮೂರ್ತಿ,ಆನಂದಪ್ಪ, ಉಪಾಧ್ಯಕ್ಷೆ ಸುಮಾ, ಯೋಗೇಶ್, ಶಿವಾನಂದಪ್ಪ, ಕಾರ್ಯದರ್ಶಿ ಷಣ್ಮುಖಪ್ಪ, ಗಣಪತಿ ಭಟ್, ಗಂಗಾಧರ ಗೌಡ ಹೊಳೆಮರೂರು ಇದ್ದರು.

ಎಸ್.ವಿ.ಸಿ. ಕೋ - ಆಪರೇಟಿವ್ ಬ್ಯಾಂಕ್ ಲಿ.

ವಸೂಲಾತಿ ವಿಭಾಗ : ಎಸ್.ವಿ.ಸಿ. ಟವರ್, ಜವಹರ್‌ಲಾಲ್ ನೆಹರು ರಸ್ತೆ, ವಕೋಲಾ, ಸಾಂಟಾಕ್ರೂಜ್ (ಪೂರ್ವ), ಮುಂಬೈ - 400055.

ಮಂಗಳೂರು ಶಾಖೆ : ಎಸ್‌ವಿಸಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಜಿ-7, ನೆಲ ಮಹಡಿ, ಕ್ರಿಸ್ಟಲ್ ಆರ್ಕ್, ಬಲ್ಮಠ ರಸ್ತೆ, ಮಂಗಳೂರು-575001.
ದೂರವಾಣಿ: 0824-2441263 | 2441586.

ಸುರಕ್ಷಿತ ಠೇವಣಿ ಲಾಕರ್ ಹೊಂದಿರುವವರು

ಕ್ರ. ಸಂ	ಬಾಡಿಗೆದಾರರ ಹೆಸರು	ಶಾಖೆ	ಲಾಕರ್ ನಂ.	ಲಾಕರ್ ಬಾಡಿಗೆ ಈ ದಿನಾಂಕದಿಂದ ಬಾಕಿ ಇದೆ	ಲಾಕರ್‌ನ್ನು ಈ ದಿನಾಂಕದಿಂದ ಕಾರ್ಯ ಚರಣೆ ಮಾಡಿತ್ತಿರುವುದಿಲ್ಲ
1	ಪ್ರಫುಲ್ಲಚಂದ್ರ ರಾಜ್, ರಂಜನ್ ಪಿ ರಾಜ್	ಮಂಗಳೂರು	A-0119	16-10-2021	04-07-2018

ನಮ್ಮ ಶಾಖೆಗಳ ಈ ಮೇಲೆ ನಮೂದಿಸಿರುವ ವ್ಯಕ್ತಿಗಳಿಗೆ ಮತ್ತು ಗ್ರಾಹಕರಿಗೆ ಸೂಚಿಸುವುದೇನೆಂದರೆ 3 ವರ್ಷ ಮತ್ತು ಅದಕ್ಕಿಂತಲೂ ಹೆಚ್ಚಿನ ಲಾಕರ್ ಗಳ ಬಾಕಿ ಇರುವ ಬಾಡಿಗೆಗಳನ್ನು ಪಾವತಿಸಲು ವಯಕ್ತಿಕ ನೋಟೀಸ್ ಮತ್ತು ತದನಂತರ ಲಾಕರ್ ಗಳನ್ನು ಬ್ರೇಕ್ ಓಪನ್ ಮಾಡುವ ಅಂತಿಮ ನೋಟೀಸ್ ಗಳನ್ನು ನೀಡಿದ ಹೊರತಾಗಿಯೂ, ಲಾಕರ್ ಗಳನ್ನು ಕಾರ್ಯಗತಗೊಳಿಸಲು/ ಒಪ್ಪಿಸಲು / 90 ದಿನಗಳೊಳಗೆ ಬಾಕಿ ಉಳಿದಿರುವ ಬಾಡಿಗೆಯನ್ನು ಪಾವತಿಸುವ ಬ್ಯಾಂಕ್‌ಗಳ ಸೂಚನೆಗೆ ಪ್ರತಿಕ್ರಿಯಿಸಲು ನೀವು ವಿಫಲರಾಗಿದ್ದೀರಿ. ಇನ್ನು ಕೆಲವು ಪ್ರಕರಣಗಳಲ್ಲಿ ಬ್ಯಾಂಕ್ ಕಳುಹಿಸಿದ ನೋಟೀಸ್/ಪತ್ರಗಳು ಬಟವಾಡೆಯಾಗದೇ ಅಂತಿಮವಾಗಿ ಹಿಂದಿರುಗಿವೆ ಮತ್ತು ಲಾಕರ್ ಬಾಡಿಗೆದಾರರನ್ನು ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ ಎಂದು ಸಹ ಗಮನಿಸಲಾಗಿದೆ. ಲಾಕರ್ ಅನ್ನು ಬಾಡಿಗೆ ಪಡೆಯುವ ನಿಯಮಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ಲಾಕರ್ ಬಾಡಿಗೆದಾರರು ಲಾಕರ್ ಅನ್ನು ಪಡೆಯಲು 'ಜ್ಞಾಪಕ ಪತ್ರ'ವನ್ನು ಕಾರ್ಯಗತಗೊಳಿಸುವ ಮೂಲಕ ಸರಿಯಾಗಿ ಸ್ವೀಕರಿಸಿರುವುದರಿಂದ ಭದ್ರತಾ ಕಾರಣಗಳಿಗಾಗಿ ಅದರಲ್ಲಿರುವ ವಸ್ತುಗಳನ್ನು ಪರಿಶೀಲಿಸಲು ಮತ್ತು ಬಾಕಿಗಳು, ಶುಲ್ಕಗಳು ಹಾಗೂ ವೆಚ್ಚಗಳ ವಸೂಲಾತಿಗಾಗಿ ಭಾಗಶ: ಅಥವಾ ಸಂಪೂರ್ಣವಾಗಿ ಲಾಕರ್ ನಲ್ಲಿರುವ ವಸ್ತುಗಳನ್ನು ಖಾಸಗಿ /ಸಾರ್ವಜನಿಕವಾಗಿ ಮಾರಾಟಮಾಡಬಹುದು, ಮತ್ತು ಮಾರಾಟದ ಪ್ರಕ್ರಿಯೆಗಳು ಅಥವಾ ಉಳಿದ ವಸ್ತುಗಳನ್ನು ಸಂಪೂರ್ಣವಾಗಿ ಬಾಡಿಗೆದಾರನ ಅಪಾಯ ಮತ್ತು ಜವಾಬ್ದಾರಿಯಲ್ಲಿ ಹಿಡಿದಿಟ್ಟುಕೊಳ್ಳುವುದು, ಮತ್ತು ಲಾಕರ್ ಗಳನ್ನು ಬಾಡಿಗೆ ಪಡೆಯುವ ವ್ಯವಸ್ಥೆಯಡಿ ಪ್ರದತ್ತವಾದ ಅಧಿಕಾರಗಳಿಗೆ ಅನುಸಾರ 3 ವರ್ಷ ಮತ್ತು ಅದಕ್ಕೂ ಹೆಚ್ಚಿನ ಅವಧಿಯ ಬಾಕಿ ಬಾಡಿಗೆಯನ್ನು ಅನ್ವಯಿಸುವ ದಂಡದ ಮೊತ್ತದೊಂದಿಗೆ ಈ ಸೂಚನೆ ಪ್ರಕಟಣೆ ದಿನಾಂಕದಿಂದ 3 ತಿಂಗಳಒಳಗೆ ಪಾವತಿಸದಿದ್ದರೆ ಅಂತಹ ಬಾಡಿಗೆದಾರರ ಲಾಕರ್ ಗಳನ್ನು ಬ್ಯಾಂಕು ಒಡೆದು ತೆರೆಯಬಹುದು / ಒಡೆದು ಮರು ಸ್ವಾಧೀನ ಪಡಿಸಿಕೊಳ್ಳಬಹುದು.
ಹೆಚ್ಚಿನ ಮಾಹಿತಿ / ಪ್ರಶ್ನೆಗಳಿದ್ದಲ್ಲಿ ನಿಮ್ಮ ಸಂಬಂಧಪಟ್ಟ ಶಾಖೆಯನ್ನು ಸಂಪರ್ಕಿಸಿ

ದಿನಾಂಕ : 14.11.2025
ಸ್ಥಳ : ಮಂಗಳೂರು
ಸಹಿ/-
ಎಸ್.ವಿ.ಸಿ. ಕೋ-ಆಪರೇಟಿವ್ ಬ್ಯಾಂಕ್ ಲಿ.

ಘನತ್ಯಾಜ್ಯ ನಿರ್ವಹಣೆ ಕಾರ್ಯಾಗಾರ

ಶಿವಮೊಗ್ಗ: ರಾಜ್ಯ ನಗರಾಭಿವೃದ್ಧಿ ಇಲಾಖೆ ಮತ್ತು ಶಿವಮೊಗ್ಗ ಮಹಾ ನಗರ ಪಾಲಿಕೆ ವತಿಯಿಂದ ಸ್ವಚ್ಛ ಭಾರತ್ ಮಿಷನ್ 2.0 ಅಡಿಯಲ್ಲಿ ಪಾಲಿಕೆಯ ಸ್ವಚ್ಛತಾ ಸಿಬ್ಬಂದಿಗಳಿಗೆ ಘನತ್ಯಾಜ್ಯ ನಿರ್ವಹಣೆ ಸಂಬಂಧ ಇಲ್ಲಿನ ಆದಿಚುಂಚನಗಿರಿ ಸಮು ದಾಯ ಭವನದಲ್ಲಿ ಒಂದು ದಿನದ ಕಾರ್ಯಾಗಾರ ನಡೆಸಲಾಯಿತು. ಈ ಸಂದರ್ಭದಲ್ಲಿ ಮಹಾನಗರಪಾಲಿಕೆ ಒಳಚರಂಡಿ ವಿಭಾಗದ ಮುಖ್ಯಸ್ಥರೂ, ಪಾಲಿಕೆ ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಎನ್.ಗೋವಿಂದ ಅವರನ್ನು ಸನ್ಮಾನಿಸಲಾಯಿತು. ಮಹಾನಗರ ಪಾಲಿಕೆ ಆಯುಕ್ತ ಕೆ. ಮಾಯಣ್ಣಗೌಡ ಅವರ ಅಧ್ಯಕ್ಷತೆ ಯಲ್ಲಿ ನಡೆದ ಈ ಕಾರ್ಯಾ ಗಾರದಲ್ಲಿ ಡಿಯುಡಿಸಿ ಯೋಜನಾ ನಿರ್ದೇ ಶಕರಾದ ರಂಗಸ್ವಾಮಿ. ಡಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ಮುರುಗೇಂದ್ರ ಡಿ ಶಿರೋಳ್ಕರ್, ಪಾಲಿಕೆ ಸಹಾಯಕ ಅಭಿಯಂತರ'(ಪರಿಸರ) ತ್ರಿವೇಣಿ ಬಿ.ಜಿ, ಪಾಲಿಕೆ ಪೌರಸೇವಾ ನೌಕರರ ಸಂಘದ ಪದಾಧಿಕಾರಿ ವೇಣುಗೋಪಾಲ್ ಉಪಸ್ಥಿತರಿದ್ದರು.

ಗ್ರಾಮೀಣ ಮಟ್ಟದಲ್ಲಿ ಸಹಕಾರಿ ಸಂಘಗಳ ಸದೃಢಗೊಳಿಸಬೇಕಾಗಿದೆ

ಶಿಕಾರಿಪುರ: ನಬಾರ್ಡ ವಿತರಿಸುತ್ತಿದ್ದ ಅನುದಾನದಲ್ಲಿ ಅರ್ಧಕ್ಕಿಂತ ಅಧಿಕ ಕಡಿಮೆಯಾಗಿದ್ದು ಈ ದಿಸೆಯಲ್ಲಿ ರೈತರಿಗೆ ಸಹಕಾರ ಸಂಘದ ಮೂಲಕ ನೀಡುವ ಬೆಳೆ ಸಾಲದಲ್ಲಿ ಕೊರತೆಯುಂಟಾಗುವ ಸಂಭವವಿದೆ ಎಂದು ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಪಿ ಚಂದ್ರಶೇಖರ್‌ಗೌಡ ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ಸುರಭಿ ಭವನದಲ್ಲಿ ರಾಜ್ಯ ಸಹಕಾರ ಮಹಾಮಂಡಳ ನಿ,ಜಿಲ್ಲಾ ಸಹಕಾರ ಯೂನಿಯನ್ ನಿ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ, ಜಿಲ್ಲಾ ಸಹಕಾರ ಹಾಲು ಒಕ್ಕೂಟ (ಶಿಮೂಲ್), ಸಹಕಾರ ಇಲಾಖೆ ಸಹಿತ ತಾಲೂಕಿನ ಎಲ್ಲ ರೀತಿಯ ಸಹಕಾರ ಸಂಘ ಹಾಗೂ ಬ್ಯಾಂಕ್ ವತಿಯಿಂದ ನಡೆದ 72 ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಗ್ರಾಮೀಣ ಮಟ್ಟದಲ್ಲಿ ಸಹಕಾರಿ ಸಂಘಗಳನ್ನು ಸದೃಡಗೊಳಿಸುವ ಅಗತ್ಯವಿದ್ದು ಡಿಸಿಸಿ ಬ್ಯಾಂಕ್ 1200 ಕೋಟಿ ರು. ಬೆಳೆಸಾಲ ನೀಡುತ್ತಿದೆ. 500 ಕೋಟಿ ರು. ಕೃಷಿಯೇತರ ಸಾಲ ನೀಡುವ ಮೂಲಕ ಆರ್ಥಿಕ ಸಮನ್ವಯತೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕರ್ಯಕ್ರಮ ಉದ್ಘಾಟಿಸಿದ ಡಿಸಿಸಿ ಬ್ಯಾಂಕ್ ನಿರ್ದೇಶಕ,ಶಿಮೂಲ್ ಹಾಲಿ ನಿರ್ದೇಶಕ ಮಾಜಿ ಅಧ್ಯಕ್ಷ ಟಿ.ಶಿವಶಂಕರಪ್ಪ ಮಾತನಾಡಿದರು.

ಶಿಕಾರಿಪುರದ ಸುರಭಿ ಭವನದಲ್ಲಿ ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಉತ್ತಮ ಸಹಕಾರಿಗಳನ್ನು ಸನ್ಮಾನಿಸಲಾಯಿತು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್.ಎಸ್ ರವೀಂದ್ರ, (ರಾಘು) ಸಹಕಾರಿ ಧ್ವಜಾರೋಹಣ ನೆರವೇರಿಸಿದರು. ತಾಲೂಕಿನ ಉತ್ತಮ ಸಹಕಾರಿಯಾಗಿ ಇಂದ್ರಮ್ಮ, ಶಾಂತಪ್ಪ, ಹೇಮಂತ ಶೆಟ್ಟರ್,ಗಂಗಾಧರಪ್ಪ, ಮಹೇಂದ್ರಪ್ಪ, ನಿರ್ಮಲಾ ಕೊಟ್ರೇಶ್, ಸೂರ್ಯನಾಯ್ಡು ರನ್ನು ಸನ್ಮಾನಿಸಲಾಯಿತು. ಬೇಗೂರು, ಕಿಟ್ಟದಹಳ್ಳಿ, ಎಳಗೆರೆ ಗ್ರಾಮದ ಸಹಕಾರಿ ಸಂಘ,ತಡಗುಣಿ,ಹಿರೇಜಂಬೂರು, ಅಗ್ರಹಾರ ಮುಚುಡಿ, ಮಾಯತಮ್ಮನ ಮುಚುಡಿ, ಕಲ್ಮನೆ,ಸುರಗೀಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಪಟ್ಟಣದ ಅಭ್ಯುದಯ,ಜಗದ್ಗುರು ಪಂಚಾಚರ್ಯ ಸಂಘವನ್ನು ಉತ್ತಮ ಸಹಕಾರಿ ಸಂಘ ಎಂದು ಗುರುತಿಸಿ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಜಿಲ್ಲಾ ಸಹಕಾರಿ ಯೂನಿಯನ್ ನರ್ದೇಶಕಿ ಪುಷ್ಪಾ ಯಶವಂತ್ ತಾಲೂಕಿನ ವಿವಿಧ ಸಹಕಾರಿ ಸಂಘದ ಅಧ್ಯಕ್ಷರಾದ ಕೆ.ಜಿ ಸುರೇಂದ್ರಗೌಡ ಕಾನೂರು,ಚಿಕ್ಕಣ್ಣ ಹೊಲಗಾವಲು,ಪಾಲಾಕ್ಷಪ್ಪ,ನಗರದ ಮಾಲತೇಶ್, ನಿರಂಜನ, ಬಸವರಾಜ್, ಪ್ರಭುಸ್ವಾಮಿ, ಕಿರಣಕುಮಾರ್‌ಸಹಕಾರಿ ಸಂಘದ ಉಪನಿಭಂದಕ ಸತೀಶ್ ಕುಮಾರ್,ಸಂಗಮೇಶ್, ಉಷಾ, ಶಿವಾನಂದಪ್ಪ, ಹುಚ್ಚರಾಯಪ್ಪ, ಮಹೇಶ್ ಕುಮಾರ್,ನವಿಲೇಶಪ್ಪ ಜಿಲ್ಲಾ ಸಹಕಾರಿ ಯಾನಿಯನ್ ನ ಯಶವಂತ್, ಸಹಕಾರ ಸಂಘಗಳ ಉಪನಿಭಂದಕ ನಾಗಭೂಷಣ್ ಉಪಸ್ಥಿತರಿದ್ದರು.

> ಸಹಕಾರಿ ತತ್ವ ಅತ್ಯಂತ ಬಲಿಷ್ಠವಾಗಿದ್ದು, ರಾಜಕೀಯದಿಂದ ಹೊರತಾಗಿದ್ದಲ್ಲಿ ಮಾತ್ರ ಗ್ರಾಮೀಣ ಜನತೆಗೆ ರೈತರಿಗೆ ಸದುಪಯೋಗವಾಗಲಿದೆ ಎಂದ ಅವರು, ಸರಕಾರ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ದಿಯ ಜತೆಗೆ ಜನಸಾಮಾನ್ಯರು ಸ್ವಾಭಿಮಾನದಿಂದ ಬದುಕಲು ಸಾಧ್ಯ. ಸಹಕಾರಿ ಕ್ಷೇತ್ರವನ್ನು ಹೆಚ್ಚು ಸದೃಡಗೊಳಿಸಲು ಪ್ರಾಮಾಣಿಕತೆ ದಕ್ಷತೆ ಅಗತ್ಯವಾಗಿದ್ದು ಸಮಾಜದ ಆರ್ಥಿಕ ಸಬಲೀಕರಣಕ್ಕೆ ಸಹಕಾರಿ ಕ್ಷೇತ್ರದ ಕೊಡುಗೆ ಅನನ್ಯ.
>
> **- ಎಸ್.ಪಿ ಚಂದ್ರಶೇಖರ್‌ಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ**

ಸಮಾಚಾರ ಸಣ್ಣದಲ್ಲ

ಚಾಲಕನಿಗೆ ಬಿಪಿ ಕುಸಿತ: ರಿಕ್ಷಾಗೆ ಬಸ್ ಡಿಕ್ಕಿ

ಉಡುಪಿ : ಚಾಲಕನಿಗೆ ಬಿಪಿ ಲೋ ಆಗಿ ಬಸ್ ರಿಕ್ಷಾಕ್ಕೆ ಡಿಕ್ಕಿ ಹೊಡೆದ ಘಟನೆ ನ. 20ರಂದು ಕಾರ್ಕಳದಲ್ಲಿ ಸಂಭವಿಸಿದೆ. ಶ್ರೀ ಗಣೇಶ್ ಬಸ್ ಅನಂತಶಯನದಿಂದ ಕಾರ್ಕಳ ಕಡೆಗೆ ಸಾಗುತ್ತಿದ್ದು ಕೆನರಾ ಬ್ಯಾಂಕ್ ಮುಂಭಾಗ ಚಾಲಕನಿಗೆ ಬಿಪಿ ಲೋ ಆಗಿದ್ದು ನಿಯಂತ್ರಣ ತಪ್ಪಿದ ಬಸ್ ತೀರಾ ಬಲಬದಿಗೆ ಬಂದು ಎದುರಿನಲ್ಲಿ ಬರುತ್ತಿದ್ದ ರಿಕ್ಷಾಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮವಾಗಿ ರಿಕ್ಷಾ ಚಾಲಕ ಗಾಯಗೊಂಡಿದ್ದು ಗಾಯಾಳು ಮತ್ತು ಬಸ್ ಚಾಲಕ ನನ್ನು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಾರ್ಟ್ ಸರ್ಕ್ಯೂಟ್ : ಕಾರಿನಲ್ಲಿ ಬೆಂಕಿ

ಉಡುಪಿ: ಚಲಿಸುತ್ತಿದ್ದ ಕಾರಿನಲ್ಲಿ ಬೆಂಕಿ ಹತ್ತಿಕೊಂಡು ಸುಟ್ಟು ಕರಕಲಾದ ಘಟನೆ ನಾವುಂದ ರಾಷ್ಟ್ರೀಯ ಹೆದ್ದಾರಿ-66 ಮೇಲ್ಸೇತುವೆಯಲ್ಲಿ ನಡೆದಿದೆ. ಕುಂದಾಪುರ ಕಡೆಯಿಂದ ಬೈಂದೂರು ಕಡೆಗೆ ಸಾಗುತ್ತಿದ್ದ ಕಾರಿನಲ್ಲಿದ್ದ ಇಬ್ಬರು ಪಾರಾಗಿದ್ದಾರೆ. ಶಾರ್ಟ್ ಸರ್ಕ್ಯೂಟ್ನಿಂದ ಕಾರಿನೊಳಗೆ ಬೆಂಕಿ ಹೊತ್ತಿಕೊಂಡಿರಬಹುದೆಂದು ಅಂದಾಜಿಸಲಾಗಿದೆ. ರಾ. ಹೆದ್ದಾರಿಯಲ್ಲಿ ಘಟನೆ ನಡೆದಿದ್ದರಿಂದ ಕೆಲ ಕಾಲ ಆತಂಕ ಸೃಷ್ಟಿಯಾಗಿತ್ತು. ಸ್ಥಳಕ್ಕೆ ದೌಡಾಯಿಸಿದ ಬೈಂದೂರು ಅಗ್ನಿಶಾಮಕ ದಳದವರು ಸಂಪೂರ್ಣ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಅಗ್ನಿಶಾಮಕ ಅಧಿಕಾರಿ ರಾಜೇಶ್, ಪ್ರಮುಖ ಅಗ್ನಿಶಾಮಕರಾದ ಚೆನ್ನಯ್ಯ ಪೂಜಾರಿ, ಶೀನ ನಾಯ್ಕ, ಚಾಲಕರಾದ ಆನಂದ, ರಾಘವೇಂದ್ರ, ಅಗ್ನಿಶಾಮಕರಾದ ರವಿ, ಸುರೇಶ್, ಅರುಣ ಇದ್ದರು.

ಖಾಸಗಿ ಬಸ್ ಪಲ್ಟಿ : ನಾಲ್ವರಿಗೆ ಗಾಯ

ಉಡುಪಿ: ಮಂಗಳೂರಿನಿಂದ ಕಾರ್ಕಳವಾಗಿ ದಾವಣಗೆರೆ ಸಾಗುತ್ತಿದ್ದ ಶ್ರೀ ದುರ್ಗಾಂಬಾ ಬಸ್ ಬುಧವಾರ ರಾತ್ರಿ ಜೋಡುಕಟ್ಟೆಯಲ್ಲಿ ಪಲ್ಟಿಯಾಗಿದೆ. ಬಸ್ನಲ್ಲಿ ಒಟ್ಟು 15 ಮಂದಿ ಪ್ರಯಾಣಿಕರಿದ್ದು ನಾಲ್ವರಿಗೆ ಸಣ್ಣ ಪುಟ್ಟ ಗಾಯವಾಗಿದೆ. ಇಬ್ಬರು ಚಾಲಕರಿದ್ದುಒಬ್ಬ ಸ್ಥಳದಿಂದ ಪರಾರಿಯಾಗಿದ್ದಾನೆ. ಅಪಘಾತದಿಂದಾಗಿ ಬಸ್ಸಿನ ಮುಂಭಾಗ ಸಂಪೂರ್ಣ ಜಖಂಗೊಂಡಿದೆ. ರಸ್ತೆ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ಡೈವರ್ಸನ್ ಬೋರ್ಡ್ ಇಲ್ಲದಿರುವುದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ರಸ್ತೆ ಅವ್ಯವಸ್ಥೆ ಖಂಡಿಸಿ ಪತ್ರಕರ್ತರು ಧರಣಿ

ಸುಳ್ಯ: ಸಂಪೂರ್ಣ ಹದಗೆಟ್ಟು ಸಂಚಾರಕ್ಕೆ ತೀವ್ರ ಅಡಚಣೆಯಾಗಿರುವ ಸುಳ್ಯ ನಗರದ ಹಳೆಗೇಟು-ಜಯನಗರ ರಸ್ತೆಯ ಅವ್ಯವಸ್ಥೆಯನ್ನು ವಿರೋಧಿಸಿ ಸುಳ್ಯ ಜಯನಗರದ ಸ್ಥಳೀಯ ಪತ್ರಕರ್ತರು ಗುರುವಾರ ಪ್ರತಿಭಟನೆ ನಡೆಸಿದರು. ಪತ್ರಕರ್ತರಾದ ಹಸ್ಸೆನಾರ್ಜಯನಗರ, ಪ್ರೆಸ್ ಕ್ಲಬ್ ಅಧ್ಯಕ್ಷ ಶರೀಫ್ ಜಟ್ಟಿಪಳ್ಳ, ಜಯಶ್ರೀ ಕೊಯಿಂಗೋಡಿ ಹಾಗೂ ರೇಖಾ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಕಳೆದ ಹಲವು ಸಮಯದಿಂದ ಹಳೆಗೇಟು- ಜಯನಗರ ರಸ್ತೆ ಸಂಪೂರ್ಣ ಹದಗೆಟ್ಟು ಸಂಚಾರಕ್ಕೆ ಅಯೋಗ್ಯವಾಗಿದೆ. ಹಲವು ಬಾರಿ ರಸ್ತೆಯ ಅವ್ಯವಸ್ಥೆಯ ಬಗ್ಗೆ ಪತ್ರಿಕೆಗಳು ವರದಿ ಮಾಡಿದರೂ, ಸಾರ್ವಜನಿಕರು ಪ್ರತಿಭಟನೆ ನಡೆಸಿದರೂ ರಸ್ತೆ ಅಭಿವೃದ್ಧಿ ಆಗಿಲ್ಲ. ಈ ಹಿನ್ನಲೆಯಲ್ಲಿ ಪತ್ರಕರ್ತರೇ ಬೀದಿಗೆ ಇಳಿಯಬೇಕಾದ ಸ್ಥಿತಿ ಉಂಟಾಗಿದೆ ಎಂದು ಹಸ್ಸೆನಾರ್ಜಯನಗರ ಹೇಳಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ನಗರ ಪಂಚಾಯಿತಿ ಮುಖ್ಯಾಧಿಕಾರಿ ಬಸವರಾಜ್ ಅವರು ಒಂದು ವಾರದಲ್ಲಿ ರಸ್ತೆಯ ದುರಸ್ತಿ ಕಾರ್ಯ ಆರಂಭಿಸುವುದಾಗಿ ಭರವಸೆ ನೀಡಿದರು. ಈ ಹಿನ್ನಲೆಯಲ್ಲಿ ಪ್ರತಿಭಟನೆ ಹಿಂಪಡೆಯಲಾಯಿತು. ಒಂದು ವಾರದಲ್ಲಿ ರಸ್ತೆ ದುರಸ್ತಿ ಆರಂಭಿಸದೇ ಇದ್ದರೆ ನಗರ ಪಂಚಾಯಿತಿ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಪತ್ರಕರ್ತರು ಎಚ್ಚರಿಸಿದರು.

ಖಾಸಗಿ ದೇಣಿಗೆ ಸಂಗ್ರಹ: ಕ್ರಮಕ್ಕೆ ಆಗ್ರಹ

ಮಂಗಳೂರು: ತಲಪಾಡಿ ಶ್ರೀ ದುರ್ಗಾಪರಮೇಶ್ವರಿ ದೇಗುಲ ಹೆಸರಲ್ಲಿ ಅನಧಿಕೃತ ನಿಧಿ ಸಂಗ್ರಹಿಸಿ ಸಾರ್ವಜನಿಕ ಚಂಡಿಕಾ ಯಾಗ ನಡೆಸುತ್ತಿರುವುದಾಗಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಆಯುಕ್ತ ರಿಗೆ ಸಾರ್ವಜನಿಕರು ದೂರು ನೀಡಿದ್ದಾರೆ. ದೇವಸ್ಥಾನದಲ್ಲಿ ನ. 23 ರಂದು ದೇವಸ್ಥಾನದಲ್ಲಿ ಶಿವಳ್ಳಿ ಸಭಾ ಎನ್ನುವ ಸಂಘವು " ಸಾರ್ವಜನಿಕ ಚಂಡಿಕಾ ಯಾಗ" ಆಯೋಜಿಸಿದೆ. ತಲಪಾಡಿ ಕ್ಷೇತ್ರದ ವತಿಯಿಂದ ಈಗಾಗಲೇ ಚಾಲ್ತಿಯಲ್ಲಿರುವ ಸಾಂಪ್ರಾದಾಯಿಕವಾಗಿರುವ ಈ " ಚಂಡಿಕಾ ಯಾಗ " ಸೇವಯನ್ನು ದೇವಸ್ಥಾನದ ಮತ್ತು ದೇವರ ಕಾರಣೀಕ ಸಾನಿಧ್ಯ ಉಲ್ಲೇಖಿಸಿಕೊಂಡು ಖಾಸಗಿ ಸಂಘ ಒಂದು ಸ್ವ ಲಾಭಕ್ಕೆ ಬಳಸಿಕೊಂಡು ಊರ ಪರವೂರಿನ, ಕ್ಷೇತ್ರದ ಯಾ ಸಾರ್ವಜನಿಕ ಭಕ್ತರಿಂದ ದೇಣಿಗೆಯನ್ನು ಸಂಗ್ರಹಿಸುವ ಪಿತೂರಿ ನಡೆಯುತ್ತಿದೆ.

{ ಭೈರತಿ ಸುರೇಶ್ } ಸಚಿವ

ಕಾಂಗ್ರೆಸ್ನಲ್ಲಿ ಗುಂಪಿಲ್ಲ, ಬಣದ ಮಾತೇ ಇಲ್ಲ, ಯಾರು ಬೇಕಾದರೂ ದೆಹಲಿಗೆ ಹೋಗಿ ಎಐಸಿಸಿ ಅಧ್ಯಕ್ಷ ಖರ್ಗೆ,ಹೈಕಮಾಂಡ್ ನಾಯಕ ರಾಹುಲ್ ಗಾಂಧಿ ಅಥವಾ ಸೋನಿಯಾ ಅವರನ್ನು ಭೇಟಿ ಮಾಡಿ ಚರ್ಚೆ ಮಾಡಬಹುದು. ಸಿಎಂ ಮಾಡಿ, ಮಂತ್ರಿ ಮಾಡಿ ಎಂಬ ಬೇಡಿಕೆ ಯಾರು ಬೇಕಾದರೂ ದೆಹಲಿ ನಾಯಕರ ಬಳಿ ಇಡಬಹುದಾಗಿದೆ.ಇದರಲ್ಲಿ ತಪ್ಪೇನಿದೆ...?

ಜಿಲ್ಲಾಧಿಕಾರಿ ಎಚ್.ವಿ.ದರ್ಶನ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿ ಸಭೆ | ನಾಯಿಗಳ ಗಣತಿ ಮಾಡಿ ವರದಿ ಸಲ್ಲಿಸಿ

ಬೀದಿ ನಾಯಿಗಳ ಹಾವಳಿ ತಡೆಗಟ್ಟಲು ಸೂಚನೆ

ಮಂಗಳೂರು: ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಆದೇಶಗಳ ಅನುಷ್ಠಾನದ ಕುರಿತು ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಸಮಿತಿ ಸಭೆಯು ಶುಕ್ರವಾರ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಹಾನಗರಪಾಲಿಕೆ, ನಗರ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಬೀದಿ ನಾಯಿಗಳ ಗಣತಿಯನ್ನು ಮಾಡಿ ವರದಿ ಸಲ್ಲಿಸಬೇಕು. ತಮ್ಮ ವ್ಯಾಪ್ತಿಯಲ್ಲಿ ಬರುವ ಖಾಸಗಿ ಹಾಗೂ ಸರಕಾರಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ರೈಲ್ವೇ ನಿಲ್ದಾಣಗಳು, ಹಾಗೂ ಪ್ರವಾಸಿ ತಾಣಗಳ ಆವರಣದಲ್ಲಿ ಬೀದಿ ನಾಯಿಗಳನ್ನು ಹಿಡಿದು ಅವುಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಡೆಸಿ ಈಗಾಗಲೆ ಗೊತ್ತುಪಡಿಸಿದ ನಾಯಿ ಆಶ್ರಯ ಕೇಂದ್ರಕ್ಕೆ ಸ್ಥಳಾಂತರಿಸುವುದು ಹಾಗೂ ಮುಂದಿನ ದಿನಗಳಲ್ಲಿ ಸದರಿ ಸಂಸ್ಥೆಗಳ ಆವರಣದಲ್ಲಿ ಬೀದಿ ನಾಯಿಗಳು ನುಸುಳದಂತೆ ಕ್ರಮಕೈಗೊಂಡು ಈ ಬಗ್ಗೆ ಓರ್ವ ಮೇಲ್ವಿಚಾರಣಾ ಅಧಿಕಾರಿಯನ್ನು ನೇಮಕ ಮಾಡಿ ಪಾಲನಾ ವರದಿಯನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಪ್ರತೀ 3 ತಿಂಗಳಿಗೊಮ್ಮೆ ಈ ಎಲ್ಲಾ ಸಂಸ್ಥೆಗಳ ಆವರಣದ ಒಳಗೆ ಮತ್ತು ಹೊರಗೆ ಬೀದಿ ನಾಯಿಗಳ ವಾಸಸ್ಥಾನ ಇಲ್ಲದಿರುವ ಬಗ್ಗೆ ತಪಾಸಣೆ ನಡೆಸಿ ವರದಿ ಸಲ್ಲಿಸಬೇಕು. ಸಾರ್ವಜನಿಕ ಬಸ್ ನಿಲ್ದಾಣ, ರೈಲ್ವೇ ನಿಲ್ದಾಣ, ಪಾರ್ಕ್, ಡಿಪೆಲ ಮತ್ತು ಟರ್ಮಿನಲ್ ಸ್ಥಳಗಳಲ್ಲಿ ನಾಯಿಗಳಿಗೆ ಆಹಾರ ಸಿಗದಂತೆ ನೋಡಲ್ ಅಧಿಕಾರಿಗಳು ಕ್ರಮವಹಿಸಬೇಕು. ಎಲ್ಲಾ ತಾಲೂಕಿನ ತಹಶೀಲ್ದಾರರು ಹಾಗೂ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಬೀದಿ ನಾಯಿ ಆಶ್ರಯ ಕೇಂದ್ರವನ್ನು ಮಾಡಲು ಸ್ಥಳ ಗುರುತಿಸುವಂತೆ ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿ,ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಪ್ರಾಣಿಗಳಿಂದ ರಕ್ಷಿಸಿಕೊಳ್ಳುವ ನಡತೆ, ಪ್ರಾಣಿಗಳ ಕಡಿತಕ್ಕೆ ಪ್ರಥಮ ಚಿಕಿತ್ಸೆ ಮತ್ತು ತಕ್ಷಣ ವರದಿ ಮಾಡುವ ಶಿಷ್ಟಾಚಾರದ ಬಗ್ಗೆ ಜಾಗೃತಿ ಶಿಬಿರಗಳನ್ನು ಆಯೋಜಿಸಲು ಅವರು ಸೂಚಿಸಿದರು.

ಪ್ರತೀ 3 ತಿಂಗಳಿಗೊಮ್ಮೆ ಈ ಎಲ್ಲಾ ಸಂಸ್ಥೆಗಳ ಆವರಣದ ಒಳಗೆ ಮತ್ತು ಹೊರಗೆ ಬೀದಿ ನಾಯಿಗಳ ವಾಸಸ್ಥಾನ ಇಲ್ಲದಿರುವ ಬಗ್ಗೆ ತಪಾಸಣೆ ನಡೆಸಿ ವರದಿ ಸಲ್ಲಿಸಬೇಕು.
-ದರ್ಶನ್ ಎಚ್.ವಿ., ಜಿಲ್ಲಾಧಿಕಾರಿ

ಗೋಶಾಲೆಗಳಿಗೆ ಸ್ಥಳಾಂತರಿಸಿ
ಹೆದ್ದಾರಿಗಳಲ್ಲಿ ಎಲ್ಲಾ ದನ ಮತ್ತು ಬೀಡಾಡಿ ಪ್ರಾಣಿಗಳನ್ನು ಆಶ್ರಯ ತಾಣ/ಗೋಶಾಲೆಗೆ ಸ್ಥಳಾಂತರಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಲೋಕೋಪಯೋಗಿ ಇಲಾಖೆ ಮತ್ತು ನಗರ ಮತ್ತು ಸ್ಥಳೀಯಾಡಳಿತ ಸಂಸ್ಥೆಯ ಅಧಿಕಾರಿಗಳಿಗೆ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ತಿಳಿಸಿದರು.

ಹೆದ್ದಾರಿಗಳಲ್ಲಿ ಎಲ್ಲಾ ದನ ಮತ್ತು ಬೀಡಾಡಿ ಪ್ರಾಣಿಗಳನ್ನು ಆಶ್ರಯ ತಾಣ/ಗೋಶಾಲೆಗೆ ಸ್ಥಳಾಂತರಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಲೋಕೋಪಯೋಗಿ ಇಲಾಖೆ ಮತ್ತು ನಗರ ಮತ್ತು ಸ್ಥಳೀಯಾಡಳಿತ ಸಂಸ್ಥೆಯ ಅಧಿಕಾರಿಗಳಿಗೆ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳು ತಿಳಿಸಿದರು. ಸಾರಿಗೆ, ಹೆದ್ದಾರಿ ಮತ್ತು ಪೆಲಲೀಸ್ ಇಲಾಖೆಯಿಂದ ಹೆದ್ದಾರಿ ಗಸ್ತು ತಂಡ ರಚಿಸಿ ಸಹಾಯವಾಣಿ ಸಂಖ್ಯೆಗಳನ್ನು ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸುವುದು, ಈ ಸಂಖ್ಯೆಗಳನ್ನು ಕಂಟ್ರೋಲ್ ರೂಂ, ಹೆದ್ದಾರಿ ಪ್ರಾಧಿಕಾರ ಹಾಗೂ ಸ್ಥಳೀಯ ಪೆಲಲೀಸ್ ಇಲಾಖೆಗೆ ಲಿಂಕ್ ಮಾಡಲು ಸೂಚಿಸಿದರು. ಮಹಾನಗರಪಾಲಿಕೆ ಮತ್ತು ಸ್ಥಳೀಯ ನಗರ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ಆಹಾರಗಳನ್ನು ಹಾಕುವ ಸ್ಥಳ ಮತ್ತು ಸಮಯವನ್ನು ಕೂಡಲೇ ನಿಗದಿಪಡಿಸುವಂತೆ ನಿರ್ದೇಶನ ನೀಡಿದರು. ಇದರ ಬಗ್ಗೆ ಸಾಕಷ್ಟು ಭಿತ್ತಿ ಪತ್ರಗಳನ್ನು ಸದರಿ ಸ್ಥಳದಲ್ಲಿ ಅಳವಡಿಸಿ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡುಬೇಕು. ಇದನ್ನು ಉಲ್ಲಂಘಿಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಎಚ್.ವಿ.ದರ್ಶನ್ ತಿಳಿಸಿದರು.

ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದಂತೆ ಜಿಲ್ಲೆಯ ಪ್ರತೀ ತಾಲೂಕಿನಲ್ಲಿ ಪ್ರಾರಂಭಿಕ ಹಂತದಲ್ಲಿ ಕನಿಷ್ಟ 100 ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಅವರು ಎಲ್ಲಾ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದರು.

ಸುಪ್ರೀಂ ಕೋರ್ಟ್ಗೆ ಡಿಸೆಂಬರ್20ರೊಳಗೆ ಅಫಿಡವಿಟ್ ಸಲ್ಲಿಸಬೇಕಾಗಿರುವುದರಿಂದ ಈ ಎಲ್ಲಾ ಸೂಚನೆಗಳಿಗೆ ಕ್ರಮಕೈಗೊಂಡು ಪ್ರತಿಯೊಂದು ಇಲಾಖೆಯು ಪಾಲನಾ ವರದಿಯನ್ನು ನೋಡಲ್ ಇಲಾಖೆಯಾದ ನಗರಾಭಿವೃದ್ಧಿ ಇಲಾಖೆಗೆ (ಪೌರಾಡಳಿತ) ಡಿ.15ರೊಳಗೆ ಸಲ್ಲಿಸಲು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಮಿತಿಯ ಸದಸ್ಯ ಕಾರ್ಯದರ್ಶಿಯಾದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಅರುಣ್ ಕುಮಾರ್ ಶೆಟ್ಟಿ ಎನ್ ಮಾತನಾಡಿ, ಬೀದಿ ನಾಯಿಗಳ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ನವೆಂಬರ್ 7ರಂದು ಸರ್ವೋಚ್ಚ ನ್ಯಾಯಾಲಯವು ವಿವಿಧ ಇಲಾಖೆಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನರ್ವಡೆ ವಿನಾಯಕ್ ಕಾರ್ಭಾರಿ, ಅಪರ ಜಿಲ್ಲಾಧಿಕಾರಿ ರಾಜು ಕೆ., ಮಂಗಳೂರು ಉಪವಿಭಾಗಾಧಿಕಾರಿ ಕುಮಾರಿ ಮೀನಾಕ್ಷಿ ಆರ್ಯ,ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಸಂತೋಷ್ ಕುಮಾರ್,ಮಹಾನಗರಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಗಾಂಧೀಜಿಯ ಸಂವಾದ ಶತಮಾನೋತ್ಸವ ಡಿ. 3ಕ್ಕೆ

ಉಡುಪಿ: ನಾರಾಯಣ ಗುರುಗಳು ಮತ್ತು ಗಾಂಧೀಜಿಯವರ ಸಂವಾದದ ಶತಮಾನೋತ್ಸವ ಮತ್ತು ಶ್ರೀ ನಾರಾಯಣ ಗುರುಗಳ ಮಹಾ ನಿರ್ವಾಣ ಶತಮಾನೋತ್ಸವದ ಅಂಗವಾಗಿ ವರ್ಕಳ ಶಿವಗಿರಿ ಮಠ ಮತ್ತು ಮಂಗಳೂರು ವಿವಿ ಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಆಶ್ರಯದಲ್ಲಿ ಕೊಣಾಜೆ ಮಂಗಳೂರು ವಿವಿಯ ಮೈದಾನದಲ್ಲಿ ಡಿ. 3 ರಂದು ನಡೆಯಲಿರುವ ಶತಮಾನದ ಮಹಾಪ್ರಸ್ಥಾನ ನಾರಾಯಣ ಗುರು-ಗಾಂಧೀಜಿ ಸಂವಾದ ಶತಾಬ್ಧಿ ಕಾರ್ಯಕ್ರಮ ನಡೆಯಲಿದೆ.

ಇದರ ತಯಾರಿಗೆ ಕಾರ್ಕಳ ಹಾಗೂ ಹೆಬ್ರಿ ತಾಲೂಕಿನ ಬಿಲ್ಲವ ಸಂಘಗಳ ಪೂರ್ವಭಾವಿ ಸಭೆ ಪೆರ್ವಾಜೆ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ನಡೆಯಿತು. ಬ್ರಹ್ಮಶ್ರೀ ನಾರಾಯಣ ಗುರು ನಿಗಮ ಮಂಡಳಿ ರಾಜ್ಯಾಧ್ಯಕ್ಷ ಮಂಜುನಾಥ್ ಪೂಜಾರಿ ಮುದ್ರಾಡಿ ಮಾತನಾಡಿ, ಬಿಲ್ಲವರು ಒಟ್ಟಾಗುವುದಿಲ್ಲ ಎನ್ನುವ ಮಾತಿದೆ. ಈ ಮಾತನ್ನು ಅಲ್ಲಗಳೆಯುವಂತಿಲ್ಲ. ಬಿಲ್ಲವ ಸಮುದಾಯದ ಒಗ್ಗಟ್ಟನ್ನು ಪ್ರದರ್ಶಿಸುವಲ್ಲಿ ಮಂಗಳೂರಿನಲ್ಲಿ ನಡೆಯುವ ವರ್ಕಳ ಸಂವಾದ ಕಾರ್ಯಕ್ರಮ ಮಹತ್ತರವಾಗಲಿದೆ ಎಂದರು.

ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎನ್ನುವ ನಾರಾಯಣ ಗುರುಗಳ ತತ್ವಸಿದ್ಧಾಂತವನ್ನು ಮಹಾತ್ಮ ಗಾಂಧಿಯವರು ಒಪ್ಪಿಕೊಂಡಿದ್ದರು.

ಬಿಲ್ಲವ ಸಂಘಗಳ ಪೂರ್ವಭಾವಿ ಸಭೆಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ನಿಗಮ ಮಂಡಳಿ ರಾಜ್ಯಾಧ್ಯಕ್ಷ ಮಂಜುನಾಥ್ ಪೂಜಾರಿ ಮುದ್ರಾಡಿ ಮಾತನಾಡಿದರು.

ಮಂಗಳೂರಿನಲ್ಲಿ ನಡೆಯಲಿರುವ ಗಾಂಧೀಜಿ ಮತ್ತು ನಾರಾಯಣ ಗುರುಗಳ ನಡುವಿನ ಸಂವಾದದ ಶತ ಸಂಭ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಸಮುದಾಯದ ಪ್ರಮುಖರು ಭಾಗಿಯಾಗಲಿದ್ದಾರೆ. ಎಲ್ಲರೂ ಪಕ್ಷಬೇಧ ಮರೆತು ಭಾಗವಹಿಸಬೇಕೆಂದರು.

ಕಾರ್ಯಕ್ರಮದ ಪ್ರಧಾನ ಸಂಚಾಲಕ ಪಿ.ವಿ. ಮೋಹನ್ ಮಾತನಾಡಿ, ವಿವೇಕಾನಂದರು, ರವೀಂದ್ರನಾಥ ಠ್ಯಾಗೋರ್,ಮಹಾತ್ಮ ಗಾಂಧೀಜಿ ಸೇರಿದಂತೆ ಅನೇಕ ಮಹಾನ್ ಪುರುಷರು ನಾರಾಯಣ ಗುರುಗಳನ್ನು ಭೇಟಿಯಾಗಲು ಬಂದಿದ್ದರು. ಅಂತಹ ಮಹಾನ್ ಪುರುಷ ಸಾಮಾಜಿಕ ಕ್ರಾಂತಿಯ ಮೂಲಕ ಇತಿಹಾಸ ನಿರ್ಮಿಸಿದ್ದರು. ಅವರ ಸಂವಾದ ಶತಾಬ್ಧಿ ಕಾರ್ಯಕ್ರಮದಲ್ಲಿ ಬಿಲ್ಲವ ಸಮುದಾಯದ ಶಕ್ತಿ ಮತ್ತು ಸಂಘಟನೆಯ ಬಲವನ್ನು ಪ್ರದರ್ಶಿಸುವ ಮೂಲಕ ಮತ್ತೊಂದು ಇತಿಹಾಸವನ್ನು ನಿರ್ಮಿಸಬೇಕು ಎಂದರು.

ಈಗಾಗಲೇ ಇಟಲಿಯ ರೋಮ್ನಲ್ಲಿ ನಡೆದಿದ್ದ ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮವನ್ನು ಪೋಪ್ ಉದ್ಘಾಟಿಸಿದ್ದರೆ, ರಾಷ್ಟ್ರೀಯ ಕಾರ್ಯಕ್ರಮವನ್ನು ಪ್ರಧಾನಿ ಮೋದಿ ಉದ್ಘಾಟಿಸಿದ್ದಾರೆ. ಇದೀಗ ಮಂಗಳೂರಿನಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮ ನಡೆಯುತ್ತಿರುವುದು ನಮ್ಮೆಲ್ಲರ ಭಾಗ್ಯ ಎಂದವರು ಅಭಿಪ್ರಾಯಪಟ್ಟರು.

ಕಾರ್ಕಳ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಪ್ರಮಲ್ ಕುಮಾರ್ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಿಪಿನ್ ಚಂದ್ರಪಾಲ್ ನಕ್ರೆ, ಬಿಲ್ಲವರ ಮಹಾಮಂಡಲದ ಉಪಾಧ್ಯಕ್ಷ ಪ್ರಭಾಕರ್ಬಂಗೇರ, ಹೆಬ್ರಿ ತಾಲೂಕು ಬಿಲ್ಲವ ಸಂಘದ ಅಧ್ಯಕ್ಷ ಅಣ್ಣಪ್ಪ ಪೂಜಾರಿ, ಸುಧಾಕರ್ಕೋಟ್ಯಾನ್ ಕಲ್ಯಾ ಉಪಸ್ಥಿತರಿದ್ದರು.

ಧರ್ಮಸ್ಥಳ: ಲಕ್ಷ ದೀಪೋತ್ಸವ ಪೂಜೆ

ಉಜಿರೆ: ಧರ್ಮಸ್ಥಳದಲ್ಲಿ ಲಕ್ಷದೀಪೋತ್ಸವದ ಸಂದರ್ಭ ದಲ್ಲಿ ಗುರುವಾರ ರಾತ್ರಿ ಮಹೋತ್ಸವ ಸಭಾಭವನದಲ್ಲಿ ಭಗವಾನ್ ಶ್ರೀ ಚಂದ್ರನಾಥ ಸ್ವಾಮಿಯ ಸಮವಸರಣ ಪೂಜೆ ನಡೆಯಿತು.

ತೀರ್ಥಂಕರರು ತಮ್ಮ ದಿವ್ಯಧ್ವನಿಯಿಂದ ಧರ್ಮೋ ಪದೇಶ ನೀಡುವ ಧರ್ಮಸಭೆಗೆ ಸಮವಸರಣ ಎನ್ನುತ್ತಾರೆ. ಇಲ್ಲಿ ಸಕಲ ಜೀವಿಗಳಿಗೂ ಧರ್ಮೋ ಪದೇಶ ಪಡೆಯುವ ಅವಕಾಶವಿದೆ. ಜೈನರ ಆರಾಧನಾ ಕೇಂದ್ರಗಳಾದ ಬಸದಿಗಳು ಸಮವಸರಣದ ಪ್ರತೀಕವಾಗಿವೆ. ಬೀಡಿನಿಂದ ಭವ್ಯ ಮೆರವಣಿಗೆಯಲ್ಲಿ ಭಗವಾನ್ ಶ್ರೀ ಚಂದ್ರನಾಥಸ್ವಾಮಿ ಮೂರ್ತಿಯನ್ನು ಮಹೋತ್ಸವ ಸಭಾಭವನಕ್ಕೆ ಕೊಂಡುಹೋಗಿ ಅಲ್ಲಿ ಸಮವಸರಣ ಪೂಜೆ ನಡೆಸಲಾಯಿತು.

ಬಾಹುಬಲಿ ಸೇವಾಸಮಿತಿ ಆಶ್ರಯದಲ್ಲಿ ಧರ್ಮಸ್ಥಳದ ಶ್ರಾವಕರು-ಶ್ರಾವಕಿಯರಿಂದ ಅಷ್ಟವಿಧಾರ್ಚನೆ ಪೂಜೆ ನಡೆಸಲಾಯಿತು. ಅನಿತಾಸುರೇಂದ್ರ ಕುಮಾರ್ ,ಸುಪ್ರಿಯಾಹರ್ಷೇಂದ್ರಕುಮಾರ್,ಶ್ರದ್ಧಾಅಮಿತ್, ಕುಮಾರಿ ಮಾನ್ಯ, ರಜತಾ ಹಾಗೂ ಶ್ರಾವಕಿಯರು ಪೂಜೆಯಲ್ಲಿ ಭಾಗವಹಿಸಿದರು. ಅರುಣ ಮತ್ತು ಮಂಜುಳಾ ಜಿನಭಜನೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಶಿಶಿರ್ಇಂದ್ರ ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು. ಹಿಮ್ಮೇಳದಲ್ಲಿ ರವಿರಾಜ ಉಜಿರೆ ಮತ್ತು ಶೋಧನ್ ಧರ್ಮಸ್ಥಳ ಸಹಕರಿಸಿದರು. ಮಂಗಳೂರಿನ ಸುಕುಮಾರ್ಬಳ್ಳಾಲ್ ನಿರ್ದೇಶನದಲ್ಲಿ ಸಾಣೂರು ಶ್ರೀಧರ ಪಾಂಡಿ ವಿರಚಿತ ''ಕನಕ ಜ್ವಾಲೆ'' ಯಕ್ಷಾಮೃತ ಕಾರ್ಯಕ್ರಮ ಉತ್ತಮವಾಗಿ ಮೂಡಿಬಂತು. ಡಾ. ಪ್ರಖ್ಯಾತ್ ಶೆಟ್ಟಿ ಭಾಗವತರಾಗಿ, ಚೆಂಡೆವಾದನದಲ್ಲಿ ಚಂದ್ರಶೇಖರ ಹಾಗೂ ಮದ್ದಳೆ ವಾದನದಲ್ಲಿ ಬಿ. ಜನಾರ್ದನ ತೋಳ್ಪಾಡಿತ್ತಾಯ ಸಹಕರಿಸಿದರು. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು, ಹೇಮಾವತಿ ವೀ. ಹೆಗ್ಗಡೆಯವರು, ಡಿ. ಸುರೇಂದ್ರಕುಮಾರ್,ಡಿ. ಹರ್ಷೇಂದ್ರಕುಮಾರ್,ಡಾ. ಸಿ.ಕೆ. ಬಳ್ಳಾಲ್ ಉಪಸ್ಥಿತರಿದ್ದರು.

ಧರ್ಮಸ್ಥಳದಲ್ಲಿ ಲಕ್ಷದೀಪೋತ್ಸವದ ಸಂದರ್ಭದಲ್ಲಿ ಗುರುವಾರ ರಾತ್ರಿ ಮಹೋತ್ಸವ ಸಭಾಭವನದಲ್ಲಿ ಭಗವಾನ್ ಶ್ರೀ ಚಂದ್ರನಾಥ ಸ್ವಾಮಿಯ ಸಮವಸರಣ ಪೂಜೆ ನಡೆಯಿತು.

ಪೂರ್ಣಪ್ರಜ್ಞ ಕಾಲೇಜು ಉಡುಪಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯ ಆಶ್ರಯದಲ್ಲಿ ಜರುಗಿದ ಮಂಗಳೂರು ವಿ.ವಿ. ಅಂತರ್ ಕಾಲೇಜು ದೇಹದಾಢ್ಯ ಚಾಂಪಿಯನ್ಶಿಪ್ನಲ್ಲಿ ಆಳ್ವಾಸ್ ತಂಡವು ಸಮಗ್ರ ತಂಡ ಪ್ರಶಸ್ತಿಯನ್ನು ಪಡೆದಿದೆ. ಆಳ್ವಾಸ್ ಕಾಲೇಜಿನ ಕಿಶಾನ್ ಶೆಟ್ಟಿ ಮಿ. ಯೂನಿವರ್ಸಿಟಿ ವೈಯಕ್ತಿಕ ಪ್ರಶಸ್ತಿ ಮತ್ತು ಪ್ರಥಮ್ ಮೋಸ್ಟ್ ಮಸ್ಕ್ಯುಲರ್ಪ್ರಶಸ್ತಿಯನ್ನು ಪಡೆದುಕೊಂಡರು. 16ನೇ ಬಾರಿ ಸಮಗ್ರ ಪ್ರಶಸ್ತಿಯನ್ನು ಪಡೆಯುತ್ತಾ ಬಂದಿರುವ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ. ಮೋಹನ ಆಳ್ವರವರು ಅಭಿನಂದನೆ ಸಲ್ಲಿಸಿದ್ದಾರೆ.

WANTED
Senior & Junior Site Engineers, Senior & Junior Accountants, Lawyers (min.10yrs experienced), Civil Engineers for a real estate company in Mangalore.
Ph: 9901699668

ಧನಾತ್ಮಕತೆಯಿಂದ ಸಮಾಜ ಬೆಳೆಯಬೇಕು

ಉಡುಪಿ: ಸಮಾಜದಲ್ಲಿ ಋಣಾತ್ಮಕ ದೌರ್ಬಲ್ಯ ಕಡಿಮೆಯಾಗಿ ಧನಾತ್ಮಕತೆ ಹೆಚ್ಚಬೇಕು. ಧನಾತ್ಮಕತೆಯಿಂದಲೇ ಸಮಾಜ ಬೆಳೆಯಬೇಕು ಎಂದು ಮಾಣಿಲ ಶ್ರೀಧಾಮ ಮೋಹನದಾಸ ಪರಮಹಂಸ ಸ್ವಾಮೀಜಿ ಹೇಳಿದರು.

ಪರ್ಯಾಯ ಶ್ರೀ ಪುತ್ತಿಗೆ ಮಠ ಶ್ರೀ ಕೃಷ್ಣಮಠದಲ್ಲಿ ನಡೆಯುತ್ತಿರುವ ಬೃಹತ್ ಗೀತೋತ್ಸವದ ನಿಮಿತ್ತ ಗುರುವಾರ ರಾಜಾಂಗಣದಲ್ಲಿ ನಡೆದ ಸಂತ ಸಂದೇಶ ಕಾರ್ಯಕ್ರಮದಲ್ಲಿ ಸ್ವಾಮೀಜಿಯವರು ಅನುಗ್ರಹ ಸಂದೇಶ ನೀಡಿದರು.

ಲೋಕದ ಹಿತಕ್ಕೆ ಸಂತರ ಮನಸ್ಸು ಒಂದಾಗಬೇಕು ಎನ್ನುವ ನೆಲೆಯಲ್ಲಿ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಬಹಳದೊಡ್ಡ ಕಾರ್ಯ ಮಾಡುತ್ತಿದ್ದಾರೆ. ಜಗತ್ತು ಭಗವಂತನ ಸಾಮ್ರಾಜ್ಯ ಎಂಬುದನ್ನು ಅರಿತು ಭಕ್ತಿ ಮಾರ್ಗದ ಮೂಲಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದೊಡ್ಡ ಸಾಧನೆ ಶ್ರೀಗಳು ಮಾಡುತ್ತಿದ್ದಾರೆ ಎಂದರು.

ಪರ್ಯಾಯ ಶ್ರೀ ಪುತ್ತಿಗೆ ಮಠಾಧೀಶ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು, ಕಿರಿಯ ಯತಿ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದರು ಅನುಗ್ರಹಿಸಿದರು. ಕಾರವಾರದ ರಾಮಚಂದ್ರ ಹಬ್ಬು ದಂಪತಿ, ಪ್ರಕಾಶ್ ರಾಮಮೂರ್ತಿ ರಾವ್ ದಂಪತಿ, ಸುಬ್ರಹ್ಮಣ್ಯ ನರಸಿಂಹ ಭಟ್ ದಂಪತಿಯನ್ನು ಶ್ರೀಮಠದಿಂದ ಸಮ್ಮಾನಿಸಲಾಯಿತು. ಶ್ರೀಮಠದ ಕಾರ್ಯದರ್ಶಿ ಪ್ರಸನ್ನ ಆಚಾರ್ಯ ಉಪಸ್ಥಿತರಿದ್ದರು. ಡಾ. ಬಿ.ಗೋಪಾಲಾಚಾರ್ಯ ನಿರೂಪಿಸಿ ವಂದಿಸಿದರು.

ನ. 28 ರಂದು ಪ್ರಧಾನಿ ಸಮ್ಮುಖ ಕನಕ ಕವಚ ಅರ್ಪಣೆ

ಪರ್ಯಾಯ ಪುತ್ತಿಗೆ ಮಠ ಶ್ರೀ ಕೃಷ್ಣಮಠದಲ್ಲಿ ನಡೆಯುತ್ತಿರುವ ಬೃಹತ್ ಗೀತೋತ್ಸವದ ಹಿನ್ನೆಲೆಯಲ್ಲಿ ನ. 28ರಂದು ನಡೆಯಲಿರುವ ಲಕ್ಷಕಂಠ ಗೀತಾ ಪಾರಾಯಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಭಾಗವಹಿಲಿದ್ದಾರೆ. ಅದೇ ದಿನ ಸ್ವರ್ಣ ತೀರ್ಥ ಮಂಟಪ ಮತ್ತು ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಅವರು ಸೇವಾ ರೂಪದಲ್ಲಿ ನೀಡಲಿರುವ ಕನಕನ ಕಿಂಡಿಗೆ ಕನಕ ಕವಚವನ್ನೂ ಲೋಕಾರ್ಪಣೆ ಗೊಳಿಸಲಾಗುತ್ತದೆ. ಪ್ರಮೋದ್ ಮಧ್ವರಾಜ್ ಅವರು ಉಡುಪಿಯ ಅಮ್ಮುಂಜೆಯಲ್ಲಿನ ನಿವಾಸದ ಗೋಶಾಲೆಯಲ್ಲಿ ಅತ್ಯಾಕರ್ಷಕ ಸ್ವರ್ಣಮಯ ಚಿನ್ನದ ಕವಚಕ್ಕೆ ಶುಕ್ರವಾರ ಪೂಜೆ ಸಲ್ಲಿಸಿದರು. ಪೂಜೆ ಬಳಿಕ ಮಾತನಾಡಿ, ಪರ್ಯಾಯ ಪುತ್ತಿಗೆ ಶ್ರೀಪಾದರಾದ ಸುಗುಣೇಂದ್ರ ತೀರ್ಥರು ಕನಕನ ಕಿಂಡಿಗೆ ಕನಕ ಕವಚ ಮಾಡುವ ಬಗ್ಗೆ ತಿಳಿಸಿದಾಗ ತತ್ ಕ್ಷಣ ಒಪ್ಪಿಕೊಂಡೆ. ನಾನು ಯಾವುದೇ ಫಲಾಪೇಕ್ಷೆಯಿಲ್ಲದೇ ಕೃಷ್ಣ-ಕನಕದಾಸರಿಗೆ ಸೇವಾ ರೂಪದಲ್ಲಿ ಇದನ್ನು ಭಕ್ತಿಪೂರ್ವಕವಾಗಿ ನೀಡುತ್ತಿದ್ದೇನೆ ಎಂದರು. ನಮ್ಮ ತಂದೆಯವರು ಉಡುಪಿ ಕೃಷ್ಣ ಮಠದಲ್ಲಿ ಕನಕದಾಸರ ಗುಡಿ ನಿರ್ಮಾಣ ಮಾಡಿದ್ದರು. ಬಹುಷಃ ಮಧ್ವರಾಜರ ಕುಟುಂಬಕ್ಕೆ ಕನಕದಾಸರ ಸೇವೆ ಮಾಡಲು ಕೃಷ್ಣ ಪರಮಾತ್ಮ ನೀಡಿದ ವಿಶೇಷ ಅವಕಾಶ ಇದು ಎಂದು ಭಾವಿಸುತ್ತೇನೆ ಎಂದು ಪ್ರಮೋದ್ ಹೇಳಿದರು.

ಪ್ರಾದೇಶಿಕ ಪಕ್ಷವಾಗಿ ಜೆಡಿಎಸ್ ಕೊಡುಗೆ

ಮಂಗಳೂರು: ರಾಜ್ಯದಲ್ಲಿ ಪ್ರಾದೇಶಿಕ ಪಕ್ಷವಾಗಿ ಕಳೆದ 25 ವರ್ಷದಿಂದ ಜೆಡಿಎಸ್ ಪಕ್ಷ ತನ್ನದೇ ಕೆಲಸ ಮಾಡಿದ್ದು, ತನ್ನದೇ ಆದ ಕೊಡುಗೆಯನ್ನು ನೀಡಿದೆ ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಂ.ಬಿ. ಸದಾಶಿವ ಹೇಳಿದರು.

ಜೆಡಿಎಸ್ ಪ್ರಾದೇಶಿಕ ಪಕ್ಷವಾಗಿ ರಾಜಕೀಯಕ್ಕೆ ಬಂದರೂ, ಸಾಕಷ್ಟು ಏಳು ಬೀಳುಗಳನ್ನು ಕಂಡು, ಬೇರೆ ಬೇರೆ ಚಿಹ್ನೆಗಳಿಂದ ಗುರುತಿಸಿಕೊಂಡು ಬಳಿಕ ಅಂತಿಮವಾಗಿ ತೆನೆಹೊತ್ತ ಮಹಿಳೆಯ ಚಿಹ್ನೆಯಿಂದ ಸ್ಪರ್ಧಿಸುತ್ತ, ಕಳೆದ 25 ವರ್ಷದಲ್ಲಿ ಸಮಾಜದಲ್ಲಿ ತನ್ನನ್ನು ಗುರುತಿಸಿ ಕೊಂಡಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು. ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗಿನಿಂದ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿರುವ ತನಕ ನೆಲ-ಜಲ-ಕನ್ನಡವನ್ನು ಅಸ್ತಿತ್ವದಲ್ಲಿ ಇಟ್ಟುಕೊಂಡು, ಬೇರೆ ಪಕ್ಷದೊಂದಿಗೆ ಸಮಿಶ್ರ ಸರ್ಕಾರವನ್ನು ರಚಿಸಿದರೂ, ತಾನು ಹಾಕಿಕೊಂಡ ಲಕ್ಷ್ಮಣ ರೇಖೆಯನ್ನು ದಾಟದೇ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದು ಹೇಳಿದರು.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಗ್ರಾಮ ವಾಸ್ತವ್ಯ, ಸರ್ಕಾರವನ್ನು ಗ್ರಾಮಕ್ಕೆ ಕೊಂಡೊದವರು, ಗುಡಿಸಿಲಿನ ಬಳಿಗೆ ಸರ್ಕಾರ ಎಂಬ ಯೋಜನೆಗಳ ಮೂಲಕ ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು. ರೈತರ ಲಕ್ಷ-ಲಕ್ಷ ಸಾಲ ಮನ್ನಾ, ಪ್ರಾಕೃತಿಕ ವಿಕೋಪದಿಂದ ಮನೆಕಳೆದುಕೊಂಡವರಿಗೆ ಉತ್ತಮ ಮನೆ, ಕೆಪಿಎಲ್ ಶಾಲೆಗಳನ್ನು ಪ್ರಾರಂಭಿಸಿ, ಒಂದೇ ಸೂರಿನಡಿಯಲ್ಲಿ ಕೆ.ಜಿ. ಇಂದ ಹಿಡಿದು ಪಿಯುಸಿ ತನಕ ಕಲಿಯಲು ಅವಕಾಶ, ಮಕ್ಕಳಿಗೆ ಸ್ವಿಮ್ಮಿಂಗ್ ಪೂಲ್ಗಳನ್ನು ತೆರೆದು ಪ್ರತೀ ಹೋಬಳಿಗೆ ಒಂದೊಂದು ಶಾಲೆಯನ್ನು ಪ್ರಾರಂಭಿಸಿದರು. ಆದರೆ ಈಗಿನ ಸರ್ಕಾರ ಅಲ್ಲಿ ಕೆಲಸ ಮಾಡುವವರಿಗೆ ಸಂಬಳ ಕೊಡಲು ಆಗುತ್ತಿಲ್ಲ ಎಂದು ದೂರಿದರು.

ಕುಮಾರಸ್ವಾಮಿ ಅವರು ಮಹಿಳಾ ಪ್ರಥಮ ದರ್ಜೆ ಕಾಲೇಜುಗಳು, ಹಾಲಿಗೆ 5 ರೂ. ಪ್ರೋತ್ಸಾಹ ದನ ಹೆಚ್ಚಳ, ಗ್ರಾಮೀಣ ಪ್ರದೇಶದಲ್ಲಿ ನದಿ, ತೋಡು ದಾಟಿ ಬರುವ ಮಕ್ಕಳಿಗೆ ಸೇತುಬಂಧು ಅಭಿಯಾನದಡಿ ಸೇತುವೆ ನಿರ್ಮಾಣ ಇತರೆ ಕಾರ್ಯಕ್ರಮಗಳನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದರು.

ಪ್ರಮುಖರಾದ ಮೊಹಮದ್ ಕುಂಞ, ಪವನ್ಚಂದ್ರ, ವಸಂತ ಪೂಜಾರಿ, ಇಕ್ಬಲ್ ಮುಲ್ಕಿ, ಅಕ್ಷಿತ್ ಸುವರ್ಣ,ಹೈದರ್ಪಾರ್ಥ್ಯಪಾಡಿ, ವಿನ್ಸೆಂಟ್ ಪಿರೇರಾ, ಯತೀಶ್ ಸುವರ್ಣ, ಕನಕದಾಸ ಇದ್ದರು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಂ.ಬಿ. ಸದಾಶಿವ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

HIRING
ಗ್ರಾಫಿಕ್ ಡಿಸೈನರ್

ಬೇಕಾಗಿದ್ದಾರೆ
ನಾಡಿನ ನೆಚ್ಚಿನ ವಿಶ್ವವಾಣಿಯ ಜಾಹಿರಾತು ವಿಭಾಗಕ್ಕೆ
ಶೆಡ್ಯೂಲಿಂಗ್ ಎಕ್ಸಿಕ್ಯೂಟಿವ್
ಗ್ರಾಫಿಕ್ ಡಿಸೈನರ್ ಬೇಕಾಗಿದ್ದಾರೆ.
ಪತ್ರಿಕಾ ಕಚೇರಿಯಲ್ಲಿ ಅಥವಾ ಜಾಹಿರಾತು ಏಜೆನ್ಸಿಯಲ್ಲಿ ಕನಿಷ್ಠ 2 ವರ್ಷದ ಅನುಭವವಿರುವವರೆಗೆ ಆದ್ಯತೆ.
ಆಸಕ್ತರು ಸಂಪರ್ಕಿಸಿ
hr@vishwavani.news

ಶಿವಮೊಗ್ಗ: ಬಾಳೆಗೊನೆ, ಒಳ ಉಡುಪಿನಲ್ಲಿ ಜೈಲಿಗೆ ಗಾಂಜಾ

ಶಿವಮೊಗ್ಗ: ಇಲ್ಲಿನ ಸೋಗಾನೆಯಲ್ಲಿರುವ ಜೈಲಿಗೆ ಆಟೋ ಚಾಲಕನೊಬ್ಬ ಬಾಳೆಗೊನೆಗಳಲ್ಲಿ ಗಾಂಜಾ ತುಂಬಿ ತಂದು ಗೇಟಿನ ಬಳಿ ಇಟ್ಟು ಹೋಗಿದ್ದಾನೆ. ನ.19ರ ಮಧ್ಯಾಹ್ನ 2:15ಕ್ಕೆ ಆಟೋದಲ್ಲಿ ಐದು ಬಾಳೆಗೊನೆಗಳನ್ನು ಕಾರಾಗೃಹದ ಮುಂಭಾಗಕ್ಕೆ ತಂದು ಇಟ್ಟಿದ್ದಾನೆ. ಕ್ಯಾಂಟೀನ್‌ನವರ ಸೂಚನೆ ಮೇರೆಗೆ ತಂದಿರುವುದಾಗಿ ತಿಳಿಸಿ ತೆರಳಿದ್ದಾನೆ. ಬಳಿಕ ಕಾರಾಗೃಹದ ಮುಖ್ಯ ದ್ವಾರದ ಉಸ್ತುವಾರಿಯಲ್ಲಿದ್ದ ಕೆಎಸ್‌ಐಎಸ್‌ಎಫ್ ಇನ್‌ಸ್ಪೆಕ್ಟರ್ ಜಗದೀಶ್ ನೇತೃತ್ವದಲ್ಲಿ ಬಾಳೆಗೊನೆಗಳನ್ನು ಪರಿಶೀಲನೆ ನಡೆಸಿದ್ದಾರೆ.

ಬಾಳೆಗೊನೆಯ ದಿಂಡು ಕೊರೆದು ಪರಿಶೀಲನೆ ನಡೆಸಿದ ವೇಳೆ ಗಾಂಜಾ ಹಾಗೂ ಸಿಗರೇಟಗಳನ್ನು ಟೇಪ್‌ನಲ್ಲಿ ಸುತ್ತಿ ಇಟ್ಟಿರುವುದು ಪತ್ತೆಯಾಗಿದೆ. ಅಧಿಕಾರಿಗಳು 123 ಗ್ರಾಂ ಗಾಂಜಾ ಮತ್ತು 40 ಸಿಗರೇಟ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಕೇಂದ್ರ ಕಾರಾಗೃಹದ ಎಸ್.ಡಿ.ಎ ಸಾತ್ವಿಕ್ (25) ಕರ್ತವ್ಯಕ್ಕೆ ಹಾಜರಾಗಲು ಬಂದಾಗ ಆತನನ್ನು ತಪಾಸಣೆ ಮಾಡಿದಾಗ ಒಳ ಉಡುಪಿನಲ್ಲಿ ಗಮ್ ಟೇಪಿನಲ್ಲಿ ಸುತ್ತಿರುವ ಗಾಂಜಾ ಪತ್ತೆಯಾಗಿದೆ. 170 ಗ್ರಾಂ ಗಾಂಜಾ ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಈ ಸಂಬಂಧ ತುಂಗಾನಗರ ಪೊಲೀಸ್ ಠಾಣೆಯಲ್ಲಿ ಶಿವಮೊಗ್ಗ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ರಂಗನಾಥ್ ಅವರ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ.

ಕನ್ನಡದಲ್ಲೇ ಮಾತನಾಡುವ ಶಪಥ ಮಾಡೋಣ

ಕಾನೂನು ತಜ್ಞ ಪ್ರೊ.ರವಿವರ್ಮಕುಮಾರಗೆ ದೇವರಾಜ ಅರಸು, ಹಾವನೂರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿಎಂ ಹೇಳಿಕೆ

ಮೈಸೂರು: ಕರ್ನಾಟಕದಲ್ಲಿ ಕನ್ನಡದಲ್ಲೇ ಮಾತನಾಡುತ್ತೇನೆ ಅಂತ ಎಲ್ಲರೂ ಶಪಥ ಮಾಡಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಕಾನೂನು ತಜ್ಞ ಪ್ರೊ.ರವಿವರ್ಮಕುಮಾರ್‌ಗೆ ದೇವರಾಜ ಅರಸು, ಎಲ್.ಜಿ ಹಾವನೂರು ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಬೆಂಗಳೂರಿಗೆ ಹೋದರೆ ನಾವು ಕರ್ನಾಟಕದಲ್ಲಿ ಇದ್ದಿವೋ ಬೇರೆ ರಾಜ್ಯದಲ್ಲಿದ್ದೇವಾ ಅನ್ನೋ ರೀತಿ ಇದೆ. ರಾಜ್ಯದಲ್ಲಿ ಏಕೀಕರಣಕ್ಕೆ ಬಹಳ ಜನ ಹೋರಾಟ ಮಾಡಿದ್ದಾರೆ ಅವರನ್ನು ಸ್ಮರಿಸೋಣ. ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತೇವೆ ಎಂದು ಶಪಥ ಮಾಡೋಣ ಎಂದರು.

ಅಸಮಾನತೆ ಹೋಗದಿದ್ದರೆ ಜಾತಿ ವ್ಯವಸ್ಥೆ ಹೋಗುವುದಿಲ್ಲ. ನಾವು ಸ್ವಾಭಿಮಾನ ಬೆಳಸಿಕೊಳ್ಳಬೇಕೇ ಹೊರತು ಗುಲಾಮಗಿರಿಯನ್ನು ಬೆಳೆಸಿಕೊಳ್ಳಬಾರದು. ಮೇಲ್ಜಾತಿಯವರು ಬಡವರಾಗಿದ್ದರೂ ಅವರನ್ನು ಸ್ವಾಮಿ, ಬುದ್ದಿ ಅಂತ ಮಾತನಾಡಿಸುತ್ತೇವೆ. ಒಬ್ಬ ದಲಿತ ಶ್ರೀಮಂತನಾಗಿದ್ದರೂ, ವಿದ್ಯಾವಂತನಾಗಿದರೂ ಅವನ್ನು ಏಕವಚನದಲ್ಲಿಮಾತನಾಡಿಸುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರ ಕಾರಿನ ಮೇಲೆ ಕಾಗೆ ಕುಳಿತಿದ್ದಕ್ಕೆ ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳುತ್ತಾರೆ ಅಂತ ಪುರೋಹಿತ ಹೇಳಿದರು. ಬಜೆಟ್ ಮಂಡನೆ ಮಾಡಲ್ಲ ಅಂತ ಟಿ.ವಿ ಚಾನಲ್‌ನಲ್ಲಿ ಕುಳಿತು ಪುರೋಹಿತ ಹೇಳಿದರು. ಹೇಳಿದ ಮೇಲೆ ಬಜೆಟ್ ಮಂಡನೆ ಮಾಡಿದೆ. 2 ವರ್ಷ ಮುಖ್ಯಮಂತ್ರಿಯೂ ಆದೆ. ಈಗ ಎರಡೂವರೆ ವರ್ಷದಿಂದ ಮುಖ್ಯಮಂತ್ರಿಯಾಗಿದ್ದೇನೆ ಎಂದರು.

ಬೆಳೆಹಾನಿ ಪರಿಹಾರಕ್ಕೆ ಮನವಿ: ಮೆಕ್ಕೆ ಜೋಳದ ಜತೆಗೆ ಹೆಸರು ಕಾಳು ಬೆಳೆ ಸಮಸ್ಯೆ ಬಗ್ಗೆ ಚರ್ಚಿಸಲಾಗಿದ್ದು, ಇದಕ್ಕೆ ಸಂಬಂಧಿಸಿದ ಎಫ್‌ಎಕ್ಯು ಬದಲಾವಣೆಗೆ ಕೇಂದ್ರ ಸರಕಾರ ಮನವಿ ಸಲ್ಲಿಸುವ ಜತೆಗೆ ಸಂಬಂಧಪಟ್ಟವರ ತಂಡ ಈ ಬಗ್ಗೆ ದೆಹಲಿಗೂ ಭೇಟಿ ನೀಡಬೇಕೆಂದು ಸೂಚನೆ ನೀಡಲಾಗಿದೆ. ಇತ್ತೀಚೆಗೆ ಪ್ರಧಾನಿಯವರನ್ನು ಭೇಟಿಯಾಗಿ ಮಳೆಯಿಂದಾದ ಬೆಳೆ ಹಾನಿಗೆ ಪರಿಹಾರ ಕೋರಲಾಗಿದೆ. ಈ ಬಾರಿ ರಾಜ್ಯದಲ್ಲಿ ಸುಮಾರು 15.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದೆ. ರಾಜ್ಯದ ಮನವಿಗೆ ಕೇಂದ್ರ ಪೂರಕವಾಗಿ ಸ್ಪಂದಿಸಲಿದೆ ಎಂಬ ವಿಶ್ವಾಸವಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಮೈಸೂರು ಜಿಲ್ಲಾ ಬಿಸಿಎಂ ಹಾಸ್ಟೆಲ್ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ನಡೆದ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಹಿರಿಯ ಕಾನೂನು ತಜ್ಞ ಪ್ರೊ.ರವಿವರ್ಮಕುಮಾರ ಅವರಿಗೆ ದೇವರಾಜ ಅರಸು, ಎಲ್.ಜಿ ಹಾವನೂರು ಪ್ರಶಸ್ತಿ ಪ್ರದಾನ ಮಾಡಿದರು. ಸಚಿವ ಎಚ್.ಸಿ. ಮಹದೇವಪ್ಪ, ಶಾಸಕರಾದ ಹರೀಶ್, ಶಿವಕುಮಾರ್, ತಮ್ಮಯ್ಯ ಇದ್ದರು.

ಕರ್ನಾಟಕದಲ್ಲಿ ಮೂರು ಲಕ್ಷದ 88 ಸಾವಿರ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ದಲಿತ ವಿದ್ಯಾರ್ಥಿಗಳಿಗೆ ಹಿಂದುಳಿದ ವಿದ್ಯಾರ್ಥಿಗಳಿಗೆ ನಮ್ಮ ಸರಕಾರ ಯಾವತ್ತೂ ಸಹಾಯ ಮಾಡುತ್ತದೆ. ದೇವರಾಜ ಅರಸು ಅವರು ಹಿಂದುಳಿದ ವರ್ಗದವರಿಗೆ ಶಕ್ತಿ ತುಂಬುವ ಕೆಲಸ ಮಾಡಿದರು. ಬಡವರಿಗೆ ಶಕ್ತಿ ತುಂಬುವ ಉದ್ದೇಶದಿಂದ ನಮ್ಮ ಸರಕಾರ ಅನೇಕ ಭಾಗ್ಯಗಳನ್ನು ನೀಡಿದ್ದೇನೆ.

-ಸಿದ್ದರಾಮಯ್ಯ ಸಿಎಂ

ನೂರು ವರ್ಷ ಬದುಕುತ್ತೇನೆ

ಎಲ್ಲರೂ ಕೂಡ ಅವಕಾಶ ಸಿಕ್ಕಾಗ ಸಮಾಜದ ಋಣ ತೀರಿಸುವ ಕೆಲಸ ಮಾಡಬೇಕು. ಅದರಲ್ಲೂ ಹಾಸ್ಟೆಲ್ ವಿದ್ಯಾರ್ಥಿಗಳು ಸಮಾಜದ ಋಣ ತೀರಿಸಲೇಬೇಕು. ನನಗೆ ಈಗ 79 ವರ್ಷ 4 ತಿಂಗಳು ಅಗಿದೆ. ನಾನಂತೂ ನೂರು ವರ್ಷ ಬದುಕುತ್ತೇನೆ. ಗಾಂಧೀಜಿಗೆ ಒಬ್ಬರು ಪತ್ರ ಬರೆದಿದ್ದರು, 100 ವರ್ಷ ಬದುಕಿ ಅಂತ ಹೇಳಿದರು. ನಾನು 125 ವರ್ಷ ಬದುಕಬೇಕು ಅಂತಿದ್ದೇನೆ ಅಂತ ಗಾಂಧಿ ಉತ್ತರ ಕೊಟ್ಟಿದ್ದರು. ನಾನೂ 100 ವರ್ಷ ಬದುಕುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ನಗುತ್ತಲೇ ನುಡಿದರು.

10 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿಗೆ ಸೂಚನೆ

ಮೆಕ್ಕೆ ಜೋಳ ಬೆಲೆ ಕುಸಿತದಿಂದ ಸಂಕಷ್ಟದಲ್ಲಿರುವ ರೈತರಿಗೆ ಸರಕಾರ ಎಲ್ಲ ರೀತಿಯ ನೆರವು ಒದಗಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮೈಸೂರಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರ, ರೈತರಿಂದ ಸುಮಾರು 10 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿಗೆ ಖರೀದಿ ಕೇಂದ್ರ ಸ್ಥಾಪಿಸಲು ಸೂಚನೆ ನೀಡಲಾಗಿದೆ. ದೇಶದಲ್ಲಿಯೇ ಹೇರಳವಾಗಿ ಮೆಕ್ಕೆಜೋಳವನ್ನು ಬೆಳೆದಿದ್ದು, ಅದನ್ನು ಆಮದು ಮಾಡಿಕೊಳ್ಳದಂತೆ ಕೇಂದ್ರ ಸರಕಾರವನ್ನು ಪತ್ರದ ಮೂಲಕ ಕೋರಲಾಗುವುದು ಎಂದರು. ಒಂದು ಕ್ವಿಂಟಾಲ್ ಮೆಕ್ಕೆಜೋಳಕ್ಕೆ 2400 ರು. ಎಂಎಸ್‌ಪಿ ದರ ನಿಗದಿಯಾಗಿದ್ದು, ಇದುವರೆಗೆ ಖರೀದಿ ಕೇಂದ್ರ ಪ್ರಾರಂಭವಾಗಿಲ್ಲ. ಖರೀದಿ ಪ್ರಕ್ರಿಯೆ ಪ್ರಾರಂಭಿಸಬೇಕೆಂದು ರೈತರು ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ಮೆಕ್ಕೆಜೋಳ ಖರೀದಿ ಬಗ್ಗೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಲಾಗಿದೆ. ಮಾರುಕಟ್ಟೆಯಲ್ಲಿ ಮೆಕ್ಕೆಜೋಳದ ಬೆಲೆ ಕುಸಿತ ಕಂಡಿದ್ದು, ಉತ್ಪಾದನೆ ಹೆಚ್ಚಾಗಿದೆ. ಸುಮಾರು 55 ಲಕ್ಷ ಮೆಟ್ರಿಕ್ ಟನ್‌ನಷ್ಟು ಮೆಕ್ಕೆಜೋಳವನ್ನು ರೈತರು ಬೆಳೆಯಬಹುದೆಂಬ ಅಂದಾಜಿದೆ. ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಮೆಕ್ಕೆ ಜೋಳ ಉತ್ಪತ್ತಿಯಲ್ಲಿ ಏರಿಕೆ ಕಂಡಿದ್ದರೂ ಸಹ , ಕೇಂದ್ರ ಸರಕಾರ ಸುಮಾರು 70 ಲಕ್ಷ ಮೆಟ್ರಿಕ್ ಟನ್‌ನಷ್ಟು ಮೆಕ್ಕೆಜೋಳವನ್ನು ಆಮದು ಮಾಡಿಕೊಳ್ಳುತ್ತಿದೆ. ಕೇಂದ್ರದ ಈ ನಿರ್ಧಾರದಿಂದ ನೋಡಲ್ ಏಜೆನ್ಸಿಗಳಾದ ನಫೆಡ್, ಎನ್‌ಸಿಸಿಎಫ್ ಸಂಸ್ಥೆಗಳು ಮೆಕ್ಕೆ ಜೋಳ ಖರೀದಿ ಪ್ರಕ್ರಿಯೆ ನಡೆಸದೇ ಇರುವುದರಿಂದ, ರೈತರು ಕೆಲವಡೆ ಧರಣಿ ನಡೆಸುತ್ತಿದ್ದಾರೆ ಎಂದರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಲ್ಲಾಪುರ (ಉ.ಕ)

ಕ್ರ.ಸಂ: ಕೃಉಮಾಸ/ಯ/ಅಭಿವೃದ್ಧಿ/ಟೆಂಡರ್ ಪ್ರಕಟಣೆ/836-838/2025-26 ದಿನಾಂಕ: 17-11-2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಮಿತಿಯ 2025-26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡ 03 ಸಂಖ್ಯೆ ಅಭಿವೃದ್ಧಿ ಕಾಮಗಾರಿಗಳನ್ನು KPPP ಪೋರ್ಟಲ್‌ನಲ್ಲಿ ಯೂಸರ್ ಐ.ಡಿ ಪಾಸವರ್ಡ ಪಡೆದ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸಲು ಆಹ್ವಾನಿಸಲಾಗಿದೆ. ಕಾಮಗಾರಿಗಳ ಇಂಡೆಂಟ್ ಸಂಖ್ಯೆ ಈ ಮುಂದಿನಂತೆ ಇರುತ್ತದೆ. 1) APMC/2025-26/OW/WORK_INDENT740 2) APMC/2025-26/OW/WORK_INDENT741 3) APMC/2025-26/OW/WORK_INDENT742 ಐಟಂವಾರು ಶೆಡ್ಯೂಲ್ ಹಾಗೂ ಟೆಂಡರ್ ದಾಖಲೆಗಳನ್ನು ಇ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 16-12-2025 ರಂದು ಸಂಜೆ 5.00 ಗಂಟೆಯವರೆಗೆ. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 19-12-2025 ಸಂಜೆ 4.30 ಗಂಟೆಗೆ ಮತ್ತು ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 22-12-2025 ಸಂಜೆ 4.30 ಗಂಟೆಗೆ. ಟೆಂಡರ್ ಅಪ್ ಲೋಡಿಂಗ್‌ಗೆ ಸಂಬಂಧಿಸಿದಂತೆ ಇ ಪೋರ್ಟಲ್ ಸಹಾಯಕ ದೂರವಾಣಿ 91-8046010000 ಅಥವಾ 91-8068948777 ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಹಾಗೂ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/- (ಅರವಿಂದ ಪಿ ಪಾಟೀಲ) ಕಾರ್ಯದರ್ಶಿ ಕೃ.ಉ.ಮಾ.ಸ. ಯಲ್ಲಾಪುರ (ಉ.ಕ.)
ಸಹಿ/- (ಚಂದ್ರಶೇಖರ ಹೊಸಮನಿ) ಆಡಳಿತಾಧಿಕಾರಿಗಳು ಕೃ.ಉ.ಮಾ.ಸ. ಯಲ್ಲಾಪುರ (ಉ.ಕ.)
DIPR/KWR/KSMCA/745/25-26 dt. 21.11.2025

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮಂಡ್ಯ. ದೂರವಾಣಿ : ಫ್ಯಾಕ್ಸ್ 08232-224816. e mail- kwbeemnd@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಅಮೃತ್ 2.0 "ಜಲ್ ಹಿ ಅಮೃತ್" ಪ್ರೋತ್ಸಾಹ ಧನದಲ್ಲಿ ಮದ್ದೂರು ಪಟ್ಟಣದಲ್ಲಿನ 500 ಕೆ.ಎಲ್.ಡಿ ಎಂ.ಎಂ.ಬಿ.ಆರ್ ಮಾದರಿಯ ಬಳಸಿದ ನೀರು ಶುದ್ಧೀಕರಣ ಘಟಕಕ್ಕೆ ಇಂಟರ್‌ನೆಟ್ ಆಫ್ ಥಿಂಗ್ಸ್ (IoT) ಆಧಾರಿತ ಸ್ವಯಂಚಾಲಿತ ವ್ಯವಸ್ಥೆಯನ್ನು ಕಲ್ಪಿಸುವುದು ಮತ್ತು ಘಟಕದ ಆವರಣದಲ್ಲಿ ಶೌಚಾಲಯ ನಿರ್ಮಾಣ ಕಾಮಗಾರಿ (including 1 year DLP) (Lumpsum tender – No Variation) ಇಂಡೆಂಟ್ ನಂ: KUWSDB/2025-26/WS/WORK_INDENT393/CALL-3ಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಮೊತ್ತ: ರೂ.20.08,415/-ಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ವೆಬ್‌ಸೈಟ್ ಸಂಪರ್ಕಿಸುವುದು.

ಸಹಿ/-ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮಂಡ್ಯ.
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/589/2025-26

ನಗರಸಭಾ ಕಾರ್ಯಾಲಯ, ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123, ದೂ.: 080-27722735, ಸಹಾಯವಾಣಿ: 080-27723627, Web : www.nelamangalacity,mrc.gov.in, Email : itstaffnelamangala@gmail.com

ಸಂಖ್ಯೆ: ನಸನೆ:ಆ.ಶಾ(ABC):ಸಿಆರ್:01:2025-26 ದಿನಾಂಕ: 18.11.2025

ಪ್ರಕಟಣೆ

ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿನ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳ ಮುಖ್ಯಸ್ಥರಿಗೆ ಈ ಮೂಲಕ ತಿಳಿಸುವುದೇನೆಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತ ರಿಟ್ ಅರ್ಜಿ ಸಂಖ್ಯೆ 5/2025 ರಲ್ಲಿ ನೀಡಿರುವ ನಿರ್ದೇಶನದಂತೆ ತಮ್ಮ ಸಂಸ್ಥೆಯ ಆವರಣದಲ್ಲಿ ಯಾವುದೇ ಬೀದಿ ನಾಯಿಗಳು ವಾಸವಿದ್ದಲ್ಲಿ ಅದನ್ನು ಪರಿಶೀಲಿಸಿ ಕೂಡಲೇ ಅದರ ಸಂಖ್ಯೆಯನ್ನು ಲೆಕ್ಕ ಮಾಡಿ ಮುಖ್ಯಾಧಿಕಾರಿ/ಪೌರಾಯುಕ್ತರಿಗೆ ತಿಳಿಸುವುದು. (1) ತಮ್ಮ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮವಹಿಸುವುದು. (2) ನಗರ ಸ್ಥಳೀಯ ಸಂಸ್ಥೆಯಿಂದ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಸಹಕರಿಸಲು ಹಾಗೂ ಅವುಗಳ ಪ್ರವೇಶ ನಿರ್ಬಂಧಿಸುವದನ್ನು ಮೇಲ್ವಿಚಾರಣೆ ಮಾಡಲು ತಮ್ಮ ಸಂಸ್ಥೆ ವತಿಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲು ಅಧಿಕಾರಿಯಾಗಿ ನೇಮಕ ಮಾಡವುದು.(3) ಮಾನ್ಯ ಸರ್ವೋಚ್ಚ ನ್ಯಾಯಲಯದ ನಿರ್ದೇಶನದಂತೆ ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಪುನಃ ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅವನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಯಿಂದ ವಸೂಲಿ ಮಾಡಲಾಗುವುದು. (4) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ತಮ್ಮ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು.

ಪೌರಾಯುಕ್ತರು, ನಗರ,ನೆಲಮಂಗಲ
ವಾ.ಸಾ.ಸಂ.ಇ/ವಾಪ್ರ/3952/ಶಿರಡಿಸಾಯಿ/2025-26

ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ
ತೋಟಗಾರಿಕೆ ಜಂಟಿ ನಿರ್ದೇಶಕರ ಕಛೇರಿ, ಪಂಚಾಯತ್ ಬೆಂಗಳೂರು ನಗರ ಕಬ್ಬನ್ ಉದ್ಯಾನವನ, ಬೆಂಗಳೂರು-560001.ಜಿಲ್ಲೆ

ಸಂ:ತೋಉನಿ/ಜಿಪಂ/ಬೆಂನ/ಸತೋನಿ-1/NHM/CDP/2025-26 ದಿನಾಂಕ: 19.11.2025

ಪ್ರಕಟಣೆ

2025-26 ನೇ ಸಾಲಿನ ರಾಷ್ಟ್ರೀಯ ತೋಟಗಾರಿಕೆ ಮಂಡಳಿಯ Cluster Development Programme ಯೋಜನೆಯನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಯಡಿ Multi-Commodity High Value Cluster ಹಾಗೂ Peri-Urabn Vegetable Cluster ಗಳ ಕಾರ್ಯಕ್ರಮದಡಿಯಲ್ಲಿ ಯೋಜನೆಗಳನ್ನು ಸ್ಥಾಪಿಸಲು ನಿರೀಕ್ಷಿತ ಉದ್ದೆಮೆದಾರರು/ಅನುಷ್ಠಾನ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. 2025-26 ನೇ ಸಾಲಿನ ಸದರಿ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಳ್ಳಲು ಇಚ್ಛಿಸುವ/ಆಸಕ್ತಿಯುಳ್ಳ ಉದ್ದಿಮೆದಾರರು/ಅನುಷ್ಠಾನ ಸಂಸ್ಥೆಗಳು ಸಂಬಂಧಪಟ್ಟ ತಾಲ್ಲೂಕುಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರವರ ಕಛೇರಿಯನ್ನು ಹಾಗೂ ತೋಟಗಾರಿಕೆ ಜಂಟಿ ನಿರ್ದೇಶಕರು, ಬೆಂಗಳೂರು ನಗರ ರವರ ಕಛೇರಿಯನ್ನು ಸಂಪರ್ಕಿಸುವುದು. ಹಾಗೂ https://www.nhb.gov.in ನಲ್ಲಿ ಲಭ್ಯವಿರುವ ಪರಿಷ್ಕೃತ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ನಿಗದಿತ ದಾಖಲೆಗಳೊಂದಿಗೆ ಅರ್ಜಿಯನ್ನು ಆನ್‌ಲೈನ್‌ನಲ್ಲಿ (https://www.nhb.gov.in/ OnlineApplication/Online_Registration_Intermediate_Page.aspx) ಸಲ್ಲಿಸಬೇಕೆಂದು ಈ ಮೂಲಕ ಪ್ರಕಟಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ			
ಬೆಂಗಳೂರು ದಕ್ಷಿಣ ಮತ್ತು ಪೂರ್ವ ತಾಲ್ಲೂಕು ದೂರವಾಣಿ: 080 28486144 9036043217	ಆನೇಕಲ್ ತಾಲ್ಲೂಕು ದೂರವಾಣಿ : 080 27840454 9845268382 7892818107	ಬೆಂಗಳೂರು ಉತ್ತರ ತಾಲ್ಲೂಕು ದೂರವಾಣಿ:080 28566740 9538953949	ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, ಕಬ್ಬನ್ ಪಾರ್ಕ್, ಬೆಂಗಳೂರು ದೂರವಾಣಿ: 080-22860640, 9448999213

ಸಹಿ/- ತೋಟಗಾರಿಕೆ ಜಂಟಿ ನಿದೇಶಕರು (ಜಿಪಂ) ಬೆಂಗಳೂರು ನಗರ ಜಿಲ್ಲೆ.
ವಾಸಾಸಂಇ/ವಾ.ಪ್ರ./ಎಸ್‌ಎಸ್‌ಸಿ/3974/2025-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ
eepredkpl@gmail.com,

ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2025-26/2068 ದಿನಾಂಕ: 21-11-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW- 1, 2, 3 ಮತ್ತು 4ರ ಪಕಾರ ನಿಯಮ ಗಳನ್ವಯ "kppp.karnataka.gov.in ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ **ರಸ್ತೆ,ಬ್ರಿಡ್ಜ್ ಕಾಮಗಾರಿಗಳಿಗೆ** ಸರ್ವೆ ಡಿಪಿಆರ್ ತಯಾರಿಕೆ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು "kppp.karnataka.gov.in ಪೋರ್ಟಲ್" ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು:- 1)ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪಮಾಣ ಪತ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ kppp.karnataka.gov.in portal ರಲ್ಲಿ ಪಡೆಯಬಹುದು.ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: 24.11.2025 ರ ನಂತರ ದಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ ವಿವರ: ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: 24.11.2025 ಸಮಯ 10.00 ಗಂಟೆ ನಂತರ ದಿಂದ 08.12.2025 ಸಮಯ 16.00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: 24.11.2025 ಸಮಯ 11.00 ಗಂಟೆ ನಂತರ ದಿಂದ: 08.12.2025 ಸಮಯ 16.30 ಗಂಟೆವರೆಗೆ ಟೆಂಡರ್ ತೆರೆಯುವ ದಿನಾಂಕ : 09.12.2025 ಕಚೇರಿ ಸಮಯದಲ್ಲಿ ಕೆಡಬ್ಲ್ಯೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಕೊಪ್ಪಳ.
ಡಿಐಪಿಆರ್/ಕೊಪ್ಪಳ/468/ಕೆಎಸ್‌ಎಂಸಿಎ/2025-26

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/102/2025-26 ಪ್ರಕಟಣೆ ದಿನಾಂಕ: 20.11.2025

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1	ಶ್ರೀ ಮುನಿನಾರಾಯಣಪ್ಪ ಬಿನ್ ವೆಂಕಟರಾಯಪ್ಪ	ದೇವನಹಳ್ಳಿ	ಚನ್ನರಾಯಪಟ್ಟಣ	ಮಲ್ಲೇಪುರ	45/1	0-08½	ವ್ಯವಸಾಯ	ವಾಣಿಜ್ಯ
2	ಶ್ರೀಮತಿ ಅಮರಾವತಿ ಕೋಂ. ಜಿ. ಲಕ್ಷ್ಮೀನಾರಾಯಣ	ದೇವನಹಳ್ಳಿ	ಚನ್ನರಾಯಪಟ್ಟಣ	ಮಲ್ಲೇಪುರ	45/1 45/2 45/7 45/8 46/1 46/2	1-06½ 0-28 0-30 0-28 1-03 0-35	ವ್ಯವಸಾಯ	ವಾಣಿಜ್ಯ
3	ಶ್ರೀ ಬಿ.ಎಲ್. ರಘು ಬಿನ್ ಜಿ. ಲಕ್ಷ್ಮೀನಾರಾಯಣ	ದೇವನಹಳ್ಳಿ	ಚನ್ನರಾಯಪಟ್ಟಣ	ಮಲ್ಲೇಪುರ	45/3 45/6	0-15 0-10	ವ್ಯವಸಾಯ	ವಾಣಿಜ್ಯ
4	ಶ್ರೀ ಜಿ. ಲಕ್ಷ್ಮೀನಾರಾಯಣ ಬಿನ್ ಲೇಟ್ ಗುಂಡಪ್ಪ	ದೇವನಹಳ್ಳಿ	ಚನ್ನರಾಯಪಟ್ಟಣ	ಮಲ್ಲೇಪುರ	47/3 47/5 47/7 47/11	1-24 1-19½ 2-9¼ 2-08 ಪೈಕಿ 1-28	ವ್ಯವಸಾಯ	ವಾಣಿಜ್ಯ

ಷರಾ:- ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಾಣಿಜ್ಯ ಚಟುವಟಿಕೆಯನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದ್ದು, ಸದರಿ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ವಾಣಿಜ್ಯ ಉದ್ದೇಶದ ಬೇಡಿಕೆಗಳನ್ನು ಪೂರೈಸುವ ಕಾರ್ಯ ಹಾಗೂ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗಾವಕಾಶ ಪೂರೈಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆಂದು ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/- ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
ವಾ.ಸಾ.ಸಂ.ಇ/3981/ಆಕಾರ್/2025-26

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಉರುಳು ಸೇವೆ

ಸುಬ್ರಹ್ಮಣ್ಯ: ಕುಕ್ಕೆ ಶ್ರೀಸುಬ್ರಹ್ಮಣ್ಯ ಚಂಪಾ ಷಷ್ಠಿ ಜಾತ್ರೋತ್ಸವದ ಅಂಗವಾಗಿ ನಡೆದ ಲಕ್ಷ ದೀಪೋತ್ಸವದ ಬಳಿಕ ಬೀದಿ ಮಡೆ ಸ್ನಾನ ಆರಂಭ ಆಗಿದೆ. ನಿತ್ಯ ನೂರಾರು ಭಕ್ತರು ಬೀದಿ ಉರುಳುಸೇವೆ ಮಾಡಿ ಹರಕೆ ತೀರಿಸುತ್ತಿದ್ದಾರೆ. ಕುಕ್ಕೆ ಕ್ಷೇತ್ರಕ್ಕೆ ಭಕ್ತಾದಿಗಳು ಸಲ್ಲಿಸುವ ಅತಿ ದೊಡ್ಡ ಹರಿಕೆಗಳಲ್ಲಿ ಬೀದಿ ಮಡೆ ಸ್ನಾನವು ಪ್ರಮುಖ ಸೇವೆಯಾಗಿದೆ. ಹರಕೆಯನ್ನು ಹೊತ್ತ ಭಕ್ತರು ಕುಮಾರಧಾರ ಸ್ನಾನಗಟ್ಟದಲ್ಲಿ ಮಿಂದು ಅಲ್ಲಿಂದಲೇ ಸುಮಾರು ಎರಡುವರೆ ಕಿಲೋಮೀಟರ್ ಮುಖ್ಯರಸ್ತೆಯಲ್ಲಿ ಉರುಳುತ್ತಾ ಬಂದು ಶ್ರೀದೇವಳದ ಅಂಗಣದಲ್ಲಿ ಒಂದು ಸುತ್ತು ಪ್ರದಕ್ಷಿಣೆ ಬಂದು ನಂತರ ದರ್ಪಣ ತೀರ್ಥದಲ್ಲಿ ಮಿಂದು ಎದ್ದೇಳುತ್ತಾರೆ. ತದನಂತರ ಶ್ರೀ ದೇವರ ಪ್ರಸಾದ ಸ್ವೀಕರಿಸಿ ಸಂತುಷ್ಟರಾಗುತ್ತಾರೆ.

ಮಕ್ಕಳನ್ನು ಬಾವಿ ತಳ್ಳಿ ತಂದೆ, ಮಗ ಆತ್ಮಹತ್ಯೆ

ಧಾರವಾಡ: ಒಂದೇ ಕುಟುಂಬದ ನಾಲ್ವರು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಧಾರವಾಡ ತಾಲೂಕಿನ ಚಿಕ್ಕಮಲ್ಲಿಗವಾಡ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಗ್ರಾಮದ ನಾರಾಯಣ ಶಿಂಧೆ(42), ಈತನ ತಂದೆ ವಿಠಲ ಶಿಂಧೆ(80) ಹಾಗೂ ನಾರಾಯಣನ ಮಕ್ಕಳಾದ ಶಿವಕುಮಾರ ಶಿಂಧೆ (12) ಹಾಗೂ ಶ್ರೀನಿಧಿ ಶಿಂಧೆ(11) ಎಂಬುವವರು ಅದೇ ಗ್ರಾಮದ ಯಲ್ಲಮ್ಮ ದೇವಾಲಯದ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಶುಕ್ರವಾರ ಬೆಳಗ್ಗೆಯೇ ಬಾವಿಗೆ ಬಿದ್ದಿದ್ದು, ದನ ಕಾಯುವವರು ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ನೋಡಿದಾಗ ವಿಷಯ ಬೆಳಕಿಗೆ ಬಂದಿದೆ. ನಾರಾಯಣ ತನ್ನ ಎರಡೂ ಮಕ್ಕಳು ಹಾಗೂ ತಂದೆಯೊಂದಿಗೆ ಬಾವಿಗೆ ಹಾರಿದ್ದಾನೆ. ಈ ದುರ್ಘಟನೆಯಲ್ಲಿ ಸಾವಿಗೀಡಾದ ಹೆಣ್ಣು ಮಗುವೊಂದು ಶಾಲಾ ಸಮವಸ್ತ್ರದಲ್ಲೇ ಇದ್ದದ್ದು ಕಂಡು ಬಂದಿದೆ.

ಧಾರವಾಡ ಗ್ರಾಮೀಣ ಪೊಲೀಸರು ಶುಕ್ರವಾರ ಸಂಜೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತರ ಶವಗಳನ್ನು ಮರಣೋತ್ತರ ಪರೀಕ್ಷೆಗೆ ಜಿಲ್ಲಾ ಆಸ್ಪತ್ರೆಗೆ ರವಾನಿಸಿದ್ದಾರೆ. ಆದರೆ, ಈ ಸಾವಿಗೆ ಕಾರಣ ಏನು ಎಂಬುದು ತಿಳಿದು ಬಂದಿಲ್ಲ. ಈ ಕುರಿತು ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560052. ದೂರವಾಣಿ: 080-22263479

ಸಂಖ್ಯೆ: STRRPA/TP/CLU/46/2025-26 ದಿನಾಂಕ: 21-11-2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವ್ಯವಸಾಯ'** ವಲಯದಿಂದ **'ವಾಣಿಜ್ಯ'** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಕೆ. ಮುನಿಯಂದಿ ಬಿನ್ ಎನ್. ಕೃಷ್ಣನ್, ನಂ. 1405, ಟವರ್ ಆರ್ಗನ್, ಸೆಂಚುರಿ ಎಥೋಸ್ ಅಪಾರ್ಟ್‌ಮೆಂಟ್, ಬ್ಯಾಟರಾಯನಪುರ, ಬಳ್ಳಾರಿ ರಸ್ತೆ, ಸಹಕಾರ ನಗರ ಅಂಚೆ, ಬೆಂಗಳೂರು - 560092.	ದೊಡ್ಡಬಳ್ಳಾಪುರ	ಕಸಬಾ	ಕೆಸ್ತೂರು	167/2 171/9	1-25 0-16¼	ವ್ಯವಸಾಯ	ವಾಣಿಜ್ಯ
2	ಶ್ರೀ ಮಲ್ಲಿಕಾರ್ಜುನಯ್ಯ ಬಿನ್ ಲೇಟ್ ಮಲ್ಲಯ್ಯ ಮತ್ತು ಶ್ರೀ ಪ್ರಭುಲಿಂಗಮೂರ್ತಿ ಎಂ. ಬಿನ್ ಲೇಟ್ ಮಲ್ಲಯ್ಯ	ದೊಡ್ಡಬಳ್ಳಾಪುರ	ಕಸಬಾ	ಕೆಸ್ತೂರು	170/4	0-30	ವ್ಯವಸಾಯ	ವಾಣಿಜ್ಯ

ಷರಾ:- ಅರ್ಜಿದಾರರ ಪ್ರಸ್ತಾವನೆಯಲ್ಲಿ ಸದರಿ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗೆ ಬೇಡಿಕೆ ಇದ್ದು, ವಾಣಿಜ್ಯ ಬೆಳವಣಿಗೆಯಿಂದ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಾಣಿಜ್ಯ'** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/- ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
ವಾಸಾಸಂಇ/ವಾ.ಪ್ರ/3976/ಅಡ್ವರ್ಟೋರ್/2025-26

ಸಮಾಚಾರ ಸಣ್ಣದಲ್ಲ

ನಾನು ಎಲ್ಲರಿಗೂ ಆಪ್ತ, ಬಣ ರಾಜಕಾರಣವಿಲ್ಲ

ಕೊಪ್ಪಳ: ನನಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರೂ ಆಪ್ತರೇ ಆಗಿದ್ದಾರೆ. ನಮ್ಮಲ್ಲಿ ಯಾವುದೇ ಬಣ ರಾಜಕಾರಣವಿಲ್ಲ. ನಮ್ಮಲ್ಲಿರುವುದು

ಕಾಂಗ್ರೆಸ್ ಬಣ ಮಾತ್ರ ಎಂದು ಕೊಪ್ಪಳ ಕ್ಷೇತ್ರದ ಶಾಸಕ ರಾಘವೇಂದ್ರ ಹಿಟ್ನಾಳ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಬೆಂಬಲಿಗರು ದೆಹಲಿಗೆ ಹೋಗಿದ್ದಾರಲ್ಲ ಎನ್ನುವ ಪ್ರಶ್ನೆಗೆ ಅದನ್ನೆಲ್ಲ ಗಮನಿಸಲು ಹೈಕಮಾಂಡ್ ಹಾಗೂ ರಾಜ್ಯದ ನಾಯಕರು ಇದ್ದಾರೆ. ಒಳ್ಳೆಯ ತೀರ್ಮಾನ ಕೈಗೊಳ್ಳುತ್ತಾರೆ. ನಾಲ್ಕು ದಿನ ನಾನೂ ದೆಹಲಿಯಲ್ಲಿದ್ದೆ. ಏನೂ ಆಗುವುದಿಲ್ಲವೆಂದು ಕೊಂಡಿದ್ದೇನೆ. ಏನಾದರೂ ಬೆಳವಣಿಗೆ ಇದ್ದರೆ ಹೈಕಮಾಂಡ್‌ನವರೇ ಹೇಳುತ್ತಾರೆ ಎಂದರು. ಕಾಂಗ್ರೆಸ್ ಪಕ್ಷದಲ್ಲಿ ಒಗ್ಗಟ್ಟಿದೆ. ಚಾಮರಾಜ ನಗರದಲ್ಲಿ ಖುದ್ದು ಮುಖ್ಯಮಂತ್ರಿಯೇ ಇದನ್ನು ಸ್ಪಷ್ಟಪಡಿಸಿದ್ದರೂ ಅನಗತ್ಯ ವಿವಾದ ಯಾಕೆ ಎಂದು ಪ್ರಶ್ನಿಸಿದ ಅವರು ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದರು.

ಬಿವೈವಿ ಬದಲಾಗದಿದ್ರೆ ಜೆಸಿಬಿ ಪಕ್ಷ ಕಟ್ತೀನಿ

ದಾವಣಗೆರೆ: ಬಿಜೆಪಿಯಲ್ಲಿ ತಕ್ಷಣ ವಿಜಯೇಂದ್ರ ಬದಲಾವಣೆ ಆಗದೇ ಇದ್ದರೆ ಜೆಸಿಬಿ ಪಕ್ಷ ಕಟ್ಟುತ್ತೀನಿ ಎಂದು ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಕಿಡಿಕಾರಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ

ಹಿಂದುತ್ವದ ಅಲೆ ಎದ್ದಿದೆ. ಜೆಸಿಬಿ ಪಕ್ಷ ಕಟ್ಟಿದರೆ ನಿರೀಕ್ಷೆಗಿಂತ ಹೆಚ್ಚು ಸ್ಥಾನ ಗೆಲ್ಲುತ್ತೇವೆ. ಜೆಸಿಬಿ ಪಕ್ಷ ಅಧಿಕಾರಕ್ಕೆ ಬಂದೇ ಬರುತ್ತೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಿಜೆಪಿಯಲ್ಲಿ ನಿಷ್ಠಾವಂತರೆಲ್ಲರನ್ನು ನಮ್ಮ ಪಾರ್ಟಿಗೆ ಕರೆದುಕೊಂಡು ಬರ್ತಿನಿ. ವಿಜಯೇಂದ್ರ ಬರಿ ಹಲ್ಕಾ ಕೆಲಸ ಮಾಡುತ್ತಿದ್ದು, ನಾಲ್ಕು ಜನ ಚೇಲಾ ಇಟ್ಕೊಂಡು ರಾಜಕೀಯ ಮಾಡುತ್ತಿದ್ದಾನೆ. ಕಾರಿನ ಡಿಕ್ಕಿಯಲ್ಲಿ ಶಾಲು ತೆಗೆದುಕೊಂಡು ಹೋಗಿ ಬೊಮ್ಮಾಯಿ ಬಳಿ ಸನ್ಮಾನ ಮಾಡಿಸಿಕೊಂಡಿದ್ದಾನೆ. ಬಳಿಕ ಬೊಮ್ಮಾಯಿ ಶಹಬ್ಬಾಶ್ ಎಂದ್ರು, ಅಂತಾ ಚೇಲಾಗಳಿಂದ ಹೇಳಿಕೆ ಕೊಡಿಸುತ್ತಾನೆ ಎಂದು ವ್ಯಂಗ್ಯವಾಡಿದರು. ನಮ್ಮ ಫೈಲ್ ಮುಟ್ಟಬೇಡಿ, ಪೋಕ್ಸೊದಿಂದ ನಮ್ಮ ಅಪ್ಪನನ್ನ ಬಚಾವ್ ಮಾಡಿ ಎಂದು ಡಿಕೆಶಿ ಜತೆಗೆ ಹೊಂದಾಣಿಕೆ ಮಾಡಿಕೊಂಡಿದ್ದಾನೆ. ಯಡಿಯೂರಪ್ಪನ ಗಾಡಿಗೆ ಪೆಟ್ರೋಲ್ ಹಾಕಿಸಿದ್ದು ಸಿದ್ದೇಶ್ವರ್ ಕುಟುಂಬ. ಶಾಮನೂರು ಜತೆ ಹೊಂದಾಣಿಕೆ ಮಾಡಿಕೊಂಡು ಸೋಲಿಸಿದರು ಎಂದು ಹೇಳಿದರು.

ಹೆಂಡತಿ ಕಿರುಕುಳಕ್ಕೆ ಬೇಸತ್ತು ಗಂಡ ಆತ್ಮಹತ್ಯೆ

ಹಾವೇರಿ: ಪತ್ನಿ, ಅತ್ತೆ-ಮಾವನ ಕಿರುಕುಳಕ್ಕೆ ಬೇಸತ್ತು ವಿಡಿಯೊ ಮಾಡಿಟ್ಟು ಪತಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಹಾವೇರಿ ಜಿಲ್ಲೆ ಹಿರೇಕೆರೂರು ತಾಲೂಕಿನ ವರಹ ಗ್ರಾಮದಲ್ಲಿ ನಡೆದಿದೆ. ಮಂಜುನಾಥ್ ಚಿಲ್ಲೋಜಿ (26) ಆತ್ಮಹತ್ಯೆ ಮಾಡಿ ಕೊಂಡ ಪತಿ.

ಮೂಲತಃ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಅಂಕಲಿ ಗ್ರಾಮದ ನಿವಾಸಿಯಾಗಿ ರುವ ಮಂಜುನಾಥ್ ಕುರಿಗಾಹಿಯಾಗಿದ್ದರು. ಪತ್ನಿ, ಅತ್ತೆ-ಮಾವ ಮತ್ತು ಅವರ ಮಾವ ಹೊನ್ನಸಿದ್ದಪ್ಪ ಹಾಗೂ ರಾಜಪ್ಪ ಕಿರುಕುಳಕ್ಕೆ ಬೇಸತ್ತು ಜಮೀನಿನಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೂ ಮುನ್ನ ಮಂಜುನಾಥ್ ವಿಡಿಯೊ ಮಾಡಿಟ್ಟು ಕಿರುಕುಳದ ಬಗ್ಗೆ ವಿವರಿಸಿದ್ದಾರೆ. ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ಮಾನಸಿಕವಾಗಿ ಬಹಳ ಹಿಂಸೆ ನೀಡಿದ್ದಾರೆ. ನನ್ನ ಹೆಂಡತಿ, ಅವರ ತಂದೆ-ತಾಯಿ, ಅವರ ಮಾವ ಭೀರಪ್ಪ, ಹೊನ್ನಸಿದ್ದಪ್ಪ ಹಾಗೂ ರಾಜಪ್ಪ ಮಾನಸಿಕವಾಗಿ ತುಂಬಾ ಹಿಂಸೆ ಕೊಟ್ಟಿದ್ದಾರೆ. ಅವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಕಣ್ಣೀರು ಹಾಕಿದ್ದಾರೆ. ಘಟನೆ ಸಂಬಂಧ ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಹಳೆ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು
- **ಸಮಸ್ಯೆಯೇನು?** ಮುಖ್ಯ ರಸ್ತೆ ಬದಿ ಹಾಕಿರುವ ಕಸ ತೆರವು ಮಾಡುವ ಕುರಿತು.
- **ಪರಿಹಾರ:** ಹಳೆ ವಿಮಾನ ನಿಲ್ದಾಣದ ರಸ್ತೆ ಯ ಫ್ಲೈಓವರ್ ಕೆಳಗಡೆ ರಸ್ತೆ ಬದಿಯಲ್ಲಿ ವಿಲೇವಾರಿ ಆಗದೆ ಕಸದ ಗುಡ್ಡೆ ಹಾಗಿರುವ ಬಗ್ಗೆ ಸ್ಥಳೀಯರೊಬ್ಬರು ಪಾಲಿಕೆ ಖಾತೆಗೆ ಎಕ್ಸ್‌ನಲ್ಲಿ ಟ್ಯಾಗ್ ಮಾಡಿದ್ದರು. ಸ್ಥಳ ಪರಿಶೀಲನೆ ನಡೆಸಿದ ಪಾಲಿಕೆ ಅಧಿಕಾರಿಗಳು ಪೌರ ಕಾರ್ಮಿಕರ ಮೂಲಕ ಕಸ ವಿಲೇವಾರಿ ಮಾಡಿಸಿದ್ದಾರೆ. ಕಸ ಹಾಕದಂತೆ ಎಚ್ಚರಿಕೆಯ ಫ್ಲೆಕ್ಸ್ ಅನ್ನು ಅಳವಡಿಸಿದ್ದಾರೆ.

ಗುಂಪುಗಾರಿಕೆ ನನ್ನ ರಕ್ತದಲ್ಲಿಲ್ಲ: ಡಿಕೆಶಿ

ನಾನು 140 ಶಾಸಕರ ಗುಂಪಿಗೆ ಸೇರಿದವನು | ಸಂಪುಟ ವಿಸ್ತರಣೆ ಸಂಬಂಧ ಅಕಾಂಕ್ಷಿಗಳು ದಿಲ್ಲಿಗೆ ಭೇಟಿ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಬಣಗಳ ನಡುವಿನ ಕಿತ್ತಾಟ ಜೋರಾಗುತ್ತಿರುವ ಹೊಸ್ತಿಲಿನಲ್ಲಿಯೇ 'ಗುಂಪುಗಾರಿಕೆ ಮಾಡಲ್ಲ. ಅದು ನನ್ನ ರಕ್ತದಲ್ಲಿಲ್ಲ'ವೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಬಳಿ ಯಾವ ಬಣವೂ ಇಲ್ಲ. ನಾನು ಯಾವುದೇ ಬಣದ ನಾಯಕನಲ್ಲ. ನಾನು 140 ಶಾಸಕರ ಅಧ್ಯಕ್ಷ. 140 ಶಾಸಕರೂ ನನಗೆ ಮುಖ್ಯ. ಗುಂಪುಗಾರಿಕೆ ನನ್ನ ರಕ್ತದಲ್ಲೇ ಇಲ್ಲ. ಕೆಲವು ಶಾಸಕರು, ಮಂತ್ರಿಗಳು ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತಿದ್ದಾರೆ. ಮತ್ತೊಂದೆಡೆ ಡಿನ್ನರ್ ಮೀಟಿಂಗ್ ನಡೆಯುತ್ತಿದೆ. ಯಾವ ಗುಂಪನ್ನು ದೆಹಲಿಗೆ ಕರೆದುಕೊಂಡು ಹೋಗಲು ನನಗೆ ಇಚ್ಛೆ ಇಲ್ಲ. ನಾನು ಗುಂಪುಗಾರಿಕೆ ಮಾಡುವುದಿಲ್ಲ ಎಂದರು.

ಮುಖ್ಯಮಂತ್ರಿಗಳು ಸಚಿವ ಸಂಪುಟ ಪುನಾರಚನೆ ಮಾಡುವುದಾಗಿ ಘೋಷಿಸಿದ್ದಾರೆ. ಆದ್ದರಿಂದ ಸಚಿವ ಸ್ಥಾನದ ಆಕಾಂಕ್ಷಿಗಳು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ದೆಹಲಿಗೆ ಹೋಗುವುದು ಸಹಜ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಹಕ್ಕು ಅವರಿಗಿದೆ. ನಾನು ಯಾರನ್ನೂ ಕರೆದುಕೊಂಡು ಹೋಗಿಲ್ಲ. ಕೆಲವರು ಮುಖ್ಯಮಂತ್ರಿಗಳೊಂದಿಗೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದರೆ, ಮತ್ತೆ ಕೆಲವರು ತಾವಾಗಿಯೇ ಹೋಗಿದ್ದಾರೆ. ಇದರಲ್ಲಿ ತಪ್ಪೇನಿದೆ? ನಾವು ಯಾರನ್ನೂ ತಡೆಯಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಮುಖ್ಯಮಂತ್ರಿಗಳಿಗೆ ಆಲ್ ದಿ ಬೆಸ್ಟ್: ಇನ್ನು ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದ 'ಐದು ವರ್ಷ ನಾನೇ ಮುಖ್ಯಮಂತ್ರಿ' ಎನ್ನುವ ಹೇಳಿಕೆಯ ಬಗ್ಗೆ ಪ್ರಶ್ನಿಸಿದಕ್ಕೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ಒಂದು ಪಕ್ಷದ ಶಾಸಕರು ಮಂತ್ರಿ, ಮುಖ್ಯಮಂತ್ರಿ ಆಗಲು ಅರ್ಹರಿರುತ್ತಾರೆ. ಮುಖ್ಯಮಂತ್ರಿಗಳು ಐದು ವರ್ಷ ತಾವೇ ಸಿಎಂ ಆಗಿ ಇರುವುದಾಗಿ ಹೇಳಿದ್ದಾರೆ. ಅವರಿಗೆ ಆಲ್ ದಿ ಬೆಸ್ಟ್ ಎಂದರು.

ಯಾರೇ ಆದರೂ ಆಡಿದ ಮಾತು ಮುಖ್ಯ ಅಲ್ಲವೇ ಎಂದು ಕೇಳಿದಾಗ, ಸಿಎಂ ತಮ್ಮ ವಿಚಾರಧಾರೆ ಹೇಳಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ನಾನುಂಟು ಹೈಕಮಾಂಡ್ ಉಂಟು. ಹೈಕಮಾಂಡ್ ಹೇಳಿದಂತೆ ಕೇಳುವುದಾಗಿ ಸಿಎಂ ಹೇಳಿದ್ದಾರೆ. ನಾನೂ ಹೇಳಿದ್ದೇನೆ. ಅದಕ್ಕೆ ನಾವು ಬದ್ಧ. ಅಷ್ಟು ಬಿಟ್ಟರೆ ಬೇರೇನೂ ಇಲ್ಲ ಎಂದರು.

ಡಿನ್ನರ್ ಸಭೆ ಬಗ್ಗೆ ಗೊತ್ತಿಲ್ಲ. ನಾಲ್ಕೈದು ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕು. ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸಬೇಕು ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ಎರಡುವರೆ ವರ್ಷದಿಂದಲೂ ಡಿನ್ನರ್ ಸಭೆಗಳನ್ನು ಮಾಡುತ್ತಲೇ ಇದ್ದಾರೆ. ಇನ್ನು ಹೆಚ್ಚು ಸಭೆಗಳನ್ನು ಮಾಡಲಿ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

- ಡಿನ್ನರ್ ರಾಜಕೀಯ ಹೊಸದಲ್ಲ, ಎರಡೂವರೇ ವರ್ಷದಿಂದಲೂ ಇದೆ: ಡಿಕೆಶಿ
- 'ತಲೆ ಎಣಿಕೆ' ಸಂದರ್ಭ ಬಂದರೆ ಆ ಸಮಯದಲ್ಲಿ ಸಂಖ್ಯಾಬಲವಿರಲಿ ಎನ್ನುವ ಆಕಾಂಕ್ಷೆ
- ಜೈಲಿನಲ್ಲಿರುವ ಶಾಸಕ ವಿನಯ್ ಕುಲಕರ್ಣಿ, ವೀರೇಂದ್ರ ಪಪ್ಪಿ ಜತೆ ಡಿಕೆಶಿ ಮಾತುಕತೆ
- ಡಿಕೆಶಿ ಅವರನ್ನು ಭೇಟಿ ಮಾಡಿದ ಜಿ.ಎಸ್. ಪಾಟೀಲ್, ಮಾಲೀಕಯ್ಯ ಗುತ್ತೆದಾರ್



ಸದಾಶಿವನಗದರ ನಿವಾಸದಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಶಾಸಕ ಜಿ.ಎಸ್. ಪಾಟೀಲ್, ಹಾಗೂ ಮಾಜಿ ಶಾಸಕ ಮಾಲೀಕಯ್ಯ ಗುತ್ತೆದಾರ್ ಭೇಟಿಯಾಗಿ ಚರ್ಚಿಸಿದರು.

ಪರಪ್ಪನ ಅಗ್ರಹಾರಕ್ಕೆ ಡಿಕೆಶಿ ಭೇಟಿ

ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಹಲವು ಬೆಳವಣಿಗೆಯ ನಡುವೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜೈಲಿನಲ್ಲಿರುವ ಶಾಸಕ ವಿನಯ್ ಕುಲಕರ್ಣಿ ಹಾಗೂ ವೀರೇಂದ್ರ ಪಪ್ಪಿ ಅವರನ್ನು ಭೇಟಿಯಾಗಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಎರಡು ದಿನಗಳಿಂದ ಯಾವುದೇ ಅಧಿಕೃತ ಕಾರ್ಯಕ್ರಮವಿರದಿದ್ದರೂ, ಶುಕ್ರವಾರ ಪರಪ್ಪನ ಅಗ್ರಹಾರಕ್ಕೆ ಭೇಟಿ ನೀಡಿರುವುದು ಹಲವು ಚರ್ಚೆಗೆ ಗ್ರಾಸವಾಗಿದೆ. ಮುಂದಿನ ದಿನದಲ್ಲಿ ಒಂದು ವೇಳೆ 'ತಲೆ ಎಣಿಕೆ' ಬಂದರೆ ಆ ಸಮಯದಲ್ಲಿ ತಮ್ಮ ಪರ ಸಂಖ್ಯಾಬಲವಿರಲಿ ಎನ್ನುವ ಕಾರಣಕ್ಕೆ ಈ ಭೇಟಿ ಮಾಡಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ಆದರೆ ಡಿ.ಕೆ.ಶಿವಕುಮಾರ್ ಅವರ ಶಾಸಕರಾದ ವಿನಯ್ ಕುಲಕರ್ಣಿ ಹಾಗೂ ವೀರೇಂದ್ರ ಪಪ್ಪಿ ವಿಚಾರಣಾಧೀನ ಕೈದಿಗಳಾಗಿ ಜೈಲಲ್ಲಿದ್ದಾರೆ. ಅವರನ್ನು ಭೇಟಿ ಮಾಡಿ ಸಮಾಧಾನ ಹೇಳಿದರು. ನಂತರ ಕೋರ್ಟ್ ವಿಚಾರಣೆ ಮುಗಿಸಿ ಬಂದ ವಿನಯ್ ಕುಲಕರ್ಣಿ ಅವರನ್ನು ಭೇಟಿಯಾಗಿ ಸಂತೈಸಿರುವುದಾಗಿ ಹೇಳಿದ್ದಾರೆ. ಇದಕ್ಕೂ ಮೊದಲು ಸದಾಶಿವ ನಗದಲ್ಲಿರುವ ತಮ್ಮ ನಿವಾಸದಲ್ಲಿ ಡಿ.ಕೆ.ಶಿವಕುಮಾರ್ ಅವರು ಶಾಸಕರಾದ ಜಿ.ಎಸ್. ಪಾಟೀಲ್ ಹಾಗೂ ಮಾಜಿ ಶಾಸಕ ಮಾಲೀಕಯ್ಯ ಗುತ್ತೆದಾರ್ ಅವರನ್ನು ಭೇಟಿಯಾಗಿ ಚರ್ಚಿಸಿದರು. ಈ ಭೇಟಿಯ ಬಳಿಕ ಮಾತನಾಡಿದ ಜಿ.ಎಸ್. ಪಾಟೀಲ್, ನಾನು ಪಕ್ಷದ ಹಿರಿಯ ಶಾಸಕನಿದ್ದೇನೆ. ಅಂದ ಮಾತ್ರಕ್ಕೆ ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿಲ್ಲ. ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುವ ಎಲ್ಲ ತೀರ್ಮಾನಕ್ಕೆ ಬದ್ಧ ಎಂದು ಸ್ಪಷ್ಟಪಡಿಸಿದರು.

ಎರಡು ದಿನದಿಂದ ಅಧಿಕೃತ ಕಾರ್ಯಕ್ರಮಗಳಿಲ್ಲ

ಗುರುವಾರಕ್ಕೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡುವರೆ ವರ್ಷ ಪೂರೈಸಿದೆ. ಆದರೆ ಗುರುವಾರದಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಿವಾಸದಿಂದ ಹೊರಬಂದಿಲ್ಲ. ಯಾವುದೇ ಅಧಿಕೃತ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೇ ನಿವಾಸದಲ್ಲಿಯೇ ಉಳಿದಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಕೆಪಿಸಿಸಿ ಅಧ್ಯಕ್ಷರಾದ ದಿನದಿಂದ ನಿತ್ಯ ಒಂದಿಲ್ಲೊಂದು ಕಾರ್ಯಕ್ರಮ, ಸಭೆ, ಸಮಾವೇಶದಲ್ಲಿ ಭಾಗವಹಿಸುತ್ತಿದ್ದರು. ಆದರೀಗ ಎರಡು ದಿನಗಳ ಕಾಲ 'ಕಾಯ್ದಿರಿಸಿಕೊಂಡಿರುವುದು' ಹಲವು ಅನುಮಾನಗಳಿಗೆ ಕಾರಣವಾಗಿದೆ. ಶುಕ್ರವಾರ ಮಧ್ಯಾಹ್ನ ಡಿ.ಕೆ. ಸುರೇಶ್ ಹೊರತುಪಡಿಸಿ, ಕೆಲ ಶಾಸಕರ ಭೇಟಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಸಂಜೆ ಮನೆಯಿಂದ ಹೊರ ಬಂದ ಬಳಿಕ ನೇರವಾಗಿ ಪರಪ್ಪನ ಅಗ್ರಹಾರ ಜೈಲಿಗೆ ತೆರಳಿ, ಶಾಸಕರಾದ ವೀರೇಂದ್ರ ಪಪ್ಪಿ ಹಾಗೂ ವಿನಯ್ ಕುಲಕರ್ಣಿ ಅವರನ್ನು ಭೇಟಿಯಾಗಿರುವುದು ಹಲವು ಚರ್ಚೆಗೆ ಕಾರಣವಾಗಿದೆ.

ಐದು ವರ್ಷ ನಾನೇ ಸಿಎಂ, ನನ್ನಿಂದಲೇ ಬಜೆಟ್ ಮಂಡನೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆರನ್ನು ಭೇಟಿ ಮಾಡುತ್ತೇನೆ

ಮೈಸೂರು: ಐದು ವರ್ಷ ನಾನೇ ಸಿಎಂ ಆಗಿರುತ್ತೇನೆ, ಮುಂದಿನ ಬಜೆಟ್ ಅನ್ನು ನಾನೇ ಮಂಡಿಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಖಡಕ್ಕಾಗಿ ಉತ್ತರಿಸಿದರು.

ರಾಜ್ಯದಲ್ಲಿ ಅಧಿಕಾರ ಹಂಚಿಕೆ ಮತ್ತು ಸಚಿವ ಸಂಪುಟ ಭಾರೀ ಚರ್ಚೆಯಾಗುತ್ತಿರುವ ಹೊತ್ತಿನಲ್ಲಿ ಮೈಸೂರಿನಲ್ಲಿ ಈ ರೀತಿಯಲ್ಲಿ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ

ಮುಂದಿನ ಬಜೆಟ್ ಕೂಡ ನಾನೇ ಮಂಡಿಸುತ್ತೇನೆ. ಐದು ವರ್ಷ ಪೂರ್ಣಾವಧಿ ನಾನೇ ಮುಗಿಸುತ್ತೇನೆ. ಎಲ್ಲವನ್ನೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದಿದ್ದಾರೆ.

ಸಚಿವ ಚಲುವರಾಯಸ್ವಾಮಿ ದೆಹಲಿಗೆ ಹೋಗಿರುವ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಿಎಂ, ನಾನು ಕೂಡ ಮಾತನಾಡಿದ್ದೇನೆ. ನಾನು ಕೇಂದ್ರದ ಕೃಷಿ ಸಚಿವರನ್ನು ಭೇಟಿ ಮಾಡಲು ಹೋಗಿದ್ದೇನೆ ಎಂದು ಹೇಳಿದ್ದಾರೆ. ದೆಹಲಿಗೆ ಹೋಗಲೇಬಾರದು ಅಂತೇನಿಲ್ಲ. ಎಲ್ಲರೂ ಹೋಗಿ ಬರಲಿ. ನಾನು ಕೂಡ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುತ್ತೇನೆ ಎಂದರು. ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಹೈ ಕಮಾಂಡ್ ಹೇಳಿದಕ್ಕೆ ನಾನು, ಮಂತ್ರಿಗಳು ಎಲ್ಲರೂ ಬದ್ಧವಾಗಿರಬೇಕು. ಹೈ ಕಮಾಂಡ್ ಹೇಳಿದ್ದೇ ಫೈನಲ್ ಎಂದು ನುಡಿದರು.

ಡಿ.ಕೆ.ಸುರೇಶ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈಗಲೂ ನಾನು ಗ್ಯಾರೆಂಟಿ ವಿಚಾರದಲ್ಲಿ ಮಾತು ತಪ್ಪಲ್ಲ. ಕೊಟ್ಟ ಮಾತನ್ನುಉಳಿಸಿಕೊಳ್ಳುತ್ತೇನೆ ಎಂದು ಮಾರ್ಮಿಕವಾಗಿ ನುಡಿದರು.

ಸಂಪುಟ ಪುನಾರಚನೆ ಹೈಕಮಾಂಡ್ ಮಾಡುವುದು. ಹೈಕಮಾಂಡ್ ಹೇಳಿದ್ದನ್ನು ನಾನು ಕೇಳಬೇಕು. ಡಿಕೆ ಶಿವಕುಮಾರ್ ಕೂಡ ಕೇಳಬೇಕು. ಮುಂದಿನ ಬಜೆಟ್ ಕೂಡ ನಾನೇ ಮಂಡನೆ ಮಾಡುತ್ತೇನೆ. ಪೂರ್ತಿ ನಾನೇ ಮುಂದುವರೆಯುತ್ತೇನೆ.

-**ಸಿದ್ದರಾಮಯ್ಯ** ಸಿಎಂ

ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ

ರಾಮನಗರ: ನವೆಂಬರ್ ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ, ಒನ್ಲಿ ಶಾಂತಿ. ನಿಮಗೆ ಏನೇ ಮಾಹಿತಿ ಬೇಕಿದ್ದರೂ ಡಿಕೆಶಿ ಅವರನ್ನುಕೇಳಿ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ಡಿಸಿಎಂ ಡಿಕೆಶಿ ಬಣದ ಶಾಸಕರು ದೆಹಲಿ ಯಾತ್ರೆ ವಿಚಾರ

ಕುರಿತು ರಾಮನಗರದಲ್ಲಿ ಮಾತನಾಡಿದ ಅವರು, ಯಾರು ದೆಹಲಿಗೆ ಹೋಗಿದ್ದಾರೆ, ಯಾಕೆ ಹೋಗಿದ್ದಾರೆ ಗೊತ್ತಿಲ್ಲ. ದೆಹಲಿಯಲ್ಲಿ ಏನೇನು ಆಗಿದ್ಯೋ ನಮಗೆ ಗೊತ್ತಿಲ್ಲ. ನಿಮಗೆ ಸಂಪೂರ್ಣ ಮಾಹಿತಿ ಬೇಕಿದ್ದರೆ ಡಿಕೆಶಿ, ಡಿ.ಕೆ.ಸುರೇಶ್ ಜತೆ ಮಾತನಾಡಿ. ನಾಯಕತ್ವ ಬದಲಾವಣೆ ಬಗ್ಗೆ ನನಗೇನು ಗೊತ್ತಿಲ್ಲ. ದಲಿತ ಸಚಿವರು ಸಭೆ ಮಾಡಿರೋದು ನನಗೆ ಗೊತ್ತಿಲ್ಲ. ಏನೂ ನಾಲ್ಕು ಜನ ಊಟಕ್ಕೆ ಸೇರಿಕೊಂಡರೆ ಅದರ ಬಗ್ಗೆ ಮಾತನಾಡಲು ಆಗುತ್ತಾ? ಡಿನ್ನರ್ ಪಾಲಿಟಿಕ್ಸ್‌ಗೆ ನನ್ನನ್ನು ಯಾರೂ ಕರೆಯುತ್ತಿಲ್ಲ. ನಾನು ಯಾವ ಬಣವೂ ಅಲ್ಲ, ಕಾಂಗ್ರೆಸ್ ಬಣ. ಸರಕಾರದಲ್ಲಿ ಯಾರೂ ಗೊಂದಲ ಮಾಡಿಕೊಳ್ಳಬಾರದು. ಎಲ್ಲವನ್ನೂ ಹೈಕಮಾಂಡ್ ತೀರ್ಮಾನಕ್ಕೆ ಬಿಡಬೇಕು ಎಂದರು.

ನಮ್ಮಲ್ಲಿ ಬಿಜೆಪಿಯಲ್ಲಿದ್ದಷ್ಟು ಬಣ ಇಲ್ಲ, ಬಿಜೆಪಿಯಲ್ಲಿ ನಾಲ್ಕೈದು ಬಣ ಇದೆ. ನಮ್ಮಲ್ಲಿ ಒಂದೇ ಬಣ ಕಾಂಗ್ರೆಸ್ ಬಣ. ನಮ್ಮಲ್ಲಿ ಹತ್ತಾರು ಹಿರಿಯ ನಾಯಕರು ಇದ್ದಾರೆ. ನಮ್ಮ ಪಕ್ಷ ಸದೃಢವಾಗಿದೆ. ಸರಕಾರ ಎರಡೂವರೆ ವರ್ಷ ಪೂರೈಸಿದೆ. ಇದು ಸೆಕೆಂಡ್ ಇನ್ನಿಂಗ್ಸ್ ಅಂತ ಏನಿಲ್ಲ, ಐದು ವರ್ಷ ಒಂದೇ ಇನ್ನಿಂಗ್ಸ್. ಐದು ವರ್ಷವೂ ಸರಕಾರ ಅಭಿವೃದ್ಧಿ ನಿಟ್ಟಿನಲ್ಲಿ ಕೆಲಸ ಮಾಡಲಿದೆ. ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸಿದ್ದೇವೆ. ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ ಎಂದು ತಿಳಿಸಿದರು.

ಹೈಕಮಾಂಡ್ ನಿರ್ಧಾರ ಫೈನಲ್

ವಿಜಯಪುರ: ನಮ್ಮ ಪಕ್ಷದಲ್ಲಿ ಹೈಕಮಾಂಡ್ ಸುಪ್ರೀಂ. ಹೈಕಮಾಂಡೇ ಅಂತಿಮ. ಕಾಲಕಾಲಕ್ಕೆ ಹೈಕಮಾಂಡ್ ಏನು ನಿರ್ಧಾರಕ್ಕೆ ತೆಗೆದುಕೊಳ್ಳುತ್ತದೆಯೋ ಅದನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು, ಶಾಸಕರು ಸೇರಿ ಎಲ್ಲರೂ

ಕೇಳಬೇಕು. ಸಿದ್ದರಾಮಯ್ಯ ಕೂಡ ಹೈಕಮಾಂಡ್ ನಿರ್ಧಾರ ಅಂತಿಮ ಎಂದಿದ್ದಾರೆ. ಹೈಕಮಾಂಡ್ ನಿರ್ಧಾರ ವನ್ನು ಎಲ್ಲರೂ ತಲೆಬಾಗಿ ಒಪ್ಪಿಕೊಳ್ಳು ವುದು ನಮ್ಮ ಪಕ್ಷದಲ್ಲಿರುವ ರೂಢಿ ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿ, ಸಿಎಂ ಬದಲಾವಣೆ, ಸಚಿವ ಸಂಪುಟ ಪುನರ್ ರಚನೆ ಸೇರಿ ಎಲ್ಲ ವಿಚಾರದಲ್ಲೂ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ನಾವು ಏನೇ ಮಾತನಾಡಿದರೂ ಪ್ರಯೋಜನ ಇಲ್ಲ. ಎಲ್ಲ ವಿಚಾರಗಳನ್ನು ಹೈಕಮಾಂಡ್ ಬಗೆಹರಿಸುತ್ತದೆ. ಎಲ್ಲರಿಗೂ ಸಿಎಂ ಆಗುವ, ಸಚಿವರಾಗುವ ಆಸೆ ಇರುತ್ತದೆ. ಅದೊಂದು ಸ್ವಾಭಾವಿಕ, ಅದರಲ್ಲಿ ತಪ್ಪಿಲ್ಲ ಎಂದರು. ಈಗ ಸಿದ್ದರಾಮಯ್ಯ 5 ವರ್ಷ ನಾನೇ ಸಿಎಂ, ಮುಂದಿನ ಬಜೆಟ್ ಮಂಡಿಸುತ್ತೇನೆ ಎಂದು ಹೇಳಿದ್ದಾರೆ. ಡಿ.ಕೆ. ಶಿವಕುಮಾರ್ ನಮ್ಮ ಕೆಪಿಸಿಸಿ ಅಧ್ಯಕ್ಷರು. ಪ್ರತಿಯೊಂದು ವಿಚಾರದಲ್ಲೂ ಅವರು ದೆಹಲಿಗೆ ಹೋಗಬೇಕಾಗುತ್ತದೆ. ಬೇರೆ ಬೇರೆ ಅನೇಕ ಸಂದರ್ಭದಲ್ಲಿ ಹಾಗೂ ಅವರ ಮೇಲೆ ನೂರೆಂಟು ಕೇಸ್‌ಗಳನ್ನು ಹಾಕಿದ್ದಾರೆ, ಅದಕ್ಕೂ ಹೋಗಬೇಕಾಗುತ್ತದೆ. ಪಕ್ಷದ ಅಧ್ಯಕ್ಷರಾಗಿಯೂ ದೆಹಲಿಗೆ ಹೋಗಬೇಕಾಗುತ್ತದೆ. ಶಾಸಕರು ತಮ್ಮ ತಮ್ಮ ಕೆಲಸಗಳಿಗೆ ದೆಹಲಿಗೆ ಹೋಗಿದ್ದಾರೆ. ಕ್ರಾಂತಿ ವಿಚಾರಕ್ಕೆ ಹೋಗಿದ್ದಾರೆ ಎನ್ನುವುದು ತಪ್ಪು ಕಲ್ಪನೆ. ಹೋಗುವವರನ್ನು ಬೇಡ ಅಂತೀರಾ ಎಂದು ಮರು ಪ್ರಶ್ನಿಸಿದರು.

ಕ್ರಾಂತಿ ಎನ್ನುವುದು ಮಾಧ್ಯಮ ಸೃಷ್ಟಿ

ಕಲಬುರಗಿ: ಡಿಸಿಎಂ ಡಿ.ಕೆ.ಶಿವಕುಮಾರ್ ಬಣದ ಸಚಿವರು ಮತ್ತು ಶಾಸಕರ ದೆಹಲಿ ಭೇಟಿ, ಹಾಗೂ ಅಧಿಕಾರ ಹಂಚಿಕೆ ಕುರಿತ ಲಾಬಿ ವಿಚಾರವನ್ನು ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಸಾರಾಸಗಟಾಗಿ ತಳ್ಳಿ ಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಪುಟ ಪುನರ್ ರಚನೆ, ನವೆಂಬರ್ ಕ್ರಾಂತಿ ಎಲ್ಲವೂ ಕೇವಲ ಮಾಧ್ಯಮಗಳ ಸೃಷ್ಟಿ. ವಾಸ್ತವದಲ್ಲಿ ಇಂತಹ ಯಾವುದೇ ಚರ್ಚೆ ಆಗಿಲ್ಲ. ಈ ಬಗ್ಗೆ ಯಾವುದೇ ಗೊಂದಲ ಬೇಡ. ಡಿಕೆಶಿ ಬಣದ ಶಾಸಕರ ದೆಹಲಿ ಪರೇಡ್ ಇಲ್ಲ, ಏನು ಇಲ್ಲ. ಇವೆಲ್ಲವೂ ಮಾಧ್ಯಮಗಳ ಸೃಷ್ಟಿ. ಮುಖ್ಯಮಂತ್ರಿಗಳು ಸಹ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಗೊಂದಲಗಳನ್ನು ಸೃಷ್ಟಿ ಮಾಡುತ್ತಿರುವುದು ಮಾಧ್ಯಮಗಳೇ ಎಂಬುದು ನನ್ನ ಭಾವನೆ ಎಂದು ಹೇಳಿದರು.

ಮಂತ್ರಿಮಂಡಲ ಪುನರ್ ರಚನೆ ಮಾಡುವುದು ಮುಖ್ಯಮಂತ್ರಿ ಅವರ ಪರಮಾಧಿಕಾರ. ಆದರೆ, ನಮ್ಮ ಪಕ್ಷದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಹೈಕಮಾಂಡ್ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುತ್ತಾರೆ. ಯಾವ ಶಾಸಕರು ಬೆಂಗಳೂರು-ದೆಹಲಿಯಲ್ಲಿ ಏನು ನಡೆಯುತ್ತಿದೆಯೋ ನನಗೆ ಗೊತ್ತಿಲ್ಲ, ನಾನು ಕಲಬುರಗಿಯಲ್ಲಿದ್ದೇನೆ. ಬದಲಾವಣೆಯ ಬಗ್ಗೆ ಯಾವುದೇ ಅಭಿಪ್ರಾಯ ಕೊಡುವುದು ನನ್ನ ಕೆಲಸವಲ್ಲ ಎಂದ ಅವರು, ಕೆಲವರು ವೈಯಕ್ತಿಕ ಅಥವಾ ಮಂತ್ರಿ ಸ್ಥಾನಕ್ಕಾಗಿ ಮನವಿ ಮಾಡಲು ತೆರಳಿರಬಹುದು, ಅದರಲ್ಲಿ ತಪ್ಪೇನಿಲ್ಲ ಎಂದು ಸ್ಪಷ್ಟಪಡಿಸಿದರು.

ತೀರ್ಮಾನ ಪಕ್ಷದ ಹೈಕಮಾಂಡ್ ಮಾತ್ರ

ಕೋಲಾರ: ಹೈಕಮಾಂಡ್ ನೋಡಲು ಕೆಲ ಶಾಸಕರು ಹೋಗಿರಬಹುದು. ಆದರೆ, ನಮ್ಮ ಪಕ್ಷದಲ್ಲಿ ತೀರ್ಮಾನ ಕೈಗೊಳ್ಳುವುದು ಹೈಕಮಾಂಡ್ ಮಾತ್ರ ಎಂದು ಸಚಿವ ಬೈರತಿ ಸುರೇಶ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ

ಆಗಿ ಯಾರಿರಬೇಕು. ಯಾರನ್ನು ಇಳಿಸಬೇಕು ಎಂಬುದನ್ನು ದೊಡ್ಡವರು ನಿರ್ಧಾರ ಮಾಡುತ್ತಾರೆ. ನಾನು, ಕೊತ್ತೂರು ಮಂಜುನಾಥ್, ರೂಪ ಕಲಾ ಶಶಿಧರ್ ಹೇಳಲು ಆಗುತ್ತದೆಯೇ ಎಂದರು.

ದೆಹಲಿಗೆ ಹೋಗಿರುವವರನ್ನು ಮಾಧ್ಯಮದವರು ಪ್ರಶ್ನಿಸಬೇಕು. ನಾವೂ ಅವರ ರೀತಿ ಶಾಸಕರು ಅಷ್ಟೆ. ಕೆಲಸವಿದ್ದಾಗಲೆಲ್ಲಾ ನಾವೂ ದೆಹಲಿಗೆ ಹೋಗುತ್ತಿರುತ್ತೇವೆ. ಅಲ್ಲದೇ, ಅಭಿವೃದ್ಧಿ ಕೆಲಸ ಮಾಡಿಸಿ ಕೊಳ್ಳಲು ಸಿಎಂ, ಡಿಸಿಎಂ ಬಳಿಯೂ ಹೋಗುತ್ತಿರುತ್ತೇವೆ. ಅದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಡಿ.ಕೆ. ಶಿವಕುಮಾರ್ ಭೇಟಿ ಮಾಡುತ್ತಿರುವ ಕುರಿತ ಪ್ರಶ್ನೆಗೆ, ಖರ್ಗೆ ಅವರ ಭೇಟಿ ವಿಚಾರ ನನಗೆ ಗೊತ್ತಿಲ್ಲ. ಸಮಯ ಸಿಕ್ಕಿದರೆ ನಾನು ಕೂಡ ಭೇಟಿ ಮಾಡುತ್ತೇನೆ. ಸಿದ್ದರಾಮಯ್ಯ ಕಡೆಯವರು ಹೋಟೆಲೊಂದರಲ್ಲಿ 100 ಕೊಠಡಿ ಕಾಯ್ದಿರಿಸಿರುವ ಮಾಹಿತಿ ಇದೆಯಲ್ಲಾ ಎಂಬ ಪ್ರಶ್ನೆಗೆ, ಅದಕ್ಕೆ ಸಾಕ್ಷಿ ಏನಿದೆ? ನೂರು ಕೊಠಡಿ ಆ ಹೋಟೆಲ್‌ನಲ್ಲಿ ಇವೆಯೇ? ಇಡೀ ಹೋಟೆಲ್ ಅನ್ನೇ ಕಾಯ್ದಿರಿಸಬೇಕಾಗುತ್ತದೆ ಎಂದು ಹೇಳಿದರು. ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ನಡೆದಿರುವ ಸಭೆ ಕುರಿತು ಪ್ರತಿಕ್ರಿಯಿಸಿ, ಯಾವಾಗ ಸಭೆ ನಡೆಸಿದರು? ನನಗೆ ಆ ವಿಚಾರ ಗೊತ್ತಿಲ್ಲ ಎಂದರು.

ಸಿಎಂ, ಡಿಸಿಎಂ ಕುಳಿತುಕೊಂಡು ಸಮಸ್ಯೆ ಬಗೆಹರಿಸಿಕೊಳ್ಳುವುದು ಸೂಕ್ತ

ಬೆಂಗಳೂರು: ನಾನು ಮುಖ್ಯಮಂತ್ರಿ ಅಥವಾ ಕೆಪಿಸಿಸಿ ಅಧ್ಯಕ್ಷನಾಗಲು ಹೊರಟಿಲ್ಲ. ಕರ್ನಾಟಕದಲ್ಲಿ ಆಗುತ್ತಿರುವ ಗೊಂದಲಗಳ ಬಗ್ಗೆ ಸೂಕ್ತ ಸಮಯದಲ್ಲಿ ಪಕ್ಷದ ವರಿಷ್ಠರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಸಚಿವ ಸತೀಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿಗಳಿಗೆ ಹೇಳುವಷ್ಟು ದೊಡ್ಡವನಲ್ಲ. ಇಬ್ಬರೂ ನಾಯಕರು ಕುಳಿತುಕೊಂಡು ಸಮಸ್ಯೆ ಬಗೆಹರಿಸಿಕೊಳ್ಳುವುದು ಸೂಕ್ತ. ಅನಗತ್ಯವಾಗಿ ಬಿಜೆಪಿಗರು ಈ ಗೊಂದಲವನ್ನು ಮುಂದಿಟ್ಟುಕೊಂಡು ಚರ್ಚಿಸುತ್ತಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಗೊಂದಲವನ್ನು ಬಗೆಹರಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಮೊದಲಿಗೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಕೂತು ಈ ಗೊಂದಲ ಬಗೆಹರಿಸಿಕೊಳ್ಳುವ ಬಗ್ಗೆ ಚರ್ಚಿಸಲಿ. ಒಂದು ವೇಳೆ ಇಲ್ಲಿ ಬಗೆಹರಿಯದಿದ್ದರೆ ದೆಹಲಿ ಹೋಗಲಿ. ಪ್ರಾಥಮಿಕ ಹಂತದಲ್ಲಿಯೇ ಸಮಸ್ಯೆ ಬಗೆಹರಿದರೆ ದೆಹಲಿಗೆ ಹೋಗುವ ಅಗತ್ಯವೇ ಬೀಳುವುದಿಲ್ಲ ಎಂದರು. ಡಿ.ಕೆ ಶಿವಕುಮಾರ್ ಬಣದ ಶಾಸಕರು ದೆಹಲಿಗೆ ತೆರಳಿರುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಸತೀಶ್ ಜಾರಕಿಹೊಳಿ, ಶಾಸಕರು ದೆಹಲಿಗೆ ಹೋಗಿರುವುದು ಗೊತ್ತಿಲ್ಲ. ನಾವು ದೆಹಲಿಗೆ ಹೋಗಿ ಹೇಳಿದ ಕೂಡಲೇ ಏನು ಬದಲಾಗಲ್ಲ. ಏನು ಮಾಡಬೇಕು ಎಂದು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ನಾಯಕರೇ ಅಂತಿಮವಾಗಿ ತೀರ್ಮಾನ ಮಾಡಬೇಕು ಎಂದರು.

ಇನ್ನು ಕರ್ನಾಟಕದ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಯನ್ನು ಪಕ್ಷದ ಹೈಕಮಾಂಡ್ ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಯಾವ ಸಮಯದಲ್ಲಿ ಯಾವ ನಿರ್ಧಾರ ತಗೆದುಕೊಳ್ಳಬೇಕು ಎನ್ನುವ ಬಗ್ಗೆ ಪಕ್ಷ ನಾಯಕರು ತೀರ್ಮಾನಿಸುತ್ತಾರೆ. ಏನೇ ನಿರ್ಧಾರವಾಗುವುದಿದ್ದರೂ ಅದನ್ನು ಪಕ್ಷದ ಹೈಕಮಾಂಡ್ ನಿರ್ಧರಿಸುತ್ತಾರೆ. ಈ ವಿಷಯದಲ್ಲಿ ನಾನು ಹೈಕಮಾಂಡ್ ನಾಯಕರಿಗೆ ಹೇಳುವಷ್ಟು ದೊಡ್ಡವನಲ್ಲ. ದೆಹಲಿ ನಾಯಕರು ಸೂಕ್ತ ಸಮಯದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಸಮಾನ ಮನಸ್ಕ ಸಚಿವರು, ನಾಯಕರು ಊಟಕ್ಕೆ ಸೇರಿರುವುದರಲ್ಲಿ ಹೊಸತಿಲ್ಲ. ಕೆಲ ತಿಂಗಳಲ್ಲಿ 15ಕ್ಕೂ ಹೆಚ್ಚು ಬಾರಿ ಒಟ್ಟಿಗೆ ಸೇರಿ ಊಟ ಮಾಡಿದ್ದೇವೆ. ಈ ಮೊದಲೇ ಊಟಕ್ಕೆ ಸೇರೋಣವೆಂದು ಮಾತನಾಡಿಕೊಂಡಿದ್ದೇವು. ಅದಕ್ಕೆ ಸೇರಿದ್ದೇವೆ. ಇದರಲ್ಲಿ ಯಾವುದೇ ವಿಶೇಷತೆ ಇಲ್ಲ. ಆ ಸಭೆಯಲ್ಲಿ ರಾಜಕೀಯ ಚರ್ಚೆಯಾಗಿಲ್ಲ.

– **ಸತೀಶ್ ಜಾರಕಿಹೊಳಿ** ಸಚಿವ

ನಾಯಕತ್ವ ಬದಲಾವಣೆಗೆ ಶಾಸಕಾಂಗ ಸಭೆ ಕರೆಯಲಿ: ಬಸವರಾಜ ರಾಯರೆಡ್ಡಿ

ಬೆಂಗಳೂರು: ನಾಯಕತ್ವ ಬದಲಾವಣೆಯಾಗಬೇಕಿದ್ದರೆ ಅದನ್ನು ಮೊದಲು ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುತ್ತದೆ. ಆದರೆ ಈ ರೀತಿಯ ಯಾವುದೇ ಚರ್ಚೆಯಾಗದಿದ್ದರೂ ಬದಲಾವಣೆ ಎನ್ನುವ ಗೊಂದಲ ಸೃಷ್ಟಿಸುತ್ತಿರುವುದು ಸರಿಯಲ್ಲ ಎಂದು ಹಿರಿಯ ಶಾಸಕ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2023ರ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ಬಳಿಕ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಸಿದ್ದರಾಮಯ್ಯ ಅವರನ್ನು ನಮ್ಮ ನಾಯಕರಾಗಿ ಆಯ್ಕೆ ಮಾಡಿ ಮುಖ್ಯಮಂತ್ರಿ ಮಾಡಲಾಗಿದೆ. ಸಿಎಲ್‌ಪಿ ಸಭೆಯಲ್ಲಿ ಎಲ್ಲಿಯೂ ಅಧಿಕಾರ ಹಂಚಿಕೆ, ಎರಡುವರೆ ವರ್ಷದ ಅಧಿಕಾರ ಹಸ್ತಾಂತರ ಎನ್ನುವ ಚರ್ಚೆಗಳು ನಡೆದಿಲ್ಲ. ಆದ್ದರಿಂದ ಐದು ವರ್ಷಕ್ಕೆ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಲಾಗಿದೆ. ಈ ವಿಷಯದಲ್ಲಿ ಗೊಂದಲವೇಕೆ ಎಂದು ಪ್ರಶ್ನಿಸಿದ್ದಾರೆ.

ಕರ್ನಾಟಕದಲ್ಲಿ ಯಾವುದೇ ನವೆಂಬರ್ ಕ್ರಾಂತಿಯಾಗುವುದಿಲ್ಲ. ಒಂದು ವೇಳೆ ಬದಲಾವಣೆ ಅನಿವಾರ್ಯವಿದ್ದರೆ ಅದನ್ನು ಪಕ್ಷದ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ. ಅದಕ್ಕೂ ಮೊದಲು ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸುತ್ತಾರೆ. ಆದರೆ ಈವರೆಗೆ ಪಕ್ಷದ ಹೈಕಮಾಂಡ್ ಈ ವಿಷಯದಲ್ಲಿ ಯಾವುದೇ ಚರ್ಚೆ ನಡೆಸಿಲ್ಲ. ಆದರೂ ಬದಲಾವಣೆಯ ಮಾತುಗಳಿಂದ ಗೊಂದಲ ಸೃಷ್ಟಿಸಲಾಗುತ್ತಿದೆ ಎಂದರು.

ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಬಣವಿಲ್ಲ. ಡಿ.ಕೆ.ಶಿವಕುಮಾರ್ ಅವರು ಪಕ್ಷದ ಶಿಸ್ತಿನ ಸಿಪಾಯಿ, ಹುಟ್ಟು ಕಾಂಗ್ರೆಸಿಗ. ಆದ್ದರಿಂದ ಅವರು ಪಕ್ಷದ ವಿರುದ್ಧ ಮಾತನಾಡುವುದಿಲ್ಲ. ಕರ್ನಾಟಕ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಬಣ, ಡಿಕೆ ಬಣ ಎನ್ನುವುದಿಲ್ಲ. ಪಕ್ಷದ ಅಧ್ಯಕ್ಷರಾದ ಡಿಕೆ ನೇತೃತ್ವದಲ್ಲಿ ಪಕ್ಷ ಸಂಘಟನೆ ಹಾಗೂ ಸಿದ್ದರಾಮಯ್ಯ ನೇತೃತ್ವದಲ್ಲಿ ಸರಕಾರ ಕಾರ್ಯನಿರ್ವಹಿಸಲಿದೆ. ಸಿದ್ದರಾಮಯ್ಯ ಅವರು ಐದು ವರ್ಷ ಪೂರೈಸಲಿದ್ದಾರೆ.

– **ಬಸವರಾಜ ರಾಯರೆಡ್ಡಿ** ಸಿಎಂ ಆರ್ಥಿಕ ಸಲಹೆಗಾರ

ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ನೀಡಬೇಕು. ಸದ್ಯ ರಾಜ್ಯದಲ್ಲಿ ಇದೇ ವಿಚಾರ ಚರ್ಚೆಯಾಗುತ್ತಿದೆ. ಹೀಗಾಗಿ ಈ ಗೊಂದಲಗಳಿಗೆ ತೆರೆ ಎಳೆಯಿರಿ ಎಂದು ಶಾಸಕರ ನಿಯೋಗ ದೆಹಲಿಗೆ ಹೋಗಿದೆ. ಹೈಕಮಾಂಡ್ ಮುಂದೆ ಇದೇ ವಿಚಾರವನ್ನು ಅವರುಗಳು ಮಾತನಾಡುತ್ತಾರೆ ಎಂದು ಅವರಲ್ಲಿ ಇದ್ದ ಇಬ್ಬರು ನನಗೆ ಹೇಳಿದ್ದಾರೆ .

– **ಕದಲೂರು ಉದಯ್** ಮದ್ದೂರು ಶಾಸಕ

ವಿಶ್ವವಾಣಿ

ಸಂಪಾದಕೀಯ

ಯುದ್ಧ ಸನ್ನದ್ಧತೆಗೆ ಸಿಕ್ಕ ಬಲ

ಅಮೆರಿಕವು 'ಜಾವೆಲಿನ್ ಮಿಸ್ಸೈಲ್ ಸಿಸ್ಟಂ' ಮತ್ತು 'ಎಕ್ಸ್ ಕ್ಯಾಲಿಬರ್ ಪ್ರಾಜೆಕ್ಟೈಲ್ಸ್' ಎಂಬ ಯುದ್ಧೋಪಕರಣ ವ್ಯವಸ್ಥೆಗಳನ್ನು ಭಾರತಕ್ಕೆ ಮಾರಾಟ ಮಾಡಲು ತುದಿಗಾಲಲ್ಲಿ ನಿಂತಿದೆ ಎಂಬ ಸುದ್ದಿ ವರದಿಯಾಗಿದೆ. ಮತ್ತೊಂದೆಡೆ, ಭಾರತದ ಪರಮಾಪ್ತ ಮಿತ್ರ ರಷ್ಯಾ ದೇಶವು ತನ್ನ ಬಲು ಶಕ್ತಿಶಾಲಿಯಾದ 'ಸುಖೋಯ್ ಎಸ್‌ಯು-57ಇ' ಯುದ್ಧವಿಮಾನವನ್ನೂ, ಸಂಬಂಧಿತ ತಂತ್ರಜ್ಞಾನವನ್ನೂ ಭಾರತಕ್ಕೆ ಕೊಡಲು ಸಿದ್ಧವಾಗಿದೆ ಎಂದು ತಿಳಿದುಬಂದಿದೆ. ಜತೆಗೆ, ಭಾರತವು ಯಾವುದೇ ಶಸ್ತ್ರ, ವಿಮಾನಗಳನ್ನು ಕೇಳಿದರೂ ಕೊಡಲು ತಾನು ಸಿದ್ಧ ಎಂಬ ಭರವಸೆಯ ಮಾತು ರಷ್ಯಾದ ರಕ್ಷಣಾ ಕ್ಷೇತ್ರದ ಕಡೆಯಿಂದ ಹೊಮ್ಮಿದೆ. ಈ ಎರಡು ಪ್ರಸ್ತಾವನೆಗಳ ಪೈಕಿ ಅಮೆರಿಕದ್ದು 'ಪಕ್ಕಾ ಮಾರಾಟಗಾರನ ಚಿತ್ತಸ್ಥಿತಿ' ಆಗಿದ್ದರೆ, ರಷ್ಯಾ ದೇಶದ್ದು ವಾಡಿಕೆಯ ನಡೆ. ಅಂದರೆ ಅದು, ದ್ವಿಪಕ್ಷೀಯ ಮಿತ್ರತ್ವವನ್ನು ಮತ್ತಷ್ಟು ಬಲಪಡಿಸುವ ನಡೆಯಾಗಿದೆ ಎನ್ನಲಡ್ಡಿಯಿಲ್ಲ. ಒಟ್ಟಿನಲ್ಲಿ, ಭಾರತದ ರಕ್ಷಣಾ ಕೋಠಿಯೊಳಗೆ ತುಂಬಿಕೊಳ್ಳಲು ವೈವಿಧ್ಯಮಯ ಶಸ್ತ್ರಾಸ್ತ್ರಗಳು ಸನ್ನದ್ಧವಾಗಿವೆ ಎಂದಾಯಿತು. ಇದು ಅರ್ಥವಾಗಬೇಕಿರುವುದು 'ಮಗ್ಗುಲುಮುಳ್ಳು' ರಾಷ್ಟ್ರ ಎಂದೇ ಕರೆಯಲ್ಪಡುವ ಪಾಕಿಸ್ತಾನಕ್ಕೆ. ಬೆಂಕಿಕಡ್ಡಿ ಗೀರಿ ಓಡಿಹೋಗುವ ಚಿತ್ತಸ್ಥಿತಿಯ ಮತ್ತು ಉತ್ತರಕುಮಾರನ ಪೌರುಷದ ಪಾಕಿಸ್ತಾನವು, ಭಾರತವನ್ನು ಸುಖಾಸುಮ್ಮನೆ ಕೆಣಕದೆ ತನ್ನ ಪ್ರಜೆಗಳ ಹಿತರಕ್ಷಣೆಯಲ್ಲಿ ಇನ್ನಾದರೂ ತೊಡಗಲಿ ಎಂಬುದು ಸಹೃದಯಿಗಳ ಆಶಯ ಮತ್ತು ನಿರೀಕ್ಷೆ. ಆದರೆ, ಪಾಕಿಸ್ತಾನದ ಆಳುಗರೂ ಮತ್ತು ಮಿಲಿಟರಿಯ ಮಹಾಯೋಧರೂ ಈ ವಸ್ತುಸ್ಥಿತಿಯನ್ನು ಅರಿಯದೆ, ಭಾರತದ ಮಿಲಿಟರಿ ತಾಕತ್ತನ್ನು ಕೀಳಂದಾಜು ಮಾಡಿ, ಕಾಲು ಕೆರೆದುಕೊಂಡು ಯುದ್ಧಕ್ಕೆ ಆಹ್ವಾನಿಸುವ ಚಾಳಿಯನ್ನು ರೂಢಿಸಿಕೊಂಡುಬಿಟ್ಟಿದ್ದಾರೆ. ಅಮೆರಿಕ ಮತ್ತು ರಷ್ಯಾ ದೇಶಗಳು ಭಾರತದ ಸಮ್ಮುಖದಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಕಂಡಾದರೂ ಪಾಕಿಸ್ತಾನವು ಬಾಲ ಮುದುರಿಕೊಂಡಿದ್ದರೆ ಕ್ಷೇಮ..!

ಸೊಂಪಾದಕೀಯ

ಕ್ರೈಂ ಡೈರಿ ಸರ್ಕಲ್

ಪತ್ರಿಕೆಗಳಲ್ಲಿ, 'ಸಿನಿಮೀಯ ರೀತಿಯಲ್ಲಿ ದರೋಡೆ' ಅಂತ ಶೀರ್ಷಿಕೆಯನ್ನು ಹಲವು ಬಾರಿ ನೋಡಿರ್ತೀವಿ. ಹಾಗೆ ನಿಜಕ್ಕೂ ಸಿನಿಮಾದ ರೀತಿಯಲ್ಲೇ ಮೊನ್ನೆ ದರೋಡೆ ಆಗಿದ್ದು ಬೆಂಗಳೂರಿನ ಡೈರಿ ಸರ್ಕಲ್ ಬಳಿ. ಡಾ. ರಾಜ್‌ಕುಮಾರ್ ಅಭಿನಯದ 'ದಾರಿ ತಪ್ಪಿದ ಮಗ' ಚಿತ್ರವನ್ನು ನೋಡಿದ್ರೇನೋ ಈ ಕಳ್ಳರು ಎನ್ನುವಂತೆ ಅದರಿಂದ ಸ್ಫೂರ್ತಿ ಪಡೆದವರಂತೆ ಎಟಿಎಂಗೆ ಹಣ ಹಾಕುವ ಸಿಬ್ಬಂದಿಯನ್ನೇ ಯಾಮಾರಿಸಿ, ಎಲ್ಲರ ಎದುರಲ್ಲೇ ಬ್ಯಾಂಕಿನ ಅಧಿಕಾರಿಗಳು ಎಂಬಂತೆ ನಟಿಸಿ, 7 ಕೋಟಿ ರುಪಾಯಿ ಹಣವನ್ನು ದೋಚಿ ಪರಾರಿ ಆಗಿದ್ದರು. 'ಏಳು ಕೊಂಡಲವಾಡ ಗೋವಿಂದ ಗೋವಿಂದ' ಅಂತ 7 ಕೋಟಿ ಹಣವನ್ನ ಗೋವಿಂದ ಮಾಡಿ ಪರಾರಿ ಆಗಿದ್ದ ಇವರ ಪೈಕಿ ಇಬ್ಬರು ಈಗ ತಗಲಾಕಿಕೊಂಡಿದ್ದಾರೆ ಮತ್ತು

ಅವರು ಕೃತ್ಯಕ್ಕೆ ಬಳಸಿದ ವಾಹನ ಕೂಡಾ ಸಿಕ್ಕಿದೆ. ಕಳ್ಳತನಕ್ಕೆ ಬಳಕೆ ಆದ ಇನ್ನೋವಾ ಕಾರಿನ ನಂಬರ್ ಪ್ಲೇಟ್ ಅನ್ನು ಹಲವಾರು ಸಲ ಬದಲಾಯಿಸಿ ದರೋಡೆ ಮಾಡಿರೋದು ಬೆಳಕಿಗೆ ಬಂದಿದೆ. ಹಗಲೊತ್ತಲ್ಲೇ ದರೋಡೆ ಮಾಡಿರೋದ್ರಿಂದ ಬೆಳಕಿಗೆ ಬರೋದು ತಡ ಏನೂ ಆಗಲಿಲ್ಲ ಬಿಡಿ. ಅಂದಹಾಗೆ ದರೋಡೆ ಮಾಡುವಾಗ ಬಳಸಿದ ಈ ನಂಬರ್ ಪ್ಲೇಟ್‌ನಲ್ಲಿ ಇದ್ದಿದ್ದು ಬೆಂಗಳೂರಿನ ಇನ್ಯಾರದ್ದೋ ಕಾರಿನ ನಂಬರ್ ಅಂತೆ. ಎಸ್ಕೇಪ್ ಆದಮೇಲೆ ಮತ್ತೆ ಬೇರೆ ನಂಬರ್ ಬಳಸಿದ್ದಾರೆ ಖದೀಮರು. ಕಳ್ಳತನ ಮಾಡಿ ಸಿಕ್ಕಿ ಹಾಕಿಕೊಂಡ ಮೇಲೆ ಪ್ಲೇಟ್ ಬದಲಾಯಿಸಿ ಮಾತಾಡೋದಕ್ಕಿಂತ ಮೊದಲೇ ಹುಷಾರಾಗಿ ನಂಬರ್ ಪ್ಲೇಟ್ ಬದಲಾಯಿಸೋಣ ಅಂತ ಇವರು ದೂರಾಲೋಚನೆ ಮಾಡಿರಬಹುದು. ಆದರೆ ಇಲ್ಲಿ ಆಘಾತಕಾರಿ ಸಂಗತಿ ಎಂದರೆ ಈ ಕೃತ್ಯದಲ್ಲಿ ಪೊಲೀಸರೇ ಭಾಗಿ ಆಗಿರುವ ಶಂಕೆ ಇರೋದು. ಡೈರಿ ಸರ್ಕಲ್‌ನಂಥ ಜನನಿಬಿಡ ಪ್ರದೇಶದಲ್ಲಿ ಹಾಡಹಗಲೇ ಕ್ರೈಂ ಡೈರಿ ಸೇರುವಂಥ ದರೋಡೆ ಮಾಡಬೇಕು ಅಂದ್ರೆ, ಅದಕ್ಕೆ ಪೊಲೀಸ್ ಡೈರಿಯಲ್ಲಿ ಇರೋರು ಸಹಾಯ ಮಾಡಿರ್ತಾರೆ ಅನ್ನೋ ಅನಿಸಿಕೆ ಈಗ ನಿಜ ಆಗಿದೆ. ಆದ್ರೆ ಹೀಗೆ ಕಳ್ಳರ ಆಟದಲ್ಲಿ ಪೊಲೀಸರ ಪಾಲೂ ಇದೆ ಅಂತ ಗೊತ್ತಾದ ಮೇಲೆ 'ಕಳ್ಳ ಪೊಲೀಸ್ ಆಟ' ಆಡೋದು ಇಷ್ಟೊಂದು ಸುಲಭನಾ ಅಂತ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವ ಹಾಗಾಗಿರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಐದಾರು ಪ್ಯಾರಗಳಲ್ಲಿ ಡಾ.ಕಲಾಂ

ಕೆಲವರನ್ನು ಅರ್ಥ ಮಾಡಿಕೊಳ್ಳಲು ಅವರ ಜತೆ ಇಪ್ಪತ್ತು-ಮೂವತ್ತು ವರ್ಷ ಒಡನಾಡಬೇಕಿಲ್ಲ. ಮುಖತಃ ಭೇಟಿ ಮಾಡಿ ಅರ್ಧ ಗಂಟೆ ಮಾತಾಡಿದರೂ ಸಾಕು. ಅಂದಿನ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ಅವರು ನಿವೃತ್ತರಾಗುವುದಕ್ಕಿಂತ (2007ರಲ್ಲಿ) ಕೆಲ ದಿನಗಳ ಮೊದಲು, ಪತ್ರಕರ್ತ ಮತ್ತು ಸಾಹಿತಿ ಖುಷವಂತ್ ಸಿಂಗ್ ಅವರನ್ನು ಭೇಟಿ ಮಾಡಿದ್ದರು. ಆ ಭೇಟಿಯ ಬಗ್ಗೆ ಖುಷವಂತ್ ಸಿಂಗ್ ತಮ್ಮ ಅಂಕಣದಲ್ಲಿ ಬರೆದಿದ್ದರು. ಇತ್ತೀಚೆಗೆ ನನ್ನ ಹಳೆಯ ಕಡತದಲ್ಲಿ ಸಿಂಗ್ ಬರೆದ ಆ ಬರಹ ಸಿಕ್ಕಿತು. ಅವರು ಡಾ.ಕಲಾಂ ಕುರಿತು ಹೀಗೆ ಬರೆದಿದ್ದರು: ಇನ್ನು ಕೆಲವೇ ತಿಂಗಳುಗಳಲ್ಲಿ ಭಾರತದ ಹನ್ನೊಂದನೇ ರಾಷ್ಟ್ರಪತಿಯಾಗಿ ಐದು ವರ್ಷ ಪೂರ್ಣ ಅವಧಿ ಅಧಿಕಾರ ಪೂರೈಸಲಿರುವ ಡಾ.ಅಬ್ದುಲ್ ಕಲಾಂ ನಿವೃತ್ತರಾಗಲಿದ್ದಾರೆ. ಈ ಹುದ್ದೆಯನ್ನು ಅಲಂಕರಿಸಿದ ಮುಸ್ಲಿಮರ ಪೈಕಿ ಡಾ.ಕಲಾಂ ಮೂರನೆಯವರಾಗಿದ್ದಾರೆ. ಸೆಕ್ಯುಲರ್ ಡೆಮಾಕ್ರಸಿ ಎಂದು ಭಾರತ ಕರೆಯಿಸಿಕೊಂಡಿದ್ದು ಸಾರ್ಥಕವಾಯಿತು. ಅಲ್ಲದೇ ಇದರಿಂದ ನಮ್ಮ ನೆರೆಹೊರೆಯವರಿಗೆ ಒಂದು ಉತ್ತಮ ಸಂದೇಶವೂ ಹೋದಂತೆ ಆಗಿದೆ. ನಿವೃತ್ತರಾದ ಬಳಿಕ ಡಾ.ಕಲಾಂ ತಮ್ಮ ವೈಜ್ಞಾನಿಕ ಸಂಶೋಧನೆಯನ್ನು ಮುಂದುವರಿಸುತ್ತಾರಾ, ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ ಸೇವೆ ಕೈಗೆತ್ತಿಕೊಳ್ಳುತ್ತಾರಾ ಅಥವಾ ಸನ್ಯಾಸತ್ವ ಹೊಂದುತ್ತಾರಾ ಎಂಬ ಬಗ್ಗೆ ನನಗೇನೂ ಗೊತ್ತಿಲ್ಲ. ನನಗೆ ಅವರ ಜತೆ ಅರ್ಧ ಗಂಟೆ ಕಳೆಯುವ ಸದವಕಾಶ ಸಿಕ್ಕಿತ್ತು. ಅವರು ನಾನು ವಾಸಿಸುವ ಅಪಾರ್ಟ್‌ಮೆಂಟಿಗೆ ಬಂದಿದ್ದು ನನಗೆ ನೀಡಿದ ಗೌರವ ಎಂದು ಭಾವಿಸುವೆ. ನನ್ನಂಥ ಪೆನ್ನು-ಪುಸ್ತಕ ನೆಚ್ಚಿಕೊಂಡಿರುವವನ ಮನೆಗೆ ಈ ದೇಶದ ಅತ್ಯುನ್ನತ ಹುದ್ದೆಯಲ್ಲಿರುವ, ರಾಷ್ಟ್ರದ ಮುಖ್ಯಸ್ಥರೊಬ್ಬರು ಬರುವುದು ಅವರ ನಮ್ರತೆಯನ್ನು ತೋರಿಸುತ್ತದೆ. ನಮ್ಮಿಬ್ಬರ ನಡುವೆ ಸಾಮಾನ್ಯ ಎನಿಸುವ ಸಂಗತಿಗಳು ಕೆಲವೇ ಕೆಲವಿರಬಹುದು. ಅವರು ತಮಿಳಿಗ. ನನಗೆ ವಣಕ್ಕಮ್ ಮತ್ತು ಅಯ್ಯಯ್ಯೋ ಎಂಬ ಎರಡು ತಮಿಳು ಪದಗಳು ಮಾತ್ರ ಗೊತ್ತು. ವಿಜ್ಞಾನಿಯಾದರೂ ಅವರು ಅಪ್ಪಟ ಧಾರ್ಮಿಕ ವ್ಯಕ್ತಿ. ನಾನು ನಾಸ್ತಿಕ. ವಿಜ್ಞಾನ ಮತ್ತು ಧರ್ಮ ಒಟ್ಟಿಗೆ ಹೋಗಲಾರವು ಎಂದು ನಂಬಿದವನು ನಾನು. ಒಂದು ಕಾರಣ (Reason) ಆಧರಿತ, ಮತ್ತೊಂದು ನಂಬಿಕೆ (Faith) ಆಧರಿತ. ಅವರ ಬರಹಗಳನ್ನು ಓದಿದ ಮತ್ತು ಅವರೊಂದಿಗೆ ಮಾತಾಡಿದ ನಂತರ ನನಗೆ ಮಹಾತ್ಮ ಗಾಂಧಿಯವರ ಧಾರ್ಮಿಕ ನಂಬಿಕೆಗಳಂತೆ ಡಾ. ಕಲಾಂ ಅವರದ್ದೂ ಅದೇ ರೀತಿಯದ್ದು ಎಂದೆನಿಸಿತು. ಬಾಪು ಅವರ ಎಲ್ಲ ವಿಚಾರಗಳನ್ನು ಸ್ವೀಕರಿಸಲು ಅಸಮರ್ಥನಾದರೂ, ನಾನು ನನ್ನನ್ನು ಗಾಂಧಿವಾದಿ ಎಂದು ಕರೆದುಕೊಳ್ಳುತ್ತೇನೆ. ಡಾ.ಕಲಾಂ ಅವರು ವಿಜ್ಞಾನ ಮತ್ತು ಧರ್ಮದ ಮಧ್ಯೆ ಯಾವ ವೈರುಧ್ಯ ಅಥವಾ ಸಂಘರ್ಷಗಳನ್ನು ಕಾಣುವುದಿಲ್ಲ. ಅವರೊಂದಿಗೆ ಮಾತಾಡುವಾಗ, 'ಸ್ವರ್ಗ ಮತ್ತು ನರಕ ಎಂಬುದಿಲ್ಲ. ಅವೇನಾದರೂ ಇದ್ದರೆ ನಮ್ಮ ಮನಸ್ಸಿನಲ್ಲಿ ಮಾತ್ರ' ಎಂದು ಹೇಳಿದರು. ಹಾಗಾದರೆ ಡಾ.ಕಲಾಂ ಅವರ ಪ್ರಕಾರ ದೇವರು ಅಂದರೆ ಯಾರು? ಈ ಪ್ರಶ್ನೆಗೆ ಅವರಲ್ಲಿ ಸ್ಪಷ್ಟತೆ ಇದೆ. ಈಶ್ವರ- ಅಲ್ಲಾಹ್, ಖುದಾ-ಭಗವಾನ್ ಮತ್ತು ಮಸೀದಿ-ದೇವಾಲಯ ಎಂಬ ದ್ವಂದ್ವ ಇಲ್ಲ. ಪ್ರೀತಿಯೊಂದೇ ಅವರ ಉದ್ದೇಶ. ಆದರೆ ನಾವು ದ್ವೇಷಕ್ಕೆ ನಮ್ಮ ಶಕ್ತಿಯನ್ನು ವ್ಯಯಿಸುತ್ತಿದ್ದೇವೆ. ನಮ್ಮ ನಮ್ಮ ಸಂತಸವನ್ನು ಕೊಂದು ಜೀವನವನ್ನು ಹೈರಾಣ ಮಾಡಿಕೊಳ್ಳುತ್ತಿದ್ದೇವೆ. ಖುದಾ ಮತ್ತು ರಾಮ ಇಬ್ಬರೂ ಒಂದೇ. ಪ್ರೀತಿಯಲ್ಲಿ ಮಾತ್ರ ಇವರಿಬ್ಬರೂ ಒಂದೇ ಆಗುತ್ತಾರೆ. ಇದನ್ನು ಡಾ.ಕಲಾಂ ಒಂದು ಕವಿತೆ ಮೂಲಕ ವಿವರಿಸಿದರು. ಡಾ.ಕಲಾಂ ಅವರ ದೈವತ್ವ ಕಲ್ಪನೆಗೆ ಯಾವ ರಾಷ್ಟ್ರೀಯವಾದಿಯೂ ತಕರಾರು ತೆಗೆಯಲಾರ. ಕೆಲವರು ದೇವರು ಅಂದ್ರೆ ಸತ್ಯ ಎಂದು ಪ್ರತಿಪಾದಿಸುತ್ತಾರೆ. ಉಳಿದವರು ಪ್ರೀತಿ ಅಂತಾರೆ. ಆದರೆ ಡಾ.ಕಲಾಂ ಪ್ರಕಾರ ದೇವರೆಂದರೆ ಕಾರುಣ್ಯ. ಡಾ.ಕಲಾಂ ವ್ಯಕ್ತಿತ್ವವನ್ನು ಖುಷವಂತ್ ಸಿಂಗ್ ಕೇವಲ ಐದಾರು ಪ್ಯಾರಗಳಲ್ಲಿ ಕಟ್ಟಿಕೊಟ್ಟಿದ್ದರು.

ರೋಮ್‌ನ ಭೂಮಿಯೊಳಗಿನ ಪ್ರಪಂಚ

ಯುರೋಪಿನಲ್ಲಿ ಕುಡಿಯಲು 'ಮಿನರಲ್ ವಾಟರ್' ಅನ್ನು ಕೇಳಿದರೆ ನಗೆಪಾಟಲಿಗೆ ಗುರಿಯಾದ ಹಾಗೆ, ಅಲ್ಲಿನ ಬಹುತೇಕ ದೇಶಗಳಲ್ಲಿ ಶೌಚಾಲಯದಲ್ಲಿ ಬರುವ ನೀರನ್ನೂ ಕುಡಿಯಬಹುದು. ರೋಮ್ ನಗರದ ಬಹುತೇಕ ಗಲ್ಲಿಗಳಲ್ಲಿ ಕಾಣಸಿಗುವ ನಲ್ಲಿಗಳಲ್ಲಿನ, ಕಾರಂಜಿಗಳಲ್ಲಿನ ನೀರೂ ಕುಡಿಯಲು ಯೋಗ್ಯವಾಗಿವೆ.

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಪುರಾತನ ವಾಸ್ತುಶಿಲ್ಪಗಳಿಗೆ ಪ್ರಸಿದ್ಧವಾಗಿರುವ ಮಾಯಾನಗರಿ ರೋಮ್. ಈ ನಗರದ ಬೀದಿಗಳಲ್ಲಿ ಓಡಾಡುವುದು ಅದ್ಭುತ ಅನುಭವವೇ ಸರಿ. ರೋಮ್ ನಗರದಲ್ಲಿ ನೂರಾರು ವರ್ಷಗಳಿಂದ ಗಟ್ಟಿಯಾಗಿ ನೆಲೆಯೂರಿರುವ ಪ್ರಾಚೀನ ಮನೆಗಳ ಮೆಟ್ಟಿಲುಗಳ ಮೇಲೆ ಓಡಾಡುವುದು ಮತ್ತೊಂದು ರೀತಿಯ ಅದ್ಭುತ ಅನುಭವ. ರೋಮ್ ನಗರದ ಹಲವು ಮನೆಗಳ ಮುಖ್ಯ ದ್ವಾರಗಳು ಕಡಿಮೆಯೆಂದರೂ ಒಂದು ಕ್ವಿಂಟಾಲ್ ತೂಕವಿರುತ್ತವೆ. ಕ್ರಿಸ್ತಶಕ 80ರಲ್ಲಿ ರೋಮನ್ನರು ತಮ್ಮ ಸಾಮ್ರಾಜ್ಯ ವಿಸ್ತರಣೆಯ ಜತೆಗೆ ಪ್ರಜೆಗಳ ನಾಗರಿಕತೆಯ ಬಗ್ಗೆಯೂ ಹೆಚ್ಚಿನ ಗಮನ ಹರಿಸಿದ್ದರು. ಒಂದು ಅಂದಾಜಿನ ಪ್ರಕಾರ, ಕ್ರಿಸ್ತಶಕ 80ರ ದಶಕದಲ್ಲಿ ರೋಮ್ ನಗರದ ಜನಸಂಖ್ಯೆಯು ಹತ್ತು ಲಕ್ಷವಿತ್ತು. ಎರಡು ಸಾವಿರ ವರ್ಷಗಳ ಹಿಂದೆ ಹತ್ತು ಲಕ್ಷ ಜನಸಂಖ್ಯೆಯ ಬೃಹತ್ ನಗರವೊಂದಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸುಲಭದ ಕೆಲಸವಾಗಿರಲಿಲ್ಲ. ಇಂದಿನ ಕಾಲದ ಮೆಟ್ರೋ ನಗರಗಳಿಗೆ ಸರಿಸಮಾನವಾದ ಮೂಲಭೂತ ಯೋಜನೆಗಳನ್ನು ರೋಮನ್ನರು ತಮ್ಮ ಪ್ರಜೆಗಳಿಗೆ ಬಹಳ ಹಿಂದೆಯೇ ನೀಡಿದ್ದರೆಂಬುದಕ್ಕೆ, ನಿರ್ಮಾಣವಾಗಿದ್ದ ಹಲವು ಯೋಜನೆಗಳ ಕುರುಹು ಇಂದಿಗೂ ಅಲ್ಲಿ ಕಾಣಸಿಗುತ್ತವೆ. ರೋಮನ್ನರು ವಾಸ್ತುಶಿಲ್ಪಗಳಿಗೆ ಹೆಸರುವಾಸಿಯಾದವರು. ವಿವಿಧ ರೀತಿಯ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ರೋಮನ್ನರು ಪ್ರಸಿದ್ಧರಾಗಿದ್ದರು. ಇಂದಿಗೂ ಇಟಾಲಿಯನ್ ಶೈಲಿಯ ಬೃಹತ್ ಮನೆಗಳು, ಇಟಾಲಿಯನ್ ಅಡುಗೆ ಮನೆಗಳು ಜಗತ್ತಿನೆಲ್ಲೆಡೆ ಪ್ರಸಿದ್ಧವಾಗಿವೆ. ಎರಡು ಸಾವಿರ ವರ್ಷಗಳ ಹಿಂದೆ ರೋಮನ್ನರು ಸಿಮೆಂಟ್ ಕಾಂಕ್ರೀಟ್ ಬಳಸುತ್ತಿದ್ದರು. ರೋಮನ್ ಕಾಂಕ್ರೀಟ್ ಇಂದಿಗೂ ಜಗತ್ಪ್ರಸಿದ್ಧವಾಗಿದೆ. ರೋಮಿನಲ್ಲಿ ತಯಾರಿಸುವ ಕಾಂಕ್ರೀಟ್ ಮಿಶ್ರಣ ಜಗತ್ತಿನಲ್ಲಿ ಎಲ್ಲಿಯೂ ಸಿಗುವುದಿಲ್ಲ. ಇದು ಇಂದಿಗೂ ಜಗತ್ತಿನ ಅತ್ಯಂತ ಬಲವಾದ ಕಾಂಕ್ರೀಟ್ ಮಿಶ್ರಣವಾಗಿದೆ. ಈ ಮಿಶ್ರಣಗಳನ್ನುಬಳಸಿ ಎರಡು ಸಾವಿರ ವರ್ಷಗಳ ಹಿಂದೆ ಕಟ್ಟಿದ ಕಟ್ಟಡಗಳು ರೋಮ್‌ನಲ್ಲಿ ಇಂದಿಗೂ ಗಟ್ಟಿಯಾಗಿ ನಿಂತಿವೆ. ಜ್ವಾಲಾಮುಖಿಯ ಬೂದಿ, ಸುಣ್ಣ, ಸಮುದ್ರದ ನೀರು, Tobermite (ರಾಸಾಯನಿಕ) ಬಳಸಿ ರೋಮನ್ ಕಾಂಕ್ರೀಟ್ ಅನ್ನು ತಯಾರಿಸಲಾಗುತ್ತದೆ. ಈ ಕಾಂಕ್ರೀಟ್ ಮಿಶ್ರಣ ಕೇವಲ 36 ಗಂಟೆಗಳಲ್ಲಿ ಗಟ್ಟಿಯಾಗುತ್ತದೆ. ಈ ವೈಜ್ಞಾನಿಕ ಸೂತ್ರವನ್ನು ರೋಮನ್ನರು ಎರಡು ಸಾವಿರ ವರ್ಷಗಳ ಹಿಂದೆ ಬಳಸಿ ನೂರಾರು ಕಟ್ಟಡಗಳನ್ನು ನಿರ್ಮಿಸಿದ್ದರು. ಕೆಲವು ವಿಜ್ಞಾನಿಗಳು ಇಂದಿನ ಕಾಲದಲ್ಲಿ ಈ ಮಿಶ್ರಣವನ್ನು ಬಳಸುವುದರಿಂದ ಕಟ್ಟಡಗಳಲ್ಲಿ ರಾಸಾಯನಿಕ ಪ್ರಕ್ರಿಯೆಯುಂಟಾಗಿ ಬಿರುಕು ಬಿಡಬಹುದೆಂದು ಹೇಳುತ್ತಾರೆ. ರೋಮನ್ನರಿಗೆ ಪ್ರಕೃತಿಯಲ್ಲಿ ಸಿಗುತ್ತಿದ್ದ ನೈಸರ್ಗಿಕ ಸಂಪನ್ಮೂಲಗಳು ತುಂಬಾ ಅನುಕೂಲಕರವಾಗಿದ್ದವು. ಈ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕಲೆ ರೋಮನ್ನರಿಗೆ ಚೆನ್ನಾಗಿ ತಿಳಿದಿತ್ತು. ಇಂದಿಗೂ ರೋಮ್ ನಗರದ ಹಲವು ಕಡೆಗಳಲ್ಲಿ ಎರಡು ಸಾವಿರ ವರ್ಷಗಳ ಹಿಂದೆ ರೋಮನ್ನರು ನೈಸರ್ಗಿಕ ಸಂಪನ್ಮೂಲಗಳನ್ನು ಅಗೆದು ತೆಗೆಯಲು ತೋಡಿದ್ದ ಗಣಿಗಳಿವೆ. ರೋಮ್ ನಗರದಲ್ಲಿ ಇಂದಿಗೂ ಜನರು ಓಡಾಡುವ ರಸ್ತೆಗಳ ಕೆಳಗೆ ಅದೆಷ್ಟೋ ಗಣಿಗಳಿವೆ, ಮನೆಗಳ ಕೆಳಗಿವೆ, ಮೆಟ್ರೋ ರೈಲುಗಳು ಸಂಚರಿಸುವ ಕಂಬಿಗಳ ಕೆಳಗೆ ಗಣಿಗಳಿವೆ. ಇಡೀ ರೋಮ್ ನಗರದಲ್ಲಿ ಇಂದಿಗೂ ಅಂದಾಜು 70 ಗಣಿಗಳು ಇದೆಯೆಂದು ಹೇಳಲಾಗುತ್ತದೆ. ಇವುಗಳ ಮೇಲೆ ರೋಮ್ ನಗರ ತನ್ನ ಪ್ರಾಚೀನತೆಯನ್ನು ಉಳಿಸಿಕೊಳ್ಳುವುದರ ಜತೆಗೆ ಆಧುನಿಕ ಅಭಿವೃದ್ಧಿಯನ್ನೂ ಕೈಗೊಂಡಿರುವುದು ವಿಶೇಷ.

ರೋಮನ್ನರ ವಾಸ್ತುಶಿಲ್ಪ ಹಾಗೂ ವೈಜ್ಞಾನಿಕ ಆವಿಷ್ಕಾರಗಳಿಗೆ ಅದ್ಭುತ ಸಾಕ್ಷಿಯೆಂಬಂತೆ ರೋಮ್ ನಗರದ ಹೃದಯಭಾಗದಲ್ಲಿದೆ Pantheon ದೇವಸ್ಥಾನ. ಕ್ರಿಸ್ತಶಕ 113ರಿಂದ 125ರ ನಡುವೆ ಕಟ್ಟಿರುವ ಈ ದೇವಸ್ಥಾನದ ವಾಸ್ತುಶಿಲ್ಪ ಇಂದಿಗೂ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಈ ದೇವಸ್ಥಾನದ ಪ್ರಮುಖ ಆಕರ್ಷಣೆ ದೇವಸ್ಥಾನದ ಮೇಲಿರುವ ಬೃಹತ್ Dome ಅಥವಾ ಗುಮ್ಮಟ. ಕಂಬಿಗಳಿಲ್ಲದೆ ವೃತ್ತಾಕಾರದ ಗುಮ್ಮಟವನ್ನು ಕಟ್ಟುವುದು ಸಾಧ್ಯವಿಲ್ಲದ ಕಾಲದಲ್ಲಿ ಕೇವಲ ಸಿಮೆಂಟ್ ಕಾಂಕ್ರೀಟ್ ಬಳಸಿ ಈ ಬೃಹತ್ ಗುಮ್ಮಟವನ್ನು ಕಟ್ಟಲಾಗಿದೆ. ಎರಡು ಸಾವಿರ

ವರ್ಷಗಳ ಹಿಂದೆ ನಿರ್ಮಿಸಿರುವ ಈ ಗುಮ್ಮಟ ಇಂದಿಗೂ ಜಗತ್ತಿನ ಅತಿ ದೊಡ್ಡ ಪುರಾತನ ಗುಮ್ಮಟವಾಗಿದೆ. ಸುಮಾರು 20 ಮೀಟರ್ ಸುತ್ತಳತೆಯ ಈ ಗುಮ್ಮಟವನ್ನು ಕಟ್ಟಲು ಸುತ್ತಲೂ ಎಂಟು ಕಂಬಗಳನ್ನು ಬಳಸಲಾಗಿದೆ. ಗುಮ್ಮಟದ ಕೆಳಗಿನ ಎಂಟು ಕಂಬಗಳ ಮೇಲೆ ಗುಮ್ಮಟದ ತೂಕವನ್ನು ಎಂಟು ದಿಕ್ಕುಗಳಿಂದಲೂ ಸಮತೋಲನವಾಗಿ ಇರುವಂತೆ ಈ ವಾಸ್ತುಶಿಲ್ಪವನ್ನು ನಿರ್ಮಿಸಲಾಗಿದೆ. ಈ ವೈಜ್ಞಾನಿಕ ವಿಧಾನದ ಫಲವಾಗಿ ಇಂದಿಗೂ ಕಂಬಿಗಳ ಸಹಾಯವಿಲ್ಲದೆ ಬೃಹತ್ ಗುಮ್ಮಟವು ಕೊಂಚವೂ ಹಾನಿಯಾಗದೆ ಸುಮಾರು ಎರಡು ಸಾವಿರ ವರ್ಷಗಳ ನಂತರವೂ ಗಟ್ಟಿಯಾಗಿ ನಿಂತಿದೆ.

ರೋಮ್ ನಗರಕ್ಕೆ ಬರುವ ಪ್ರತಿಯೊಬ್ಬ ಪ್ರವಾಸಿಗರು Colosseumಗೆ ಭೇಟಿ ನೀಡದೆ ಇರುವುದಿಲ್ಲ. ಕ್ರಿಸ್ತಶಕ 80ರ ದಶಕದಲ್ಲಿ ರೋಮನ್ನರು ಈ ಕ್ರೀಡಾಂಗಣವನ್ನು ನಿರ್ಮಿಸಿದ್ದರು. ಸುಮಾರು 60 ಸಾವಿರ ಜನರು ಕೂರಬಹುದಾದ ಬಹು ದೊಡ್ಡ ಕ್ರೀಡಾಂಗಣವಿದು. ಅಂದಿನ ಕಾಲದಲ್ಲಿ ವೀಕ್ಷಕರಿಗಾಗಿ ಸಾರ್ವಜನಿಕ ಶೌಚಾಲಯಗಳನ್ನು ಈ ಕ್ರೀಡಾಂಗಣದಲ್ಲಿ ಕಟ್ಟಲಾಗಿತ್ತು. ಶಕ್ತಿ ಪ್ರದರ್ಶಿಸಲು Gladiator ಗಳಿಗೆ ಬೃಹತ್ ವೇದಿಕೆಯನ್ನು ನಿರ್ಮಿಸಲಾಗಿತ್ತು. Gladiator ಗಳಿಗೆ ತಾವು ಸೆಣಸಾಡಿ ಕೊಲ್ಲಲು ಯಾವ ಪ್ರಾಣಿ ವೇದಿಕೆಯ ಮೇಲೆ ಬರುತ್ತದೆಯೆಂಬ ಊಹೆ ಇರುತ್ತಿರಲಿಲ್ಲ. ನೆಲಮಾಳಿಗೆಯಿಂದ ಅವರ ಮುಂದೆ ಯಾವ ಕಾಡುಮೃಗ ಬೇಕಾದರೂ ಬರಬಹುದಿತ್ತು. ನೆಲಮಾಳಿಗೆಯಲ್ಲಿ ಈ ಮೃಗಗಳನ್ನು ಮೇಲಕ್ಕೆ ಕಳುಹಿಸಲು Manual Lift ಗಳನ್ನು ರೋಮನ್ನರು ಬಳಸುತ್ತಿದ್ದರು. ಈ ಲಿಫ್ಟ್‌ಗಳು ಕೈಕೊಟ್ಟರೆ ಮೆಟ್ಟಿಲುಗಳ ಮೂಲಕ ಸೇವಕರು ಪಂಜರದೊಳಗಿನ ಕಾಡುಮೃಗಗಳನ್ನು ಮೇಲೆತ್ತಲು ವ್ಯವಸ್ಥೆಯನ್ನು ಮಾಡುತ್ತಿದ್ದರು. ಇಂದಿನ ಕಾಲದ ಕ್ರೀಡಾಂಗಣದಲ್ಲಿ ವಿಐಪಿಗಳು ಕುಳಿತುಕೊಳ್ಳುವ ವ್ಯವಸ್ಥೆ ಇರುವ ಹಾಗೆ, Colosseum ನಲ್ಲಿಯೂ ವಿಐಪಿಗಳಿಗಾಗಿ ಪ್ರತ್ಯೇಕ ಆಸನದ ವ್ಯವಸ್ಥೆಯನ್ನು ಮಾಡಲಾಗಿತ್ತು. ರೋಮ್ ನಗರದ ಮಧ್ಯಭಾಗದಲ್ಲಿರುವ ಈ ವಾಸ್ತುಶಿಲ್ಪವು ಜಗತ್ತಿನ ಪ್ರವಾಸಿಗರನ್ನು ವರ್ಷವಿಡೀ ಆಕರ್ಷಿಸುತ್ತದೆ. Colosseum ಕೂಡ ರೋಮನ್ನರ ಸಿಮೆಂಟ್ ಕಾಂಕ್ರೀಟ್‌ನಿಂದಲೇ ನಿರ್ಮಾಣವಾಗಿರುವುದರಿಂದ ಹಲವು ದಾಳಿಗಳ ನಂತರವೂ, 2000 ವರ್ಷಗಳ ಬಳಿಕವೂ ತನ್ನ ಕುರುಹುಗಳನ್ನು ಉಳಿಸಿಕೊಂಡಿದೆ.

ಯುರೋಪಿನಲ್ಲಿ ಕುಡಿಯಲು 'ಮಿನರಲ್ ವಾಟರ್' ಅನ್ನು ಕೇಳಿದರೆ ನಗೆಪಾಟಲಿಗೆ ಗುರಿಯಾದ ಹಾಗೆ, ಅಲ್ಲಿನ ಬಹುತೇಕ ದೇಶಗಳಲ್ಲಿ ಶೌಚಾಲಯದಲ್ಲಿ ಬರುವ ನೀರನ್ನೂ ಕುಡಿಯಬಹುದು. ರೋಮ್ ನಗರದಲ್ಲಿ ಬೀದಿಯಲ್ಲಿ ಕಾಣಸಿಗುವ ನಲ್ಲಿಗಳಲ್ಲಿ ನೀರು ಕುಡಿಯಬಹುದು. ರೋಮ್ ನಗರದ ಬಹುತೇಕ ಗಲ್ಲಿಗಳಲ್ಲಿ ಕಾಣಸಿಗುವ ನೀರಿನ ನಲ್ಲಿಗಳಲ್ಲಿನ ನೀರು ಕುಡಿಯಲು ಯೋಗ್ಯವಾಗಿವೆ. ಇದರ ಜತೆಗೆ ನಗರದ ನೀರಿನ ಕಾರಂಜಿಗಳಲ್ಲಿನ ನೀರೂ ಕುಡಿಯಲು ಯೋಗ್ಯವಾದದ್ದು. ರೋಮ್ ನಗರಕ್ಕೆ ನೀರನ್ನು ಒದಗಿಸುವ ನದಿ ಟೈಬರ್. ಸುಮಾರು ಎರಡು ಸಾವಿರ ವರ್ಷಗಳಿಂದ ಈ ನದಿಯ ನೀರನ್ನು ಅಲ್ಲಿಯ ಜನ ಕುಡಿಯುತ್ತಿದ್ದಾರೆ. ಕ್ರಿಸ್ತಶಕ 100ರ ಆಸುಪಾಸಿನಲ್ಲಿ ರೋಮ್ ನಗರದ ಜನತೆಯ ನೀರಿನ ದಾಹ ನೀಗಿಸುವ ಸಲುವಾಗಿ ಅಂದಿನ ರಾಜ ಟೈಬರ್ ನದಿಯಿಂದ ಸುಮಾರು 20 ಕಿಲೋಮೀಟರ್‌ಗಳ ಉದ್ದದ ದೊಡ್ಡ ಸುರಂಗಗಳನ್ನು ನಿರ್ಮಿಸಿ ಅದರ ಮೂಲಕ ಜನರಿಗೆ ನೀರನ್ನು ಒದಗಿಸುತ್ತಿದ್ದ. ರೋಮ್ ನಗರದ ಸುಮಾರು 25 ಮೀಟರ್ ಆಳಕ್ಕೆ ಹೋದರೆ ಇಂದಿಗೂ ಆ ಸುರಂಗವನ್ನು ಕಾಣಬಹುದು. ಇಂದಿಗೂ ಆ ಸುರಂಗದಲ್ಲಿ ನೀರು ಹರಿಯುತ್ತದೆ. ಎರಡು ಸಾವಿರ ವರ್ಷಗಳ ಹಿಂದೆ ನಿರ್ಮಿತವಾದ ಈ ಸುರಂಗ ರೋಮ್ ನಗರದ ಜನರ ನೀರಿನ ಜೀವನಾಡಿಯಾಗಿತ್ತು. ಭೌತಶಾಸ್ತ್ರದ ಪ್ರಯೋಗದ ಮೂಲಕ 2000 ವರ್ಷಗಳ ಹಿಂದೆಯೇ ನೀರು ಸುಗಮವಾಗಿ ಹರಿಯಲೆಂದು ಈ ದೊಡ್ಡ ಸುರಂಗವನ್ನು ನಿರ್ಮಿಸಲಾಗಿತ್ತು. 2000 ವರ್ಷಗಳು ಕಳೆದರೂ 'ಜಲನಿರೋಧಕ' ಸಿಮೆಂಟಿನ ಪ್ರಭಾವದಿಂದ ಈ ಸುರಂಗ ಇಂದಿಗೂ ಸುರಕ್ಷಿತವಾಗಿದೆ. ಈ ಸುರಂಗದ ಮೇಲೆ ಇಂದು ಬಸ್ಸುಗಳು ಓಡಾಡುತ್ತವೆ, ಮೆಟ್ರೋ ರೈಲುಗಳು, ಟ್ರಾಮ್‌ಗಳು ಓಡಾಡುತ್ತವೆ, ಆದರೂ ಈ ಸುರಂಗ ಸುರಕ್ಷಿತವಾಗಿದೆ. ಟೈಬರ್ ನದಿಯಿಂದ ರೋಮ್ ನಗರಕ್ಕೆ ಕುಡಿಯುವ ನೀರು ಪೂರೈಸಲು ಈ ಮಾದರಿಯ ಸುಮಾರು 20 ಸುರಂಗಗಳಿವೆ. ರೋಮ್ ನಗರದ ವಿಶ್ವವಿಖ್ಯಾತ Trevi Fountain ಗೆ ಇಂದಿಗೂ ಈ ಸುರಂಗದ ಮೂಲಕವೇ ನೀರಿನ ಪೂರೈಕೆಯಾಗುತ್ತದೆ.

2000 ವರ್ಷಗಳ ಹಿಂದೆ ರೋಮನ್ನರು ನಗರದ ಹಲವೆಡೆ ಸಾರ್ವಜನಿಕ ಶೌಚಗೃಹ ಹಾಗೂ ಸ್ನಾನಗೃಹಗಳನ್ನು ನಿರ್ಮಿಸಿದ್ದರು. ಈ ಶೌಚಗೃಹಗಳಿಂದ ಹೊರಬರುವ ನೀರನ್ನು ಜಾಗರೂಕತೆಯಿಂದ ನಗರದ ಹೊರಗಡೆ ಕಳುಹಿಸಬೇಕಿತ್ತು. ನೀರಿನ ಪೂರೈಕೆಗೆ ಸುರಂಗವನ್ನು ನಿರ್ಮಿಸಿದ ರೀತಿಯಲ್ಲಿ ರೋಮನ್ನರು ಈ ನೀರನ್ನು ನಗರದಿಂದ ಹೊರಹಾಕಲು ಮತ್ತೊಂದು ದೊಡ್ಡ ಸುರಂಗವನ್ನು ಕೊರೆದಿದ್ದರು. ಎರಡು ಸಾವಿರ ವರ್ಷಗಳ ಹಿಂದೆ ಕೊರೆದ ಈ ಸುರಂಗ ರೋಮ್ ನಗರದಲ್ಲಿ ಇಂದಿಗೂ ಇದೆ ಮತ್ತು ಇಂದಿಗೂ ಇಲ್ಲಿ ನೀರು ಹರಿಯುತ್ತದೆ. ಈ ಸುರಂಗವನ್ನೂ ರೋಮನ್ ಸಿಮೆಂಟ್ ಕಾಂಕ್ರೀಟ್‌ನಿಂದ ನಿರ್ಮಾಣ ಮಾಡಲಾಗಿದೆ. ಸುರಂಗದ ಒಳಹೊಕ್ಕರೆ ರೋಮನ್ನರು ಸುರಂಗದ ಮೇಲ್ಪದರವನ್ನು ಸಿಮೆಂಟ್‌ನಿಂದ ಮುಚ್ಚಿರುವುದನ್ನು ಕಾಣಬಹುದು. ಈ ಸುರಂಗದ ತಳಭಾಗ, ಅಂದರೆ ನೀರು ಹರಿಯುವ ಭಾಗದ ಮೇಲೆ ಹಾಸಿರುವ ಕಲ್ಲು ಬಹಳ ವಿಶಿಷ್ಟವಾಗಿದೆ. ನೀರಿನ ಸರಾಗ ಹರಿವನ್ನು ಹೆಚ್ಚಿಸಲು ಈ ವಿಶಿಷ್ಟ ಕಲ್ಲನ್ನು ಬಳಸಿಕೊಳ್ಳಲಾಗಿದೆ. ಈ ಸುರಂಗದೊಳಗೆ ಪ್ರವಾಹ ಬಂದಾಗ ಹರಿದಿರುವ ನೀರಿನ ಕುರುಹುಗಳನ್ನು ಇಂದಿಗೂ ಕಾಣಬಹುದು. ನಗರದ ಕಲುಷಿತ ನೀರನ್ನು ಹೊರ ಹಾಕಲು ರೋಮ್ ನಗರದಲ್ಲಿ ಸುಮಾರು 74 ಸುರಂಗಗಳು ಇಂದಿಗೂ ಕಾಣಸಿಗುತ್ತವೆ.

ಪ್ರಾಚೀನ ರೋಮ್ ನಾಗರಿಕತೆಯ ಮತ್ತೊಂದು ವೈಶಿಷ್ಟ್ಯವೆಂದರೆ, ಭೂಮಿಯ ಒಳಗಡೆ ಇರುವ 'ಸ್ಮಶಾನಗಳು'. Roman Catacombs ಗಳೆಂದು ಕರೆಯುವ ಈ ಭೂಮಿಯೊಳಗಿನ ಸ್ಮಶಾನಗಳನ್ನು ಎರಡನೆಯ ಶತಮಾನದಲ್ಲಿ ರೋಮ್ ನಗರದಲ್ಲಿ ನಿರ್ಮಿಸಲಾಗಿತ್ತೆಂದು ಹೇಳುತ್ತಾರೆ. ಸುಮಾರು 2000 ಮೃತದೇಹಗಳನ್ನು ಹೂಳುವ ಸಾಮರ್ಥ್ಯವಿರುವ ಈ ಭೂಮಿಯೊಳಗಿನ ಸ್ಮಶಾನಗಳನ್ನು ಇಂದಿಗೂ ರೋಮ್ ನಗರದ ನೆಲಮಾಳಿಗೆಯಲ್ಲಿ ಕಾಣಬಹುದು. ಸುಮಾರು 800 ಮೀಟರ್ ಉದ್ದವಿರುವ ಈ ನೆಲಮಾಳಿಗೆಗಳಲ್ಲಿ ಕ್ರಿಶ್ಚಿಯನ್ ಸಂಪ್ರದಾಯದಂತೆ ಮೃತದೇಹಗಳ ಅಂತ್ಯಸಂಸ್ಕಾರ ಮಾಡಲಾಗಿದೆ. ಮೃತದೇಹಗಳನ್ನು ಮಣ್ಣಿನ ಗೋಡೆಗಳಲ್ಲಿ ಹೂಳಲು ನೆಲಮಾಳಿಗೆಯ ಸ್ಮಶಾನದಲ್ಲಿ ನಿರ್ಮಿಸಿರುವ ಕಪಾಟು ಮಾದರಿಯ ವಿನ್ಯಾಸಗಳು ಇಂದಿಗೂ ಹಾಗೆಯೆ ಉಳಿದಿವೆ. ರೋಮ್ ನಗರದ ಮನೆಗಳ ಕೆಳಗೆ ಇಂದಿಗೂ ಪುರಾತನ ಸ್ಮಶಾನಗಳಿರುವುದು ಅಲ್ಲಿನ ಜನರಿಗೆ ತಿಳಿದಿದೆ. ರೋಮ್ ನಗರದಲ್ಲಿ ನೆಲಮಾಳಿಗೆಯಲ್ಲಿ ಸುಮಾರು 40ಕ್ಕೂ ಹೆಚ್ಚಿನ ಸ್ಮಶಾನಗಳಿವೆಯೆಂದು ಪುರಾತತ್ವ ಇಲಾಖೆಯವರು ಹೇಳುತ್ತಾರೆ. ನೈರ್ಮಲ್ಯವನ್ನು ಕಾಪಾಡುವ ದೃಷ್ಟಿಯಿಂದಲೂ ಈ ರೀತಿಯ ನೆಲಮಾಳಿಗೆಯ ಸ್ಮಶಾನವನ್ನು ಕಟ್ಟಲಾಗಿತ್ತೆಂದು ಹೇಳಲಾಗುತ್ತದೆ. ಕಣ್ಣಮುಂದೆ ಕಾಣುವ ರೋಮ್ ನಗರದ ವಾಸ್ತುಶಿಲ್ಪ ಒಂದೆಡೆಯಾದರೆ, 2000 ವರ್ಷಗಳ ಹಿಂದೆ ಭೂಮಿಯೊಳಗಡೆ ರೋಮನ್ನರು ನಿರ್ಮಿಸಿರುವ ಸಾರ್ವಜನಿಕ ಮೂಲಸೌಕರ್ಯ ಸೌಲಭ್ಯಗಳು ಮತ್ತೊಂದೆಡೆ ಇಂದಿಗೂ ಬಳಕೆಯಾಗುತ್ತಿವೆ.

ಆತ್ಮಾವಲೋಕನ ಮಾಡಿಕೊಳ್ಳಿ, ಆತ್ಮವಂಚನೆಯನ್ನಲ್ಲ

ಮೋದಿ ಮತ್ತು ಅಮಿತ್ ಶಾರಂಥ ಆಕ್ರಮಣಕಾರಿ ನಾಯಕರನ್ನು ಎದುರಿಸುವುದು ಕಠಿಣವಾದ ಸವಾಲು. ಅವರನ್ನು ಮಣಿಸಲು ದಿನದ 24 ಗಂಟೆ ಕೆಲಸ ಮಾಡಿದರೂ ಸಾಲದು. ಅಂಥದ್ದರಲ್ಲಿ ರಾಹುಲ್ ಗಾಂಧಿಯವರು ಪದೇ ಪದೇ ವಿದೇಶ ಪ್ರವಾಸಕ್ಕೆ ತೆರಳಿ ಅರೆಕಾಲಿಕ ರಾಜಕಾರಣಿಯ ಹಾಗೆ ರಾಜಕೀಯದಲ್ಲಿ ತೊಡಗಿಸಿಕೊಂಡಿರುವುದು ಕಾಂಗ್ರೆಸ್‌ನ ಹಿನ್ನಡೆಗೆ ಬಹುಮುಖ್ಯ ಕಾರಣವಾಗಿದೆ.

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚರ್
vveditoped@gmail.com

ಎಐಎಂಐಎಂ ಪಕ್ಷದ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಬಿಹಾರದ ಚುನಾವಣೆಯ ಫಲಿತಾಂಶ ಪ್ರಕಟವಾದ ತರುವಾಯ ಸುದ್ದಿ ವಾಹಿನಿಗಳೊಂದಿಗೆ ಮಾತನಾಡುತ್ತಾ, ''ವೋಟುಚೋರಿ ಕೇವಲ ಕಲ್ಪನೆ. ಮತಪಟ್ಟಿ ಪರಿಷ್ಕರಣೆ ನಡೆಯುತ್ತಿದ್ದಾಗ 900 ಮತದಾರರನ್ನು ಸ್ಥಳಾಂತರವಾಗಿದ್ದಾರೆ ಎಂದು ಕೈಬಿಡಲಾಗಿತ್ತು. ನಾವು ಚುನಾವಣಾ ಆಯೋಗಕ್ಕೆ ಸೂಕ್ತ ದಾಖಲೆಯನ್ನು ಸಲ್ಲಿಸಿದ ನಂತರ ಆ ಎಲ್ಲಾ ಹೆಸರನ್ನು ಮತ್ತೆ ಸೇರ್ಪಡೆ ಮಾಡಲಾಯಿತು. ನೀವು ನೆಲಮಟ್ಟದಲ್ಲಿ ಕೆಲಸ ಮಾಡದೆ ಚುನಾವಣೆಯಲ್ಲಿ ಸೋತು 'ಮತಗಳ್ಳತನವಾಗಿದೆ' ಎಂದು ಹೇಳಿದರೆ ಅದನ್ನು ಒಪ್ಪಲಾಗುವುದಿಲ್ಲ'' ಎಂದರು. ಅಸಾದುದ್ದೀನ್ ಓವೈಸಿಗೆ ಅರ್ಥವಾಗಿರುವುದು ರಾಹುಲ್ ಗಾಂಧಿಯವರಿಗೆ ಅರ್ಥವಾಗುವುದಿಲ್ಲ.

ಬಿಹಾರ ವಿಧಾನಸಭೆಯ 234 ಸ್ಥಾನಗಳಲ್ಲಿ ಎನ್‌ಡಿಎ ಒಕ್ಕೂಟವು 202 ಸ್ಥಾನಗಳನ್ನು ಬಾಚಿಕೊಂಡು ದಾಖಲೆಯನ್ನು ನಿರ್ಮಿಸಿತು. ಮಹಾಘಟಬಂಧನವು ತಿಣುಕಾಡಿ 35 ಸ್ಥಾನಗಳನ್ನು ಪಡೆಯಿತು. ''ನವೆಂಬರ್ 18ರಂದು ಬಿಹಾರದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವೆ'' ಎಂದು ಘೋಷಿಸಿದ್ದ ತೇಜಸ್ವಿ ಯಾದವ್ 25 ಸೀಟು ಗೆದ್ದು ಕೂದಲೆಳೆಯ ಅಂತರದಲ್ಲಿ ಅಧಿಕೃತ ವಿರೋಧ ಪಕ್ಷದ ನಾಯಕನ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

2024ರ ಲೋಕಸಭಾ ಚುನಾವಣೆಯ ನಂತರ ಮೋದಿ ಮ್ಯಾಜಿಕ್ ತಗ್ಗಿದೆ ಎಂದು ವಿಶ್ಲೇಷಣೆ ಮಾಡುತ್ತಿದ್ದವರ ಬಾಯಿ ಮುಚ್ಚಿಸುವಂತೆ ಬಿಜೆಪಿಯು ಹರಿಯಾಣ, ಮಹಾರಾಷ್ಟ್ರ, ದೆಹಲಿಯ ನಂತರ ಈಗ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಜಯಭೇರಿ ಬಾರಿಸಿ 'ಮೋದಿ ಹವಾ ಬಲವಾಗಿದೆ, ಅವರ ಜನಪ್ರಿಯತೆಯ ಮೋಡಿ ಕುಗ್ಗಿಲ್ಲ' ಎಂಬುದನ್ನು ಸಾಬೀತುಪಡಿಸಿದೆ. ಲೋಕಸಭಾ ಚುನಾವಣೆಯಲ್ಲಿ 99 ಸ್ಥಾನಗಳಿಸಿ ದೇಶವನ್ನೇ ಗೆದ್ದ ಹಮ್ಮಿನಲ್ಲಿದ್ದ ಕಾಂಗ್ರೆಸ್‌ನ ಶಕ್ತಿಯು ಚುನಾವಣೆಯಿಂದ ಚುನಾವಣೆಗೆ ಕುಸಿದಿದೆ; ಹೀಗಾಗಿ, ತನ್ನ ಸೋಲಿನ ಚರ್ಚೆಯ ಹಾದಿ ತಪ್ಪಿಸಲು ಅದು ಹುಟ್ಟುಹಾಕಿರುವ ತಂತ್ರವೇ 'ವೋಟು ಚೋರಿ'ಯ ಆರೋಪವಾಗಿದೆ.

ಇಪ್ಪತ್ತು ವರ್ಷಗಳಿಂದ ಬಿಹಾರದ ಅನಭಿಷಿಕ್ತ ದೊರೆಯಾಗಿ ವಿಜೃಂಭಿಸುತ್ತಿರುವ ನಿತೀಶ್ ಕುಮಾರ್ ಮತ್ತೆ ತಮ್ಮ ಜನಪ್ರಿಯತೆಯ ಕಮಾಲ್ ತೋರಿಸಿದರು. ಅಧಿಕಾರ ವಿರೋಧಿ ಅಲೆಯು ಇಲ್ಲವಾಗಿ ಅಧಿಕಾರಸ್ಥರ ಪರವಾದ ಅಲೆಯಾಗಿ ಜನಾದೇಶ ಪರಿವರ್ತನೆಯಾಗಿತ್ತು. ಎನ್‌ಡಿಎ ಆರಂಭಿಕ ಮುನ್ನಡೆಯನ್ನು ಸಾಧಿಸಿದ ಕೂಡಲೇ ಕಾಂಗ್ರೆಸ್ ವಕ್ತಾರ ಪವನ್ ಖೇರಾ ''ಖಂಡಿತವಾಗಿಯೂ ಜ್ಞಾನೇಶ್ ಕುಮಾರ್ ಬಿಹಾರದ ಜನರ ಮೇಲೆ ಮೇಲುಗೈ ಸಾಧಿಸುತ್ತಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ'' ಎಂದು ತಮ್ಮ ವೈಫಲ್ಯಕ್ಕೆ ಚುನಾವಣಾ ಆಯೋಗವನ್ನು ದೂಷಿಸಿ ಕೈ ತೊಳೆದುಕೊಂಡುಬಿಟ್ಟರು.

ಮೋದಿ ಮತ್ತು ಅಮಿತ್ ಶಾರಂಥ ಆಕ್ರಮಣಕಾರಿ ನಾಯಕರನ್ನು ಎದುರಿಸುವುದು ಕಠಿಣವಾದ ಸವಾಲು. ಅವರನ್ನು ಮಣಿಸಲು ದಿನದ 24 ಗಂಟೆ ಕೆಲಸ ಮಾಡಿದರೂ ಸಾಲದು. ಅಂಥದ್ದರಲ್ಲಿ ರಾಹುಲ್ ಗಾಂಧಿಯವರು ಪದೇ ಪದೇ ವಿದೇಶ ಪ್ರವಾಸಕ್ಕೆ ತೆರಳಿ ಅರೆಕಾಲಿಕ ರಾಜಕಾರಣಿಯ ಹಾಗೆ ರಾಜಕೀಯದಲ್ಲಿ ತೊಡಗಿಸಿಕೊಂಡಿರುವುದು ಕಾಂಗ್ರೆಸ್‌ನ ಹಿನ್ನಡೆಗೆ ಬಹುಮುಖ್ಯ ಕಾರಣವಾಗಿದೆ. ಚುನಾವಣಾ ಆಯೋಗವು ವಿಶೇಷ ಮತ ಪರಿಷ್ಕರಣೆಯ ಅಭಿಯಾನ ಬಿಹಾರದಲ್ಲಿ ಕೈಗೊಂಡಿತು. ಇದಕ್ಕೆ ಕಾಂಗ್ರೆಸ್ ಮತ್ತು ಆರ್‌ಜೆಡಿ ಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿ ಸರ್ವೋಚ್ಚ ನ್ಯಾಯಲಯದಲ್ಲಿ ಪ್ರಶ್ನಿಸಿ ಮುಖಭಂಗ ಮಾಡಿಕೊಂಡವು. ಬಿಹಾರದಲ್ಲಿ ಆಗಸ್ಟ್ ತಿಂಗಳಲ್ಲಿ ರಾಹುಲ್ ಗಾಂಧಿಯವರು ಹದಿನಾರು ದಿನಗಳ 'ವೋಟರ್ ಅಧಿಕಾರ ಯಾತ್ರೆ' ಕೈಗೊಂಡರು. ಈ ವಿಷಯವು ಜನರನ್ನು ಭಾವನಾತ್ಮಕವಾಗಿ ಜೋಡಿಸುವುದಿಲ್ಲ ಎಂಬುದು ಅವರಿಗೆ ಅರ್ಥವೇ ಆಗಲಿಲ್ಲ. ಈ ಯಾತ್ರೆಯಿಂದ ಕಾಂಗ್ರೆಸ್ ಕಾರ್ಯಕರ್ತರ ಶ್ರಮ, ಪಕ್ಷದ ಸಂಪನ್ಮೂಲ ಮತ್ತು ನಾಯಕರ ಅಮೂಲ್ಯ ಸಮಯ ಹಾಳಾಯಿತು, ಅಷ್ಟೇ!

ಈ ಚುನಾವಣೆಯಲ್ಲಿ 'ಮತ ಪರಿಷ್ಕರಣೆ'ಯನ್ನು ರಾಹುಲ್ ಗಾಂಧಿಯವರು ಬಹುದೊಡ್ಡ ಚರ್ಚಾವಿಷಯವನ್ನಾಗಿ ತೆಗೆದುಕೊಂಡಿದ್ದು ಎನ್‌ಡಿಎ ಮಿತ್ರಕೂಟದ ಪಾಲಿಗೆ ವರವಾಯಿತು. ಇಪ್ಪತ್ತು ವರ್ಷದ ನಿತೀಶ್ ಸರಕಾರದ ವೈಫಲ್ಯ, ಕಳೆದ ಎರಡು ವರ್ಷಗಳಲ್ಲಿ ಕಳಪೆ ಕಾಮಗಾರಿಗೆ ಕುಸಿದು ಬಿದ್ದ ಇಪ್ಪತ್ತಕ್ಕೂ ಹೆಚ್ಚು ಸೇತುವೆಗಳು, ಲಕ್ಷಾಂತರ ಬಿಹಾರಿ ಯುವಕರು ತಮ್ಮ ರಾಜ್ಯದಲ್ಲಿ ಕೆಲಸವಿಲ್ಲದೆ ಬೇರೆ ರಾಜ್ಯಗಳಿಗೆ ವಲಸೆ ಹೋಗುವುದು ಮತ್ತು ಹಾಡುಹಗಲೇ ನಡೆದ ಹತ್ಯೆಗಳು ಚುನಾವಣಾ ಪ್ರಚಾರದ ಪ್ರಮುಖ ಚರ್ಚಾವಿಷಯವೇ ಆಗಲಿಲ್ಲ.

ಕರ್ನಾಟಕದಲ್ಲಿ ಕಾಂಗ್ರೆಸ್ 2023ರಲ್ಲಿ ಅಧಿಕಾರಕ್ಕೆ ಬಂದಿದ್ದು 40 ಪರ್ಸೆಂಟ್ ಕಮಿಷನ್ ಆರೋಪದ ಮೇಲೆ. ಅಂದು ಅಧಿಕಾರಸ್ಥ ರಾಜ್ಯ ಬಿಜೆಪಿ ನಾಯಕರು ಇದನ್ನು ಹಗುರವಾಗಿ ತೆಗೆದುಕೊಂಡು ದುಬಾರಿ ಬೆಲೆ ತೆತ್ತರು. ಬಿಹಾರದಲ್ಲಿ ನಿತೀಶ್ ಆಡಳಿತದ ಒಂದೇ ಒಂದು ಭ್ರಷ್ಟಾಚಾರ ಪ್ರಕರಣವನ್ನಾಗಲೀ ಅಥವಾ ಅಭಿವೃದ್ಧಿಯ ಹಿನ್ನಡೆಯನ್ನಾಗಲೀ ಮುಖ್ಯ ವಿಷಯ ಮಾಡದೆ ಕಾಂಗ್ರೆಸ್ಸಿಗರು ಕೇವಲ ವೋಟು ಚೋರಿಯನ್ನು ಬಲವಾಗಿ ನಂಬಿದರು.

ಬಿಹಾರದಲ್ಲಿ ಆರ್‌ಜೆಡಿಯೊಂದಿಗೆ ಮೈತ್ರಿ ಮಾಡಿಕೊಂಡರೆ ಮಾತ್ರ ಕಾಂಗ್ರೆಸ್‌ಗೆ ಉಳಿಗಾಲ. ಆದರೂ ಕಾಂಗ್ರೆಸ್ ಧಿಮಾಕು ಹೇಗಿತ್ತೆಂದರೆ, ಲಾಲು ಮತ್ತು ತೇಜಸ್ವಿ ಯಾದವ್ ದೆಹಲಿಗೆ ಹೋಗಿ ರಾಹುಲ್‌ರವರಿಗೆ ಫೋನ್ ಮಾಡಿದರೆ ಅದನ್ನು ಅವರು ಸ್ವೀಕರಿಸಲಿಲ್ಲವಂತೆ. ಕೊನೆಗೆ ಅವರಿಬ್ಬರು ಕೆ.ಸಿ. ವೇಣುಗೋಪಾಲ್‌ರ ಭೇಟಿಗೆ ಹೋಗಬೇಕಾಯಿತು. ಮಹಾಘಟಬಂಧನ್ ಕೂಟವು ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದಾಗ ಕಾಂಗ್ರೆಸ್ ವಕ್ತಾರ ಪವನ್ ಖೇರಾ ಭಾಗಿಯಾದರು. ಹೀಗೆ ರಾಜಕೀಯವಾಗಿ ಪ್ರಮುಖನಲ್ಲದ ವ್ಯಕ್ತಿಯನ್ನು ಕಳುಹಿಸಲಾಯಿತು. ಮತ್ತೊಂದು ಪ್ರಮಾದವೆಂದರೆ, ರಾಹುಲ್ ಗಾಂಧಿಯವರು ಬಿಹಾರದಲ್ಲಿ ಕೈಗೊಂಡ ವೋಟರ್ ಅಧಿಕಾರ ಯಾತ್ರೆಯಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್‌ರವರೊಂದಿಗೆ ಪ್ರಚಾರದಲ್ಲಿ ಭಾಗಿಯಾಗಿದ್ದು. ಯಾವ ಪಕ್ಷದವರು ಬಿಹಾರಿಗಳನ್ನು 'ಟಾಯ್ಲೆಟ್ ತೊಳೆಯುವವರು' ಎಂದೆಲ್ಲಾ ಹೀನಾಯವಾಗಿ ಅಪಮಾನ ಮಾಡಿದ್ದರೋ ಅವರೊಂದಿಗೆ ರಾಹುಲ್ ಮತ್ತು ತೇಜಸ್ವಿ ಯಾದವ್ ಚುನಾವಣಾ ಸಮಯದಲ್ಲಿ ವೇದಿಕೆ ಹಂಚಿಕೊಂಡಿದ್ದು ಆತ್ಮಹತ್ಯೆಗೆ ಸಮನಾಗಿತ್ತು.

ತೇಜಸ್ವಿ ಯಾದವ್ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲು ಕಾಂಗ್ರೆಸ್ ತಕರಾರು ಮಾಡಿತು. ಕೊಲಂಬಿಯಾ ಪ್ರವಾಸದಲ್ಲಿದ್ದ ರಾಹುಲ್ ಗಾಂಧಿಯವರು ಚುನಾವಣಾ ಪ್ರಚಾರವನ್ನು ತಡವಾಗಿ ಆರಂಭಿಸಿದರು. ಮೈತ್ರಿಕೂಟದಲ್ಲಿ ಸೀಟು ಹಂಚಿಕೆಯ ಗೊಂದಲ ಬಗೆಹರಿಯಲೇ ಇಲ್ಲ. ಐದಾರು ಕ್ಷೇತ್ರದಲ್ಲಿ ಪರಸ್ಪರ ಕಾದಾಟವು ನಡೆದುಹೋಯಿತು. ನಿತೀಶ್ ಕುಮಾರರ ವಯಸ್ಸಿನ ಬಗ್ಗೆ ಲೇವಡಿ ಮಾಡಲಾಯಿತು. ಸಾಲದ್ದಕ್ಕೆ ಮೋದಿಯವರ ತಾಯಿಯವರನ್ನು ಪ್ರಚಾರದ ವಿಡಿಯೋದಲ್ಲಿ ಬಳಸಿಕೊಂಡು ಮೋದಿಯವರ ಕೈಗೆ ಪ್ರಬಲ ಅಸ್ತ್ರ ಕೊಡಲಾಯಿತು. ಮೋದಿಯವರು ಅದನ್ನು ಸಮರ್ಥವಾಗಿ ಬಳಸಿಕೊಂಡು ವಿಶೇಷವಾಗಿ ಮಹಿಳೆಯರ ಸಹಾನುಭೂತಿ ಗಳಿಸುವುದರಲ್ಲಿ ಸಫಲರಾದರು.

ಸೀಟು ಹಂಚಿಕೆಯ ಗೊಂದಲ ಬಗೆಹರಿಸಲು ಮಹಾಘಟಬಂಧನ ವಿಫಲವಾಯಿತು. ಐದಾರು ಕ್ಷೇತ್ರಗಳಲ್ಲಿ ಮೈತ್ರಿಕೂಟದ ಅಭ್ಯರ್ಥಿಗಳು ಪರಸ್ಪರ ಕಾದಾಡಿದರು. ಇದಕ್ಕೆ ವ್ಯತಿರಿಕ್ತವಾಗಿ ಸ್ವತಃ ಅಮಿತ್ ಶಾ ಮೂರು ದಿನ ಪಟನಾದಲ್ಲಿ ಝೂಂಡಾ ಹೂಡಿ ಬಿಜೆಪಿಯಲ್ಲಿನ ಅಸಮಾಧಾನಿತರನ್ನು ಮತ್ತು ಬಂಡಾಯವೆದ್ದಿದ್ದ ಅಭ್ಯರ್ಥಿಗಳನ್ನು ಕರೆದು ಮಾತನಾಡಿ ಸಮಸ್ಯೆಯನ್ನು ಬಗೆಹರಿಸಿದರು. ಬಿಹಾರದ ವಿಕಾಸಶೀಲ ಪಾರ್ಟಿಯ ಮುಖೇಶ್ ಸಹಾನಿಯವರನ್ನು ಉಪಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲು ರಾಹುಲ್ ಪ್ರಮುಖ ಪಾತ್ರವಹಿಸಿದರು. ಫಲಿತಾಂಶ ಬಂದಾಗ ಆ ಪಾರ್ಟಿಯು ಒಂದು ಸೀಟನ್ನೂ ಗೆದ್ದಿರಲಿಲ್ಲ, ಸ್ವತಃ ಮುಖೇಶ್ ಸಹಾನಿ ಪರಾಭವಗೊಂಡಿದ್ದರು.

ಲಾಲೂ ಪ್ರಸಾದ್ ಯಾದವ್ ಅವಧಿಯ 'ಜಂಗಲ್ ರಾಜ್' ಹಣೆಪಟ್ಟಿಯನ್ನೂ, ಆ ದಿನಗಳ ಕರಾಳ ಅನುಭವವನ್ನೂ ಬಿಹಾರದ ಜನತೆ ಇಪ್ಪತ್ತು ವರ್ಷದ ತರುವಾಯವೂ ಮರೆತಿಲ್ಲ. ಈ ಚುನಾವಣೆಯಲ್ಲಿ ಬಿಜೆಪಿಯು ಇಟ್ಟ ನಿರ್ಣಾಯಕ ಹೆಜ್ಜೆಯೆಂದರೆ- ಜನರಿಗೆ ಆ ಕರಾಳ ದಿನವನ್ನು ನೆನಪಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಿದ್ದು. ಜನತೆಯಿಂದ ಇದಕ್ಕೆ ಸೂಕ್ತ ಸ್ಪಂದನೆಯೂ ದೊರೆಯಿತು. ಬಿಹಾರದ ಮೊದಲ ಹಂತದ ಚುನಾವಣೆಯ ಮುನ್ನ ರಾಹುಲ್ ಗಾಂಧಿಯವರು ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ 25ಲಕ್ಷ ವೋಟು ಚೋರಿಯಾಗಿದೆ ಎಂದು ಪತ್ರಿಕಾಗೋಷ್ಠಿ ಮಾಡಿದರು, ಆದರೆ ಬಿಹಾರದಲ್ಲಿ ಇದು ಶೂನ್ಯ ಪರಿಣಾಮ ಬೀರಿತು. ಮತ ಪರಿಷ್ಕರಣೆಯಲ್ಲಿ 68.5 ಲಕ್ಷ ಮತದಾರರನ್ನು ಕೈಬಿಡಲಾಯಿತು ಮತ್ತು 21.3 ಲಕ್ಷ ಮತದಾರರನ್ನು ಸೇರಿಸಲಾಯಿತು. ಚುನಾವಣೆಯ ನಂತರ ಕಾಂಗ್ರೆಸ್ ಪಾರ್ಟಿಗೆ ರಾಜೀನಾಮೆ ಕೊಟ್ಟ ಶಕೀಲ್ ಅಹಮ್ಮದ್ ಅವರನ್ನು ಇದರ ಬಗ್ಗೆ ಪ್ರಶ್ನಿಸಿದಾಗ, ''65ಲಕ್ಷ ಮತದಾರರನ್ನು ಕೈಬಿಟ್ಟಿರುವಾಗ 65 ಜನರು ಇದರ ವಿರುದ್ಧ ಏಕೆ ಪ್ರತಿಭಟಿಸಲಿಲ್ಲ?'' ಎಂದು ಪ್ರಶ್ನಿಸಿದರು.

'ಜೆನ್ ಜೀ' ಪೀಳಿಗೆಯವರನ್ನು ಸೆಳೆಯಲು ಟಿ-ಶರ್ಟ್ ಧರಿಸಿದರೆ, ಕಿಂದರಜೋಗಿಗಳ ಹಾಗೆ ತಮ್ಮನ್ನು ಬೆಂಬಲಿಸುತ್ತಾರೆ ಎಂಬ ಮತ್ತೊಂದು ಭ್ರಮೆಯಲ್ಲಿ ರಾಹುಲ್ ಇದ್ದಾರೆ. ಮತದಾನದ ಅಂಕಿ-ಅಂಶ ಕಂಡಾಗ 'ಜೆನ್ ಜೀ' ವರ್ಗವು ಇವರ ಮೈತ್ರಿಕೂಟವನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದುದು ಗೊತ್ತಾಯಿತು. ಕೈಗೆಟುಕುವ ಯೋಜನೆಗಳನ್ನು ಎನ್‌ಡಿಎ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದರೆ, ಮಹಾಘಟಬಂಧನವು 'ಅಧಿಕಾರಕ್ಕೆ ಬಂದ ಇಪ್ಪತ್ತು ದಿನದಲ್ಲಿ ಬಿಹಾರದ ಪ್ರತಿಯೊಂದು ಕುಟುಂಬದ ಒಬ್ಬರಿಗೆ ಸರಕಾರಿ ಉದ್ಯೋಗ ನೀಡುವ' ಭರವಸೆಯನ್ನು ಕೊಟ್ಟಿತು. ಆದರೆ ಜನತೆ ಇದನ್ನು ನಂಬಲಿಲ್ಲ.

ಬಿಹಾರದ ಕಾಂಗ್ರೆಸ್ ಸಂಸದ ತಾರೀಖ್ ಅನ್ವರ್ ಅವರು, ''ಕಾಂಗ್ರೆಸ್ ಕೇವಲ 50 ಸ್ಥಾನಗಳಲ್ಲಿ ಸ್ಪರ್ಧಿಸಬೇಕಿತ್ತು; ನಮಗೆ ಸಂಘಟನೆಯ ಶಕ್ತಿ ಇಲ್ಲದಿದ್ದರೂ 61 ಸ್ಥಾನಗಳಿಗೆ ಸ್ಪರ್ಧಿಸಿದ್ದು ತಪ್ಪಾಯಿತು'' ಎಂದು ಹೇಳಿದರು. ''ಮಹಿಳೆಯರ ಖಾತೆಗಳಿಗೆ ಹತ್ತು ಸಾವಿರ ರುಪಾಯಿಯನ್ನು ವರ್ಗಾವಣೆ ಮಾಡಿದ ಕಾರಣ ಎನ್‌ಡಿಎಗೆ ಚುನಾವಣೆ ಗೆಲ್ಲಲು ಸಾಧ್ಯವಾಯಿತು'' ಎಂದು ಹೇಳುವ ಮೂಲಕ ಈ ರಾಜಕೀಯ ವಿರೋಧಿಗಳು ತಮ್ಮ ಸೋಲನ್ನು ಮುಚ್ಚಿಕೊಳ್ಳಲು ಹರಸಾಹಸಪಟ್ಟರು. ಮಹಿಳೆಯರು ಹಣ ಪಡೆದು ವೋಟು ಹಾಕಿದರು ಎಂದು ಹೇಳಿ ಅವರಿಗೆ ಮಸಿ ಬಳಿದರು.

2010ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿ(ಯು) ಮೈತ್ರಿಕೂಟ 206 ಸೀಟು ಗಳಿಸಿತ್ತು. ಅಂದು ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಿದ್ದು ಯುಪಿಎ ಒಕ್ಕೂಟ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೂ ಕಾಂಗ್ರೆಸ್ ಆ ಚುನಾವಣೆಯಲ್ಲಿ ಗೆದ್ದ ಸ್ಥಾನ ಕೇವಲ ನಾಲ್ಕು! ಪ್ರಶಾಂತ್ ಕಿಶೋರ್ ಅವರ 'ಜನವಿಕಾಸ್ ಪಾರ್ಟಿ' ಒಂದೂ ಸ್ಥಾನವನ್ನು ಪಡೆಯದೆ, 'ಚುನಾವಣಾ ತಜ್ಞರು ಸಲಹೆಯಲ್ಲಿ ನುರಿತವರು, ಆದರೆ ಚುನಾವಣೆ ಎದುರಿಸುವುದರಲ್ಲಿ ಅಲ್ಲ' ಎಂಬುದನ್ನು ಸಾಬೀತುಪಡಿಸಿತು. ಕಾಂಗ್ರೆಸ್ ಪಕ್ಷವು ವೋಟು ಚೋರಿ ಎಂಬ ಭ್ರಮಾತ್ಮಕ ನಂಬಿಕೆಯಿಂದ ಹೊರಬಂದು ವಾಸ್ತವತೆಯನ್ನು ಅರ್ಥೈಸಿಕೊಳ್ಳಬೇಕಾಗಿದೆ. ಸೋಲು ಎಂಬುದು ಆತ್ಮಾವಲೋಕನಕ್ಕೆ ದಾರಿಯಾಗಬೇಕೇ ವಿನಾ ಆತ್ಮವಂಚನೆಗಲ್ಲ...

(ಲೇಖಕರು ಬಿಜೆಪಿಯ ವಕ್ತಾರರು)

ಭಟ್ಟರ್ ಸ್ಕಾಚ್

- **ಶ್ರೀನಾಥ ಯಜುರ್ವೇದಿ, (ಇಮೇಲ್ ಮೂಲಕ)**
ಕೆಳಗಿನ ಕ್ರಮಾಂಕದಲ್ಲಿ ಬ್ಯಾಟ್ ಹಿಡಿದು ಬಂದರೂ ತಂಡವನ್ನು ಗೆಲುವಿನ ದಡಕ್ಕೆ ಸೇರಿಸುವವನನ್ನು ಏನೆಂದು ಕರೆಯುತ್ತೀರಿ?
– **ಮಹೇಂದ್ರ ಸಿಂಗ್ ದೋಣಿ!**

- **ಕಾಶಿ ಪ್ರಾಣೇಶ, ಕತ್ರಿಗುಪ್ಪೆ**
ಭಟ್ರೇ, ಹಿಂದಿನ ಕಾಲದಲ್ಲಿ ಹುಡುಗರು ಒಂದು ಕಣ್ಣು ಹೊಡೆದು ಹುಡುಗಿಯರಿಗೆ ಸಂದೇಶ ರವಾನಿಸುತ್ತಿದ್ದರು, ಈಗಿನವರು?
– **ಈಗ ಎರಡೂ ಕಣ್ಣುಗಳನ್ನು ಹೊಡೆಯುತ್ತಾರೆ!**

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ಕಾಡಲ್ಲಿದ್ದು ನಾಡಿಗೆ ಉಪಟಳ ಕೊಡೋನು ನಕ್ಸಲೈಟ್. ಊರಲ್ಲಿದ್ದುಕೊಂಡೇ ಉಪಟಳ ಕೊಡೋನು?
– **ಲೋಕಲೈಟ್!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಕೆಲವರು ಹೆಂಡತಿಯನ್ನು ಬಂಗಾರ ಅಂತ ಕರೆಯುತ್ತಾರಲ್ಲ?
– **ಅದಕ್ಕೇ ಅವರು ತೂಕ ಜಾಸ್ತಿ ಮಾಡಿಕೊಳ್ಳೋದು!**

- **ಸತೀಶ ಎಲ್.ವಿ.,(ಇಮೇಲ್ ಮೂಲಕ)**
ಆಸೆಯೇ ದುಃಖಕ್ಕೆ ಮೂಲ. ದುರಾಸೆ?
– **ಅತಿ ದುಃಖಕ್ಕೆ ಮೂಲ!**

- **ರವಿ ಮೂಡಲಮನೆ, (ಇಮೇಲ್ ಮೂಲಕ)**
ಭಟ್ರೇ, ಹಬ್ಬಕ್ಕೂ, ಬೆಲೆ ಏರಿಕೆಗೂ ಏನು ಸಂಬಂಧ?
– **ಹಬ್ಬ ಅಂದ್ರೆ ಹೈರಾಣ ಗಾದೆ ಕೇಳಿಯೂ ಈ ಪ್ರಶ್ನೆಯಾ?!**

- **ಶಿವಾಜಿರಾವ್ ಘೋಂಗ್ರೆ, ಕೆಜಿಎಫ್**
ಕೈಸಾಲ ಕೊಟ್ರೆ ಮೂರು ವರ್ಷ ಆದ್ಮೇಲೆ ವಾಪಸ್ ಕೇಳಂಗಿಲ್ಲಂತೆ?
– **ಅಲ್ಲಿಗೆ ಕೈಸಾಲ ಕೊಟ್ರೆ 'ಕೈಲಾಸ' ಮತ್ತು 'ಕೈ ಲಾಸ್' ಅಷ್ಟೇ!**

- **ನವೀನ ಶೆಣೈ, ಕುಂದಾಪುರ**
ಭಟ್ರೇ, ಮೀನ್ ಮೈಂಡೆಡ್ ಫೆಲೋ ಅಂತಾರಲ್ಲ, ಹಾಗಂದ್ರೆ?
– **ಸದಾ ಮೀನುಗಳ ಬಗ್ಗೆ ಯೋಚನೆ ಮಾಡುವವನು ಎಂದರ್ಥ!**

- **ಮೀನಾ ವಿಶ್ವನಾಥ, ಬೆಂಗಳೂರು**
ಭಟ್ರೇ, ಹೆಂಡತಿ ಬೇಡಿಕೆಗಳಿಗೆಲ್ಲ ಇಲ್ಲೊಬ್ಬ ತಥಾಸ್ತು ಅಂತಾನಲ್ಲ?
– **ಯಾರ ಹೆಂಡತಿ ಎನ್ನುವುದನ್ನು ಸ್ಪಷ್ಟಪಡಿಸಬೇಕಿತ್ತು!**

- **ಎಂ.ಜಿ.ಹೆಗಡೆ, ಹೊನ್ನಾವರ**
ಭಟ್ರೇ, ಪತ್ರಕರ್ತರೆಲ್ಲ ರಾಜಕೀಯ ಪ್ರವೇಶಿಸುತ್ತಿದ್ದಾರಲ್ಲ?
– **ಪತ್ರಿಕೋದ್ಯಮದಲ್ಲಿದ್ದು ರಾಜಕೀಯ ಮಾಡುವುದಕ್ಕಿಂತ, ರಾಜಕೀಯದಲ್ಲಿದ್ದು ಅದನ್ನು ಮಾಡುವುದು ಒಳ್ಳೆಯದಲ್ಲವೇ?!**

ಆರೋಗ್ಯದಲ್ಲಿ ವೈಜ್ಞಾನಿಕತೆ ಎಂದರೆ- ವೈಯಕ್ತಿಕತೆ!

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಮೈಸೂರು ಮೂಲದ 56 ವರ್ಷದ ರಂಗಮ್ಮ (ಹೆಸರು ಬದಲಿಸಲಾಗಿದೆ) ಚೆನ್ನಾಗಿ ಚೇತರಿಸಿಕೊಂಡಿದ್ದ ಮಧುಮೇಹ ರೋಗಿ. ಒಂದು ದಿನ ಫೇಸ್‌ಬುಕ್‌ನಲ್ಲಿ ವೈರಲ್ ಆಗಿದ್ದ ವಿಡಿಯೋದಲ್ಲಿ- ''ಪ್ರತಿದಿನ ಖಾಲಿ ಹೊಟ್ಟೆಯಲ್ಲಿ ಈ ಒಂದು ಆಯುರ್ವೇದದ ಮನೆ ಮದ್ದು ತೆಗೆದುಕೊಂಡರೆ ಮಧುಮೇಹ ಶಾಶ್ವತವಾಗಿ ಗುಣವಾಗುತ್ತದೆ!'' ಎಂಬ ಘೋಷಣೆ ಕಂಡಿತು. ವಿಡಿಯೋದಲ್ಲಿದ್ದವರು ಒಬ್ಬ ಬಿಳಿ ಕೋಟ್ ಧರಿಸಿದ ವ್ಯಕ್ತಿ. ಅವರ ಮಾತಿನಲ್ಲಿ 'ಅಧ್ಯಯನ', 'ಸಂಶೋಧನೆ' ಎಂಬ ಪದಗಳು ಬಹಳ ವಿಶ್ವಾಸಾರ್ಹವಾಗಿ ಕಾಣಿಸಿದ್ದು, ರಂಗಮ್ಮ ಅದನ್ನು ನಂಬಿ ಎರಡು ತಿಂಗಳು ಬಿಡದೆ ಪ್ರತಿದಿನವೂ ಆ ಮಿಶ್ರಣವನ್ನು (ಬೇವು-ಕರೇಲ-ಕರಿಬೇವು-ಮೇಥಿ ಇತ್ಯಾದಿ ಪುಡಿ) ಸೇವಿಸಲು ಆರಂಭಿಸಿದರು.

ಆದರೆ ಕೆಲವೇ ವಾರಗಳಲ್ಲಿ ಪರಿಸ್ಥಿತಿ ಬದಲಾಗತೊಡಗಿತು. ಪರೀಕ್ಷಿಸಿದಾಗ ಬ್ಲಡ್ ಶುಗರ್ ಸ್ವಲ್ಪ ಇಳಿದಿದ್ದರೂ, ಕೀಲುಗಳಲ್ಲಿ ತೀವ್ರ ನೋವು, ಸ್ನಾಯುಗಳಲ್ಲಿ ಅತಿಯಾದ ಬಿಗಿತ, ನಿದ್ದೆಯ ವ್ಯತ್ಯಾಸ, ಹೊಟ್ಟೆ ಉಬ್ಬರ, ಮಲಬದ್ಧತೆ, ದಿನವಿಡೀ ಶಕ್ತಿಯಿಲ್ಲದ ಸ್ಥಿತಿ- ಇವೆಲ್ಲವೂ ಒಂದರ ಹಿಂದೆ ಒಂದರಂತೆ ಎದುರಾದವು. ಅಂತಿಮವಾಗಿ ಆಕೆ ವೈದ್ಯರನ್ನು ಭೇಟಿ ಮಾಡಬೇಕಾಯಿತು. ಕಾರಣ? ಅವಳ ದೇಹಪ್ರಕೃತಿ ಮತ್ತು ಜೀರ್ಣಕ್ರಿಯೆಗೆ ಸರಿಹೊಂದದ ಪದಾರ್ಥಗಳನ್ನು ನಿರಂತರವಾಗಿ ಕ್ರಮವಿಲ್ಲದೆ ಸೇವಿಸಿದ ಕಾರಣ ದೇಹದಲ್ಲಿ ಅತಿಯಾದ ದೋಷಗಳ ಅಸಮತೋಲನೆ. ಇಡೀ ವೃತ್ತಾಂತವನ್ನು ಆಲಿಸಿದ ವೈದ್ಯರು ಹೇಳಿದ್ದು ಒಂದೇ ಮಾತು- ''ನಮ್ಮ ದೇಹದ ಅಗತ್ಯಗಳನ್ನು ತಿಳಿಯದೇ, ಸಾಮಾಜಿಕ ಮಾಧ್ಯಮದಲ್ಲಿ ಕಂಡ ಸಲಹೆಗಳನ್ನು ವಿವೇಚನೆಯಿಲ್ಲದೆ ಅನುಸರಿಸಿದ ಪರಿಣಾಮ ಇದು''.

ಇದು ರಂಗಮ್ಮನ ಕತೆ ಮಾತ್ರವಲ್ಲ; ಇಂದಿನ ಅನೇಕರು ಎದುರಿಸುತ್ತಿರುವ ವಾಸ್ತವ. ರಂಗಮ್ಮನ ಅನುಭವವು ನಮಗೆ ಕಲಿಸುವ ಮಹತ್ವದ ಪಾಠವೇನೆಂದರೆ- ಯುಟ್ಯೂಬ್, ಫೇಸ್‌ಬುಕ್ ಅಥವಾ ವಾಟ್ಸಾಪ್‌ನಲ್ಲಿ ಹರಿಯುವ ಸಾಮಾನ್ಯ ಆರೋಗ್ಯ ಸಲಹೆಗಳು ಎಲ್ಲರಿಗೂ ಸಾಮಾನ್ಯವಲ್ಲ. ಇಂದಿನ ಹೆಲ್ತ್ ಇನ್‌ಫ್ಲುಯೆನ್ಸರ್‌ಗಳಿಂದ ಕೇಳಲಿಕ್ಕೆ ಸಿಗುವ ಸಾಮಾನ್ಯ ಸಲಹೆಗಳು: ದಿನಕ್ಕೆ 4-5 ಲೀಟರ್ ನೀರು ಕುಡಿಯಿರಿ, ಪ್ರತಿದಿನ 10,000 ಹೆಜ್ಜೆಗಳು ನಡೆಯಿರಿ, ದಿನವೂ ಆಪಲ್ ಸೈಡರ್ ವಿನೆಗರ್ ಸೇವಿಸಿ, ಹಸಿ ಮೊಳಕೆಯ ನಿತ್ಯಸೇವನೆ ಇರಲಿ, ಆಹಾರದಲ್ಲಿ ಹೆಚ್ಚಾಗಿ ಪ್ರೋಟೀನ್ ಇರಲಿ ಇತ್ಯಾದಿ- ಇವೆಲ್ಲವೂ ವೈಜ್ಞಾನಿಕ ಎನಿಸಿದರೂ, ಪ್ರತಿಯೊಬ್ಬರಿಗೂ ಸೂಕ್ತ ಎನ್ನಲಾಗುವುದಿಲ್ಲ.

ಪ್ರತಿಯೊಬ್ಬ ವ್ಯಕ್ತಿಯ ದೇಹಸ್ಥಿತಿಯೂ - ಅವನ ಜೀವನಶೈಲಿ, ಆಹಾರ ಅಭ್ಯಾಸ, ಕೆಲಸದ ಒತ್ತಡ, ವಾತಾವರಣ, ಜೀರ್ಣಕ್ರಿಯೆ, ವಯಸ್ಸು, ಚಟುವಟಿಕೆಗಳ ಆಧಾರದ ಮೇಲೆ ಸಂಪೂರ್ಣ ವಿಭಿನ್ನ. ಇಂದಿನ ಸಂಶೋಧನೆಗಳಲ್ಲಿ ಕಾಣೆಯಾಗಿರುವ ಪ್ರಮುಖ ಅಂಶ- 'ವೈಯಕ್ತಿಕತೆ'. ಲಕ್ಷಾಂತರ ರುಪಾಯಿ ವ್ಯಯಿಸಿ ಮಾಡಿದ ಅಧ್ಯಯನದಲ್ಲಿ ಭಾಗವಹಿಸಿದ ವ್ಯಕ್ತಿಯಂತೆ ನೀವು ಇರಲು ಸಾಧ್ಯವೇ? ಅವನ ಒತ್ತಡ, ಅವನ ನಿದ್ರೆ, ಅವನ ಜೀರ್ಣಕ್ರಿಯೆ, ಅವನ ಚಟುವಟಿಕೆ- ನಿಮ್ಮದೇನಾ? ಸರ್ವಥಾ ಇಲ್ಲ! ಒತ್ತಡ, ನಿದ್ರೆ, ಜೀರ್ಣಕ್ರಿಯೆ, ಚಟುವಟಿಕೆ, ವಯಸ್ಸು, ವಾತಾವರಣ- ಇವು ಯಾವ ವ್ಯಕ್ತಿಗೂ ಒಂದೇ ರೀತಿ ಇರುವುದಿಲ್ಲ. ಇವುಗಳನ್ನು ಪರಿಗಣಿಸದೆ ಪಾಲಿಸುವ ಆರೋಗ್ಯ ಸಲಹೆಗಳು ಕೆಲವರಿಗೆ ಪ್ರಯೋಜನಕಾರಿಯಾದರೂ ಹಲವರಿಗೆ ಅಪಾಯಕಾರಿ ಆಗಬಹುದು.

ಆಯುರ್ವೇದದ ದೃಷ್ಟಿಕೋನ: ಪ್ರತಿಯೊಬ್ಬ ವ್ಯಕ್ತಿಯೂ ವಿಶೇಷ

ಆಯುರ್ವೇದವು 'ಸದಾ ಪುರುಷಂ ಪುರುಷಂ ವೀಕ್ಷ್ಯ' ಎಂಬ ತತ್ವವನ್ನು ಅನುಸರಿಸುತ್ತದೆ- ಅಂದರೆ ಪ್ರತಿಯೊಬ್ಬ ವ್ಯಕ್ತಿಯ ದೇಹಪ್ರಕೃತಿ, ಶಕ್ತಿ, ವಯಸ್ಸು, ದೋಷಸ್ಥಿತಿ, ವಾಸಿಸುವ ಪ್ರದೇಶ, ಋತು ಮುಂತಾದ ಅಂಶಗಳನ್ನು ವಿಶ್ಲೇಷಿಸಿದ ನಂತರವೇ ಸಲಹೆಗಳನ್ನು ನೀಡುತ್ತದೆ. ಇಬ್ಬರಿಗೆ ಒಂದೇ ರೋಗ ಇದ್ದರೂ, ಆಯುರ್ವೇದದ ಪ್ರಿಸ್ಕ್ರಿಪ್ಷನ್ ಎಂದಿಗೂ ಒಂದೇ ಆಗುವುದಿಲ್ಲ. ಆದ್ದರಿಂದಲೇ ಆಯುರ್ವೇದವು ಹೀಗೆ ಆರೋಗ್ಯ ಸಲಹೆಯನ್ನು ನೀಡುತ್ತದೆ: ನಿಮಗೆ ದಾಹವಾದಾಗ ಮಾತ್ರ ನೀರು ಕುಡಿಯಿರಿ- ಬಾಯಾರಿಕೆಯಿಲ್ಲದೆ ಸೇವಿಸುವ 4-5 ಲೀಟರ್ ನೀರು ಅಪಾಯಕಾರಿ. ನಿಮ್ಮ ಶಕ್ತಿಯ ಅರ್ಧದಷ್ಟೇ ವ್ಯಾಯಾಮ ಮಾಡಿ- ನಮ್ಮ ದೈಹಿಕ ಶಕ್ತಿಯ ಮಾಪನೆ ಮಾಡಿ ನಾವು ಮಾಡುವ ವ್ಯಾಯಾಮದ ಪ್ರಮಾಣವನ್ನು ನಾವು ನಿರ್ಧರಿಸಬೇಕೇ ಹೊರತು ಮತ್ತಾವುದೋ 'ಆ್ಯಪ್' ಅಲ್ಲ.

ಆಯುರ್ವೇದದ ಪ್ರಕಾರ ಮೊಳಕೆ ಕಾಳುಗಳು ನಿತ್ಯ ಸೇವನೆಗೆ ಯೋಗ್ಯವಲ್ಲ, ಜೀರ್ಣಕ್ರಿಯೆ ದುರ್ಬಲವಾಗಿದ್ದರೆ ಮೊಳಕೆಯ ಸೇವನೆ ನಿಷಿದ್ಧ. ಆಪಲ್ ಸಿಡಾರ್ ವಿನೆಗರ್‌ನಂಥ ಪ್ರಾಕೃತಿಕ ಪದಾರ್ಥಗಳೂ ತಪ್ಪಾಗಿ ಸೇವಿಸಿದರೆ ದೇಹಕ್ಕೆ ತೀವ್ರ ಹಾನಿ ಉಂಟುಮಾಡಬಹುದು.

ಯಾವುದೇ ಆರೋಗ್ಯ ಸಲಹೆಯನ್ನು ಪಾಲಿಸುವ ಮುನ್ನ ನಾವು 5 ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು- ಏನು, ಯಾರಿಗೆ, ಯಾವಾಗ, ಹೇಗೆ, ಎಷ್ಟು- ಈ ಐದು ಪ್ರಶ್ನೆಗಳಿಗೂ ಉತ್ತರ ಕಂಡ ನಂತರವೇ ಆಯುರ್ವೇದ ವೈದ್ಯರು ಸಹ ಚಿಕಿತ್ಸೆ ಮತ್ತು ಆಹಾರ ಶಿಫಾರಸುಗಳನ್ನು ನಿಗದಿಪಡಿಸುತ್ತಾರೆ. ಈ ಅಂಶಗಳನ್ನು ಪರಿಗಣಿಸದೇ 'ಜನಪ್ರಿಯ' ಅಥವಾ 'ಸಂಶೋಧನೆ' ಸಾಬೀತುಪಡಿಸಿದೆ ಎಂಬ ಕಾರಣಕ್ಕೆ ಯಾವುದನ್ನಾದರೂ ಕುರುಡಾಗಿ ಅನುಸರಿಸುವುದು ಅಪಾಯಕಾರಿ.

ಸೋಷಿಯಲ್ ಮೀಡಿಯಾ 'ತ್ವರಿತ ಪರಿಹಾರ'ಗಳ ಆಗರ. '5 ದಿನಗಳಲ್ಲಿ ಕೊಬ್ಬು ಕರಗಿಸಿ', '2 ಚಮಚ ಸೇವಿಸಿ ಮಧುಮೇಹ ನಿಲ್ಲಿಸಿ', 'ವೈದ್ಯರು ನಿಮಗೆ ಹೇಳದ ರಹಸ್ಯ'- ಇಂಥ ಶೀರ್ಷಿಕೆಗಳು ಕ್ಲಿಕ್ ಮಾಡಲು ನಮ್ಮನ್ನು ಪ್ರೇರೇಪಿಸುತ್ತವೆ. ಇದು ಒಂದು ಮನೋವೈಜ್ಞಾನಿಕ ಉಪಾಯ. ಭಯ, ಕುತೂಹಲ ಮತ್ತು ತ್ವರಿತ ಪರಿಹಾರದ ಬಯಕೆ- ಈ ಮೂರು ಭಾವನೆಗಳು ಮಾನವನ ತಾರ್ಕಿಕ ಚಿಂತನವನ್ನು ಮಸುಕು ಮಾಡುತ್ತವೆ. ಅದರ ಪರಿಣಾಮ, ವೈಜ್ಞಾನಿಕ ವೈದ್ಯಕೀಯ ಸಲಹೆಯನ್ನು ಬಿಟ್ಟು ಸಾಮಾಜಿಕ ಜಾಲತಾಣದ ಸಲಹೆಗಳಿಗೆ ಜನರು ಮರುಳಾಗುತ್ತಾರೆ. ವೈಜ್ಞಾನಿಕವಾಗಿ, ತ್ವರಿತ ಫಲಿತಾಂಶ ನೀಡುವ ಸಲಹೆಗಳಲ್ಲಿ ದೇಹಕ್ಕೆ ಹಾನಿಯ ಸಾಧ್ಯತೆ ಹೆಚ್ಚು- ಕಾರಣ, ದೇಹವು ತನ್ನ ಸ್ವಾಭಾವಿಕ ಗತಿಯಲ್ಲೇ ಬದಲಾವಣೆಯನ್ನು ಅಳವಡಿಸಿಕೊಳ್ಳಬೇಕಷ್ಟೇ ಹೊರತು, ಶೀಘ್ರ ಪರಿಣಾಮ ಎಂದು ಏಕಾಏಕಿ ಪಾಲಿಸಿದರೆ ಅದು ದೇಹದ ಸ್ವಾಭಾವಿಕ ಗತಿಯನ್ನು ಬಲವಂತವಾಗಿ ಬದಲಿಸಿ ವಿವಿಧ ಅಸಮತೋಲನಗಳಿಗೆ ಎಡೆಮಾಡಿಕೊಡುತ್ತದೆ. ಈ ಮನೋವಿಜ್ಞಾನವನ್ನು ಅರ್ಥಮಾಡಿಕೊಂಡು ಯಾವುದೇ ಹೊಸ ಆರೋಗ್ಯ ಸಲಹೆಯನ್ನು ಪಾಲಿಸುವ ಮುನ್ನ 'ಇದು ನನಗೆ ಅಗತ್ಯ ಇದೆಯೇ ಅಥವಾ ಇದು ಕೇವಲ ನನ್ನ ಭಯವೇ?' ಎಂದು ಪರಿಶೀಲಿಸಿಕೊಳ್ಳಬೇಕು.

ಸ್ವಯಂ-ಚಿಕಿತ್ಸೆ ಹೊಸದಲ್ಲ, ಆದರೆ ಈಗ ಅದರ ವೇಗ ಅತಿರೇಕವಾಗಿದೆ. ವೈದ್ಯಕೀಯ ದೃಷ್ಟಿಯಿಂದ ಇದರಿಂದಾಗುವ ಮೂರು ದೊಡ್ಡ ಅಪಾಯಗಳು-

1) **ತಪ್ಪಾದ ಪ್ರಮಾಣ:** ಗಿಡಮೂಲಿಕೆಯಾದರೂ ಹೆಚ್ಚು ಪ್ರಮಾಣದಲ್ಲಿ ಅಕ್ರಮವಾಗಿ ಸೇವಿಸಿದರೆ ತೀವ್ರ ಹಾನಿ ಸಂಭವಿಸಬಹುದು. ವಿಶೇಷವಾಗಿ ಕಹಿ-ತೀಕ್ಷ್ಣ ದ್ರವ್ಯಗಳು ಖಾಲಿ ಹೊಟ್ಟೆಯಲ್ಲಿ ಹೆಚ್ಚು ಅಪಾಯಕರ.

2) **ತಪ್ಪಾದ ದ್ರವ್ಯ ಬಳಕೆ:** ಒಬ್ಬನಿಗೆ ಬಾಲ್ಯದಿಂದಲೂ ಬಲವಾದ ಜೀರ್ಣಶಕ್ತಿಯಿದ್ದು, ಹೆಚ್ಚು ವ್ಯಾಯಾಮ ಮಾಡುವವನಾಗಿದ್ದರೆ, ಮೊಳಕೆಕಾಳುಗಳು ಅವನಿಗೆ ಹೊಂದಬಹುದು. ಅದೇ ಪದಾರ್ಥವು ಜೀರ್ಣಶಕ್ತಿ ಕಡಿಮೆ ಇರುವವರಿಗೆ, ಕೂತಲ್ಲೇ ಕೆಲಸ ಮಾಡುವವರಿಗೆ ಒದ್ದಾಟಕ್ಕೆ ಕಾರಣ.

3) **ತಾತ್ಕಾಲಿಕ ಉಪಶಮನ:** ಲಕ್ಷಣ ಕಡಿಮೆಯಾದರೆ ರೋಗ ಗುಣವಾಯಿತು ಎಂದು ಭಾವಿಸಿ ಸುಮ್ಮನಾಗುವುದು ಹೆಚ್ಚಿನ ಅಪಾಯಕ್ಕೆ ಕಾರಣವಾಗಬಹುದು. ಹಾಗಾಗಿ ರೋಗದ ಸಂಪೂರ್ಣ ಸ್ವಭಾವವನ್ನು ಅರಿತು ಚಿಕಿತ್ಸೆ ಮಾಡಿಕೊಳ್ಳುವುದು ಕ್ಷೇಮ.

ವಿಶ್ವ ಆರೋಗ್ಯ ಸಂಸ್ಥೆಯೂ ಹೀಗೆ ಎಚ್ಚರಿಸಿದೆ: ''Social media-driven self-treatment is a rising global risk''.

ಆಯುರ್ವೇದ ಯಾಕೆ ಇನ್ನೂ ಪ್ರಾಸಂಗಿಕ? 'Personalised Medicine', 'Genetic Diet', 'Gut-based Lifestyle'- ಇವುಗಳನ್ನು ಇಂದಿನ ಆಧುನಿಕ ವೈದ್ಯಕೀಯ ಹೊಸದಾಗಿ ಪರಿಚಯಿಸುತ್ತಿದೆ. ಆದರೆ ಆಯುರ್ವೇದವು ಇದನ್ನು ಸಾವಿರಾರು ವರ್ಷಗಳ ಹಿಂದೆ ಹೇಳಿದೆ. ಆಯುರ್ವೇದವು ಪ್ರತಿ ವ್ಯಕ್ತಿಯ ವೈಶಿಷ್ಟ್ಯವನ್ನು ಗಮನಿಸಿದ ನಂತರವೇ ಸಲಹೆಯನ್ನು ನೀಡುತ್ತದೆ. 1.ಪ್ರಕೃತಿ, 2.ವಿಕೃತಿ, 3. ಸಾರ, 4. ಸಂಹನನ, 5. ಪ್ರಮಾಣ, 6. ಸಾತ್ಮ್ಯ, 7.ಸತ್ವ, 8. ಆಹಾರಶಕ್ತಿ, 9.ವ್ಯಾಯಾಮಶಕ್ತಿ, 10.ವಯ. ಆಯುರ್ವೇದದಲ್ಲಿ ಈ ಹತ್ತೂ ವಿಷಯಗಳನ್ನು ಪ್ರತಿ ವ್ಯಕ್ತಿಯಲ್ಲೂ ಗಮನಿಸಿದ ನಂತರವೇ ಸಲಹೆ/ಚಿಕಿತ್ಸೆ. ಈ ಕಾರಣಕ್ಕಾಗಿ ಆಯುರ್ವೇದ ಎಂದಿಗೂ ಸಾಮಾನ್ಯ ಸಲಹೆ ನೀಡುವುದಿಲ್ಲ. ಎರಡು ಜನರಿಗೆ ಒಂದೇ ರೀತಿ ಜ್ವರ ಬಂದರೂ, ಆಯುರ್ವೇದದ ಚಿಕಿತ್ಸಾ ವಿಧಾನ ಒಂದೇ ಆಗುವುದಿಲ್ಲ.

ಸಾಮಾಜಿಕ ಜಾಲತಾಣ, ಗೂಗಲ್ ಅಥವಾ ವಾಟ್ಸಾಪ್‌ನಲ್ಲಿ ಕಾಣುವ ಸಾಮಾನ್ಯ ಆರೋಗ್ಯ ಸಲಹೆಗಳನ್ನು ವೈದ್ಯರ ಮಾರ್ಗದರ್ಶನವಿಲ್ಲದೆ ಅನುಸರಿಸುವುದು ಆರೋಗ್ಯಕ್ಕೆ ಹಾನಿಕಾರಕ. ನಿಮ್ಮ ಸ್ನೇಹಿತರಿಗೆ ಉಪಕಾರಿಯಾದದ್ದೇ ನಿಮಗೆ ತೊಂದರೆ ತರಬಹುದು. ನೈಸರ್ಗಿಕ ಗಿಡಮೂಲಿಕೆಗಳೂ ತಪ್ಪಾಗಿ ಉಪಯೋಗಿಸಿದರೆ ಗಂಭೀರ ಅಡ್ಡಪರಿಣಾಮ ನೀಡಬಹುದು. ಆದ್ದರಿಂದ ಯಾವ ವಿಧಾನವನ್ನೇ ಅನುಸರಿಸುವ ಮುನ್ನ- ಅದು 'ನಿಮ್ಮ' ದೇಹ, 'ನಿಮ್ಮ' ಆರೋಗ್ಯಸ್ಥಿತಿ ಮತ್ತು 'ನಿಮ್ಮ' ಜೀವನಶೈಲಿಗೆ ಹೊಂದಿಕೆಯಾಗುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ. ಮುಂದೆ ಯಾರಾದರೂ ''ಈ ಸಲಹೆ ಸಂಶೋಧನೆಯಲ್ಲಿ ಸಾಬೀತಾಗಿದೆ'' ಎಂದು ಹೇಳಿದರೆ, ಒಂದು ಸರಳ ಪ್ರಶ್ನೆ ಕೇಳಿ- ''ಇದು ನನಗೆ ಸರಿ ಹೊಂದುತ್ತದೆಯೇ?''. ಆರೋಗ್ಯದ ಅತ್ಯಂತ ಸುರಕ್ಷಿತ ಮಾರ್ಗವೆಂದರೆ- ವೈಯಕ್ತಿಕಗೊಳಿಸಿದ, ಸಮಗ್ರ ಮತ್ತು ಸಮಯಪರೀಕ್ಷಿತ ಜ್ಞಾನ. ಆ ಕಾರಣಕ್ಕೆ ಆಯುರ್ವೇದವು ಇಂದು ಮತ್ತಷ್ಟು ಪ್ರಾಸಂಗಿಕವಾಗಿದೆ.

ಇಂದಿನ ಡಿಜಿಟಲ್ ಯುಗದಲ್ಲಿ ಆರೋಗ್ಯ ಸಲಹೆಗಳು ಎಲ್ಲೆಡೆ ಲಭ್ಯ. ಒಂದು ಕ್ಲಿಕ್‌ಗೆ 'ಸಂಶೋಧನೆ ಸಾಬೀತುಪಡಿಸಿದೆ', '100% ನೈಸರ್ಗಿಕ', 'ಶಾಶ್ವತ ಪರಿಹಾರ' ಎಂಬ ಬರಹಗಳು ನಮ್ಮನ್ನು ಸೆಳೆಯುತ್ತವೆ. ಆದರೆ, ಸ್ವಾಸ್ಥ್ಯ ಎನ್ನುವುದು ಒಂದೇ ಮಾಪದಂಡಕ್ಕೆ ಹೊಂದುವ ಗಣಿತವಲ್ಲ. ಇದು ಪ್ರತಿಯೊಬ್ಬರ ದೇಹ, ಮನಸ್ಸು, ವಯಸ್ಸು, ಜೀರ್ಣಕ್ರಿಯೆ, ವಾತಾವರಣ ಮತ್ತು ಜೀವನಶೈಲಿಯ ಸೂಕ್ಷ್ಮ ಸಂಯೋಜನೆ. ಒಂದೇ ಸಲಹೆ ಎಲ್ಲರಿಗೂ ಸರಿ ಎನ್ನುವುದು ತಪ್ಪು ಕಲ್ಪನೆ ಮತ್ತು ಕೆಲವೊಮ್ಮೆ, ಈ ತಪ್ಪು ಕಲ್ಪನೆ ಜೀವಿತಕ್ಕೆ ಹಾನಿ ಮಾಡಬಹುದು.

ಆಯುರ್ವೇದದ ಮಹತ್ವವು ಇಲ್ಲಿ ಬೆಳಗುತ್ತದೆ. ನಡೆಯುವ ದಾರಿ ಎಲ್ಲರಿಗೂ ಒಂದೇ ಎಂದು ಹೇಳುವುದಿಲ್ಲ. ಬದಲಾಗಿ, 'ನೀವು ಯಾರು?' ಎಂಬ ಮೂಲ ಪ್ರಶ್ನೆಯಿಂದಲೇ ಚಿಕಿತ್ಸೆ ಆರಂಭವಾಗುತ್ತದೆ. ವ್ಯಕ್ತಿಗುಣಾಧಾರಿತ ಸಲಹೆಗಳು ಮತ್ತು ಸಮಗ್ರ ದೃಷ್ಟಿಕೋನ ಹೊಂದಿರುವ ಆಯುರ್ವೇದವು ಇಂದಿಗೂ ಅತ್ಯಂತ ಪ್ರಾಸಂಗಿಕವಾಗಿದೆ. ನೆನಪಿಡಿ- ಆರೋಗ್ಯದಲ್ಲಿ ವೈಜ್ಞಾನಿಕತೆ ಎಂದರೆ- 'ವೈಯಕ್ತಿಕತೆ'! ಈ ತತ್ತ್ವದ ಹೊರತಾಗಿ ನೀಡಿದ ಸಲಹೆಯು ಎಂದಿಗೂ ಸ್ವಾಸ್ಥ್ಯದ ಪಥವಾಗಲು ಸಾಧ್ಯವಿಲ್ಲ!

ಚರ್ಚಾವೇದಿಕೆ
ಡಾ. ಸುಧಾಕರ ಹೊಸಳ್ಳಿ
vveditoped@gmail.com

ಮತಾಂತರವಾದರೆ ಮೋಸಹೋಗುತ್ತೀರಿ

ಕರ್ನಾಟಕ ಸರಕಾರವು ಈಚೆಗೆ ಜಾತಿ ಸಮೀಕ್ಷೆಗೆ (ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಪರಾಮರ್ಶೆ) ಮುಂದಡಿ ಇಟ್ಟಿದ್ದು ಗೊತ್ತಿರುವ ಸಂಗತಿಯೇ. 'ಇದು ಹಿಂದೂಗಳನ್ನು ವಿಭಜಿಸುವ, ಹಿಂದೂ ಧರ್ಮವನ್ನು ವಿಘಟಿಸುವ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಮತಾಂತರ ಚಟುವಟಿಕೆಗಳಿಗೆ ನೆರವಾಗಲು ಹಮ್ಮಿಕೊಳ್ಳಲಾಗಿರುವ ಸಮೀಕ್ಷೆ' ಎಂಬುದಾಗಿ ವಿರೋಧ ಪಕ್ಷಗಳು ಆರೋಪಿಸಿವೆ. ಸಂವಿಧಾನಬದ್ಧವಾಗಿ ಜಾತಿ ಸಮೀಕ್ಷೆ ಮಾಡಲು ಕೇಂದ್ರ ಸರಕಾರಕ್ಕೆ ಮಾತ್ರವೇ ಅಧಿಕಾರವಿದ್ದರೂ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಪರಾಮರ್ಶೆಯನ್ನು ಮುಂದುಮಾಡಿ ರಾಜ್ಯ ಸರಕಾರವು ಈ ಸಮೀಕ್ಷೆಯನ್ನು ಸಮರ್ಥಿಸಿಕೊಂಡಿದೆ.

ಮತ್ತೊಂದೆಡೆ, ಕೆಲವು ಮತಾಂಧ ಮುಸ್ಲಿಮರು 'ಐ ಲವ್ ಯೂ ಮೊಹಮದ್' ಎಂಬ ಬ್ಯಾನರ್ ಹಿಡಿದು ದೇಶದೆಲ್ಲೆಡೆ ಗಲಭೆ ಸೃಷ್ಟಿಸುವ ಹುನ್ನಾರವನ್ನೂ ಮಾಡುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ತೀವ್ರತರವಾಗಿ ಹಬ್ಬಿದ ಈ ಕಾನೂನೇತರ ಚಟುವಟಿಕೆ ಕರ್ನಾಟಕದವರೆಗೂ ಪಸರಿಸಿದೆ. ಇಷ್ಟರ ನಡುವೆ ಎಡಪಂಥೀಯರು, 'ಹಿಂದೂ ಧರ್ಮದಲ್ಲಿ ಅಸಮಾನತೆ ಇದೆ, ಜಾತೀಯತೆ ಇದೆ; ಹಾಗಾಗಿ ಮತಾಂತರ ಅನಿವಾರ್ಯ' ಎಂಬ ಅಪ್ರೋಚ್ ಅನ್ನು ವಿಸ್ತರಿಸಲು ಪ್ರಯತ್ನಿಸುತ್ತಿದ್ದಾರೆ. ಇಂಥ ಕ್ಷುದ್ರ ಯೋಜನೆಗೆ ಅವರು ಬಾಬಾ ಸಾಹೇಬ್ ಅಂಬೇಡ್ಕರರ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಇಂಥ ಕಾಲಘಟ್ಟದಲ್ಲಿ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ಕುರಿತು ಅಂಬೇಡ್ಕರರು ಮಂಡಿಸಿದ್ದ ಸಂಶೋಧಿತ ಲಿಖಿತ ದಾಖಲೆಗಳ ಈ ಸಾರವನ್ನು ಅವಲೋಕಿಸಬೇಕಾದ ಅನಿವಾರ್ಯತೆ ಉದಯಿಸಿದೆ: ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ವಿಸ್ತರಣೆಯ ದಾಹಕ್ಕೆ ಸ್ವಾತಂತ್ರ್ಯಪೂರ್ವದಿಂದಲೂ ಲಕ್ಷಾಂತರ ಹಿಂದೂಗಳ ಜೀವಬಲಿಯಾಗಿದ್ದು ಈ ನೆಲದ ದೌರ್ಭಾಗ್ಯ. ಕ್ರೈಸ್ತರು ಆಧುನಿಕ ಶಿಕ್ಷಣ ಮತ್ತು ಆರ್ಥಿಕ ಸಹಕಾರದ ನೆಪದಲ್ಲಿ ನಿರಂತರವಾಗಿ ಹಿಂದೂಗಳನ್ನು ತಮ್ಮ ಮೂಲ ಧರ್ಮವನ್ನು ತ್ಯಜಿಸುವಂತೆ ಪ್ರೇರೇಪಿಸುತ್ತಲೇ ಇದ್ದಾರೆ. ಈ ಕಾರ್ಯದಲ್ಲಿ, ಹಿಂದೂಗಳ ಹೋರಾಟದ ನಡುವೆಯೂ ಕ್ರೈಸ್ತರು ಯಶಸ್ಸನ್ನು ಪಡೆದಿದ್ದಾರೆ, ಪಡೆಯುತ್ತಲೇ ಇದ್ದಾರೆ. ಮುಸ್ಲಿಮರಂತೂ ತಮ್ಮ ಧರ್ಮದ ಬೋಧನೆ ಎಂದು 'ಕಾಫಿರ ಪದ್ಧತಿ'ಯ (ಇಸ್ಲಾಂ ಅನ್ನು ಒಪ್ಪದವರನ್ನು, ಮೂರ್ತಿಪೂಜಕರನ್ನು ಕೊಲ್ಲುವ ಸಿದ್ಧಾಂತ) ಅನುಷ್ಠಾನಕ್ಕಾಗಿ, ಮುಸ್ಲಿಮರಾಗಿ ಮತಾಂತರಗೊಳ್ಳದ ಹಿಂದೂಗಳನ್ನು ಕಗ್ಗೊಲೆ ಮಾಡಲೂ ಹಿಂಜರಿಯುತ್ತಿಲ್ಲ. ಅದು ಸ್ವಾತಂತ್ರ್ಯಪೂರ್ವದಲ್ಲಿರಬಹುದು, ದೇಶವಿಭಜನೆಯ ಸಂದರ್ಭದಲ್ಲಿರಬಹುದು ಅಥವಾ ಭಾರತದ ಸಂವಿಧಾನೋತ್ತರ ಕಾಲಘಟ್ಟದಲ್ಲಿರಬಹುದು, ಇಂಥ ಸಾವಿರಾರು ಪ್ರಕರಣಗಳು ದಾಖಲೆಯಾಗಿ ಸಿಗುತ್ತವೆ. ಇಷ್ಟೆಲ್ಲದರ ನಡುವೆ ಎಡಪಂಥೀಯರು ತಮ್ಮದೇ ಆದ ದೃಷ್ಟಿಯಲ್ಲಿ 'ಮುಸ್ಲಿಂ-ದಲಿತ್ ಭಾಯಿ ಭಾಯಿ' ಎಂಬ ಘೋಷಣೆಯೊಂದಿಗೆ ಶೋಷಿತರನ್ನು, ಹಿಂದುಳಿದ ವರ್ಗದವರನ್ನು ಇಸ್ಲಾಂ ಕಡೆಗೆ ಸೆಳೆಯುವ ತಂತ್ರಗಳನ್ನು ರೂಪಿಸುತ್ತಿದ್ದಾರೆ.

ಆದರೆ ಕೆಲವರು, 'ಕೇವಲ ಶೋಷಿತರನ್ನಲ್ಲದೆ ಉಳಿದವರಿಗೂ ಇಸ್ಲಾಂ ಧರ್ಮವು ಶಾಂತಿತತ್ವವನ್ನು, ಜಾತ್ಯತೀತತೆಯ ತತ್ವವನ್ನು ಬೋಧಿಸುತ್ತದೆ; ಸ್ವತಃ ಬಾಬಾ ಸಾಹೇಬ್ ಅಂಬೇಡ್ಕರರು ಇಸ್ಲಾಂನ ಮೂಲತತ್ವಗಳನ್ನು ಶ್ಲಾಘಿಸಿದ್ದರು, ಅಭಿನಂದಿಸುತ್ತಿದ್ದರು' ಎಂಬ ಅಸತ್ಯದ ನೀತಿಯನ್ನು ನಿರೂಪಿಸುತ್ತಿದ್ದಾರೆ. ಇವರು ಮತಾಂಧ ಮುಸ್ಲಿಮರಿಗಿಂತಲೂ ಅಪಾಯಕಾರಿಯಾಗಿ ಹಿಂದೂಧರ್ಮದ ಮೇಲೆ ಎರಗುತ್ತಿದ್ದಾರೆ ಎಂಬುದು ಕಟುಸತ್ಯ. ಇಂಥ ವಾಮಯೋಜನೆಗಳನ್ನು ತುಂಡರಿಸಲು ಬಾಬಾ ಸಾಹೇಬರ ಮೂಲ ಸಂದೇಶಗಳನ್ನು ಸಮಾಜದ ಮುಂದಿಸಿರಬೇಕಿದೆ.

ಇಸ್ಲಾಂ ಮತಾಂಧತೆಯ ಹಪಹಪಿತನಕ್ಕೆ ಬದುಕನ್ನು ಕಳೆದುಕೊಂಡ ಸಹಸ್ರಾರು ಹಿಂದೂಗಳು, ಈ ಮತಾಂಧತೆಯ ಪೂರ್ಣ ಆಯಾಮವನ್ನು ಮೂಲಭೂತವಾಗಿ ಅರ್ಥೈಸಿಕೊಳ್ಳುವಲ್ಲಿ ವಿಫಲರಾಗಿರುವುದು ವಿಸ್ತರಣಾವಾದಕ್ಕೆ ಗ್ರಾಸವನ್ನು ಒದಗಿಸುತ್ತದೆ. 'ಇಸ್ಲಾಂ ಅನ್ನು ಒಪ್ಪದವರು ಬದುಕಲು ಅರ್ಹತೆಯನ್ನೇ ಪಡೆದಿಲ್ಲ; ಮುಸ್ಲಿಂ ಆಗಿ ಮತಾಂತರಗೊಳ್ಳದವರನ್ನು ಕೊಲ್ಲುವುದೇ ಪರಮಶ್ರೇಷ್ಠ ಧರ್ಮಕಾರ್ಯ' ಎನ್ನುವ ಕಾಫಿರ ಚಿಂತನೆಯನ್ನು ವ್ಯಾಪಕವಾಗಿ ಬಗೆದುನೋಡದ ಕಾರ್ಯವು, ಮತಾಂಧತೆಗೆ ನೀರೆರೆಯುವ ಬಗೆಯೇ ಆಗಿದೆ.

ಹಿಂದೂಗಳನ್ನು ಮತಾಂತರ ಮಾಡಲು ಇಸ್ಲಾಂ ಮತ್ತು ಕ್ರೈಸ್ತ ಮತಗಳು ಪೈಪೋಟಿಗಿಳಿದಿವೆ. ಇತ್ತೀಚೆಗೆ, ಬೆಂಗಳೂರಿನ ಕ್ಲಾರೆನ್ಸ್ ಶಾಲೆಯಲ್ಲಿ ಬೈಬಲ್ ಅಧ್ಯಯನವನ್ನು ಸಾರ್ವತ್ರಿಕವಾಗಿ ಕಡ್ಡಾಯಗೊಳಿಸಿದ ಪ್ರಕರಣವು ದೊಡ್ಡ ಮಟ್ಟದ ಚರ್ಚೆಯನ್ನು ಹುಟ್ಟುಹಾಕಿತ್ತು. ಈ ಕಡ್ಡಾಯದ ಸಂಬಂಧದ ಷರತ್ತುಪತ್ರಕ್ಕೆ ಸಹಿ ಹಾಕುವಂತೆ ವಿದ್ಯಾರ್ಥಿಗಳನ್ನು ಆಗ್ರಹಿಸುವ ಮತ್ತು ಅಂಥವರಿಗೆ ಮಾತ್ರವೇ ಪ್ರವೇಶಾತಿ ನೀಡುವ ಹಂತಕ್ಕೂ ಈ ವಿದ್ಯಮಾನ ತಲುಪಿದ್ದನ್ನು ನೋಡಬಹುದು.

ಅಂಬೇಡ್ಕರರು, ಇಸ್ಲಾಂ ಮತ್ತು ಕ್ರೈಸ್ತ ಮತದ ಬಗ್ಗೆ ನಡೆಸಿದ ದೀರ್ಘ ಅಧ್ಯಯನದಿಂದ ತಾವು ಪಡೆದ ಫಲಿತಾಂಶದ ಅನುಸಾರ ಕಟುವಾದ ಟೀಕೆಯನ್ನು ಮಾಡಿದ್ದಾರೆ; ಹಿಂದೂಗಳು ಯಾವುದೇ ಕಾರಣಕ್ಕೂ ಇಸ್ಲಾಂ ಮತ್ತು ಕ್ರೈಸ್ತ ಧರ್ಮದವರ ಪ್ರಲೋಭನೆಗಳಿಗೆ ಮಣಿಯಬಾರದು ಎಂಬ ನಿಖರ ನಿರ್ದೇಶನವನ್ನೂ, ಎಚ್ಚರಿಕೆಯನ್ನೂ ನೀಡಿದ್ದಾರೆ. ಇಷ್ಟಾಗಿಯೂ ಕೆಲವರು ಪ್ರಸಕ್ತ ಕಾಲಘಟ್ಟದಲ್ಲೂ, ಮತಾಂತರಕ್ಕೆ ಪೂರಕವಾಗಿ ವಿವಿಧ ರೂಪಗಳನ್ನು ಒದಗಿಸುತ್ತಿದ್ದಾರೆ; 'ಇಸ್ಲಾಂ ಮತ್ತು ಕ್ರೈಸ್ತ ಮತಕ್ಕೆ ಹಿಂದೂಗಳು ಮತಾಂತರವಾಗುವುದು ಅಂಬೇಡ್ಕರರ ಅಭಿಮತ' ಎಂಬಂತೆ ವ್ಯವಹರಿಸುವವರನ್ನು ವಿರೋಧಿಸಬೇಕಿದೆ ಮತ್ತು ಧರ್ಮಜಾಗೃತಿಯನ್ನು ಮೂಡಿಸಿಕೊಳ್ಳಬೇಕಿದೆ. ಇಂಥ ಪಕ್ವತೆಯನ್ನು ಅಂಬೇಡ್ಕರರ ಸಂಶೋಧನೆಗಳೇ ನಮ್ಮಲ್ಲಿ ಮೈಗೂಡಿಸುತ್ತವೆ.

1936ರ ಮೇ 11ರಂದು ಅಂಬೇಡ್ಕರರು ವಾರ್ಧಾಗೆ ಭೇಟಿಕೊಟ್ಟು, ನಿಮ್ನ ವರ್ಗದ ಜನರ ಕುರಿತು ಮಾತನಾಡಿದರು. 'ನಿರ್ಭಯ ತರುಣ್ ಸಂಘ'ವು ಈ ಭೇಟಿಯ ಒಟ್ಟು ಯೋಜನೆಯನ್ನು ರೂಪಿಸಿತ್ತು. ಇದೇ ಸಂದರ್ಭದಲ್ಲಿ ನಿಮ್ನ ವರ್ಗದ ಮುಖಂಡರಾದ ಪುರುಷೋತ್ತಮ ಖರ್ಪದೆ, ಶಂಕರ್ ರಾವ್ ಸೋನಾವಣೆ, ಗೋಮಾಜಿ ತೆಂಬಾರೆ ಮುಂತಾದವರ ಜತೆ ಅಂಬೇಡ್ಕರರು ದೀರ್ಘ ಸಮಾಲೋಚನೆ ನಡೆಸಿದರು ಹಾಗೂ ಮತಾಂತರದ ಅಪಾಯವನ್ನು ಹೇಗೆ ಎದುರಿಸಬೇಕೆಂಬ ಮಾರ್ಗದರ್ಶನವನ್ನೂ ನೀಡಿದರು. ಆಗಿನ ಅವರ ಸ್ಪಷ್ಟ ಮಾತುಗಳು ಹೀಗಿವೆ: ''ಇಸ್ಲಾಂ ಅಥವಾ ಕ್ರೈಸ್ತ ಮತವನ್ನು ಈಗಲೇ ಸೇರುವಂತೆ ನಾನು ಯಾರಿಗೂ ಒಲೈಸುತ್ತಿಲ್ಲ, ಆಗ್ರಹಿಸುತ್ತಿಲ್ಲ. ಯಾರೇ ಆಗಲಿ, ಇಸ್ಲಾಂ ಅಥವಾ ಬೇರಾವುದೇ ಮತವನ್ನು ಸೇರುವಂತೆ ಇನ್ನೊಬ್ಬರಿಗೆ ಶಿಫಾರಸು ಮಾಡಿದರೆ, ಆ ಶಿಫಾರಸನ್ನು ಪಾಲಿಸುವವರು ಮೋಸಹೋಗುತ್ತಾರೆ. ಅದಕ್ಕೆ ನಾನು ಹೊಣೆಗಾರನಾಗುವುದಿಲ್ಲ. ನಾನು ಮತಾಂತರದ ಬಗ್ಗೆ ಘೋಷಣೆ ಮಾಡಿರುವುದು ವಾಸ್ತವ; ಆದರೆ ಯಾವುದೇ ನಿರ್ದಿಷ್ಟ ಮತಕ್ಕೆ ಸೇರಿಕೊಳ್ಳಿ ಎಂದು ಇದುವರೆಗೆ ಹೇಳಿಲ್ಲ. ಅಲ್ಲಿಯವರೆಗೂ ಎಲ್ಲರೂ ಮತಾಂತರದ ಬಗ್ಗೆ ಪ್ರಚಾರ ಮಾಡಲೇಬೇಕು, ಆದರೆ ಇಂಥದ್ದೇ ಮತಕ್ಕೆ ಮತಾಂತರ ಆಗಬೇಕೆಂದು ಪ್ರಚಾರ ಮಾಡಬೇಡಿ. ನಾನು ಘೋಷಣೆ ಮಾಡಿದ ನಂತರವೇ ಅಸ್ಪೃಶ್ಯರೆಲ್ಲರೂ ಮುಂದುವರಿಯಬೇಕು''.

ಅಂಬೇಡ್ಕರರು ಮತಾಂತರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಂತೆ ಮುಸ್ಲಿಮರು ಮತ್ತು ಕ್ರೈಸ್ತರು ದೊಡ್ಡ ದೊಡ್ಡ ಆಮಿಷಗಳನ್ನು ಮುಂದಿಟ್ಟು ತಂತಮ್ಮ ಮತಕ್ಕೆ ಸೇರುವಂತೆ ದುಂಬಾಲುಬಿದ್ದರೂ, ಶ್ರೇಷ್ಠ ರಾಷ್ಟ್ರಪ್ರೇಮಿಯಾದ ಅಂಬೇಡ್ಕರರು, ''ನಾನು ಇಸ್ಲಾಂ ಅಥವಾ ಕ್ರೈಸ್ತ ಮತಕ್ಕೆ ಸೇರುವುದು ಧರ್ಮಾಂತರವಾಗುವುದಿಲ್ಲ, ಬದಲಿಗೆ ಅದು ರಾಷ್ಟ್ರಾಂತರವಾಗುತ್ತದೆ. ನಾನು ರಾಷ್ಟ್ರಾಂತರವನ್ನು ಎಂದಿಗೂ ಒಪ್ಪುವುದಿಲ್ಲ'' ಎಂದು ಹೇಳಿ ಅವರ ಆಹ್ವಾನವನ್ನು ತಿರಸ್ಕರಿಸಿದ್ದರು. ಶೋಷಿತರು ಸೇರಿದಂತೆ ನಾಡಿನ ಯುವಕರು, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ವಿಷಯದಲ್ಲಿ ಅಂತರ ಕಾಯ್ದುಕೊಳ್ಳಬೇಕು, ಆ ಧರ್ಮಗಳು ಅಪಾಯಕಾರಿ ಎಂದು ಅಂಬೇಡ್ಕರರು ನೀಡಿದ ಅಧ್ಯಯನದ ತಳಹದಿಯುಳ್ಳ ದೂರದೃಷ್ಟಿಯ ಸಂದೇಶವನ್ನು ಎಚ್ಚರಿಕೆಯಾಗಿ ಪರಿಗಣಿಸಿ, ಆ ಕುರಿತು ತೀವ್ರ ಗಮನ ಹರಿಸುವ ಅಗತ್ಯವಿದೆ.

(ಆಧಾರ: ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು. ಸಂಪುಟ 18; ಪುಟ 342-343)

(ಲೇಖಕರು ಸಂವಿಧಾನ ತಜ್ಞರು)

ಹಂಜ ಸತ್ಯವನ್ನು ತಿರುಚುತ್ತಿರುವುದೇಕೆ? ಓದುಗರೇ ನಿರ್ಣಯಿಸಲಿ

ರವಿ ಹಂಜ ಸೃಷ್ಟಿಸಿದ ಬೋಗಸ್ ಹಿನ್ನೆಲೆಯಲ್ಲಿ ನನಗೆ ಇಷ್ಟವಿಲ್ಲವಾದರೂ ನನ್ನ ಮನೆತನದ ಹೆಸರು 'ಜಾಮದಾರ' ಶಬ್ದದ ಬಗ್ಗೆ ಸತ್ಯ ಸಂಗತಿಗಳನ್ನು ಹೇಳಲೇಬೇಕಾಗಿದೆ. ಇಲ್ಲದಿದ್ದರೇ ಹಂಜ ಬರೆದಿದ್ದೇ ಸತ್ಯ ಎಂದು ಓದುಗರು ಭಾವಿಸಬಹುದು. ಅವರು ಬಳಸಿದ 'ಜಮೇದಾರ', 'ಜಮಾದಾರ' ಎಂಬ ಶಬ್ದಗಳಿಗೂ, ಅವುಗಳ ಇತಿಹಾಸಕ್ಕೂ ಮತ್ತು ನನ್ನ ಹೆಸರು 'ಜಾಮದಾರ' ಶಬ್ದಕ್ಕೂ ಯಾವುದೇ ಸಂಬಂಧವಿಲ್ಲ. ಇದು ಶುದ್ಧ ಮರಾಠಿ ಶಬ್ದ! ಇದರ ಇತಿಹಾಸವನ್ನು ಮರಾಠಾ ಸಾಮ್ರಾಜ್ಯದ ಇತಿಹಾಸದ ನೂರಾರು ಗ್ರಂಥಗಳಲ್ಲಿದೆ.

ಮಾರುತ್ತರ
ಎಸ್. ಎಂ.ಜಾಮದಾರ
vveditoped@gmail.com

ಭಾಗ- 1

ವಿಶ್ವವಾಣಿಯ 'ಬಸವ ಮಂಟಪ' ಅಂಕಣದಲ್ಲಿ ಸುಮಾರು ಒಂದು ವರ್ಷದಿಂದ 'ರವಿ ಹಂಜ್' ಹೆಸರಿನ ಓರ್ವರು ಇಪ್ಪತ್ತಕ್ಕೂ ಹೆಚ್ಚು ಲೇಖನಗಳನ್ನು ಈವರೆಗೆ ಬರೆದಿದ್ದಾರೆ. ಅವರ ಮೂಲ ಹೆಸರು 'ರವಿ ಹಂಜಗೀಮಠ'. ದಾವಣಗೆರೆ ಮೂಲದವರು, ಈಗ ಶಿಕಾಗೊ ನಗರವಾಸಿ. ಅವರೇ ಹೇಳಿಕೊಂಡಂತೆ ದಾವಣಗೆರೆಯ ಒಂದು ಮಠದ ಅಯ್ಯನವರು. ಅಯ್ಯನವರು ಅಂದರೆ ಜಂಗಮರು. ಜಂಗಮರು ತಮ್ಮನ್ನು ವೀರಶೈವರು ಎಂದು ಭಾವಿಸುವುದು ಎಷ್ಟು ಸರಿಯೆನ್ನುವುದೇ ಒಂದು ಜಿಜ್ಞಾಸೆಯ ಪ್ರಶ್ನೆ! ಬಸವಣ್ಣನ ಶರಣ ಧರ್ಮವು ಬೆಳೆದಂತೆ ವೀರಶೈವವು ಕ್ಷೀಣಿಸುತ್ತದೆ ಎನ್ನುವುದು ಅವರ ಅಂಜಿಕೆ. ಶರಣ ಧರ್ಮವೇ ಲಿಂಗಾಯತವೆಂದು ಈಗ ಜನಜನಿತವಾಗಿದೆ. ಆದ್ದರಿಂದ ವೀರಶೈವರೆಂದೇ ಹೇಳಿಕೊಳ್ಳುವ ರವಿ ಹಂಜರು ಲಿಂಗಾಯತ ಹೋರಾಟವನ್ನು, ಅದರ ವಿದ್ವಾಂಸರನ್ನು ಮತ್ತು ನಾಯಕರನ್ನು ಅಲ್ಲದೆ ಬಸವಣ್ಣನವರ ಅನುಯಾಯಿಗಳನ್ನು ನಿರಂತರವಾಗಿ ತಮ್ಮ 'ವಿಶ್ವವಾಣಿ' ಲೇಖನಗಳಲ್ಲಿ ಮನಸಿಗೆ ಬಂದಂತೆ ಹಿಗ್ಗಾಮುಗ್ಗಾ ನಿಂದಿಸುತ್ತಲೇ ಬಂದಿದ್ದು ಸೋಜಿಗವಂತೂ ಅಲ್ಲ. ಜತೆಗೆ ಪಂಚಾಚಾರ್ಯರ 'ವೀರಶೈವ'ವನ್ನು ಹೊಗಳಿ, ಅವರಿಗೆ ಇಲ್ಲದ ಇತಿಹಾಸವನ್ನು ಸೃಷ್ಟಿಸಿ, ಅವರ ಪುರಾಣಗಳನ್ನು ವೈಭವೀಕರಿಸಿ ಅವರ ತತ್ವಗಳನ್ನು ಬೋಧಿಸುವುದು ಅವರ ಇನ್ನೊಂದು ಉದ್ದೇಶ. ಅದರಲ್ಲಿ ಶರಣರ ವಚನಗಳನ್ನೂ ಬಳಸಿ ಅಮಾಯಕ ಲಿಂಗಾಯತರನ್ನು ಗೊಂದಲಕ್ಕೆ ತಳ್ಳುತ್ತಿದ್ದಾರೆ.

ಈ ಹಿನ್ನೆಲೆಯ ಹಂಜಗೀಮಠ ಅವರು ಮೊನ್ನೆ ಅಕ್ಟೋಬರ್ 5ರಂದು ಬೆಂಗಳೂರಲ್ಲಿ ನಡೆದ ಬೃಹತ್ 'ಬಸವ ಸಂಸ್ಕೃತಿ ಅಭಿಯಾನ'ವನ್ನು 'ವಿಕೃತಿ ಅಭಿಯಾನ'ವೆಂದು ಟೀಕಿಸಿದ್ದು, ಅದರಲ್ಲಿ ಭಾಗವಹಿಸಿದ ನಾಲ್ಕುನೂರು ವಿರಕ್ತ ಮಠಗಳ ಸ್ವಾಮಿಗಳನ್ನು ಮನಸಿಗೆ ಬಂದಂತೆ ಬೈದದ್ದು ಅವರ ಮುಖವಾಡವನ್ನು ಕಳಚಿಸಿದೆ. ಅವರ ದುರ್ದೈವದಿಂದ ಅದೇ ಕಾಲಕ್ಕೆ ಸೆಪ್ಟೆಂಬರ್ 19ರಂದು ಹುಬ್ಬಳ್ಳಿಯಲ್ಲಿ ನಡೆದ ಪಂಚಪೀಠಗಳ ಏಕತಾ ಸಮಾವೇಶ ದಯನೀಯವಾಗಿ ಸೋತುಹೋದದ್ದು ಮತ್ತು ಪಂಚ ಪೀಠದ ಹತ್ತು ದಿನಗಳ 'ದಸರಾ ದರ್ಬಾರ'ವು ಬಸವಕಲ್ಯಾಣದಲ್ಲಿ ನೆಲಕಚ್ಚಿದ್ದು ಹಂಜರಿಗೆ ಮತ್ತು ಅವರ ಪಟಾಲಂದವರಿಗೆ ಹಾಗೂ ಅವರನ್ನು ಬೆಂಬಲಿಸುವ ರಾಜಕೀಯ ಪಕ್ಷಕ್ಕೆ ಮುಖಭಂಗವಾಗಿದೆ. ಆ ಸೋಲುಗಳು ಅವರೆಲ್ಲರಿಗೆ ನುಂಗಲಾರದ ತುತ್ತಾಗಿವೆ ಎಂದರೆ ಅತಿಶಯೋಕ್ತಿಯಲ್ಲ. ಅದರ ಪ್ರತಿಬಿಂಬವೇ ಅವರು ನನ್ನ ವಿರುದ್ಧ ಬರೆದ ಮೊನ್ನೆಯ ಎರಡು ಲೇಖನಗಳು!

ಮೊನ್ನೆಯ ಲೇಖನದ ಭಾಗ-1ರಲ್ಲಿ ನನ್ನ ಮನೆ ಹೆಸರು 'ಜಾಮದಾರ' ಪದದ ಬಗ್ಗೆ ಹಂಜ, ಅವರೇ ಸೃಷ್ಟಿಸಿದ ಬೋಗಸ್ 'ಇತಿಹಾಸ'ನ್ನು ಬರೆದಿದ್ದಾರೆ. ಅದನ್ನೇ ಬಳಸಿ ಜೆನೆಟಿಕ್ಸ್ ವಿಜ್ಞಾನದಲ್ಲಿ ಒಂದು ದೊಡ್ಡ ಸಂಶೋಧನೆಯನ್ನೆ ಮಾಡಿದ್ದಾರೆ! 'ಸಾಮಾಜಿಕ ಸ್ಥಾನಮಾನಗಳು ಜೈವಿಕವಾಗಿ ಆನುವಂಶೀಯ ಜೀನ್ಸ್‌ಗಳಾಗುತ್ತವೆ' ಎಂಬುದೇ ಅವರ ಸಂಶೋಧನೆ!

ಅದೇ 'ಸಂಶೋಧನೆ'ಯನ್ನು ಬಳಸಿ ನನ್ನ ಜೆನೆಟಿಕ್ ಮನೋಭೂಮಿಕೆಯನ್ನು ವಿವರಿಸಿದ್ದಾರೆ. ಆ ಸಂಶೋಧನೆಗೆ ಈ ವರ್ಷದ ನೊಬೆಲ್ ಪ್ರಶಸ್ತಿ ದೊರೆಯಬೇಕಿತ್ತು!! ಅವರು ಎತ್ತಿದ ಅಂಶಗಳಿಗೆ ಒಂದೊಂದಾಗಿ ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆ.

1) ಹಂಜ ಅವರೇ ಸೃಷ್ಟಿಸಿದ ಬೋಗಸ್ ಹಿನ್ನೆಲೆಯಲ್ಲಿ ನನಗೆ ಇಷ್ಟವಿಲ್ಲವಾದರೂ ನನ್ನ ಮನೆತನದ ಹೆಸರು 'ಜಾಮದಾರ' ಶಬ್ದದ ಬಗ್ಗೆ ಸತ್ಯ ಸಂಗತಿಗಳನ್ನು ಹೇಳಲೇಬೇಕಾಗಿದೆ. ಇಲ್ಲದಿದ್ದರೇ ಹಂಜ ಬರೆದಿದ್ದೇ ಸತ್ಯ ಎಂದು ಓದುಗರು ಭಾವಿಸಬಹುದು.

ಅವರು ಬಳಸಿದ 'ಜಮೇದಾರ', 'ಜಮಾದಾರ' ಎಂಬ ಶಬ್ದಗಳಿಗೂ, ಅವುಗಳ ಇತಿಹಾಸಕ್ಕೂ ಮತ್ತು ನನ್ನ ಹೆಸರು 'ಜಾಮದಾರ' ಶಬ್ದಕ್ಕೂ ಯಾವುದೇ ಸಂಬಂಧವಿಲ್ಲ. ಇದು ಪರ್ಷಿಯನ್ ಶಬ್ದವೂ ಅಲ್ಲ, ಶುದ್ಧ ಮರಾಠಿ ಶಬ್ದ! ಇದರ ಇತಿಹಾಸವನ್ನು ಶಿವಾಜಿಯ ಕಾಲದಿಂದ ಪ್ರಾರಂಭವಾದ ಮರಾಠಾ ಸಾಮ್ರಾಜ್ಯದ ಇತಿಹಾಸದ ನೂರಾರು ಗ್ರಂಥಗಳಲ್ಲಿ ಇಚ್ಛೆ ಇದ್ದವರು ಓದಬಹುದು.

ಶಿವಾಜಿಯು 1674ರ ಜೂನ್ 6ರಂದು ರಾಯಗಢದಲ್ಲಿ ಮರಾಠಾ ಸಾಮ್ರಾಜ್ಯದ ಛತ್ರಪತಿ ಸಿಂಹಾಸನವನ್ನು ಏರುತ್ತಿದ್ದಂತೆ ಹೊಸದಾದ ಆಡಳಿತ ಪದ್ಧತಿಯೊಂದು ಜಾರಿಗೆ ಬಂದಿತು. ಅದು 'ಅಷ್ಟ ಪ್ರಧಾನ ಪದ್ಧತಿ' ಎಂದು ಮರಾಠಾ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಅದರಲ್ಲಿ-

1) ಪ್ರಧಾನಿ ಹುದ್ದೆಯನ್ನು 'ಪೇಶ್ವಾ' ಎಂದು ಹೆಸರಿಸಿದೆ.
2) ಹಣಕಾಸು ಮಂತ್ರಿಯನ್ನು 'ಮುಜುಮ್ದಾರ' ಎಂದು ಕರೆಯಲಾಗಿದೆ.
3) ಗೃಹ ಸಚಿವನನ್ನು 'ವಖಿಯ ನವೀಸ' ಎನ್ನಲಾಗಿದೆ.
4) ವಿದೇಶ ಸಚಿವನಿಗೆ 'ದಾಬೀರ' ಅಥವಾ 'ಸುಮಂತ' ಎನ್ನುತ್ತಾರೆ.
5) ಮುಖ್ಯ ಕಾರ್ಯದರ್ಶಿಗೆ 'ಸಚಿವ' ಎಂಬ ಹೆಸರಿದೆ (ಇಂದಿನ ಮಹಾರಾಷ್ಟ್ರ ಸರಕಾರದ ಮುಂಬೈಯ ಸೆಕ್ರೆಟರಿಯೇಟನ್ನು ಅದೇ ಅರ್ಥದಲ್ಲಿ 'ಸಚಿವಾಲಯ' ಎಂದು ಹೆಸರಿಸಲಾಗಿದೆ).
6) ಮಹಾದಂಡನಾಯಕನನ್ನು 'ಸೇನಾಪತಿ' ಎಂಬ ಹುದ್ದೆಯಿಂದ ಕರೆಯುತ್ತಾರೆ.
7) ಮುಖ್ಯ ನ್ಯಾಯಾಧೀಶನನ್ನ 'ನ್ಯಾಯಾಧೀಶ' ಎನ್ನುತ್ತಾರೆ.
8) ಅಡ್ವೊಕೇಟ್ ಜನರಲ್‌ನನ್ನು 'ನ್ಯಾಯಶಾಸ್ತ್ರಿ' ಅಥವಾ 'ಪಂಡಿತ ರಾವ' ಎನ್ನುತ್ತಾರೆ.

ಈ ಎಂಟು ಜನರಲ್ಲಿ ಮೊದಲ ಆರು ಮಂತ್ರಿಗಳು ಮರಾಠರು ಬಹುಬಾರಿ ನಡೆಸುತ್ತಿದ್ದ ರಾಜ್ಯ ವಿಸ್ತರಣಾ ಯುದ್ಧಗಳಲ್ಲಿ ನಿರತರಾಗಬೇಕಾಗಿತ್ತು. ಅದರಿಂದ ದಿನ ನಿತ್ಯದ ಆಡಳಿತಕ್ಕೆ ತೊಂದರೆಯಾಗಬಾರದೆಂದು ಮಂತ್ರಿ ಪರಿಷತ್ತಿನ ಕೆಳಗಡೆ ದ್ವಿತೀಯ ಮಟ್ಟದಲ್ಲಿ ಮತ್ತೆ ಎಂಟು ಜನರ ಶಾಶ್ವತವಾದ ಬ್ಯೂರೊಕ್ರಸಿ ಇರುತ್ತಿತ್ತು. ಅವರ ಹುದ್ದೆಗಳು ಕ್ರಮವಾಗಿ ಹೀಗಿದ್ದವು:

1) ದಿವಾನ (ಇಲಾಖಾ ಕಾರ್ಯದರ್ಶಿ),
2) ಮುಜುಮ್ದಾರ (ಮುಖ್ಯ ಅಕೌಂಟೆಂಟ್),
3) ಫಡನವೀಸ (ಮುಖ್ಯ ಆಡಿಟರ್),
4) ಸಬ್ನವೀಸ (ಕಚೇರಿಯ ಮುಖ್ಯ ಸೂಪರಿಂಟೆಂಡೆಂಟ್),
5) ಖಾರಕಾನೀಸ (ರಾಜ್ಯ ದಾಸ್ತಾನು ಮತ್ತು ಖರೀದಿಯ ಮುಖ್ಯಸ್ಥ),
6) ಚಿಟ್ನೀಸ (ಜುಡಿಷಿಯಲ್ ವ್ಯವಹಾರದ ಪ್ರಭಾರಿ),
7) ಪೋತ್ನೀಸ (ಕ್ಯಾಷಿಯರ್), ಮತ್ತು ಕೊನೆಯದಾಗಿ,
8) 'ಜಾಮ್ದಾರ'ನು ಖಜಾನೆಯ ಮುಖ್ಯಸ್ಥ (ಬೆಳ್ಳಿ-ಬಂಗಾರ, ಮುತ್ತು-ರತ್ನ, ವಜ್ರ-ವೈಡೂರ್ಯ ಇತ್ಯಾದಿ ರಾಜನ ಸಂಪತ್ತಿನ ಕಸ್ಟೋಡಿಯನ್ ಆಗಿದ್ದನು).

ಇದು ನನ್ನ ಮನೆತನ 'ಜಾಮ್ದಾರ' ಶಬ್ದದ ಇತಿಹಾಸ ಮತ್ತು ಹಿನ್ನೆಲೆ. ಅದೇ ಹೆಸರಿನ ಓರ್ವರು, ಗೌರವಾನ್ವಿತ ಎಸ್.ಎಂ.ಜಾಮದಾರ, ಈಗ ಮುಂಬೈ ಹೈಕೋರ್ಟಿನ ನ್ಯಾಯಾಧೀಶರಾಗಿದ್ದಾರೆ. ಇನ್ನೊಬ್ಬರು ದಿಲೀಪ ಜಾಮದಾರ ಕೇಂದ್ರೀಯ ಸೆನ್ಸಾರ್ ಬೋರ್ಡಿನ ಕಾರ್ಯದರ್ಶಿಯಾಗಿದ್ದಾರೆ. ಮತ್ತೊಬ್ಬರು ಐ.ಎಂ. ಜಾಮದಾರ ಐಎಎಸ್ ಅಧಿಕಾರಿಯಾಗಿ ಪಂಜಾಬ ಸರಕಾರದಲ್ಲಿದ್ದಾರೆ.

ನಮ್ಮ ಮನೆತನವು ಮೂಲತ ಇಂದು ಮಹಾರಾಷ್ಟ್ರದಲ್ಲಿ ಕನ್ನಡ ಪ್ರದೇಶಗಳಾದ ಸೋಲಾಪುರ ಜಿಲ್ಲೆಯ ಅಕ್ಕಲಕೋಟ ಮೂಲದ್ದು. ಅಲ್ಲಿಯ ನಮ್ಮ ಮನೆತನದ ಮೂಲ ಹೆಸರು 'ದೇಸಾಯಿ' ಎಂದಿತ್ತು. ಜಾಮ್ದಾರ ಹುದ್ದೆ ದೊರೆತ ನಂತರ ಹಳೆಯ ಹೆಸರನ್ನು ನಮ್ಮ ಅಂದಿನ ಹಿರಿಯರು 'ಜಾಮ್ದಾರ' ಎಂದು ಬದಲಿಸಿಕೊಂಡರು.

1775ರ ಸುಮಾರಿಗೆ ಅಂದು ಪ್ರಸಿದ್ಧ ಮರಾಠಾ ಪ್ರಧಾನಿಯಾಗಿದ್ದ ನಾನಾ ಫಡನವೀಸ ಅವರಿಂದ ನಮ್ಮ ಅಂದಿನ ಹಿರಿಯರಿಗೆ ಅಕ್ಕಲಕೋಟ ಸಂಸ್ಥಾನದ 'ಜಾಮ್ದಾರ' ಹುದ್ದೆಯನ್ನು ನೀಡಲಾಗಿತ್ತು. ಅದರ ಸನದು ಮತ್ತು ಸಿಕ್ಕೆಗಳು ನಮ್ಮ ಮೂಲ ಮನೆತನದಲ್ಲಿ ಇವೆ. ಆದರೆ ಸುಮಾರು ಐದು ತಲೆಮಾರಿನ ಹಿಂದೆ ನಮ್ಮ ಹಿರಿಯರು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಗೊಡಚಿ ಗ್ರಾಮಕ್ಕೆ ಬಂದು ನೆಲೆಸಿದರು. ಅಲ್ಲಿ ನಮ್ಮ ಅಣ್ಣ-ತಮ್ಮಂದಿರ 40ರಷ್ಟು ಮನೆತನಗಳು ಇವೆ. ಅವೆಲ್ಲ ಮನೆಗಳು ಒಂದೇ ಕಡೆ ಇರುವುದರಿಂದ ಆ ಪ್ರದೇಶವನ್ನು 'ಜಾಮದಾರ ಓಣಿ' ಎನ್ನುತ್ತಾರೆ.

ತೊರಗಲ್ಲ ಗ್ರಾಮವು ನನ್ನಜ್ಜನ ತಾಯಿಯ ತವರುಮನೆಯ ಊರಾಗಿತ್ತು, ಅಲ್ಲದೇ ತೊರಗಲ್ಲದಲ್ಲಿ ಸಿಂಧೆ ಸಂಸ್ಥಾನದ ನ್ಯಾಯಾಲಯವೂ ಇತ್ತು. ಅದ್ದರಿಂದ ನನ್ನಜ್ಜ ವಕೀಲಕಿ ಮಾಡುತ್ತ ತೊರಗಲ್ಲಿನಲ್ಲಿ ವಾಸವಾಗಿದ್ದನು. ತೊರಗಲ್ಲ ಅಜ್ಜಿಗೆ ಗಂಡುಮಕ್ಕಳು ಇರಲಿಲ್ಲ. ನಷ್ಟಂಶವಾದ ಆ ಮನೆತನದ ಅಜ್ಜಿಯ ಎಲ್ಲ ಜಮೀನು, ಇತರ ಚರಾಸ್ತಿಗಳೂ ಕಾಲಾಂತರದಲ್ಲಿ ಓರ್ವನೇ ವಾರಸುದಾರನಾದ ನನ್ನ ಅಜ್ಜನಿಗೆ ದೊರೆತವು. ಹಾಗಾಗಿ ತೊರಗಲ್ಲದಲ್ಲಿ ನಮಗೆ 'ನರಗುಂದ' ಎಂಬ ಅಡ್ಡಹೆಸರಿದೆ. ಅದು ಅಜ್ಜಿಯ ಮನೆತನದ ಹೆಸರು. ಆದರೆ ನನ್ನ ಅಜ್ಜ ದತ್ತಕ ಪುತ್ರನಲ್ಲವಾದ್ದರಿಂದ ಅವನ ಮೂಲ ಹೆಸರು 'ಜಾಮ್ದಾರ' ಎಂದೇ ಉಳಿದಿದೆ.

ಮೇಲೆ ವಿವರಿಸಿದ ನನ್ನ ಮನೆತನದ ನಿಜವಾದ ಹಿನ್ನೆಲೆಯಲ್ಲಿ, ರವಿ ಹಂಜಗೀಮಠ ಎಂಬ ದುಷ್ಟನು ನನ್ನ ಬಗ್ಗೆ, ನನ್ನ ಮನೆತನದ ಹೆಸರಿನ ಬಗ್ಗೆ ಅವನೇ ಸೃಷ್ಟಿಸಿದ ಬೋಗಸ್ ಇತಿಹಾಸದ ಬಗ್ಗೆ, ಆ ಹೆಸರಿಗೆ ಅಂಟಿಕೊಂಡಿದೆ ಎಂಬ ನನ್ನ ಮನೋಭೂಮಿಕೆ ಇತ್ಯಾದಿಗಳ ಬಗ್ಗೆ ಬರೆದದ್ದು ಎಷ್ಟು ಸತ್ಯ, ಎಷ್ಟು ಸಮಂಜಸ ಎಂಬುದನ್ನು ಓದುಗರೇ ನಿರ್ಣಯಿಸಲಿ. ಅಂಥ ಸುಳ್ಳುಗಳನ್ನು ಈಗ ಹಂಜ ಏಕೆ ಸೃಷ್ಟಿಸಿ ಸತ್ಯವನ್ನು ತಿರುಚುತ್ತಿದ್ದಾನೆ ಎಂಬುದನ್ನು ಓದುಗರೇ ನಿರ್ಣಯಿಸಲಿ. ಅಂತಹ ಕೀಳುದರ್ಜೆಯ ಲೇಖನಗಳನ್ನು ಪ್ರಕಟಿಸುತ್ತಿರುವ ದಿನ ಪತ್ರಿಕೆಯ ಉದ್ದೇಶವಾದರೂ ಏನು?

2) ಕಾಳಾಮುಖಿಗಳನ್ನು ಕುರಿತು ಹಂಜ ಒಪ್ಪಿಕೊಂಡ ಮೂರು ಅಂಶಗಳೆಂದರೆ:

ಅ) ರಾಮಾನುಜಾಚಾರ್ಯರು ಕಾಳಾಮುಖಿಗಳನ್ನು ಕುರಿತು ''ಕಾಳಾಮುಖಿಗಳು ಸ್ಮಶಾನದಲ್ಲಿ ಸುಟ್ಟ ಹೆಣಗಳ ಬೂದಿಯನ್ನು ತಮ್ಮ ಮುಖಕ್ಕೆ ಬಳಿದುಕೊಳ್ಳುತ್ತಿದ್ದರು'' ಎಂದು ಹಂಜ ಅವರೇ ಬರೆದ್ದಾರೆ. ಆದರೆ ಅದು ತಪ್ಪು ಎಂದು ಡೇವಿಡ್ ಲಾರೆಂಜನ್ ಬರೆದಿದ್ದಾರೆಂದು ಹಂಜ ಹೇಳಿದ್ದಾರೆ;

ಬ) ಕೊಬ್ಬರಿ ಬಟ್ಟಲನ್ನು ಸುಟ್ಟಾಗ ಉಂಟಾಗುವ ಕಪ್ಪನ್ನು ಈಗಲೂ ಭಸ್ಮದೊಂದಿಗೆ ಹಣೆಗೆ ಹಚ್ಚಿಕೊಳ್ಳುವುದು ವಾಡಿಕೆಯಾಗಿದೆ ಎಂದು ಹಂಜ ಬರೆದಿದ್ದಾರೆ. ಮುಂದುವರಿದು, ಲಾರೆಂಜನ್ ಹೇಳಿದ್ದು ಸತ್ಯ ಮತ್ತು ರಾಮಾನುಚಾರ್ಯರು ಹೇಳಿದ್ದು ಸತ್ಯವಲ್ಲ ಎಂದಿದ್ದಾನೆ. ಆ ಬಗ್ಗೆ ನಾನು ಹೇಳುವುದಿಷ್ಟೇ: ರಾಮಾನುಜರು ಹೇಳಿದ್ದು ಹನ್ನೊಂದು-ಹನ್ನೆರಡನೆಯ ಶತಮಾನದಲ್ಲಿ. ಆಗಿನ್ನೂ ಬಹಳಷ್ಟು ಕಾಳಾಮುಖಿ ಮಠಗಳು ಅಸ್ತಿತ್ವದಲ್ಲಿ ಇದ್ದವು. ಅವರನ್ನು ನೋಡಿ ಬರೆದ ರಾಮಾನುಜಾಚಾರ್ಯರ ಮಾತು ಸತ್ಯವೋ ಅಥವಾ ಇತ್ತೀಚೆಗೆ ವಿದೇಶಿ ವಿದ್ವಾಂಸನೊಬ್ಬ ಪುಸ್ತಕಗಳನ್ನು ಓದಿ ಹೇಳಿದ ಮಾತು ಸತ್ಯವೋ ಓದುಗರೇ ನಿರ್ಧರಿಸಲಿ. ನಾನು ಹೇಳಿದ ಮಾತಿಗೆ ರಾಮಾನುಚಾರ್ಯರ ಅಭಿಪ್ರಾಯವೇ ಆಧಾರವಾಗಿದೆ.

(2ನೇ ಭಾಗವು ಸೋಮವಾರದ ಸಂಚಿಕೆಯಲ್ಲಿ ಮುಂದುವರಿಯುವುದು)

(ಲೇಖಕರು ನಿವೃತ್ತ ಐಎಎಸ್ ಅಧಿಕಾರಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:10, Issue:311

ಸಮಾಚಾರ ಸಣ್ಣದಲ್ಲ

ಕಲ್ಲಿದ್ದಲು ಮಾಫಿಯಾ: 42 ಕಡೆ ಇ.ಡಿ ದಾಳಿ

ರಾಂಚಿ: ಕಲ್ಲಿದ್ದಲು ಮಾಫಿಯಾ ವಿರುದ್ಧ ಹಣ ವರ್ಗಾವಣೆ ತನಿಖೆಯನ್ನು ತೀವ್ರಗೊಳಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ 42 ಸ್ಥಳಗಳ ಮೇಲೆ ದಾಳಿ ನಡೆಸಿದ್ದು, ಅಪಾರ ಪ್ರಮಾಣದ ಚಿನ್ನಾಭರಣ ಹಾಗೂ ನಗದು ಪತ್ತೆಯಾಗಿದೆ. ದಾಳಿಯಲ್ಲಿ ಫೆಡರಲ್ ತನಿಖಾ ಸಂಸ್ಥೆಯ ಸುಮಾರು 100 ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು. ದೊಡ್ಡ ಪ್ರಮಾಣದ ಕಲ್ಲಿದ್ದಲು ಮಾಫಿಯಾ ನಡೆದಿದ್ದು, ಇದರಿಂದ ಸರಕಾರಕ್ಕೆ ನೂರಾರು ಕೋಟಿ ರು. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಜಾರ್ಖಂಡ್‌ನಲ್ಲಿ ಇಡಿ 18 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದು, ಪಶ್ಚಿಮ ಬಂಗಾಳದಲ್ಲಿ ದುರ್ಗಾಪುರ, ಪುರುಲಿಯಾ, ಹೌರಾ ಮತ್ತು ಕೋಲ್ಕತ್ತಾದಾದ್ಯಂತ 24 ಸ್ಥಳಗಳಲ್ಲಿ ಶೋಧ ನಡೆಸುತ್ತಿದೆ. ದಾಳಿ ವೇಳೆ ಹಣಕಾಸು ವಹಿವಾಟುಗಳಿಗೆ ಸಂಬಂಧಿಸಿದ ದಾಖಲೆಗಳು ಹಾಗೂ ಕೆಲವು ಡಿಜಿಟಲ್ ದಾಖಲೆ ಗಳನ್ನು ಇಡಿ ಅಧಿಕಾರಿಗಳು ವಶಪಡಿಸಿದ್ದಾರೆ.

ನಾನು ದುರಾಸೆಯ ವ್ಯಕ್ತಿ ಅಲ್ಲ: ಚಿರಾಗ್ ಪಾಸ್ವಾನ್

ಪಾಟ್ನಾ: ಉಪಮುಖ್ಯಮಂತ್ರಿ ಹುದ್ದೆಗೆ ಬೇಡಿಕೆ ಇಡುವ ಮೂಲಕ ದುರಾಸೆಯ ವ್ಯಕ್ತಿ ಎಂದು ಬಿಂಬಿಸಿಕೊಳ್ಳಲು ಬಯಸುವುದಿಲ್ಲ ಎಂದು ಕೇಂದ್ರ ಸಚಿವ

ಚಿರಾಗ್ ಪಾಸ್ವಾನ್ ಶುಕ್ರವಾರ ಹೇಳಿದ್ದಾರೆ. ಬಿಹಾರದ ಹೊಸ ಸಚಿವ ಸಂಪುಟದಲ್ಲಿ ತಮ್ಮ ಲೋಕ ಜನಶಕ್ತಿ ಪಕ್ಷಕ್ಕೆ (ರಾಮ್ ವಿಲಾಸ್) ಎರಡು ಸ್ಥಾನಗಳನ್ನು ಹಂಚಿಕೆ ಮಾಡಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಪಾಸ್ವಾನ್, ಬಿಹಾರವನ್ನು ಮೀರಿ ಎನ್‌ಡಿಎ ಪಾಲುದಾರನಾಗಿ ಪಶ್ಚಿಮ ಬಂಗಾಳ, ಪಂಜಾಬ್ ಮತ್ತು ಉತ್ತರ ಪ್ರದೇಶ ದಂತಹ ರಾಜ್ಯಗಳಲ್ಲಿ ಪಕ್ಷದ ಹೆಜ್ಜೆಗುರುತುಗಳನ್ನು ವಿಸ್ತರಿಸಲು ಬಯಸುತ್ತೇನೆ ಎಂದು ಹೇಳಿದರು. ಎನ್‌ಡಿಎ ಯೊಳಗಿನ ಸೀಟು ಹಂಚಿಕೆ ವ್ಯವಸ್ಥೆಗಳ ಭಾಗವಾಗಿ ನಮಗೆ ನೀಡಲಾದ 29 ಸ್ಥಾನಗಳಲ್ಲಿ ನಮ್ಮ ಪಕ್ಷವು 19 ಕ್ಷೇತ್ರಗಳಲ್ಲಿ ಗೆದ್ದಿದೆ ಎಂದು ಹೇಳಿದರು.

ನಾನು ಜಾತ್ಯತೀತವಾದಿ: ಸಿಜೆಐ ಗವಾಯಿ

ದೆಹಲಿ: ನಾನೊಬ್ಬ ಜಾತ್ಯತೀತವಾದಿ, ಹಾಗಾಗಿ ಬೌದ್ಧ ಧರ್ಮವನ್ನು ಅನುಸರಿಸುತ್ತೇನೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.

ಗವಾಯಿ ತಿಳಿಸಿದ್ದಾರೆ. ಸುಪ್ರೀಂ ಕೋರ್ಟ್ ಅಡ್ವೊಕೇಟ್ಸ್ ಆನ್ ರೆಕಾರ್ಡ್ಸ್ ಅಸೋಸಿಯೇಷನ್ ಬೀಳ್ಕೊಡುಗೆ ಸಮಾರಂಭ ಆಯೋಜಿಸಲಾಗಿತ್ತು. ನವೆಂಬರ್ 20ರ ತಮ್ಮ ಕೊನೆಯ ಕೆಲಸದ ದಿನಕ್ಕೂ ಮುನ್ನ ಸಿಜೆಐ ಗವಾಯಿ ಈ ಹೇಳಿಕೆ ನೀಡಿದ್ದಾರೆ. ಸಿಜೆಐ ಗವಾಯಿ ಅವರು ಅಧಿಕೃತವಾಗಿ ನವೆಂಬರ್ 23ರಂದು ನಿವೃತ್ತಿ ಹೊಂದಲಿದ್ದಾರೆ. ಈ ಕುರಿತು ಮಾತನಾಡಿದ ಅವರು, ನಾನು ಬೌದ್ಧಧರ್ಮವನ್ನು ಪಾಲಿಸುತ್ತಿದ್ದರೂ, ಹಿಂದೂ ಧರ್ಮ, ಸಿಖ್ ಧರ್ಮ, ಇಸ್ಲಾಂ ಮತ್ತು ಇತರ ಧರ್ಮಗಳನ್ನು ಒಳಗೊಂಡಂತೆ ಪ್ರತಿಯೊಂದು ಧರ್ಮವನ್ನು ನಂಬುವ ನಿಜವಾದ ಜಾತ್ಯತೀತ ವ್ಯಕ್ತಿ ಎಂದು ಹೇಳಿಕೊಂಡಿದ್ದಾರೆ. ನನ್ನ ತಂದೆಯಿಂದ ಜಾತ್ಯತೀತನಾಗಿರುವುದನ್ನು ಕಲಿತಿದ್ದೇನೆ. ಅವರು ನಿಜವಾದ ಜಾತ್ಯತೀತರೂ ಮತ್ತು ಡಾ. ಭೀಮರಾವ್ ಅಂಬೇಡ್ಕರ್ ಅವರ ಪಾಂಡಿತ್ಯಪೂರ್ಣ ಅನುಯಾಯಿಯೂ ಆಗಿದ್ದರು ಎಂದು ಹೇಳಿದ್ದಾರೆ.

ಬಿಹಾರ ಭ್ರಷ್ಟರ ಸರಕಾರ: ಪ್ರಶಾಂತ್ ವಾಗ್ದಾಳಿ

ಪಾಟ್ನಾ: ನಿತೀಶ್ ಕುಮಾರ್ ಸರಕಾರದ ಹೊಸ ಸಚಿವ ಸಂಪುಟವು ಭ್ರಷ್ಟರು ಮತ್ತು ಕ್ರಿಮಿನಲ್ ನಾಯಕರಿಂದ ತುಂಬಿದೆ ಎಂದು ಜನ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್

ಆರೋಪಿಸಿದ್ದಾರೆ. ಪಶ್ಚಿಮ ಚಂಪಾರಣ್‌ನ ಗಾಂಧಿ ಆಶ್ರಮದಲ್ಲಿ ಒಂದು ದಿನದ ಮೌನ ಉಪವಾಸದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಿಶೋರ್, ಜನವರಿ 15ರಂದು ತಮ್ಮ ಪಕ್ಷ 'ಬಿಹಾರ ನವನಿರ್ಮಾಣ ಸಂಕಲ್ಪ ಯಾತ್ರೆ' ಪ್ರಾರಂಭಿಸಲಿದೆ, ಈ ಸಂದರ್ಭದಲ್ಲಿ ಜನ ಸುರಾಜ್ ಪಕ್ಷದ ಕಾರ್ಯಕರ್ತರು ರಾಜ್ಯದ ಎಲ್ಲಾ ಮನೆಗಳಿಗೆ ಭೇಟಿ ನೀಡಲಿದ್ದಾರೆ ಎಂದು ಹೇಳಿದರು. ಗುರು ವಾರ ಪ್ರಮಾಣ ವಚನ ಸ್ವೀಕರಿಸಿದ ನಿತೀಶ್ ಕುಮಾರ್ ಅವರ ಹೊಸ ಸಚಿವ ಸಂಪುಟವು ಭ್ರಷ್ಟರು, ಅಪರಾಧಿಗಳಿಂದ ತುಂಬಿದೆ ಎಂದು ಲೇವಡಿ ಮಾಡಿದ್ದಾರೆ.

{ ಮೋಹನ್ ಭಾಗವತ್ } ಆರ್‌ಎಸ್‌ಎಸ್ ಸರಸಂಘಚಾಲಕ

ಆರ್‌ಎಸ್‌ಎಸ್ ಯಾರ ವಿರುದ್ಧವೂ ಅಲ್ಲ. ಸಮಾಜವನ್ನು ನಾಶ ಮಾಡಲು ಸ್ಥಾಪಿಸಿದ್ದಲ್ಲ, ಬದಲಾಗಿ ಸಮಾಜ ಒಗ್ಗೂಡಿಸಲು ಸ್ಥಾಪಿಸಲಾಗಿದೆ. ಸಂಘವು ರಾಜಕೀಯದಲ್ಲಿ ತೊಡಗುವುದಿಲ್ಲ ಅಥವಾ ಯಾವುದೇ ಸಂಘಟನೆಯನ್ನು ನಿಯಂತ್ರಿಸುವುದಿಲ್ಲ. ಸ್ನೇಹ, ವಾತ್ಸಲ್ಯ ಮತ್ತು ಸಾಮಾಜಿಕ ಸಾಮರಸ್ಯದ ಮೂಲಕ ಮಾತ್ರ ಕಾರ್ಯನಿರ್ವಹಿಸುತ್ತದೆ.

ಇಂದಿನಿಂದ 2 ದಿನ ದ.ಆಫ್ರಿಕಾದಲ್ಲಿ ನಡೆಯಲಿರುವ ಜಿ 20 ಸಭೆ | ವಿಶೇಷ ಶೃಂಗಸಭೆ ಎಂದ ಪ್ರಧಾನಿ

ಜಿ20 ಶೃಂಗ: ಇಂದು ಮೋದಿ ಭಾಷಣ

ಜೋಹಾನ್ಸ್‌ಬರ್ಗ್: ಶನಿವಾರ ಮತ್ತು ಭಾನುವಾರ ಇಲ್ಲಿ ನಡೆಯಲಿರುವ ಜಿ20 ನಾಯಕರ ಶೃಂಗಸಭೆಗಾಗಿ ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ ಬೆಳೆಸಿದ್ದಾರೆ.

ಪ್ರವಾಸ ಹೊರಡುವ ಮುನ್ನ ಮಾತನಾಡಿದ ಮೋದಿ, 'ವಸುಧೈವ ಕುಟುಂಬಕಂ' ಮತ್ತು 'ಒಂದು ಭೂಮಿ, ಒಂದು ಕುಟುಂಬ ಮತ್ತು ಒಂದು ಭವಿಷ್ಯ' ಎಂಬ ದೃಷ್ಟಿ ಕೋನಕ್ಕೆ ಅನುಗುಣವಾಗಿ ಭಾರತವು ತನ್ನ ನಿಲುವನ್ನು ಶೃಂಗಸಭೆಯಲ್ಲಿ ವ್ಯಕ್ತಪಡಿಸುವುದಾಗಿ ಹೇಳಿದ್ದಾರೆ.

ಈ ಕುರಿತು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿರುವ ಮೋದಿ, 'ಈ ಬಾರಿ ದ.ಆಫ್ರಿಕಾದಲ್ಲಿ ಜಿ-20 ನಡೆಯುತ್ತಿರುವುದರಿಂದ ನಿಜಕ್ಕೂ ವಿಶೇಷವಾ ಗಿದೆ. ಸಭೆಯಲ್ಲಿ ವಿವಿಧ ಜಾಗತಿಕ ವಿಷಯಗಳ ಕುರಿತು ಚರ್ಚಿಸಲಾಗುವುದು, ಶೃಂಗ ಸಭೆಯ ಸಮಯದಲ್ಲಿ ವಿವಿಧ ವಿಶ್ವ ನಾಯಕರನ್ನು ಭೇಟಿ ಮಾಡಲಾಗುವುದು' ಎಂದು ಹೇಳಿದ್ದಾರೆ.

'ಈ ದ.ಆಫ್ರಿಕಾ ಭೇಟಿ ಸಮಯದಲ್ಲಿ ಅಲ್ಲಿರುವ ಭಾರತೀಯ ವಲಸಿಗರೊಂದಿಗಿನ ಸಂವಾದವನ್ನು ನಾನು ಎದುರು ನೋಡುತ್ತಿದ್ದೇನೆ' ಎಂದು ತಿಳಿಸಿದ್ದಾರೆ. ವಿದೇಶಾಂಗ ಇಲಾಖೆ ಈ ಹಿಂದೆ ತಿಳಿಸಿದಂತೆ ಪ್ರಧಾನಿ ಮೋದಿ ಶೃಂಗಸಭೆಯ ಮೂರು ಸೆಷನ್‌ನಲ್ಲಿ ಮಾತನಾಡಲಿದ್ದಾರೆ. ಭಾರತ ಮತ್ತು ಜಾಗತಿಕ ದಕ್ಷಿಣದ ದೃಷ್ಟಿಕೋನಕ್ಕೆ ಸಂಬಂಧಿಸಿದ ಎಲ್ಲಾ ಪ್ರಮುಖ ವಿಷಯಗಳ ಕುರಿತು ಮೋದಿ, ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ವಿಶ್ವದ ಪ್ರಮುಖ ನಾಯಕರ ಗಮನ ಸೆಳೆಯುವ ಸಾಧ್ಯತೆಗಳಿವೆ ಎಂದು ತಿಳಿದು ಬಂದಿದೆ.

ಜಾಗತಿಕ ದಕ್ಷಿಣ ದೇಶಗಳಲ್ಲಿ ನಡೆಯುತ್ತಿರುವ ನಾಲ್ಕನೇ ಶೃಂಗಸಭೆ ಇದಾಗಿದೆ. 2024ರಲ್ಲಿ ಬ್ರೆಜಿಲ್, 2023ರಲ್ಲಿ ಭಾರತ ಮತ್ತು 2022ರಲ್ಲಿ ಇಂಡೋನೇಷ್ಯಾದಲ್ಲಿ ಜಿ 20ಸಭೆ ನಡೆದಿತ್ತು. 2025ರ ದ.ಆಫ್ರಿಕಾ ಅಧ್ಯಕ್ಷತೆಯ ಈ ಸಭೆಯು 'ಐಕಮತ್ಯ, ಸಮಾನತೆ, ಸುಸ್ಥಿರತೆ' ಎಂಬ ವಿಷಯದ ಅಡಿಯಲ್ಲಿ ಆಫ್ರಿಕಾ ಮತ್ತು ಅಭಿವೃದ್ಧಿ ಕಾರ್ಯಸೂಚಿಯನ್ನು ಮುನ್ನೆಲೆಗೆ ತಂದಿದೆ. ಈ ಶೃಂಗಸಭೆ ಒಗ್ಗಟ್ಟಿನ ಮೂಲಕ ದಕ್ಷಿಣ ಆಫ್ರಿಕಾ ಜನ ಕೇಂದ್ರಿತ, ಅಭಿವೃದ್ಧಿ ಆಧಾರಿತ ಮತ್ತು ಎಲ್ಲರನ್ನೂ ಒಳಗೊಂಡ ಭವಿಷ್ಯವನ್ನು ಸಾಧಿಸಲು ಪ್ರಯತ್ನಿಸಲಿದೆ.

ದ. ಆಫ್ರಿಕಾದಲ್ಲಿ ಮೋದಿಗೆ ಕೆಂಪು ಹಾಸಿನ ಸ್ವಾಗತ ಕೋರಲಾಯಿತು

- ಮೋದಿಯಿಂದ ಪ್ರಮುಖ ವಿಶ್ವ ನಾಯಕರ ಭೇಟಿ
- ಪ್ರಮುಖ ಜಾಗತಿಕ ವಿಷಯಗಳ ಚರ್ಚೆ
- ಭಾರತೀಯ ವಲಸಿಗರೊಂದಿಗೆ ಮೋದಿ ಚರ್ಚೆ
- ಭಾರತ-ದ.ಆಫ್ರಿಕಾ ಸಂಬಂಧ ಬಲವರ್ಧನೆ

ಜಿ-20 ಸದಸ್ಯ ರಾಷ್ಟ್ರಗಳು

ಭಾರತ, ಅರ್ಜೆಂಟೀನಾ, ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಚೀನಾ, ಫ್ರಾನ್ಸ್, ಜರ್ಮನಿ, ಇಂಡೋನೇಷ್ಯಾ, ಇಟಲಿ, ಜಪಾನ್, ದಕ್ಷಿಣ ಕೊರಿಯಾ, ಮೆಕ್ಸಿಕೊ, ರಷ್ಯಾ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ, ಟರ್ಕಿ, ಇಂಗ್ಲೆಂಡ್, ಅಮೆರಿಕ ಮತ್ತು ಆಫ್ರಿಕನ್ ಯೂನಿಯನ್.

ಶೃಂಗಸಭೆಯ ಕಾರ್ಯಸೂಚಿ: ಆರ್ಥಿಕ ಬೆಳವಣಿಗೆ, ವ್ಯಾಪಾರ, ಅಭಿವೃದ್ಧಿ ಹಣಕಾಸು ಮತ್ತು ಜಾಗತಿಕ ಸಾಲದ ಒತ್ತಡದ ಬಗ್ಗೆ ಈ ಸಲದ ಜಿ-20 ಶೃಂಗಸಭೆಯಲ್ಲಿ ಚರ್ಚಿತವಾಗಲಿದೆ. ಹಾಗೆಯೇ ವಿಪತ್ತು ಅಪಾಯ, ಹವಾಮಾನ ಬದಲಾವಣೆ, ಇಂಧನ ಪರಿವರ್ತನೆ ಮತ್ತು ಆಹಾರ ಭದ್ರತೆಯ ಬಗ್ಗೆ ದೀರ್ಘ ಸಮಾಲೋಚನೆ ನಡೆಯಲಿದೆ. ಖನಿಜ ಸಂಪತ್ತು, ಉತ್ತಮ ಉದ್ಯೋಗಾವಕಾಶಗಳು ಮತ್ತು ಕೃತಕ ಬುದ್ಧಿಮತ್ತೆಯ ಬಗ್ಗೆ ಚರ್ಚಿಸಲಿದ್ದಾರೆ.

ಭಾರತ ಮತ್ತು ದ.ಆಫ್ರಿಕಾ ಸಂಬಂಧ ಬಲ: ಪ್ರಧಾನಿ ಮೋದಿ ಅವರ ಜೋಹಾನ್ಸ್‌ಬರ್ಗ್ ಭೇಟಿಯು ಭಾರತ ಮತ್ತು ದ.ಆಫ್ರಿಕಾ ನಡುವಿನ ಸಂಬಂಧವನ್ನು ಮತ್ತಷ್ಟು ಬಲಪಡಿಸಲಿದೆ, ಅಲ್ಲದೆ ಜಾಗತಿಕ ವೇದಿಕೆಯಲ್ಲಿ ಭಾರತದ ಪ್ರಭಾವವನ್ನು ಹೆಚ್ಚಿಸಲಿದೆ. ಭಾರತೀಯ ಸಮುದಾಯದೊಂದಿಗೆ ಸಂವಾದವು ದೇಶದ ಹೊರಗಿರುವ ಭಾರತೀಯರೊಂದಿಗೆ ಸಂಪರ್ಕವನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಈ ಶೃಂಗಸಭೆಯು ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಸುಸ್ಥಿರ ಭವಿಷ್ಯವನ್ನು ರೂಪಿಸಲು ಎಲ್ಲಾ ರಾಷ್ಟ್ರಗಳು ಒಟ್ಟಾಗಿ ಕೆಲಸ ಮಾಡುವ ಮಹತ್ವವನ್ನು ಎತ್ತಿ ತೋರಿಸಲಿದೆ.

ಬಂಧಿತರನ್ನು ಹಮಾಸ್ ಬಚ್ಚಿಡುತ್ತಿದ್ದ 7 ಕಿ.ಮೀ ಟನಲ್

ಹಮಾಸ್ ದೈತ್ಯ ಸುರಂಗ ಪತ್ತೆ

ಗಾಜಾ: ಹಮಾಸ್ ಕಮಾಂಡರ್‌ಗಳು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು, ದಾಳಿಗಳ ಯೋಜನೆ ಮಾಡಲು, ಬಂಧಿತರನ್ನು ಇಡಲು ಬಳಸುತ್ತಿದ್ದ ಅತೀ ದೊಡ್ಡ ಪ್ರಮಾಣದ ಸುರಂಗವೊಂದನ್ನು ಇಸ್ರೇಲ್ ಪತ್ತೆ ಹಚ್ಚಿದೆ. ಗಾಜಾ ಪಟ್ಟಿಯಲ್ಲಿರುವ ಸರಿಸುಮಾರು 7 ಕಿ.ಮೀ. ಉದ್ದ, 25 ಮೀಟರ್ ಆಳವಿರುವ ಈ ಸುರಂಗದಲ್ಲಿ ಒಟ್ಟು 80 ಕೊಠಡಿಗಳಿವೆ. 2014ರ ಇಸ್ರೇಲ್ -ಹಮಾಸ್ ಯುದ್ಧಕ್ಕೆ ಈ ಸುರಂಗದಿಂದಲೇ ದಾಳಿ ನಡೆಸಲಾಗಿತ್ತು. ಈ ವೇಳೆ ಹಮಾಸ್ ಬಂಧಿಸಿದ್ದ ಸೈನಿಕ ಹದರ್ ಗೋಲ್ಡಿನ್ ಅವರ ಅವಶೇಷ ಕೂಡ ಇದರಲ್ಲಿ ಪತ್ತೆಯಾಗಿದೆ.

ಇಸ್ರೇಲ್ ರಕ್ಷಣಾ ಪಡೆಗಳು ಗಾಜಾ ಪಟ್ಟಿಯಲ್ಲಿರುವ ಪ್ರಮುಖ ಹಮಾಸ್ ಸುರಂಗವನ್ನು ಪತ್ತೆಹಚ್ಚಿರುವುದಾಗಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದೆ. ಇದರಲ್ಲಿ ಹಮಾಸ್‌ನ ಭಯೋತ್ಪಾದಕ ಗುಂಪು ಸೈನಿಕ ಹದರ್ ಗೋಲ್ಡಿನ್ ಅವರನ್ನು ಬಂಧಿಸಿಟ್ಟಿತ್ತು. 2014ರ ಇಸ್ರೇಲ್ -ಹಮಾಸ್ ಯುದ್ಧದ ಸಮಯದಲ್ಲಿ ಗಾಜಾದಲ್ಲಿ ಹೊಂಚುದಾಳಿ ನಡೆಸಿ ಸೈನಿಕ ಗೋಲ್ಡಿನ್ ಅವರನ್ನು ಬಂಧಿಸಲಾಗಿದ್ದು, ಬಳಿಕ ಅವರು ಸಾವನ್ನಪ್ಪಿದ್ದರು.

ಗೋಲ್ಡಿನ್ ಅವರ ದೇಹವನ್ನು ಇರಿಸಲಾಗಿದ್ದ ಸುರಂಗದ ವಿಡಿಯೊವನ್ನು ಹಂಚಿಕೊಂಡಿರುವ ಇಸ್ರೇಲ್ ರಕ್ಷಣಾ ಪಡೆಗಳು, ಸುರಂಗವು ಜನನಿಬಿಡ ರಫಾ ಸಮೀಪದ ಪ್ಯಾಲೆಸ್ಟಿನಿಯನ್ ನಿರಾಶ್ರಿತರಿಗಾಗಿರುವ ಕಟ್ಟಡ, ಮಸೀದಿಗಳು, ಚಿಕಿತ್ಸಾಲಯಗಳು ಮತ್ತು ಕಿಂಡರ್‌ಗಾರ್ಟನ್‌ಗಳ ಮೂಲಕ ಹಾದುಹೋಗುತ್ತದೆ ಎಂದು ಇಸ್ರೇಲ್ ರಕ್ಷಣಾ ಪಡೆ ತಿಳಿಸಿದೆ.

ಹಮಾಸ್ ಸದಸ್ಯನ ಬಂಧನ: ಇಸ್ರೇಲ್ ರಕ್ಷಣಾ ಪಡೆ ಮಾಡಿರುವ ಮತ್ತೊಂದು ಪೋಸ್ಟ್‌ನಲ್ಲಿ ಸೈನಿಕ ಹದರ್ ಗೋಲ್ಡಿನ್ ಅವರ ಕೊಲೆಯಲ್ಲಿ ಭಾಗಿಯಾಗಿದ್ದ ಹಮಾಸ್ ಭಯೋತ್ಪಾದಕ ಮರ್ವಾನ್ ಅಲ್-ಹ್ಯಾಮ್ಸ್‌ನನ್ನು ಬಂಧಿಸಿರುವುದಾಗಿ ತಿಳಿಸಿದೆ. ರಫಾದಲ್ಲಿನ ವೈಟ್-ಕ್ರೌನ್ಸ್ ಸುರಂಗದಲ್ಲಿ ಸೈನಿಕ ಗೋಲ್ಡಿನ್ ಅವರ ಸಮಾಧಿ ಸ್ಥಳ ಇರುವ ಬಗ್ಗೆ ಅಲ್-ಹ್ಯಾಮ್ಸ್‌ಗೆ ತಿಳಿದಿರುವ ಶಂಕೆಯೂ ಇತ್ತು ಎಂದು ಐಡಿಎಫ್ ತಿಳಿಸಿದೆ. ಕಳೆದ ಜುಲೈ ನಲ್ಲಿ ಸೈನಿಕ ಹದರ್ ಗೋಲ್ಡಿನ್ ಅವರನ್ನು ಜೀವಂತವಾಗಿ ಮರಳಿ ಪಡೆಯಲು ಇಸ್ರೇಲ್ ಸಾಕಷ್ಟು ರಹಸ್ಯ ಕಾರ್ಯಾಚರಣೆಗಳನ್ನು ನಡೆಸಿತ್ತು ಎಂದು ಇಸ್ರೇಲ್ ಹೇಳಿದೆ.

ಇಸ್ರೇಲ್-ಹಮಾಸ್ ಸಾವಿನ ಸರಮಾಲೆ

2023ರ ಅಕ್ಟೋಬರ್‌ನಲ್ಲಿ ಪ್ರಾರಂಭವಾದ ಇಸ್ರೇಲ್-ಹಮಾಸ್ ಯುದ್ಧದಲ್ಲಿ ಹಮಾಸ್ ನೇತೃತ್ವದ ಉಗ್ರಗಾಮಿಗಳು 1,200 ಜನರನ್ನು ಕೊಂದು ಹಾಕಿದ್ದು, 251 ಮಂದಿಯನ್ನು ಒತ್ತೆಯಾಳಾಗಿ ಇರಿಸಿಕೊಂಡಿತ್ತು. ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಿದ ಇಸ್ರೇಲ್, ದಾಳಿ ನಡೆಸಿ 69,000ಕ್ಕೂ ಹೆಚ್ಚು ಪ್ಯಾಲೆಸ್ತೀನಿಯನ್ನರನ್ನು ಕೊಂದು ಹಾಕಿತ್ತು.

ಭೂಕಂಪಕ್ಕೆ ಢಾಕಾದಲ್ಲಿ ಕಟ್ಟಡಗಳು ನೆಲಸಮ

ಬಾಂಗ್ಲಾ ಭೂಕಂಪ: 6 ಬಲಿ

ಢಾಕಾ: ಶುಕ್ರವಾರ ಬೆಳಿಗ್ಗೆ ಮಧ್ಯ ಬಾಂಗ್ಲಾದೇಶದಲ್ಲಿ ಸಂಭವಿಸಿದ ಪ್ರಬಲ ಭೂಕಂಪದಿಂದ ಹಲವು ಸಾವು ನೋವುಗಳು ಸಂಭವಿಸಿದೆ. ಸುಮಾರು 5.5 ತೀವ್ರತೆಯ ಭೂಕಂಪದಿಂದ ಕನಿಷ್ಠ ಆರು ಜನರು ಸಾವನ್ನಪ್ಪಿದ್ದು, ಹಲವಾರು ಮಂದಿ ಗಾಯಗೊಂಡಿದ್ದಾರೆ. ರಾಜಧಾನಿ ಢಾಕಾದಾದ್ಯಂತ ಕಟ್ಟಡಗಳು ನೆಲಸಮವಾಗಿದೆ. ಪ್ರಬಲವಾಗಿ ಭೂಮಿ ಕಂಪಿಸಿದ್ದು, ಲಕ್ಷಾಂತರ ನಿವಾಸಿಗಳು ಭಯಭೀತರಾಗಿ ಬೀದಿಗಳಿಗೆ ಓಡಿ ಬಂದಿದ್ದಾರೆ.

ಯುಎಸ್ ಭೂವೈಜ್ಞಾನಿಕ ಸಮೀಕ್ಷೆ ಪ್ರಕಾರ, ಭೂಕಂಪದ ಕೇಂದ್ರಬಿಂದು ಢಾಕಾದಿಂದ ಕೇವಲ 25 ಕಿ.ಮೀ. ದೂರದಲ್ಲಿರುವ ನರಸಿಂಗ್ಡಿ ಜಿಲ್ಲೆಯ ಘೋರಶಾಲ್ ಪ್ರದೇಶದಲ್ಲಿದ್ದು, ಕೇವಲ 10 ಕಿ.ಮೀ. ಆಳದಲ್ಲಿತ್ತು. ಆಳ ಕಡಿಮೆಯಿದ್ದ ಕಾರಣ ತೀವ್ರ ಕಂಪನ ಉಂಟಾಗಿ ವ್ಯಾಪಕ ಹಾನಿಯಾಯಿತು. ಅರ್ಮಾನಿಟೋಲಾ ಪ್ರದೇಶದ ಕೊಶೈತುಲಿಯಲ್ಲಿ ಎಂಟು ಅಂತಸ್ತಿನ ಕಟ್ಟಡದ ಮೇಲ್ಛಾವಣಿ ಕುಸಿದು ಬಿದ್ದ ಪರಿಣಾಮ ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ, ಹತ್ತು ಮಂದಿ ಗಾಯಗೊಂಡಿದ್ದಾರೆ. ಇನ್ನೊಂದು ಘಟನೆಯಲ್ಲಿ ಮತ್ತಿಬ್ಬರು ಪ್ರಾಣ ಕಳೆದುಕೊಂಡಿದ್ದು, ಒಟ್ಟು ಸಾವಿನ ಸಂಖ್ಯೆ ಆರಕ್ಕೇರಿದೆ ಎಂದು ಬಾಂಗ್ಲಾದೇಶ ಸರಕಾರದ ಮುಖ್ಯ ಸಲಹೆಗಾರರ ಕಚೇರಿ ದೃಢಪಡಿಸಿದೆ.

ಢಾಕಾದ ಸೂತ್ರಪುರ, ಖಿಲ್ಗಾಂವ್, ಬರಿಧಾರ, ಕಲಾಬಗನ್, ಸದರ್‌ಘಾಟ್, ಸಿದ್ದಿಕ್ ಬಜಾರ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಎಂಟು ಅಂತಸ್ತಿನ ಕಟ್ಟಡಗಳು ವಾಲುತ್ತಿರುವುದು, ಪ್ಲಾಸ್ಟರ್ ಇಟ್ಟಿಗೆಗಳು ಬೀಳುತ್ತಿರುವುದು, ನಿರ್ಮಾಣ ಹಂತದ ಕಟ್ಟಡಗಳಲ್ಲಿ ಇಟ್ಟಿಗೆ ಬಿದ್ದು ಗಾಯಗಳಾಗಿರುವುದು ಮುಂತಾದ ಹಲವು ವರದಿಗಳಿವೆ.

ಶುಕ್ರವಾರದಿಂದಲೇ ಜಾರಿಗೆ ಬಂದ ಕಾರ್ಮಿಕ ಸಂಹಿತೆ

ಹೊಸ ಕಾರ್ಮಿಕ ಕಾನೂನು

ದೆಹಲಿ: ಕೇಂದ್ರ ಸರಕಾರವು ಕಾರ್ಮಿಕರ ಜೀವನಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿದೆ. ಪ್ರಮುಖವಾಗಿ ಕಾರ್ಮಿಕರಿಗೆ ನೇಮಕಾತಿ ಪತ್ರ, ಪಿ.ಎಫ್, ಇ.ಎಸ್.ಐ.ಸಿ, ವಿಮೆ ಮತ್ತು ಇತರೆ ಸಾಮಾಜಿಕ ಭದ್ರತಾ ಪ್ರಯೋಜನಗಳು ದೊರಕಲಿದ್ದು, ಇದು ಶುಕ್ರವಾರದಿಂದಲೇ ಜಾರಿಗೆ ಬಂದಿವೆ.

ಈ ಹಿಂದೆ ಉದ್ಯೋಗಗಳನ್ನು ಅಧಿಕೃತಗೊಳಿಸಲು ನೇಮಕಾತಿ ಪತ್ರಗಳನ್ನು ನೀಡುವುದು ಕಡ್ಡಾಯವಾಗಿರಲಿಲ್ಲ, ಆದರೆ ಈಗ ಎಲ್ಲಾ ಕಾರ್ಮಿಕರಿಗೆ ನೇಮಕಾತಿ ಪತ್ರ ನೀಡುವುದು ಕಡ್ಡಾಯವಾಗಿದೆ. ಇದು ಪಾರದರ್ಶಕತೆ, ಉದ್ಯೋಗ ಭದ್ರತೆ ಮತ್ತು ಸ್ಥಿರ ಉದ್ಯೋಗವನ್ನು ಖಾತ್ರಿಪಡಿಸುತ್ತದೆ.

ಸಾಮಾಜಿಕ ಸುರಕ್ಷತೆಯ ವ್ಯಾಪ್ತಿ ಸೀಮಿತವಾಗಿತ್ತು, ಆದರೆ ಈಗ ಸಾಮಾಜಿಕ ಭದ್ರತಾ ಸಂಹಿತೆ, 2020ರ ಅಡಿಯಲ್ಲಿ,ಎಲ್ಲಾ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ವ್ಯಾಪ್ತಿ ಸಿಗಲಿದೆ. ಎಲ್ಲಾ ಕಾರ್ಮಿಕರಿಗೆ ಪಿಎಫ್, ಇಎಸ್‌ಐಸಿ , ವಿಮೆ ಮತ್ತು ಇತರ ಸಾಮಾಜಿಕ ಭದ್ರತಾ ಪ್ರಯೋಜನಗಳೂ ದೊರಕಲಿವೆ.



ಹಿಂದೆ ಉದ್ಯೋಗದಾತರು ಕಾರ್ಮಿಕರಿಗೆ ಉಚಿತ ವಾರ್ಷಿಕ ಆರೋಗ್ಯ ತಪಾಸಣೆಗಳನ್ನು ಒದಗಿಸಬೇಕೆಂಬ ಕಾನೂನುಬದ್ಧ ಅವಶ್ಯಕತೆ ಇರಲಿಲ್ಲ, ಆದರೆ ಈಗ ಉದ್ಯೋಗದಾತರು 40 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಕಾರ್ಮಿಕರಿಗೆ ಉಚಿತ ವಾರ್ಷಿಕ ಆರೋಗ್ಯ ತಪಾಸಣೆ ಒದಗಿಸಬೇಕು.ಈ ಹಿಂದೆ ಉದ್ಯೋಗದಾತರಿಗೆ ವೇತನ ಪಾವತಿಗೆ ಕಡ್ಡಾಯ ಪಾಲನೆ ಇರಲಿಲ್ಲ, ಆದರೆ ಈಗ ಉದ್ಯೋಗದಾತರು ಸಕಾಲಿಕ ವೇತನವನ್ನು ಒದಗಿಸುವುದು ಕಡ್ಡಾಯವಾಗಿದೆ. ಇದು ಆರ್ಥಿಕ ಸ್ಥಿರತೆಯನ್ನು ಖಚಿತಪಡಿಸುತ್ತದೆ.

ಚು.ಆಯೋಗಕ್ಕೆ ಮಮತಾ ಪತ್ರ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತದಾನ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಬಗ್ಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕಳವಳ ವ್ಯಕ್ತಪಡಿಸಿದ್ದು, ಚುನಾವಣಾ ಆಯೋಗವು ತಕ್ಷಣ ಮಧ್ಯಪ್ರವೇಶಿಸುವಂತೆ ಒತ್ತಾಯಿಸಿದ್ದಾರೆ.

ಈ ಕುರಿತು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಯೋಜಿತವಲ್ಲದ, ಅಸ್ತವ್ಯಸ್ತ

ಮತ್ತು ಅಪಾಯಕಾರಿಯಾದ ಚಟುವಟಿಕೆಯಾಗಿದೆ. ಈ ತರಬೇತಿಯಲ್ಲಿನ ಅಂತರ, ದಾಖಲಾತಿಗಳ ಕುರಿತು ಸ್ಪಷ್ಟತೆಯ ಕೊರತೆ ಮತ್ತು ಕೆಲಸದ ವೇಳಾಪಟ್ಟಿಯ ನಡುವೆ ಮತದಾರರನ್ನು ಭೇಟಿ ಮಾಡುವ ಅಸಾಧ್ಯತೆಗಳನ್ನು ಎತ್ತಿ ತೋರಿಸುತ್ತದೆ ಎಂದು ಕಳವಳ ವ್ಯಕ್ತಪಡಿಸಿ, ಪತ್ರವೊಂದನ್ನು ಹಂಚಿಕೊಂಡಿದ್ದಾರೆ.

ಈ ಸಂಬಂಧ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರಿಗೆ ಪತ್ರ ಬರೆದಿದ್ದು, ಅದರಲ್ಲಿ ಎಸ್‌ಐಆರ್ ಪ್ರಕ್ರಿಯೆ ಮತ್ತು ತರಬೇತಿಯಲ್ಲಿನ ನಿರ್ಣಾಯಕ ಅಂತರಗಳು, ಕಡ್ಡಾಯ ದಾಖಲಾತಿಗಳ ಕುರಿತು ಸ್ಪಷ್ಟತೆಯ ಕೊರತೆ ಇದೆ. ಮತದಾರರ ಜೀವನೋಪಾಯದ ವೇಳಾಪಟ್ಟಿಯ ಮಧ್ಯೆ ಅವರನ್ನು ಭೇಟಿ ಮಾಡುವುದು ಅಸಾಧ್ಯವಾಗಿದೆ. ಇದು ಈ ಪ್ರಕ್ರಿಯೆಯನ್ನು ರಚನಾತ್ಮಕವಾಗಿ ದುರ್ಬಲಗೊಳಿಸಿದೆ ಎಂದು ಉಲ್ಲೇಖಿಸಿದ್ದರು. ಸರಿಯಾದ ತರಬೇತಿ ಇಲ್ಲದೇ, ಅನೈಜತೆಯ ಸಮಯದಲ್ಲಿ ನಡೆಯುವ ಎಸ್‌ಐಆರ್ ಬಗ್ಗೆ ಗಂಭೀರ ಕಳವಳ ಇರುವುದಾಗಿ ಅವರು ತಿಳಿಸಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಅದನ್ನು ಜನರ ಮೇಲೆ ಹೇರಲಾಗಿರುವ ವಿಧಾನಗಳ ಬಗ್ಗೆ ಪದೇ ಪದೇ ಗಂಭೀರ ಕಳವಳಗಳನ್ನು ವ್ಯಕ್ತಪಡಿಸಿದ್ದೇನೆ.

ಗೌನ್ ಸ್ಪರ್ಧೆಯ ವೇಳೆ ಮಿಸ್ ಜಮೈಕಾದ ಹೆನ್ರಿಗೆ ಗಾಯ

ಮೆಕ್ಸಿಕೊದ ಫಾತಿಮಾ ಮಿಸ್ ಯೂನಿವರ್ಸ್

ಬ್ಯಾಂಕಾಕ್: ಮೆಕ್ಸಿಕೋದ ಫಾತಿಮಾ ಬಾಷ್ 2025ರ ವಿಶ್ವ ಸುಂದರಿ ಪಟ್ಟವನ್ನು ಅಲಂಕರಿಸಿದ್ದಾರೆ. ಥಾಯ್ಲೆಂಡ್‌ನಲ್ಲಿ ನಡೆದ ಮಿಸ್ ಯೂನಿವರ್ಸ್ ಸ್ಪರ್ಧೆ 74ನೇ ಆವೃತ್ತಿಯಲ್ಲಿ ಫಾತಿಮಾ ಬಾಷ್ ಮಿಸ್ ಯೂನಿವರ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು. ಯುವತಿಯರ ಸಬಲೀಕರಣದ ಬಗ್ಗೆ ಅವರು ನೀಡಿದ ಆಕರ್ಷಕ ಉತ್ತರ ನಿರ್ಣಾಯಕರ ಮನಗೆದ್ದಿತ್ತು.

ತೀವ್ರ ಪೈಪೋಟಿಯ ಸ್ಪರ್ಧೆ ಬಳಿಕ ಮಿಸ್ ಯೂನಿವರ್ಸ್ ಕಿರೀಟ ಧರಿಸುವ ವೇಳೆ ಭಾವುಕರಾದ ಫಾತಿಮಾ ಬಾಷ್ ಅವರ ವಿಡಿಯೋಗಳನ್ನು ಮಿಸ್ ಯೂನಿವರ್ಸ್ ಸಂಸ್ಥೆ ತನ್ನ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದೆ. ಮಿಸ್ ಯೂನಿವರ್ಸ್ ಕಿರೀಟ ಗೆದ್ದ ನಾಲ್ಕನೇ ಮೆಕ್ಸಿಕನ್ ಮಹಿಳೆಯಾಗಿರುವ ಎಂಬ ಹೆಗ್ಗಳಿಕೆಗೆ 25 ವರ್ಷದ ಫಾತಿಮಾ ಪಾತ್ರರಾಗಿದ್ದಾರೆ. ಗೌನ್ ಸ್ಪರ್ಧೆಯ ಸಮಯದಲ್ಲಿ ಮಿಸ್ ಜಮೈಕಾದ ಡಾ. ಗೇಬ್ರಿಯೆಲ್ ಹೆನ್ರಿ ವೇದಿಕೆಯಿಂದ ಆಯಾ ತಪ್ಪಿ ಬಿದ್ದ ಘಟನೆ ನಡೆದಿದೆ. ನಂತರ ಅವರನ್ನು ಸ್ಟ್ರೆಚರ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಸಣ್ಣಪುಟ್ಟ ಗಾಯಗಳಾಗಿವೆ.

ಕೇವಲ 14 ದಿನ ನಡೆಯಲಿರುವ ಚಳಿಗಾಲದ ಅಧಿವೇಶನ | ಸಚಿವ ರಿಜಿಜು ಪತ್ರ

ನ.30ರಂದು ಕೇಂದ್ರದ ಸರ್ವಪಕ್ಷಗಳ ಸಭೆ

ದೆಹಲಿ: ಡಿಸೆಂಬರ್ 1ರಂದು ಪ್ರಾರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದ ಸುಗಮ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರಕಾರವು ನವೆಂಬರ್ 30ರಂದು ಸರ್ವಪಕ್ಷ ಸಭೆಯನ್ನು ಕರೆಯಲಾಗಿದೆ. ಈ ಸಭೆಯು ಎಲ್ಲಾ ರಾಜಕೀಯ ಪಕ್ಷಗಳ ಸಂಸದರನ್ನು ಚರ್ಚೆಗೆ ಒಟ್ಟುಗೂಡಿಸಲಿದೆ.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಶುಕ್ರವಾರದಂದು ಎಲ್ಲಾ ನಾಯಕರಿಗೆ ಪತ್ರ ಬರೆದಿದ್ದಾರೆ. ಅಧಿವೇಶನಕ್ಕೂ ಮುನ್ನ ಎಲ್ಲಾ ಕಡೆಯಿಂದ ಕಳವಳಗಳ ದೂರ ಮಾಡಲು ಮತ್ತು ಸಹಕಾರವನ್ನು ಪಡೆಯಲು ಈ ಸಭೆಯನ್ನು ಒಂದು ಅವಕಾಶವಾಗಿ ಬಳಸಿಕೊಳ್ಳುವ ಗುರಿಯನ್ನು ಸರಕಾರ ಹೊಂದಿದೆ. ಚಳಿಗಾಲದ ಅಧಿವೇಶನವು ಡಿಸೆಂಬರ್ 1ರಿಂದ 19 ರವರೆಗೆ ನಡೆಯಲಿದ್ದು, 19 ದಿನಗಳವರೆಗೆ ನಡೆಯಲಿದೆ. ಈ ಹಿಂದಿನ ಸಂಸತ್ ಅಧಿವೇಶನಕ್ಕೆ ಹೋಲಿಸಿದರೆ ಅತ್ಯಂತ ಕಡಿಮೆ ಅವಧಿಯ ಸಂಸತ್ ಅಧಿವೇಶನ ಇದಾಗಿದೆ. 2013ರಲ್ಲಿ ಕೇವಲ 14 ದಿನಗಳ ಚಳಿಗಾಲದ ಅಧಿವೇಶನವನ್ನು ನಡೆದಿತ್ತು.

ಸರಕಾರವು ರಚನಾತ್ಮಕ ಮತ್ತು ಅರ್ಥಪೂರ್ಣ ಅಧಿವೇಶನವನ್ನು ಎದುರು ನೋಡುತ್ತಿದೆ ಎಂದು ರಿಜಿಜು ಹೇಳಿದರು. ಅಧಿವೇಶನವು ನಮ್ಮ ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ ಮತ್ತು ಜನರ ಆಕಾಂಕ್ಷೆಗಳನ್ನು ಪೂರೈಸುತ್ತದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಇನ್ನು ವಿರೋಧ ಪಕ್ಷದ ಸದಸ್ಯರು ಅಧಿವೇಶನದ ವೇಳಾಪಟ್ಟಿ ಮತ್ತು ಅವಧಿಯನ್ನು ಟೀಕಿಸಿದ್ದಾರೆ. ಕಾಂಗ್ರೆಸ್ ಸಂಸದ ಜೈರಾಮ್ ರಮೇಶ್ ಅಧಿವೇಶನವನ್ನು ವಿನಾಃಕಾರಣ ಮೊಟಕುಗೊಳಿಸಲಾಗಿದೆ. ಅಧಿವೇಶನ ಕೇವಲ 15 ದಿನಗಳು ಮಾತ್ರ ಇರಲಿದ್ದು, ಇದು ಯಾವ ಸಂದೇಶವನ್ನು ರವಾನಿಸುತ್ತದೆ? ಸರಕಾರಕ್ಕೆ ಯಾವುದೇ ಕೆಲಸವಿಲ್ಲ, ಅಂಗೀಕರಿಸಬೇಕಾದ ಯಾವುದೇ ಮಸೂದೆಗಳಿಲ್ಲ ಮತ್ತು ಚರ್ಚೆಗಳಿಗೆ ಅವಕಾಶ ನೀಡಬೇಕಾದ ಅಗತ್ಯವಿಲ್ಲ ಎಂಬುದು ಈಗ ಸ್ಪಷ್ಟವಾಯಿತು ಎಂದು ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ

ಅಗ್ನಿ ಅವಘಡ: ಒಂದೇ ಕುಟುಂಬದ ನಾಲ್ವರ ಸಾವು

ಗೋಧ್ರಾ: ಇಲ್ಲಿನ ಬಮ್ರೋಲಿ ರಸ್ತೆಯಲ್ಲಿರುವ ವೃಂದಾವನ ಸೊಸೈಟಿಯ ವಸತಿ ಕಟ್ಟಡದಲ್ಲಿ ಅಗ್ನಿ ಅನಾಹುತ ಸಂಭವಿಸಿದ್ದು, ಒಂದೇ ಕುಟುಂಬದ ನಾಲ್ವರು ಬೆಂಕಿಗೆ ಆಹುತಿಯಾಗಿರುವ ದಾರುಣ ಘಟನೆ ನಡೆದಿದೆ. ಘಟನೆಯ ಪ್ರಾಥಮಿಕ ವರದಿ ಪ್ರಕಾರ, ಕಟ್ಟಡದಿಂದ ಹೊಗೆ ಬರುತ್ತಿರುವುದನ್ನು ಸ್ಥಳೀಯರು ಕಂಡಿದ್ದು, ತಕ್ಷಣಕ್ಕೆ ಅವರು ಅಗ್ನಿಶಾಮಕದಳಕ್ಕೆ ಮಾಹಿತಿ ನೀಡಿದ್ದಾರೆ. ಮನೆಯಲ್ಲಿ ಶಾರ್ಟ್ ಸರ್ಕೀಟ್ ಉಂಟಾಗಿ ಈ ಅನಾಹುತ ಸಂಭವಿಸಿರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಮನೆಯಲ್ಲಿ ಆವರಿಸಿದ ದಟ್ಟ ಹೊಗೆಯಿಂದಾಗಿ ರಾತ್ರಿ ಮನೆಯಲ್ಲಿ ಮಲಗಿದ್ದವರು ಉಸಿರುಗಟ್ಟಿ ಪ್ರಜ್ಞೆ ತಪ್ಪಿದ್ದಾರೆ. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಅಧಿಕಾರಿಗಳು ಮನೆಯ ಬಾಗಿಲು ಮುರಿದು ತಕ್ಷಣಕ್ಕೆ ಅವರನ್ನೆಲ್ಲ ಗೋದ್ರಾ ಸಿವಿಲ್ ಆಸ್ಪತ್ರೆಗೆ ದಾಖಲಿಸಿದ್ದರು, ಆದರೆ, ಪ್ರಯೋಜನವಾಗಿಲ್ಲ. ಉಸಿರುಗಟ್ಟಿದ ಪರಿಣಾಮ ಚಿಕಿತ್ಸೆ ಫಲಿಸದೇ ಅವರಲ್ಲ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಅಗ್ನಿ ಅವಘಡದಲ್ಲಿ ಮನೆಯಲ್ಲಿನ ಸೋಫಾ ಸುಟ್ಟು ಹೋಗಿದೆ. ಮನೆ ಗಾಳಿ ನಿರೋಧಕವಾಗಿರುವುದರಿಂದ ಹೊಗೆ ಹೊರಬರಲು ಸಾಧ್ಯವಾಗದ ಕಾರಣ ಕುಟುಂಬ ಸದಸ್ಯರು ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ ಎಂದು ಅಗ್ನಿಶಾಮಕ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ದೇವ್ ದೋಷಿ ಕುಟುಂಬದ ಸಾವನ್ನಪ್ಪಿರುವ ಹಿರಿಯ ಮಗನಿಗೆ ನಿಶ್ಚಿತಾರ್ಥ ನಿಗದಿಯಾಗಿತ್ತು.

ವಿಯೆಟ್ನಾಂನಲ್ಲಿ ಭಾರೀ ಮಳೆ: 41 ಮಂದಿ ಸಾವು

ಹನೋಯ್: ವಿಯೆಟ್ನಾಂನಲ್ಲಿ ಧಾರಾಕಾರ ಮಳೆಯಿಂದ ಉಂಟಾದ ಪ್ರವಾಹ ಮತ್ತು ಭೂಕುಸಿತಗಳಲ್ಲಿ 41 ಜನರು ಸಾವನ್ನಪ್ಪಿದ್ದಾರೆ. ಕಳೆದ ಮೂರು ದಿನಗಳಲ್ಲಿ ಮಧ್ಯ ವಿಯೆಟ್ನಾಂನ

ಹಲವಾರು ಭಾಗಗಳಲ್ಲಿ 150 ಸೆಂ.ಮೀ.ಗಿಂತ (60 ಇಂಚು) ಹೆಚ್ಚಿನ ಮಳೆಯಾಗಿದೆ. ಇದು ಪ್ರಮುಖ ಕಾಫಿ ಉತ್ಪಾದನಾ ವಲಯ ಮತ್ತು ದೇಶದ ಅತ್ಯಂತ ಜನಪ್ರಿಯ ಕಡಲತೀರಗಳಿಗೆ ನೆಲೆಯಾಗಿದೆ. ಭಾನುವಾರದಿಂದ ಇಲ್ಲಿ ವರೆಗೆ ಆರು ಪ್ರಾಂತ್ಯಗಳಲ್ಲಿ ಕನಿಷ್ಠ 41 ಜನರು ಸಾವನ್ನಪ್ಪಿದ್ದಾರೆ. 52,000ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ. ಸುಮಾರು 62,000 ಜನರನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಆದರೆ ಭೂಕುಸಿತಗಳಿಂದಾಗಿ ಹಲ ವಾರು ಪ್ರಮುಖ ರಸ್ತೆಗಳು ಮುಚ್ಚಿಹೋಗಿವೆ. 10 ಲಕ್ಷಕ್ಕೂ ಹೆಚ್ಚು ಮಂದಿ ವಿದ್ಯುತ್ ಸಂಪರ್ಕ ಕಡಿತದ ಸಮಸ್ಯೆ ಎದುರಿಸುತ್ತಿದ್ದಾರೆ.

ಶುಕ್ರವಾರ ಹೆಚ್ಚಿನ ಪ್ರವಾಹ ಮತ್ತು ಭೂಕುಸಿತ ಸಂಭವಿಸುವ ಬಗ್ಗೆ ರಾಷ್ಟ್ರೀಯ ಹವಾಮಾನ ಮುನ್ಸೂಚನೆ ಸಂಸ್ಥೆ ಎಚ್ಚರಿಕೆ ನೀಡಿದೆ. ಈ ಪ್ರದೇಶದಲ್ಲಿ ಭಾರೀ ಮಳೆ ಮುಂದುವರಿಯುವ ಸಾಧ್ಯತೆ ಇದೆ.ಲ್ಯಾಮ್ ಡಾಂಗ್ ಪ್ರಾಂತ್ಯದ ಡಾ. ನಿಮ್ ನದಿಯ ಮೇಲಿನ ತೂಗು ಸೇತುವೆ ಗುರುವಾರ ಬೆಳಗ್ಗೆ ಕೊಚ್ಚಿ ಹೋಗಿದೆ.

ಶ್ವೇತ ಭವನದಲ್ಲಿ ಇಂದು ಟ್ರಂಪ್-ಮಮ್ದಾನಿ ಭೇಟಿ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇದೇ ಮೊದಲ ಬಾರಿಗೆ ಶ್ವೇತ ಭವನದ ಓವಲ್ ಕಚೇರಿಯಲ್ಲಿ ಶುಕ್ರವಾರ ನ್ಯೂಯಾರ್ಕ್ ನಗರದ ಮೇಯರ್ ಜೋಹ್ರಾನ್



ಮಮ್ದಾನಿ ಅವರನ್ನು ಭೇಟಿಯಾಗಲಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಟ್ರಂಪ್, 'ಶ್ವೇತಭವನಕ್ಕೆ ಕಮ್ಯುನಿಸ್ಟ್ ಬರುತ್ತಿದ್ದಾರೆ. ಅಮೆರಿಕ ಜನರ ಪರವಾಗಿ ನಾನು ಅವರನ್ನು ಭೇಟಿ ಮಾಡು ತ್ತೇನೆ' ಎಂದು ತಿಳಿಸಿದ್ದಾರೆ. ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಅವರು ಶ್ವೇತ ಭವನಕ್ಕೆ ನ್ಯೂಯಾರ್ಕ್ ನಗರದ ಮೇಯರ್ ಜೋಹ್ರಾನ್ ಮಮ್ದಾನಿ ಬರುತ್ತಿರುವುದನ್ನು ದೃಢಪಡಿಸಿದ್ದಾರೆ. ಕ್ಯಾರೋಲಿನ್ ಲೀವಿಟ್ ಅವರು ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿ, ನ್ಯೂಯಾರ್ಕ್ ನಗರದ ಚುನಾಯಿತ ಮೇಯರ್ ಜೋಹ್ರಾನ್ ಮಮ್ದಾನಿ ಅವರು ಶುಕ್ರವಾರ ಶ್ವೇತಭವನದ ಓವಲ್ ಕಚೇರಿ ಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಯಾಗಲಿದ್ದಾರೆ. ಚುನಾಯಿತ ಮೇಯರ್ ಓವಲ್ ಕಚೇರಿಗೆ ಬರುತ್ತಿರುವುದಾಗಿ ಅಧ್ಯಕ್ಷರೇ ಹೇಳಿದ್ದಾರೆ. ಅದಕ್ಕಾಗಿ ನಮ್ಮ ತಂಡಗಳು ನಿರ್ದಿಷ್ಟವಾದ ಕೆಲವೊಂದು ವ್ಯವಸ್ಥೆಗಳನ್ನೂ ಮಾಡುತ್ತಿವೆ ಎಂದರು.

ಸಂಸ್ಕೃತ ಸತ್ತ ಭಾಷೆ ಉದಯನಿಧಿ ವಿವಾದ

ಚೆನ್ನೈ: ಕಳೆದ ವರ್ಷ ಸನಾತನ 'ಧರ್ಮ ಡೆಂಗ್ಯೂ, ಮಲೇರಿಯಾ ಇದ್ದಂತೆ' ಎನ್ನುವ ಮೂಲಕ ಭಾರೀ ವಿವಾದ ಸೃಷ್ಟಿಸಿದ್ದ ತಮಿಳುನಾಡು ಡಿಸಿಎಂ ಉದಯನಿಧಿ ಸ್ಟಾಲಿನ್

ಇದೀಗ ತಮ್ಮ ಹೇಳಿಕೆಯಿಂದಲೇ ಮತ್ತೊಂದು ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ 'ಸಂಸ್ಕೃತ ಸತ್ತ ಭಾಷೆ' ಎಂದು ಕರೆದಿದ್ದಾರೆ. ಚೆನ್ನೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ, 'ಕೇಂದ್ರ ಸರಕಾರ ಕಳೆದ 10 ವರ್ಷಗಳಲ್ಲಿ ಸಂಸ್ಕೃತಕ್ಕೆ 2,400 ಕೋಟಿ ರು. ಅನುದಾನ ಮೀಸಲಿಟ್ಟಿದೆ. ಆದರೆ ತಮಿಳಿಗೆ 150 ಕೋಟಿ ರು ಮಾತ್ರ ಮೀಸಲಿಟ್ಟಿದೆ. ಸಂಸ್ಕೃತವನ್ನ ಉತ್ತೇಜಿಸುತ್ತಾ ತಮಿಳು ಭಾಷೆಯನ್ನು ಕೇಂದ್ರವು ಕಡೆಗಣಿಸಿದೆ ಎಂದು ಹೇಳಿದ್ದಾರೆ. ಮಕ್ಕಳು ತಮಿಳು ಕಲಿಯಲು ಉತ್ಸುಕವಾಗಿದ್ದರೆ, ಹಿಂದಿ ಮತ್ತು ಸಂಸ್ಕೃತವನ್ನ ಕಲಿಯುವಂತೆ ಏಕೆ ಒತ್ತಡ ಹೇರುತ್ತಿದ್ದೀರಿ ಎಂದು ಪ್ರಧಾನಿ ಮೋದಿ ಅವರನ್ನು ನೇರವಾಗಿ ಪ್ರಶ್ನೆ ಮಾಡಿದ್ದಾರೆ. ಉದಯನಿಧಿ ಸ್ಟಾಲಿನ್ ಹೇಳಿಕೆ ಬಳಿಕ ರಾಜಕೀಯ ವಲಯದಲ್ಲೂ ಬಿರುಗಾಳಿ ಎದ್ದಿದೆ.

ಸಮಾಚಾರ ಸಣ್ಣದಲ್ಲ

ಕಲಾ ಸೇವಾ ರತ್ನ ಪ್ರಶಸ್ತಿಗೆ ಚಂದ್ರು ಆಯ್ಕೆ

ಹೊಸದುರ್ಗ: ಈ ಬಾರಿಯ ಕಲಾ ಸೇವಾರತ್ನ ರಾಜ್ಯ ಪ್ರಶಸ್ತಿಗೆ ಹೊಸದುರ್ಗ ತಾಲ್ಲೂಕಿನ ಕಡಿವಾಣಕಟ್ಟೆ ಗ್ರಾಮದ ಡಾ.ಚಂದ್ರು ಕಲಾವಿದ ಆಯ್ಕೆಯಾಗಿದ್ದಾರೆ. ಕಲ್ಯಾಣ ಕರ್ನಾಟಕ ವೇದಿಕೆ(ರಿ) ಚಿಕ್ಕಮಗಳೂರು ಜಿಲ್ಲಾಘಟಕ ಮತ್ತು ಕಡೂರು ತಾಲೂಕು ಘಟಕದ ವತಿಯಿಂದ ಆಯೋಜನೆ ಮಾಡಿರುವ ಕನ್ನಡ ರಾಜ್ಯೋತ್ಸವ ಸಮಾರಂಭದ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನ.29ರಂದು ಕಡೂರಿನ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆಯಲಿದ್ದು ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ಡಾ.ಚಂದ್ರು ಕಲಾವಿದ ಕಡಿವಾಣಕಟ್ಟೆ ಅವರು ಕಲಾ ಸೇವಾರತ್ನ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಹೊನ್ನಾಳಿಯಲ್ಲಿ ಬಾಲ ಕಾರ್ಮಿಕರು ಪತ್ತೆ

ದಾವಣಗೆರೆ: ಹೊನ್ನಾಳಿಯಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಹಾಗೂ ಬಾಲ್ಯಾವಸ್ಥೆ – ಕಿಶೋರಾವಸ್ಥೆ ತಿದ್ದುಪಡಿ ಕಾಯ್ದೆ ಕುರಿತು ವಿವಿಧ ಇಲಾಖೆಯ ಅಧಿಕಾರಿಗಳು ಶುಕ್ರವಾರ ಅನಿರೀಕ್ಷಿತವಾಗಿ ವಿವಿಧ ಉದ್ದಿಮೆಗಳಿಗೆ ಭೇಟಿ ನೀಡಿ ಬಾಲ ಹಾಗೂ ಕಿಶೋರಾವಸ್ಥೆ ಕಾರ್ಮಿಕರ ತಪಾಸಣೆ ನಡೆಸಲಾಯಿತು. ತಪಾಸಣೆಯಲ್ಲಿ ಅಪಾಯಕಾರಿ ಉದ್ದಿಮೆಯಲ್ಲಿ ಕೆಲಸ ಮಾಡುವ ಇಬ್ಬರು ಕಿಶೋರ ಕಾರ್ಮಿಕರು ಪತ್ತೆಯಾಗಿದ್ದು.ಪತ್ತೆಯಾದ ಕಿಶೋರ ಕಾರ್ಮಿಕರನ್ನು ಕೆಲಸದಿಂದ ಬಿಡುಗಡೆಗೊಳಿಸಿ ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಒಪ್ಪಿಸಲಾಯಿತು. ಹಾಗೂ ಮಾಲೀಕರ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕಾರ್ಯಾಚರಣೆಯಲ್ಲಿ ಹೊನ್ನಾಳಿ ಕಾರ್ಮಿಕ ನಿರೀಕ್ಷಕರು, ಮಕ್ಕಳ ರಕ್ಷಣಾ ಘಟಕ ಸಿಬ್ಬಂದಿ, ಮಕ್ಕಳ ಸಹಾಯವಾಣಿ ಸಿಬ್ಬಂದಿ, ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿಗಳು, ಯೋಜನಾ ನಿರ್ದೇಶಕರು ಹಾಜರಿದ್ದರು.

ವಿಶೇಷಚೇತನರಿಗೆ ಕ್ರೀಡಾಕೂಟ 25ಕ್ಕೆ

ಚಿತ್ರದುರ್ಗ: ಜಿಲ್ಲಾ ಮಟ್ಟದಲ್ಲಿ ಡಿ.3ರಂದು ಆಚರಿಸಲಿರುವ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಇದೇ ನವೆಂಬರ್25ರಂದು ಬೆಳಿಗ್ಗೆ 10 ಗಂಟೆಗೆ ನಗರದ ಒನಕೆ ಓಬವ್ವ ಜಿಲ್ಲಾ ಕ್ರೀಡಾಂಗಣದಲ್ಲಿ ವಿಕಲಚೇತನರಿಗಾಗಿ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಕ್ರೀಡಾ ಸ್ಪರ್ಧೆಗಳ ವಿವರ: 18 ವರ್ಷ ಮೇಲ್ಪಟ್ಟ ದೃಷ್ಟಿದೋಷವುಳ್ಳವರಿಗೆ ಮಡಿಕೆ ಹೊಡೆಯುವುದು, ಕೇನ್ ರೇಸ್ ಸ್ಪರ್ಧೆ ನಡೆಯಲಿದೆ. ಶ್ರವಣ ದೋಷವುಳ್ಳವರಿಗೆ ಹಾಗೂ ದೈಹಿಕ ವಿಕಲಚೇತನರಿಗೆ 100ಮೀ ಓಟ, ಗುಂಡು ಎಸೆತ, ಜಾವಲಿನ್ ಥ್ರೋ ಸ್ಪರ್ಧೆ ನಡೆಯಲಿದೆ. ಬೌದ್ಧಿಕ ವಿಕಲಚೇತನರಿಗೆ 100ಮೀ ಓಟ, ಬಕೆಟ್ನಲ್ಲಿ ರಿಂಗ್ ಎಸೆತ, ಮ್ಯೂಜಿಕಲ್ ಚೇರ್‌ಕ್ರೀಡೆಗಳನ್ನು ಆಯೋಜಿಸಲಾಗಿದೆ. ಸಾಂಸ್ಕೃತಿಕ ಸ್ಪರ್ಧೆಗಳ ವಿವರ: 18 ವರ್ಷ ಮೇಲ್ಪಟ್ಟ ದೃಷ್ಟಿದೋಷ ಮತ್ತು ದೈಹಿಕ ವಿಕಲಚೇತನರು ಮತ್ತು ಬೌದ್ಧಿಕ ವಿಕಲತೆ ಹೊಂದಿರುವವರಿಗೆ ಜಾನಪದ ಗೀತೆ, ಭಾವಗೀತೆ ಭಕ್ತಿಗೀತೆಯನ್ನು ಏರ್ಪಡಿಸಲಾಗಿದೆ. ವಿಕಲಚೇತನರು ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲಾಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜೆ.ವೈಶಾಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಾ ಪ್ರತಿಭೋತ್ಸವ ನ.22, 23 ರಂದು

ಚಿತ್ರದುರ್ಗ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾ ಪ್ರತಿಭೋತ್ಸವ ಕಾರ್ಯಕ್ರಮ ಇದೇ ನ.22 ಮತ್ತು 23 ರಂದು ಚಿತ್ರದುರ್ಗ ನಗರದ ಕೋಟೆ ಸರಕಾರಿ ಪ್ರೌಢಶಾಲೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ನ.22ರಂದು ಬೆಳಗ್ಗೆ 11.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಯೋಜನಾ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್‌ಉದ್ಘಾಟಿಸುವರು. ಶಾಸಕ ಕೆ.ಸಿ. ವೀರೇಂದ್ರ, ಅಧ್ಯಕ್ಷತೆ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಸಂಸದ ಗೋವಿಂದ ಎಂ.ಕಾರಜೋಳ, ಹೊಸದುರ್ಗ ಶಾಸಕರು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಅಧ್ಯಕ್ಷ ಬಿ.ಜಿ.ಗೋವಿಂದಪ್ಪ, ಚಳ್ಳಕೆರೆ ಶಾಸಕರು ಹಾಗೂ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಟಿ.ರಘುಮೂರ್ತಿ,ಮೊಳಕಾಲ್ಮುರು ಶಾಸಕ ಎನ್. ವೈ.ಗೋಪಾಲಕೃಷ್ಣ, ಹೊಳಲ್ಕೆರೆ ಶಾಸಕ ಡಾ.ಎಂ. ಚಂದ್ರಪ್ಪ, ವಿಧಾನ ಪರಿಷತ್ ಶಾಸಕರಾದ ಚಿದಾನಂದ ಎಂ.ಗೌಡ, ಕೆ.ಎಸ್.ನವೀನ್, ಡಿ.ಟಿ.ಶ್ರೀನಿವಾಸ್ ಭಾಗವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ದ್ರಾಕ್ಷಾರಸ ಮಂಡಳಿ ಅಧ್ಯಕ್ಷ ಡಾ.ಬಿ.ಯೋಗೇಶ್ ಬಾಬು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ಅಧ್ಯಕ್ಷ ಜಿ.ಎಸ್. ಮಂಜುನಾಥ, ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ.ತಾಜ್ಪೀರ್ ಸೇರಿದಂತೆ ಇತರರು ಇದ್ದರು.

{ಬಿ.ವೈ.ರಾಘವೇಂದ್ರ } ಸಂಸದ

ಭಾರತ ದೇಶ ಸ್ವತಂತ್ರಗೊಂಡ ನಂತರ ದೇಶದ 552 ಸಂಸ್ಥಾನಗಳನ್ನು ಒಟ್ಟುಗೂಡಿಸಿದ ಕೀರ್ತಿ ದೇಶದ ಉಕ್ಕಿನ ಮನುಷ್ಯ ಎಂದೇ ಖ್ಯಾತಿಯಾಗಿರುವ ಸರ್ದಾರ್‌ವಲ್ಲಭಬಾಯಿ ಪಟೇಲರಿಗೆ ಸಲ್ಲುತ್ತದೆ. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಕಾಶ್ಮೀರದ ರಾಜಾ ಹರಿಸಿಂಗ್ ಅವರ ಮನವೊಲಿಸಿ ಕಾಶ್ಮೀರವನ್ನು ಭಾರತ ದೇಶದ ಸಂವಿಧಾನದ ಅಡಿಯಲ್ಲಿ ಸೇರ್ಪಡೆ ಮಾಡಲಾಯಿತು.

ಬ್ಯಾಂಕ್ ಅಧಿಕಾರಿಗಳಿಗೆ ನೋಟಿಸ್ ನೀಡಲು ಜಿಪಂ ಸಿಇಒ ಡಾ.ಆಕಾಶ್ ಸೂಚನೆ

ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ನಿರಾಕರಣೆ

ಚಿತ್ರದುರ್ಗ: ಪಡೆದ ಸಾಲ ಹಿಂದಿರುಗಿಸುವಲ್ಲಿ ಜಿಲ್ಲೆಯ ಸ್ವ ಸಹಾಯ ಗುಂಪುಗಳು ಮಾದರಿಯಾಗಿವೆ. ಆದರೆ ಇಲ್ಲಸಲ್ಲದ ಕಾರಣ ಹೇಳಿ ಸ್ವ ಸಹಾಯ ಗುಂಪುಗಳಿಗೆ ಸಾಲ ನಿರಾಕರಣೆ ಮಾಡುವ ಬ್ಯಾಂಕುಗಳ ವ್ಯವಸ್ಥಾಪಕರಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಜಿ.ಪಂ. ಸಿಇಒ ಡಾ.ಆಕಾಶ್ ಲೀಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಎಂ.ರಾಘವೇಂದ್ರ ಅವರಿಗೆ ಸೂಚಿಸಿದರು.

ನಗರದ ಜಿ.ಪಂ. ಸಭಾಂಗಣದಲ್ಲಿ ಲೀಡ್ ಬ್ಯಾಂಕ್ ನೇತೃತ್ವದಲ್ಲಿ ಜರುಗಿದ ಜಿಲ್ಲಾ ಸಲಹಾ ಸಮಿತಿ ಹಾಗೂ ಜಿಲ್ಲಾ ಹಂತದ ಪುನರ್‌ಪರಿಶೀಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಸ್ವ-ಸಹಾಯ ಗುಂಪುಗಳ ಸಾಲ ಅರ್ಜಿ ಪ್ರಕ್ರಿಯನ್ನು ಕೈಗೆತ್ತಿಕೊಳ್ಳಲು ಹಿಂದೇಟು ಹಾಕುವ ಹಾಗೂ ಸರಿಯಾದ ರೀತಿಯಲ್ಲಿ ಸ್ಪಂದಿಸದ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಹಿರಿಯೂರು, ಅರೆಹಳ್ಳಿ ಹಾಗೂ ತಾಳಿಕಟ್ಟೆ ಬ್ರಾಂಚ್‌ಗಳ ವ್ಯವಸ್ಥಾಪಕರಿಗೆ ನೋಟಿಸ್ ಜಾರಿ ಮಾಡಬೇಕು. 2025-26ನೇ ಸಾಲಿಗೆ ಎನ್.ಆರ್.ಎಲ್.ಎಂ (ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ) ಅಡಿ 6,766 ಸ್ವ-ಸಹಾಯ ಗುಂಪುಗಳಿಗೆ ಸಾಲ ಸೌಲಭ್ಯ ನೀಡಲು ಗುರಿ ನಿಗದಿಪಡಿಸಲಾಗದೆ. ಒಟ್ಟು 2,405 ಅರ್ಜಿಗಳು ಸ್ವೀಕೃತವಾಗಿವೆ. ಈ ಪೈಕಿ 2177 ಎಸ್.ಹೆಚ್.ಜಿ ಗಳಿಗೆ ಈಗಾಗಲೇ ಸಾಲ ಸೌಲಭ್ಯ ನೀಡಲಾಗಿದೆ. 141 ಅರ್ಜಿಗಳು ಬಾಕಿದ್ದು, 87 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಬ್ಯಾಂಕ್ಗಳು ಬಾಕಿ ಇರುವ ಹಾಗೂ ಆಫ್ಲೈನ್ ಮೂಲಕ ಸಲ್ಲಿಕೆಯಾದ ಅರ್ಜಿಗಳ

ನಗರದ ಜಿ.ಪಂ. ಸಭಾಂಗಣದಲ್ಲಿ ಲೀಡ್ ಬ್ಯಾಂಕ್ ನೇತೃತ್ವದಲ್ಲಿ ಜರುಗಿದ ಜಿಲ್ಲಾ ಸಲಹಾ ಸಮಿತಿ ಹಾಗೂ ಜಿಲ್ಲಾ ಹಂತದ ಪುನರ್‌ಪರಿಶೀಲನಾ ಸಮಿತಿ ಸಭೆಯಲ್ಲಿ ಜಿ.ಪಂ. ಸಿಇಒ ಡಾ.ಆಕಾಶ್ ಲೀಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಎಂ.ರಾಘವೇಂದ್ರ ಮಾತನಾಡಿದರು.

ಪ್ರಕ್ರಿಯೆ ಪೂರ್ಣಗೊಳಿಸಲು ಆದ್ಯತೆ ನೀಡಬೇಕು ಎಂದು ಸಿಇಒ ಡಾ.ಆಕಾಶ್ ಹೇಳಿದರು.

ಸಭೆಗೆ ಪ್ರಮುಖ ಬ್ಯಾಂಕ್ ಅಧಿಕಾರಿಗಳು ಗೈರು ಹಾಜರಿಯಾಗಿದ್ದನ್ನು ಗಂಭೀರವಾಗಿ ಪರಿಗಣಿಸಿದ ಸಿಇಒ ಡಾ.ಆಕಾಶ್ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ನಿರ್ದೇಶನ ನೀಡಿದರು. ಸಭೆ ನಡಾವಳಿಯಲ್ಲಿ ಗೈರು ಹಾಜರಾದ ಬ್ಯಾಂಕ್ ಅಧಿಕಾರಿಗಳು ಸ್ವತಃ ಸಿಇಒ ಅವರ ಸಮ್ಮುಖದಲ್ಲಿ ಹಾಜರಾಗಿ ಸ್ಪಷ್ಟೀಕರಣ ನೀಡವಂತೆ ದಾಖಲಿಸಲಾಯಿತು.

ಡಿಸೆಂಬರ್‌ಅಂತ್ಯದವರೆಗೆ ಎಲ್ಲಾ ಬ್ಯಾಂಕುಗಳಲ್ಲಿನ ಖಾತೆಗಳಲ್ಲಿ ಇತ್ಯರ್ಥವಾಗದೆ ಉಳಿದ ಹಣದ ವಿಲೇವಾರಿಗೆ ಅಭಿಯಾನ ನಡೆಸಲಾಗುತ್ತಿದೆ. ನಿಷ್ಕ್ರಿಯ ಖಾತೆಯಲ್ಲಿ ಅತ್ಯಂತ ಹೆಚ್ಚು ಹಣ ಹೊಂದಿರುವವರು, ಹಕ್ಕು ಪಡೆಯದ ಠೇವಣಿಗಳು, 60 ವರ್ಷ ಮೇಲ್ಪಟ್ಟವರು, ನಿಷ್ಕ್ರಿಯಗೊಂಡ ಖಾತೆಯಲ್ಲಿರುವ ಸರಕಾರಿ ಠೇವಣಿಗಳನ್ನು ಗುರುತಿಸಿ ಇತ್ಯರ್ಥ ಪಡಿಸಲು ಬ್ಯಾಂಕ್ ಅಧಿಕಾರಿಗಳು ಆದ್ಯತೆ ನೀಡಬೇಕು ಎಂದು ಆರ್.ಬಿ.ಐ ಬೆಂಗಳೂರು ಪ್ರಾದೇಶಿಕ ಕಚೇರಿ ವ್ಯವಸ್ಥಾಪಕ ಬುಬಲ್ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 258 ಬ್ಯಾಂಕ್ ಶಾಖೆಗಳು ಇದ್ದು, ಒಟ್ಟು 11,190.83 ಕೋಟಿ ರು.ಠೇವಣಿ ಸಂಗ್ರಹಿಸಲಾಗಿದೆ. ಒಟ್ಟು 13,261.17 ಕೋಟಿ ರು. ಸಾಲ ನೀಡಲಾಗಿದೆ. ಜಿಲ್ಲೆಯ ಒಟ್ಟಾರೆ ಠೇವಣಿ ಹಾಗೂ ಸಾಲ ಅನುಪಾತ ಶೇ.118.5 ರಷ್ಟಿದೆ. ಪ್ರಸಕ್ತ ವರ್ಷದಲ್ಲಿ ಕೃಷಿ, ಶಿಕ್ಷಣ, ವಸತಿ, ಸಣ್ಣ ಹಾಗೂ ಅತಿಸಣ್ಣ ಉದ್ದಿಮೆ ಸೇರಿದಂತೆ ಆದ್ಯತಾ ವಲಯಗಳಿಗೆ 9783.59 ಕೋಟಿ ರು.ಸಾಲ ನೀಡುವ ಗುರಿಯ ಪೈಕಿ 5599.37 ಕೋಟಿ ರು. ಸಾಲ ನೀಡಲಾಗಿದೆ ಎಂದು ಲೀಡ್ ಬ್ಯಾಂಕ್ ವ್ಯವಸ್ಥಾಪಕ ರಾಘವೇಂದ್ರ.ಎಂ ಮಾಹಿತಿ ನೀಡಿದರು.

ಜಿ.ಪಂ. ಯೋಜನಾ ನಿರ್ದೇಶಕಿ ಜಯಲಕ್ಷ್ಮೀ, ಕೆನರಾ ಬ್ಯಾಂಕ್ ವಲಯ ಪ್ರಬಂಧಕಿ ಅನಿತಾ, ನಬಾರ್ಡ್ ಜಿಲ್ಲಾ ವ್ಯವಸ್ಥಾಪಕ ವಿನಂತ್.ಕೆ, ಸೇರಿದಂತೆ ವಿವಿಧ ಬ್ಯಾಂಕ್ಗಳ ಅಧಿಕಾರಿಗಳು, ನಾನಾ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

100 ಘಟಕಗಳಿಗೆ ಸಾಲ ಸೌಲಭ್ಯ

ಜಂಟಿ ಕೃಷಿ ನಿರ್ದೇಶಕ ಮಂಜುನಾಥ ಮಾತನಾಡಿ, ಪಿ.ಎಂ.ಎಫ್.ಎಂ.ಇ (ಪ್ರಧಾನ ಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣ ಉದ್ದಿಮೆಗಳ ಔಪಚಾರಿಕರಣ) ಅಡಿ ಜಿಲ್ಲೆಯಲ್ಲಿ 100 ಘಟಕಗಳಿಗೆ ಸಾಲ ಸೌಲಭ್ಯ ನೀಡಲು ಗುರಿ ನಿಗದಿ ಮಾಡಲಾಗಿದೆ. 65 ಅರ್ಜಿಗಳು ಸ್ವೀಕೃತವಾಗಿವೆ. ಇದುವರೆಗೆ 28 ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ. 28 ಅರ್ಜಿಗಳು ಬಾಕಿಯಿವೆ. 9 ಅರ್ಜಿಯನ್ನು ತಿರಸ್ಕರಿಸಲಾಗಿದೆ. ಬ್ಯಾಂಕ್‌ಗಳು ಯೋಜನೆ ಅನುಷ್ಠಾನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಬಾಕಿ ಇರುವ 28 ಅರ್ಜಿಗಳ ಪೈಕಿ ಕೆನರಾ ಬ್ಯಾಂಕ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ತಲಾ 9 ಅರ್ಜಿಗಳು ಬಾಕಿಯಿವೆ. ಉಳಿದಂತೆ ಇತರೆ ಬ್ಯಾಂಕ್‌ಗಳಲ್ಲಿ ಒಂದು ಅಥವಾ ಎರೆಡು ಅರ್ಜಿಗಳು ಬಾಕಿಯಿವೆ ಎಂದು ಹೇಳಿದರು.

ನಾಗರಿಕರಿಂದ ಸಂಗ್ರಹಿಸಿದ ಠೇವಣಿಗೆ ಸಂವಾದಿಯಾಗಿ ಬ್ಯಾಂಕುಗಳು ಸಾಲ ನೀಡುವ ಅನುಪಾತ ಜಿಲ್ಲಾ ಮಟ್ಟದಲ್ಲಿ ಉತ್ತಮವಾಗಿದೆ. ಆದರೆ ಕೆಲ ಬ್ಯಾಂಕುಗಳು ಶೇ.60 ಸಾಲ ನೀಡುವ ಅನುಪಾತವನ್ನು ನಿರ್ವಹಣೆ ಮಾಡುತ್ತಿಲ್ಲ. ಇನ್ನೂ ಕೃಷಿ, ಶಿಕ್ಷಣ, ವಸತಿ, ಸಣ್ಣ ಹಾಗೂ ಅತಿಸಣ್ಣ ಉದ್ದಿಮೆ ಸೇರಿದಂತೆ ಆದ್ಯತಾ ವಲಯಗಳಿಗೆ ನೀಡುವ ಸಾಲದ ಗುರಿಯ ಪ್ರಮಾಣವನ್ನು ಬ್ಯಾಂಕುಗಳು ಪೂರ್ಣಗೊಳಿಸಬೇಕು. ಕೇವಲ ಶೇ.50 ಹೆಚ್ಚಿನ ಸಾಧನೆ ಆದರೆ ಸಾಕು ಎನ್ನುವ ಧೋರಣೆಯನ್ನು ಕೈಬಿಡಬೇಕು. ಪಿ.ಎಂ. ಸ್ವನಿಧಿ ಯೋಜನೆಯಡಿ ಎರಡನೇ ಹಾಗೂ ಮೂರನೇ ಹಂತದ ಸಾಲ ನೀಡುವ ಪ್ರಮಾಣ ಹೆಚ್ಚಾಗಬೇಕು.

-ಡಾ.ಆಕಾಶ್, ಸಿಇಒ

ಜಿಪಂ 'ಜಲ ಸಂಚಯ್ - ಜನ ಭಾಗೀಧಾರಿ' ರಾಷ್ಟ್ರ ಪ್ರಶಸ್ತಿ

ಚಿತ್ರದುರ್ಗ: ಚಿತ್ರದುರ್ಗ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಜಲ ಸಂರಕ್ಷಣಾ ಕಾಮಗಾರಿಗಳನ್ನು ಉತ್ತಮವಾಗಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಕೇಂದ್ರ ಜಲ ಶಕ್ತಿ ಇಲಾಖೆ ನೀಡುವ ''ಜಲ ಸಂಚಾಯ್, ಜನ ಭಾಗಿಧಾರಿ'' (ಜಿ.ಎಸ್.ಜೆ.ಬಿ) ರಾಷ್ಟ್ರ ಪ್ರಶಸ್ತಿಗೆ ಜಿಲ್ಲೆಯು ಭಾಜನವಾಗಿದೆ.

ದೆಹಲಿಯಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು,ಹಾಗೂ ಜಲಶಕ್ತಿ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರ ಉಪಸ್ಥಿತಿಯಲ್ಲಿ ನೀಡಿದ ಪ್ರಶಸ್ತಿಯನ್ನು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರಿಂದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆಕಾಶ್ ಅವರು ಸ್ವೀಕರಿಸಿದರು.

ಜಿಲ್ಲೆಯಲ್ಲಿ ಜಲ ಮೂಲದ ಸಂರಕ್ಷಣೆಯಡಿ ಅಂತರ್ಜಲ ವೃದ್ಧಿಗಾಗಿ, ಜಲ ಸಂರಕ್ಷಣೆಗೆ ಆದ್ಯತೆ ನೀಡಲಾಗಿದ್ದು, ಮಳೆ ನೀರು ಸಂರಕ್ಷಣೆ ಕಾಮಗಾರಿ, ಕಂದಕ ಬದು, ಕೆರೆ ಹೂಳೆತ್ತುವುದು, ಕಟ್ಟೆ ಅಭಿವೃದ್ಧಿ, ಕಾಲುವೆ ಅಭಿವೃದ್ಧಿ, ಕಲ್ಯಾಣಿಗಳ ಅಭಿವೃದ್ಧಿ, ಚೆಕ್ ಡ್ಯಾಮ್ ನಿರ್ಮಾಣ, ಇಂಗು ಗುಂಡಿ ಸೇರಿದಂತೆ ಹಲವು ಕಾಮಗಾರಿಗಳಿಂದ ಅಂತರ್ಜಲ ಮಟ್ಟ ಹೆಚ್ಚಲು ಕಾರಣವಾಗಿದೆ. ಜಿಲ್ಲೆಯಲ್ಲಿ ವಿಶೇಷವಾಗಿ ನರೇಗಾ ಯೋಜನೆಯಡಿ ಅಭಿಯಾನ ಕೈಗೊಂಡು 2024-25ನೇ ಸಾಲಿನಲ್ಲಿ 1063 ಗ್ರಾಮಗಳಲ್ಲಿ 7815 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳು ಪರಿಣಾಮಕಾರಿಯಾಗಿ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಗೆ 25 ಲಕ್ಷ ರು.ನಗದು ಸೇರಿದಂತೆ ಈ ಪ್ರಶಸ್ತಿ ಲಭಿಸಿದೆ.

ದೆಹಲಿಯಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರಿಂದ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆಕಾಶ್ ಅವರು ಸ್ವೀಕರಿಸಿದರು.

ಶ್ರೀ ಹರ ವಿವಿಧೋದ್ದೇಶ ಸಹಕಾರಿ ಸಂಘಕ್ಕೆ ಆಯ್ಕೆ

ಹರಿಹರ: ನಗರದ ಶ್ರೀ ಹರ ವಿವಿಧೋದ್ದೇಶ ಸಹಕಾರಿ ಸಂಘಕ್ಕೆ 2025-26 ರಿಂದ 2030-31 ಐದು ವರ್ಷಗಳ ಅವಧಿಗೆ ನೂತನ ಅಧ್ಯಕ್ಷರಾಗಿ ಡಿ.ಜಿ. ಶಿವಾನಂದಪ್ಪ ಹಾಗೂ ಉಪಾಧ್ಯಕ್ಷರಾಗಿ ಬಸವರಾಜ್ ಓಂಕಾರಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಜಿ.ವಿ.ಲೋಕೇಶ್ ತಿಳಿಸಿದ್ದಾರೆ. ಸಂಘದ ಕಚೇರಿಯಲ್ಲಿನಡೆದ ಈ ಸಾಲಿನ ಪ್ರಥಮ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ನೂತನ ನಿರ್ದೇಶಕರು ಒಮ್ಮತದ ತೀರ್ಮಾನ ತೆಗೆದುಕೊಂಡು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿದರು.

ಈ ವೇಳೆ ನೂತನ ಅಧ್ಯಕ್ಷ ಡಿ.ಜಿ ಶಿವಾನಂದಪ್ಪ ಮಾತನಾಡಿ, ಸಂಘದ ನೂತನ ನಿರ್ದೇಶಕರುಗಳೊಂದಿಗೆ ಒಮ್ಮತದ ನಿರ್ಣಯಗಳನ್ನು ತೆಗೆದುಕೊಂಡು ಸಂಘದ ಶ್ರೇಯೋಭಿವೃದ್ಧಿಗೆ ಸರ್ವ ರೀತಿಯಲ್ಲಿ ಪ್ರಯತ್ನ ಮಾಡುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನೂತನವಾಗಿ ಆಯ್ಕೆಯಾದ ನಿರ್ದೇಶಕರು ಗಳಾದ ಗುರುನಾಥ್, ಟಿ.ಎನ್.ನಾಗರಾಜಪ್ಪ, ಎನ್.ಆರ್. ಶಂಕ್ರಪ್ಪ, ಅಂಗಡಿ ಚಂದ್ರಪ್ಪ, ಕೆ.ಜಿ ಸಿದ್ದೇಶ್, ಹೆಚ್. ನಾಗಪ್ಪ, ಪಿ.ಎನ್. ಗೋಪಿ, ಡಿ.ಎನ್ ಶಾಂಭವಿ, ಶ್ರೀಮತಿ ರೂಪ ನಾಗರಾಜ್, ಎಚ್. ರಾಜಪ್ಪ,ಎಂ.ನಾಗರಾಜ್ ರವರುಗಳನ್ನು ನೂತನ ಅಧ್ಯಕ್ಷ ಉಪಾಧ್ಯಕ್ಷರುಗಳು ಸನ್ಮಾನಿಸಿ ಗೌರವ ನೀಡಿದರು. ಸಂಘದ ಕಾರ್ಯದರ್ಶಿ ಜಿ.ವಿ.ಲೋಕೇಶ್, ಜಿ. ಎಚ್.ಹರೀಶ್,ಬಿ.ಓ.ಗೋವಿಂದರಾಜು, ಜಿ.ಎನ್.ಉಮೇಶ, ಮಹೇಶ್ವರಪ್ಪ, ಪ್ರದೀಪ ಕುಮಾರ,ಬಸವ ಕುಮಾರ, ಸಿದ್ದೇಶ, ರಾಕೇಶ, ಗೀತಾ ಉಪಸ್ಥಿತರಿದ್ದರು.

ನೂತನವಾಗಿ ಆಯ್ಕೆಯಾದ ನಿರ್ದೇಶಕರನ್ನು ನೂತನ ಅಧ್ಯಕ್ಷ ಉಪಾಧ್ಯಕ್ಷರುಗಳು ಸನ್ಮಾನಿಸಿದರು.

ವಿದ್ಯುತ್ ತಿದ್ದುಪಡಿ ಕಾಯಿದೆ ಹಿಂಪಡೆಯಲು ಆಗ್ರಹ

ವಿದ್ಯುತ್ ತಿದ್ದುಪಡಿ ಕಾಯಿದೆ ಮಸೂದೆ ತಕ್ಷಣವೇ ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿ ನಗರದಲ್ಲಿ ನಾನಾ ಸಂಘಟನೆಯ ಪದಾಧಿಕಾರಿಗಳು, ರೈತ ಸಂಘಟನೆಗಳು ಜಂಟಿಯಾಗಿ ಪ್ರತಿಭಟನೆ ನಡೆಸಿದರು.

ದಾವಣಗೆರೆ: ಕೇಂದ್ರ ಸರಕಾರವು 2025ರ ನ. 20ರಂದು ಸಂಸತ್ತಿನಲ್ಲಿ ಮಂಡಿಸಿರುವ ವಿದ್ಯುತ್ ತಿದ್ದುಪಡಿ ಕಾಯಿದೆ 2022 ವಿದ್ಯುತ್ ಕ್ಷೇತ್ರ ಖಾಸಗೀಕರಣದ ಹುನ್ನಾರದಿಂದ ಕೂಡಿದ್ದು, ಮಸೂದೆ ತಕ್ಷಣವೇ ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿ ನಗರದಲ್ಲಿ ಸಂಯುಕ್ತ ಹೋರಾಟ ಕರ್ನಾಟಕ, ದಾವಣಗೆರೆ ಜಿಲ್ಲಾ ಘಟಕ, ಜಾಯಿಂಟ್ ಕಮಿಟಿ ಆಫ್ ಟ್ರೇಡ್ ಯುನಿಯನ್ ಪದಾಧಿಕಾರಿಗಳು, ರೈತ ಸಂಘಟನೆಗಳು ಜಂಟಿಯಾಗಿ ಪ್ರತಿಭಟನೆ ನಡೆಸಿದರು.

ನಗರದ ಹದಡಿ ರಸ್ತೆಯ ಬೆಸ್ಕಾಂನ ಗ್ರಾಮಾಂತರ ವಿಭಾಗದ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಈ ಮಸೂದೆ ಜಾರಿಗೆ ಬಂದರೆ, ಕರ್ನಾಟಕ ಸೇರಿದಂತೆ ದೇಶದಾದ್ಯಂತ ಸಾರ್ವಜನಿಕರಿಗೆ ದೊರೆಯುವ ವಿದ್ಯುತ್ ಸೇವೆಗಳು ಖಾಸಗಿ ಕಂಪನಿಗಳ ಲಾಭಾಸಕ್ತ ವ್ಯವಹಾರವಾಗಿ ಮಾರ್ಪಡುವ ಅಪಾಯ ಸ್ಪಷ್ಟವಾಗಿದೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಕಾರ್ಮಿಕ ಮುಖಂಡ ಆವರಗೆರೆ ಎಚ್.ಜಿ.ಉಮೇಶ್,ವಿದ್ಯುತ್ ತಿದ್ದುಪಡಿ ಕಾಯಿದೆಯ ಖಾಸಗೀಕರಣದ ಪರಿಣಾಮವಾಗಿ ದರ ಏರಿಕೆ, ಅನಾವಶ್ಯಕ ಬಿಲ್ಲಿಂಗ್ ಬದಲಾವಣೆ, ಸಬ್ಸಿಡಿ ರದ್ದತಿ, ಗ್ರಾಮೀಣ, ನಗರ ಬಡ ವರ್ಗಗಳ ಮೇಲೆ ಆರ್ಥಿಕ ಹೊರೆ ಸೇರಿದಂತೆ ಹಲವಾರು ಗಂಭೀರ ಸಮಸ್ಯೆಗಳು ಜನಸಾಮಾನ್ಯರ ಜೀವನವನ್ನು ತೀವ್ರವಾಗಿ ಬಾಧಿಸುತ್ತವೆ. ಇದಲ್ಲದೇ ಕರ್ನಾಟಕ ಎಸ್ಕಾಂಗಳ ಆರ್ಥಿಕ ಸ್ಥಿತಿ, ರೈತರು, ಸಣ್ಣ?ಮಧ್ಯಮ ಕೈಗಾರಿಕೆಗಳು ಹಾಗೂ ಬಡ ಕುಟುಂಬಗಳು ತೊಂದರೆ ಅನುಭವಿಸಲಿದ್ದಾರೆ ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ಪಿ.ಪಿ.ಮರುಳಾರಾಧ್ಯ, ಇ. ಶ್ರೀನಿವಾಸ್, ಮಂಜುನಾಥ್ ಕುಕ್ಕವಾಡ, ಮಂಜುನಾಥ್ ಕೈದಾಳೆ, ಕೆ.ಬಾನಪ್ಪ, ಸತೀಶ್ ಅರವಿಂದ್, ಪವಿತ್ರ ಅರವಿಂದ್ ಇದ್ದರು.

ಅನಿಯಂತ್ರಿತ ದರ ಏರಿಕೆ

ರೈತ ಮುಖಂಡ ಹೊನ್ನೂರು ಮುನಿಯಪ್ಪ ಮಾತನಾಡಿ, ಇನ್ನೂ ರಾಜ್ಯದಲ್ಲಿ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಸ್ಮಾರ್ಟ್ ಮೀಟರ್‌ಅಳವಡಿಕೆಯಿಂದಾಗಿ ದೋಷಪೂರಿತ ಹೆಚ್ಚುವರಿ ಬಿಲ್ಗಳು, ಅನಿಯಂತ್ರಿತ ದರ ಏರಿಕೆ, ತಾಂತ್ರಿಕ ದೋಷಗಳು, ಅಸಮಂಜಸ ವಿದ್ಯುತ್ ಕಡಿತ ಮಾತ್ರವಲ್ಲದೆ ಹಲವಾರು ಸಮಸ್ಯೆಗಳು ಎದುರಾಗಲಿವೆ. ಮಾತ್ರವಲ್ಲದೇ ಗ್ರಾಮೀಣ ಮನೆಗಳು, ಕೃಷಿ ಪಂಪ್‌ಸೆಟ್ಗಳು, ಸಣ್ಣ ವ್ಯಾಪಾರಿಗಳು ಹಾಗೂ ನಗರ ಬಡವರ್ಗಕ್ಕೆ ಈ ವ್ಯವಸ್ಥೆ ತೀವ್ರ ಹೊಡೆತ ನೀಡುತ್ತದೆ ಎಂಬುದು ವಾಸ್ತವ. ಜನರ ಒಪ್ಪಿಗೆ ಇಲ್ಲದೆ ಇಂತಹ ಮಹತ್ತರ ಯೋಜನೆ ಜಾರಿಗೊಳಿಸುವುದು ಅನ್ಯಾಯ ಹಾಗೂ ಅಸಂವಿಧಾನಿಕವಾಗಿದೆ ಎಂದು ಕಿಡಿಕಾರಿದರು.

ಶಾಲಾ ಶಿಕ್ಷಕರಿಗೆ ಕಾನೂನು ಅರಿವು ಅಗತ್ಯ

ಹೊಳಲ್ಕೆರೆ: ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಶಿಕ್ಷಕರಿಗಾಗಿ ಮರುಸಿಂಚನ ತರಬೇತಿ ಕಾರ್ಯಾಗಾರ ಮತ್ತು ಕಾನೂನು ಅರಿವು ನೆರವು ಕಾರ್ಯಕ್ರಮ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ (ಹೈಟೆಕ್) ಹೊಳಲ್ಕೆರೆ ಟೌನ್ನಲ್ಲಿ ನೆರವೇರಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಸಿಗೆ ನೀರು ಎರೆಯುವುದರ ಮೂಲಕ ನೆರವೇರಿಸಿದ ಪ್ಯಾನಲ್ ವಕೀಲರಾದ ಆರ್. ಹನುಮಂತಪ್ಪ, ಮಾತನಾಡಿ, ಮಕ್ಕಳ ಮೇಲೆ ಲೈಂಗಿಕ ಅಪರಾಧ ಪೋಕ್ಸೊ ಕಾಯ್ದೆಯಡಿಯಲ್ಲಿ ಅಪರಾಧವಾಗಿದ್ದು, ಮಕ್ಕಳ ಮೇಲೆ ಲೈಂಗಿಕ ಅಪರಾಧ ಘಟಿಸಿದರೆ ಮಕ್ಕಳ ಸಹಾಯವಾಣಿ 1098ಗೆ ಕರೆ ಮಾಡಬೇಕು ಎಂದು ಹೇಳಿದರು.

ಶಿಕ್ಷಣ ಸಂಯೋಜಕರಾದ ಕೆ.ಎನ್.ಶ್ರೀಧರ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಕ್ಕಳ ಹಕ್ಕುಗಳ ಕುರಿತು ಉಪನ್ಯಾಸ ನೀಡಿದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಿ. ಆರ್.ಪಿ. ಸತೀಶ್ ಟಿ.ಎಸ್, ಶಿಕ್ಷಣ ಸಂಯೋಜಕರಾದ ವಿಜಯ್, ಬಿ.ಆರ್.ಪಿ. ಪುಷ್ಪ, ಸಿದ್ರಾಮಪ್ಪ, ತಾಳ್ಯ ಮತ್ತು ಬಿ.ದುರ್ಗ ಹೋಬಳಿಯ ಶಿಕ್ಷಕ ವೃಂದ, ವಕೀಲರ ಸಂಘದ ಸದಸ್ಯರುಗಳು ಹಾಗೂ ಸಿಬ್ಬಂದಿ ವರ್ಗದವರು, ಆರಕ್ಷಕ ಸಿಬ್ಬಂದಿ ಪತ್ರರ್ತರು, ಉಪಸ್ಥಿತರಿದ್ದರು.

ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಮರುಸಿಂಚನ ತರಬೇತಿ ಕಾರ್ಯಾಗಾರ ಮತ್ತು ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ವಕೀಲ ಆರ್.ಹನುಮಂತಪ್ಪ,ಶಿಕ್ಷಣ ಸಂಯೋಜಕರಾದ ಕೆ.ಎನ್.ಶ್ರೀಧರ ಶೆಟ್ಟಿ ಉದ್ಘಾಟಿಸಿದರು.

ಸೇವಾ ಮನೋಭಾವದಿಂದ ರಕ್ತದಾನ ಮಾಡಿ

ಚಳ್ಳಕೆರೆ: ಒಬ್ಬ ಮನುಷ್ಯನ ಜೀವ ಉಳಿಸುವ ಮಹತ್ವದ ಕಾರ್ಯ ರಕ್ತದಾನ ಮಾಡುವುದು, ಆದ್ದರಿಂದ ಪ್ರತಿಯೊಬ್ಬರು ಸೇವಾ ಮನೋಭಾವ ಹೊಂದಿರಬೇಕು ಎಂದು ಡಿವೈಎಸ್ ಪಿ ಸತ್ಯನಾರಾಯಣ ರಾವ್ ಹೇಳಿದರು. ಅವರು ನಗರದ ಬಳ್ಳಾರಿ ರಸ್ತೆಯಲ್ಲಿ ಇರುವ ಬಾಲಾಜಿ ಹಾಸ್ಪಿಟಲ್ ನಲ್ಲಿ ಪೊಲೀಸ್ ಇಲಾಖೆವತಿಯಿಂದ ಹಮ್ಮಿಕೊಂಡ ರಕ್ತದಾನ ಶಿಬಿರದಲ್ಲಿ ಮಾತನಾಡಿ, ಮನುಷ್ಯನ ಜೀವ ಉಳಿಸುವ ತುರ್ತು ಸಂದರ್ಭದಲ್ಲಿ ಇನ್ನೊಬ್ಬರ ಜೀವ ಉಳಿಸಲು ಕಾರಣವಾಗುವ ರಕ್ತವನ್ನು ದಾನ ಮಾಡುವುದು ಅತ್ಯಂತ ಶ್ರೇಷ್ಠ ಕಾರ್ಯಗಳಲ್ಲಿ ಒಂದಾಗಿದೆ ಎಂದರು. ಇನ್ನೂ ನಗರಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್‌ಕೆ.ಕುಮಾರ್‌ಮಾತನಾಡಿ, ಸಮಾಜದಲ್ಲಿ ಅನೇಕ ಜಾತಿ ಮತಗಳನ್ನು ಎಣಿಸುತ್ತೇವೆ. ಆದರೆ ಎಲ್ಲರ ರಕ್ತದ ಬಣ್ಣ ಒಂದೇ ಆಗಿದ್ದು ಜಾತಿ ಭೇದವಿಲ್ಲ. ತುರ್ತು ಅಗತ್ಯದ ಸಂದರ್ಭದಲ್ಲಿ ರಕ್ತ ಮುಖ್ಯವಾಗುತ್ತದೆಯೇ ಹೊರತು ಅದು ಯಾವ ಜಾತಿಯವರದು ಎಂಬುದನ್ನು ಹೇಳಲು ಸಾಧ್ಯವಿಲ್ಲ. ಹಾಗಾಗಿ ಸಮಾಜದಲ್ಲಿ ಎಲ್ಲ ಸಮುದಾಯಗಳ ಜನರು ಸಹೋದರತ್ವ, ಭ್ರಾತೃತ್ವದೊಂದಿಗೆ ಜೀವನ ನಡೆಸಬೇಕು, ಆರೋಗ್ಯವಂತ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವಂತೆ ತಿಳಿಸಿದರು. ರಕ್ತದಾನ ಶಿಬಿರದಲ್ಲಿ ಪಿಎಸ್ಐ ಶಿವರಾಜ್, ಹಾಗೂ ಹಲವು ಪೊಲೀಸ್ ಸಿಬ್ಬಂದಿ ವರ್ಗ, ಕಾಲೇಜು ವಿದ್ಯಾರ್ಥಿಗಳು, ಆಟೋಚಾಲಕರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.

ಮಾಜಿ ಸಚಿವ, ಬಿಜೆಪಿ ಮುಖಂಡರ ವಿರುದ್ಧ ಶಾಸಕ ಶಾಂತನಗೌಡ ಆರೋಪ

ಕೇವಲ ಪ್ರಚಾರದ ಗೀಳಿಗಾಗಿ ರೇಣುಕಾಚಾರ್ಯ ಪ್ರತಿಭಟನೆ

ಹೊನ್ನಾಳಿ: ರೇಣುಕಾಚಾರ್ಯ ಸೇರಿದಂತೆ ಬಿಜೆಪಿ ಮುಖಂಡರು ಭತ್ತ ಮತ್ತು ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯುವಂತೆ ಹಾಗೂ ರಸ್ತೆ ಗುಂಡಿ ಮುಚ್ಚುವಂತೆ ಒತ್ತಾಯಿಸಿ ನಡೆಸುತ್ತಿದ್ದ ಪ್ರತಿಭಟನೆಯು ಪ್ರಚಾರದ ಗೀಳಿಗಾಗಿ ಮಾತ್ರ ಎಂದು ಶಾಸಕ ಶಾಂತನಗೌಡ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅವಳಿ ತಾಲೂಕಿನಲ್ಲಿ ಒಂದು ವಾರದಿಂದ ಹಳ್ಳಿ ಹಳ್ಳಿಗೆ ಹೋಗಿ ರೇಣುಕಾಚಾರ್ಯ ಪ್ರತಿಭಟನೆ ಬಗ್ಗೆ ಪಕ್ಷದಿಂದ ಸಿದ್ಧಗೊಂಡ ಪರವಾನಗಿ ಇಲ್ಲದ ವಾಹನದೊಂದಿಗೆ ಪ್ರಚಾರ ಮಾಡಿದ್ದಾರೆ ಎಂದರು.

ಮಾಜಿ ಸಚಿವರಾಗಿ ಶಾಲಾ ಕಾಲೇಜುಗಳಲ್ಲಿ ಹೋಗಿ ಬಿಜೆಪಿ ಪಕ್ಷದ ಮುಖಂಡರೊಂದಿಗೆ ಪ್ರಚಾರ ಮಾಡುವಷ್ಟು ಅನಿವಾರ್ಯವೇನಿತ್ತು ಎಂದು ಪ್ರಶ್ನಿಸಿದರು.

ವಿದ್ಯಾರ್ಥಿಗಳ ಮನಸ್ಥಿತಿಯ ಮೇಲೆ ಎಂತಹ ಪರಿಣಾಮ ಬೀರಬಹುದು ಈ ಬಗ್ಗೆ ಸಂಬಂಧಪಟ್ಟ ಬಿಇಓ ಹಾಗೂ ಪಿಯು ಕಾಲೇಜಿನ ಜೆ ಡಿ ಗಳ ಗಮನಕ್ಕೆ ತಂದು ಚರ್ಚಿಸಿದ್ದು ಈ ಪ್ರಚಾರವು ಕಾನೂನು ಬಾಹಿರವಲ್ಲವೇ ಎಂದು ಪ್ರಶ್ನಿಸಿದರು.

ರಸ್ತೆಗಳ ಗುಂಡಿ ಬಿಜೆಪಿ ಶಾಸಕರಿರುವ ಶಿಕಾರಿಪುರದ ಈಸೂರು, ಗಾಮ, ಬಳ್ಳೂರು ಸೇರಿದಂತೆ ಅನೇಕ ಗ್ರಾಮಗಳಲ್ಲಿ ಗುಂಡಿಗಳಿಲ್ಲವೇ? ತಾಲೂಕಿನ ರಸ್ತೆಗಳ ಕಾಮಗಾರಿಗಾಗಿಯೇ ಪಿಡಬ್ಲ್ಯೂಡಿ ಇಲಾಖೆ ಅಡಿ 75 ಕೋಟಿ ರು.ಗಳ ಹಣ ಬಿಡುಗಡೆಯಾಗಿದೆ. ಶಿವಮೊಗ್ಗ ಮತ್ತು ಮಲೆಬೆನ್ನೂರು ಗಡಿವರೆಗೆ 40 ಕೋಟಿ ರು.ಗಳು ಬಿಡುಗಡೆಯಾಗಿದೆ ಇನ್ನಿತರೆ ರಸ್ತೆಗಳಿಗೆ 5 ಕೋಟಿ ಬಿಡುಗಡೆಯಾಗಿದ್ದು ಕಾಮಗಾರಿಗಳ ಆರಂಭಿಸಬೇಕಿದೆ ಎಂದರು.

ಎಸ್.ಎಂ ಕೃಷ್ಣ ಅವಧಿಯಲ್ಲಿ ತಾಲೂಕಿನಿಂದ 120000 ಚೀಲ ಮೆಕ್ಕೆಜೋಳ ಖರೀದಿಸಿ ಎಲ್ಲಾ ಗೋಡನ್ಗಳ ತುಂಬಿ ಹಿರಿಯೂರು ಸಕ್ಕರೆ ಗೋಡನ್ಗಳಲ್ಲೂ ಸ್ಟಾಕ್ ಮಾಡಲಾಗಿತ್ತು ಎಂದರು.

ಈ ಹಿಂದೆ ಗುಜರಾತ್ ದುರಂತದ ಸಂದರ್ಭದಲ್ಲಿ ಸಂಗ್ರಹಿಸಿದ್ದ ಮೆಕ್ಕೆಜೋಳದ ದಾಸ್ತಾನಿನ ಲೆಕ್ಕ ಕೇಳಿದ್ದ ತಾಲೂಕಿನ ಡಾ. ರಾಜಕುಮಾರ ಅವರನ್ನು ಇಂದಿಗೂ ಪಕ್ಷದಿಂದ ರೇಣುಕಾಚಾರ್ಯರು ದೂರ ಇಟ್ಟಿರುವುದು ಇದೇ ಕಾರಣಕ್ಕೆ ಎಂದು ಗಂಭೀರವಾಗಿ ಆರೋಪಿಸಿದರು. ಸಂತ್ರಸ್ತರ ನಿಧಿಯನ್ನೂ ಲೂಟಿ ಹೊಡೆದಿದ್ದು ಸರಿಯೇ ಎಂದು ಪ್ರಶ್ನಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್ಬಿ ಮಂಜಪ್ಪ ಮಾತನಾಡಿ, ರೇಣುಕಾಚಾರ್ಯ ಮಾಡಿರುವ ಹೋರಾಟವು ರೈತ ಪರ ಅಲ್ಲ ಪ್ರಚಾರದ ಗಿಮಿಕ್ ನಿಂದ ಕೂಡಿದ್ದಾಗಿದೆ.ಶಾಂತಿಯುತ ಹೋರಾಟಕ್ಕೆ ನಮ್ಮದು ಬೆಂಬಲವಿದೆ ,ರಸ್ತೆ ಬಂದ್,ಬಸ್ಗಳ ತಡೆ ,ಬಲವಂತದ ಅಂಗಡಿಗಳ ಮುಚ್ಚಿಸುವುದಕ್ಕೆ ಪಕ್ಷದಿಂದ ನಮ್ಮ ಬೆಂಬಲವಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಮುಖಂಡರಾದ ಎ. ಆರ್ ಚಂದ್ರಶೇಖರಪ್ಪ, ಕ್ಯಾಸಿನಕೆರೆ ಶೇಖರಪ್ಪ, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಅರಕೆರೆ ಮಧು ಗೌಡ, ಕೊಡತಾಳ ರುದ್ರೇಶ್, ಮಾದನಬಾವಿ ರೇಣುಕಪ್ಪ ಇನ್ನಿತರರಿದ್ದರು.

ಸುದ್ದಿಗಾರರೊಂದಿಗೆ ಶಾಸಕ ಶಾಂತನಗೌಡ ಮಾತನಾಡಿದರು.

ಬಿಜೆಪಿಯವರೇ ಪ್ರತಿಭಟನೆ ಸಂದರ್ಭ ರಸ್ತೆಗೆ ಮೆಕ್ಕೆಜೋಳ ತಂದು ಸುರಿದು ಪ್ರತಿಭಟಿಸುತ್ತಿದ್ದಾರೆ ನಿಜವಾದ ರೈತರರು ಮೆಕ್ಕೆಜೋಳ ತಂದಿಲ್ಲ. ಭತ್ತ ಹಾಗೂ ಮೆಕ್ಕೆಜೋಳ ಖರೀದಿ ಕೇಂದ್ರಗಳ ಬಗ್ಗೆ ಸರಕಾರ ಚಿಂತನೆ ನಡೆಸಿದೆ. ಕೆಲವೊಂದು ತಾಂತ್ರಿಕ ಸಮಸ್ಯೆಗಳಿಂದ ತಡವಾಗುತ್ತಿದೆ .

-ಶಾಂತನಗೌಡ, ಶಾಸಕ

ಅಡಕತ್ತರಿಯಲ್ಲಿ ಹೈಕಮಾಂಡ್

← ಮೊದಲ ಪುಟದಿಂದ

ದೆಹಲಿಯಿಂದ ಶುಕ್ರವಾರ ಸಂಜೆ ಆಗಮಿಸಿರುವ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ, ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಇರುವ ಗೊಂದಲಕ್ಕೆ ಇತಿಶ್ರೀ ಹಾಡಿ. ಪಂಚ ಗ್ಯಾರಂಟಿ ನೀಡುವ ಜತೆಜತೆಗೆ ಉತ್ತಮ ಆಡಳಿತ ನೀಡುತ್ತಿದ್ದರೂ, ಅನವಶ್ಯಕವಾಗಿ ಸರಕಾರಕ್ಕೆ ಡ್ಯಾಮೇಜ್ ಆಗುತ್ತಿದೆ. ಪ್ರತಿಪಕ್ಷಗಳು ನಮ್ಮ ನಾಯಕರ ಹೇಳಿಕೆಗಳನ್ನೇ ಮುಂದಿಟ್ಟುಕೊಂಡು, ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ದೂರು ನೀಡಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ನಡುವೆ ಖರ್ಗೆ ಬೆಂಗಳೂರಿಗೆ ಆಗಮಿಸುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ನವೆಂಬರ್ ಕ್ರಾಂತಿಗೆ ಪೂರ್ಣವಿರಾಮ ಇಟ್ಟ ಹೊರತಾಗಿಯೂ ನಾಯಕರು ಪದೇಪದೆ ಈ ವಿಷಯವನ್ನು ಮುನ್ನಲೆಗೆ ತರುತ್ತಿರುವುದರಿಂದ, ಹೈಕಮಾಂಡ್ ಇಕ್ಕಟ್ಟಿಗೆ ಸಿಲುಕಿದೆ. ಆದ್ದರಿಂದ ಮಲ್ಲಿಕಾರ್ಜುಕ ಖರ್ಗೆ ಅವರು ಸಿಎಂ ಹಾಗೂ ಡಿಸಿಎಂ ಜತೆ ಪ್ರತ್ಯೇಕವಾಗಿ ಚರ್ಚಿಸಿ, ಈ ಬಣ ರಾಜಕೀಯವನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಪ್ರಯತ್ನಕ್ಕೆ ಕೈಹಾಕಿದ್ದಾರೆ ಎನ್ನಲಾಗಿದೆ.

ಬಹಿರಂಗ ಹೇಳಿಕೆ ಬೇಡ: ಸುರ್ಜೇವಾಲ

ಕಾಂಗ್ರೆಸ್ ಶಾಸಕರ ಹಾಗೂ ನಾಯಕರ ಬಹಿರಂಗ ಹೇಳಿಕೆಗಳು ತೀವ್ರಗೊಂಡ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಹೈಕಮಾಂಡ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮೂಲಕ 'ಮೌನ'ವಾಗಿರುವಂತೆ ಸೂಚನೆ ಕೊಡಿಸಿದೆ. ಆದರೆ ಈ ಸೂಚನೆಯ ಬಳಿಕವೂ ಹಲವರು ತಮ್ಮ ತಮ್ಮ ನಾಯಕರ ಪರವಾಗಿ ಬ್ಯಾಟ್ ಬೀಸುವುದನ್ನು ಮುಂದುವರೆಸಿದ್ದಾರೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ರಾಜ್ಯ ಉಸ್ತುವಾರಿ ಸುರ್ಜೇವಾಲ, ನಾಯಕತ್ವ ಬದಲಾವಣೆ ಸಂಬಂಧ ಬಹಿರಂಗ ಹೇಳಿಕೆ ನೀಡುತ್ತಿರುವ ಪಕ್ಷದ ನಾಯಕರಿಗೆ ಎಚ್ಚರಿಕೆ ನೀಡಲಾಗಿದೆ. ಕರ್ನಾಟಕದ ಸಿಎಂ ಹಾಗೂ ಡಿಸಿಎಂ ಜೊತೆ ಮಾತನಾಡಿದ್ದೇನೆ. ಕೆಲ ಕಾಂಗ್ರೆಸ್ ನಾಯಕರು ಹಾಗೂ ಶಾಸಕರ ಅನಗತ್ಯ ಹೇಳಿಕೆಗಳು ಗೊಂದಲ ಸೃಷ್ಟಿಸಲು ಕಾರಣವಾಗಿದೆ. ನಾಯಕತ್ವದ ಬಗ್ಗೆ ಬಹಿರಂಗ ಹೇಳಿಕೆ ನೀಡುವ ನಾಯಕರಿಗೆ ಎಚ್ಚರಿಕೆ ನೀಡಲಾಗಿದೆ. ವಿವಿಧ ನಾಯಕರು, ಕಾರ್ಯಕರ್ತರ ಅಭಿಪ್ರಾಯವನ್ನು ಹೈಕಮಾಂಡ್ ಪರಿಗಣಿಸಿದೆ ಎಂದು ಹೇಳಿದ್ದಾರೆ.

ರಾಜ್ಯ ರಾಜಕೀಯದಲ್ಲಿ ಆಗುತ್ತಿರುವ ಗೊಂದಲಗಳನ್ನು ಸರಿಪಡಿಸಲು ಕೂಡಲೇ ಪಕ್ಷದ ಹೈಕಮಾಂಡ್ ಮಧ್ಯಪ್ರವೇಶಿಸಬೇಕು. ಈ ಸಂಬಂಧ ಈಗಾಗಲೇ ಎಐಸಿಸಿ ಅಧ್ಯಕ್ಷರಿಗೆ ಮನವಿ ಮಾಡಿದ್ದೇವೆ. ತಕ್ಷಣ ಯಾವುದಾದರೂ ಒಂದು ತೀರ್ಮಾನ ಮಾಡಿ. ಈ ಹಿಂದೆ ಏನಾದರೂ ತೀರ್ಮಾನವಾಗಿದ್ದರೆ ಆ ತೀರ್ಮಾನದಂತೆ ನಡೆದುಕೊಳ್ಳಿ. ಗೊಂದಲಕ್ಕೆ ಅವಕಾಶ ಕೊಡಬೇಡಿ ಎಂದು ಮನವಿ ಮಾಡಿದ್ದೇನೆ.

– ಕೆ.ಎಚ್. ಮುನಿಯಪ್ಪ ಆಹಾರ ಸಚಿವ

ಬಣದಿಂದ ಅಂತರಕ್ಕೆ ಶರಣಾದ ಹಲವರು

← ಮೊದಲ ಪುಟದಿಂದ

ಸಚಿವ ಸಂಪುಟದಲ್ಲಿರುವ ಹಲವರು ಸಿದ್ದರಾಮಯ್ಯ ಪರ ಒಲವನ್ನು ತೋರಿದ್ದರೂ, ಒಂದು ವೇಳೆ ನಾಯಕತ್ವ ಬದಲಾವಣೆ ನಿಜ ವಾದರೆ ಡಿ.ಕೆ.ಶಿವಕುಮಾರ್ ಅವರನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ ಎನ್ನುವ ಕಾರಣಕ್ಕೆ ಮೌನವಾಗಿದ್ದಾರೆ.

ಹಿರಿಯ ಸಚಿವ ರಾದ ಎಚ್.ಕೆ.ಪಾಟೀಲ್, ಕೆ.ಜೆ.ಜಾರ್ಜ್, ಭೋಸರಾಜು, ಪ್ರಿಯಾಂಕ್ ಖರ್ಗೆ, ಕೃಷ್ಣ ಬೈರೇಗೌಡ ಸೇರಿದಂತೆ ಹಲವು ಸಚಿವರು 'ನಾಯಕತ್ವ ಬದಲಾವಣೆ' ವಿಷಯದಲ್ಲಿ ಬಹಿರಂಗವಾಗಿ ತಮ್ಮ ನಿಲುವನ್ನು ವ್ಯಕ್ತಪಡಿಸಿಲ್ಲ. ಬದಲಿಗೆ ಪಕ್ಷದ ಹೈಕಮಾಂಡ್ ತೆಗೆದು ಕೊಳ್ಳುವ ಯಾವುದೇ ತೀರ್ಮಾನಕ್ಕೆ ನಾವು ಬದ್ಧ ಎನ್ನುವ ಸಂದೇಶವನ್ನು ರವಾನಿಸುವ ಮೂಲಕ ನಾಯಕತ್ವ ಗೊಂದಲದಿಂದ ಅಂತರ ಕಾಯ್ದು ಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಲಾಭ-ನಷ್ಟದ ಲೆಕ್ಕಾಚಾರದಲ್ಲಿ ಶಾಸಕರು: ಇನ್ನು ಇಡೀ ಪ್ರಹಸನದಲ್ಲಿ ಹಲವು ಶಾಸಕರು ಮೌನವಾಗಿದ್ದಾರೆ. ಇದಕ್ಕೆ ಪ್ರಮುಖವಾಗಿ ಸಿದ್ದ ರಾಮಯ್ಯ ಅಥವಾ ಡಿ.ಕೆ. ಶಿವಕುಮಾರ್ ಇಬ್ಬರಲ್ಲಿ ಯಾರೇ ಮುಖ್ಯಮಂತ್ರಿಯಾದರೂ ನಮಗಾಗುವ ಲಾಭವೇನು ಎನ್ನುವ ಲೆಕ್ಕಾಚಾರ ದಲ್ಲಿ ಹಲವರಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಒಬ್ಬರ ಪರವಾಗಿ ವಕಾಲತು ವಹಿಸಿದರೆ ಇನ್ನೊಬ್ಬರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಇದರಿಂದ ಮುಂದಿನ ಸಂಪುಟ ಪುನಾರಚನೆ ಯಲ್ಲಿ ತೊಡಕಾಗಬಹುದು ಎನ್ನುವ ಕಾರಣಕ್ಕೆ ಹೈಕಮಾಂಡ್‌ನತ್ತ ಕೈ ತೋರಿ ಮೌನಕ್ಕೆ ಶರಣಾಗಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಪಾಕ್ ಪರ ಬೇಹುಗಾರಿಕೆ: ಉ.ಪ್ರ.ದ ಇಬ್ಬರ ಬಂಧನ

← ಮೊದಲ ಪುಟದಿಂದ

ಈ ವೇಳೆ ಇಬ್ಬರು ವ್ಯಕ್ತಿಗಳು ಅಧಿಕೃತ ರಹಸ್ಯಗಳಾದ ನೇವಿ ಶಿಪ್, ಶಿಪ್‌ಗಳ ಸಂಖ್ಯೆ, ಅವುಗಳ ದುರಸ್ತಿ ಶೆಡ್ಯೂಲ್, ಇತರ ಮಾಹಿತಿಗಳನ್ನು ವಾಟ್ಸ್‌ಆ್ಯಪ್ ಮತ್ತು ಫೇಸ್‌ಬುಕ್ ಮುಖಾಂತರ ಕೆಲ ವ್ಯಕ್ತಿಗಳಿಗೆ ಹಂಚಿ, ಹಣ ಕೂಡ ಪಡೆದುಕೊಂಡಿದ್ದಾರೆ ಎಂಬುದು ನಮ್ಮ ಪ್ರಾಥಮಿಕ ತನಿಖೆಯಲ್ಲಿ ಕಂಡು ಬಂದಿದೆ.

ಮಲ್ಪೆ ಪೊಲೀಸ್ ಠಾಣೆಯಲ್ಲಿ ಅಫಿಶಿಯಲ್ ಸೀಕ್ರೆಟ್ಸ್ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇದರ ತನಿಖೆ ಕೈಗೊಂಡ ಪೊಲೀಸರು, ಉತ್ತರಪ್ರದೇಶದ ಸುಲ್ತಾನ್‌ಪುರ ಜಿಲ್ಲೆಯ ಇಬ್ಬರು ಆರೋಪಿಗಳಾದ ರೋಹಿತ್ ಹಾಗೂ ಸಂತ್ರಿಯನ್ನು ಬಂಧಿಸಲಾಗಿದೆ. ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಗಳನ್ನು ಡಿ.3ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ಹರಿರಾಮ್ ಶಂಕರ್ ಹೇಳಿದ್ದಾರೆ.

ಡಿ.7ಕ್ಕೆ ಕೆಎಸ್‌ಸಿಎ ಚುನಾವಣೆ

ನ್ಯಾ. ಸುಭಾಷ್ ಅಡಿ ಮೇಲ್ವಿಚಾರಣೆಯಲ್ಲಿ ಮತದಾನಕ್ಕೆ ಹೈಕೋರ್ಟ್ ಆದೇಶ

ಬ್ರಿಜೇಶ್ ಪಟೇಲ್ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ತಮ್ಮ ತಂಡದಿಂದ ಸ್ಪರ್ಧೆ ಮಾಡುತ್ತಿರುವವರನ್ನು ಪರಿಚಯಿಸಿದರು.

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ಡಿಸೆಂಬರ್ 7ರಂದು ಚುನಾವಣೆ ನಡೆಸುವಂತೆ ಚುನಾವಣಾಧಿಕಾರಿಗೆ ನಿರ್ದೇಶಿಸಿರುವ ಹೈಕೋರ್ಟ್, ನಿವೃತ್ತ ನ್ಯಾಯಮೂರ್ತಿ ಹಾಗೂ ಮಾಜಿ ಉಪಲೋಕಾಯುಕ್ತ ಸುಭಾಷ್ ಬಿ. ಅಡಿ ಅವರನ್ನು ಚುನಾವಣಾ ಮೇಲ್ವಿಚಾರಕರನ್ನಾಗಿ ನೇಮಕ ಮಾಡಿದೆ.

ಕೆಎಸ್‌ಸಿಎ ವ್ಯವಸ್ಥಾಪನಾ ಸಮಿತಿಗೆ ನವೆಂಬರ್ 30ರಂದು ನಿಗದಿಯಾಗಿದ್ದ ಚುನಾವಣೆಯನ್ನು ಕೆಲವೊಂದು ಗೊಂದಲಗಳ ಹಿನ್ನೆಲೆಯಲ್ಲಿ ಡಿಸೆಂಬರ್ 30ರವರೆಗೆ ಮುಂದೂಡಿದ್ದ ಚುನಾವಣಾಧಿಕಾರಿಗಳ ಕ್ರಮ ಪ್ರಶ್ನಿಸಿ ಕೆಎಸ್‌ಸಿಎ ಮತ್ತು ಬಿ.ಕೆ. ರವಿ ಎಂಬವರು ಸಲ್ಲಿಸಿದ್ದ ಅರ್ಜಿಗಳನ್ನು ಶುಕ್ರವಾರ ಇತ್ಯರ್ಥಪಡಿಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ.

ಚುನಾವಣೆಯನ್ನು ಮುಂದೂಡಿ ನವೆಂಬರ್ 17ರಂದು ಚುನಾವಣಾಧಿಕಾರಿ ಹೊರಡಿಸಿದ್ದ ನೋಟಿಸ್ ರದ್ದುಪಡಿಸಲಾಗಿದೆ. ಕೆಎಸ್‌ಸಿಎ ಬೈಲಾ ಕುರಿತ ಯಾವುದೇ ವ್ಯಾಖ್ಯಾನದ ಪ್ರಭಾವಕ್ಕೆ ಒಳಗಾಗದೇ ಚುನಾವಣಾಧಿಕಾರಿ ಹಾಲಿ ಬೈಲಾ ಪ್ರಕಾರ ನ್ಯಾಯಯುತ ಮತ್ತು ಪಾರದರ್ಶಕವಾಗಿ ಚುನಾವಣೆ ನಡೆಸಬೇಕು. ಡಿಸೆಂಬರ್ 7ರಂದು ಬೆಳಗ್ಗೆ 11ರಿಂದ ಸಂಜೆ 7 ಗಂಟೆಯವರೆಗೆ ಮತದಾನವಾಗಬೇಕು. ಆನಂತರ, ಫಲಿತಾಂಶ ಪ್ರಕಟಿಸಬೇಕು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಅವರನ್ನು ಚುನಾವಣೆಯ ಉಸ್ತುವಾರಿ ವಹಿಸಲು ಮನವಿ ಮಾಡಲಾಗಿದೆ ಎಂದು ನ್ಯಾಯಾಲಯ ತೀರ್ಪಿನಲ್ಲಿ ತಿಳಿಸಿದೆ.

ಈಗಾಗಲೇ ನಾಮಪತ್ರ ಸ್ವೀಕಾರವಾಗಿದ್ದು, ನವೆಂಬರ್ 24ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅಂದು ಸಂಜೆ 6 ಗಂಟೆಯೊಳಗೆ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಬೇಕು. ನವೆಂಬರ್ 26ರಂದು ನಾಮಪತ್ರ ಹಿಂಪಡೆಯಲು ಕಾಲಾವಕಾಶ ನೀಡಬೇಕು. ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿಯನ್ನು ನವೆಂಬರ್ 26ರಂದು ಪ್ರಕಟಿಸಬೇಕು ಎಂದು ನಿರ್ದೇಶಿಸಿದ ನ್ಯಾಯಪೀಠ, ಅರ್ಜಿಗಳನ್ನು ಇತ್ಯರ್ಥಪಡಿಸಿದೆ.

ಹಿಂಬದಿ ಸವಾರಿ ಆರೋಪ: ಬ್ರಿಜೇಶ್ ಪಟೇಲ್ ತಿರುಗೇಟು

ನನ್ನದು ತಪ್ಪಾದರೆ, ಕುಂಬ್ಳೆ, ಶ್ರೀನಾಥ್ ನಡೆಯೂ ತಪ್ಪೇ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಚುನಾವಣೆಗೆ ಸಂಬಂಧಿಸಿದಂತೆ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ನೇತೃತ್ವದ ಗೇಮ್ ಚೇಂಜರ್ಸ್ ತಂಡದ ಆರೋಪಗಳಿಗೆ ಎದುರಾಳಿ ಬಣವನ್ನು ಮುನ್ನಡೆಸುತ್ತಿರುವ ಮಾಜಿ ಕ್ರಿಕೆಟಿಗ, ಹಿರಿಯ ಆಡಳಿತಾಧಿಕಾರಿ ಬ್ರಿಜೇಶ್ ಪಟೇಲ್ ತಿರುಗೇಟು ನೀಡಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಬ್ರಿಜೇಶ್ ತಮ್ಮ ತಂಡದಿಂದ ಸ್ಪರ್ಧೆ ಮಾಡುತ್ತಿರುವವರನ್ನು ಪರಿಚಯಿಸಿ ಎದುರಾಳಿ ಬಣ ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸಿದರು. ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿದ್ದ ವೆಂಕಟೇಶ್ ಪ್ರಸಾದ್, ಬ್ರಿಜೇಶ್ ಪಟೇಲ್ ಹಿಂದಿನ ಆಸನದಲ್ಲಿ ಕೂತು ಸವಾರಿ ಮಾಡುತ್ತಿದ್ದಾರೆ. ಅವರ ನಿರ್ದೇಶನದಂತೆಯೇ ರಾಜ್ಯ ಕ್ರಿಕೆಟ್‌ನಲ್ಲಿ ಎಲ್ಲವೂ ನಡೆಯುತ್ತಿದೆ ಎಂದು ದೂರಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಬ್ರಿಜೇಶ್, ನಮ್ಮ ತಂಡಗಳು ರಾಷ್ಟ್ರೀಯ ಮಟ್ಟದಲ್ಲಿ ಗೆಲ್ಲುತ್ತಿರುವ ಪ್ರಶಸ್ತಿಗಳು, ಅಂತಾರಾಷ್ಟ್ರೀಯ ಪಂದ್ಯ, ಐಪಿಎಲ್‌ನಲ್ಲಿ ನಮ್ಮ ಆಟಗಾರರ ಪ್ರದರ್ಶನಗಳೇ ಎದುರಾಳಿಗಳ ಪ್ರಶ್ನೆಗೆ ಉತ್ತರ ನೀಡುತ್ತವೆ. ನಾನು ನನ್ನ ಜೊತೆಗಿರುವ ತಂಡಕ್ಕೆ ಮಾರ್ಗದರ್ಶನ ನೀಡುತ್ತಿದ್ದೇನೆ. ಅದರಲ್ಲಿ ಯಾವ ತಪ್ಪೂ ಇಲ್ಲ. ನಾನು ಮಾಡುತ್ತಿರುವುದು ತಪ್ಪು ಎನ್ನುವುದಾದರೆ, ಅನಿಲ್ ಕುಂಬ್ಳೆ ಹಾಗೂ ಜಾವಗಲ್ ಶ್ರೀನಾಥ್ ಮಾಡುತ್ತಿರುವುದೂ ತಪ್ಪು ತಾನೆ. ಅವರೂ ಹಿಂದಿನ ಆಸನದಲ್ಲಿ ಕೂತು ಸವಾರಿ ಮಾಡುತ್ತಿದ್ದಾರೆ ಅಲ್ಲವೇ?' ಎಂದು ಪ್ರಶ್ನಿಸಿದರು.

ಚಿನ್ನಸ್ವಾಮಿಗೆ ಕ್ರಿಕೆಟ್ ವಾಪಸ್ ತರುತ್ತೇವೆ: ಆರ್‌ಸಿಬಿ ಸಂಭ್ರಮಾಚರಣೆ ವೇಳೆ ನಡೆದ ಕಾಲ್ತುಳಿತ ಪ್ರಕರಣ ಒಂದು ದುರಂತ. ಅದರಿಂದ ತುಂಬಾ ನೋವಾಗಿದೆ ಎಂದ ಬ್ರಿಜೇಶ್ ಪಟೇಲ್, ನ್ಯಾ.ಕುನ್ಹಾ ವರದಿಯಲ್ಲಿ ತಿಳಿಸಿರುವಂತೆ ಚಿನ್ನಸ್ವಾಮಿ ಕ್ರೀಡಾಂಗಣದ ಪ್ರವೇಶದ್ವಾರಗಳನ್ನು ದೊಡ್ಡದು ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ. ಈಗಾಗಲೇ ಅಗತ್ಯ ವಿನ್ಯಾಸ ಸಿದ್ಧಗೊಳಿಸಲಾಗಿದ್ದು, ನಮ್ಮ ತಂಡ ಚುನಾಯಿತಗೊಂಡರೆ ಮೊದಲು ಆ ಕೆಲಸವನ್ನು ಕೈಗೊಳ್ಳಲಾಗುತ್ತದೆ ಎಂದರು.

ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸುತ್ತಿರುವ ಪತ್ರಿಕೋದ್ಯಮಿ ಕೆ.ಎನ್.ಶಾಂತಕುಮಾರ್ ಮಾತನಾಡಿ, 'ಹಲವು ದಶಕಗಳಿಂದ ನಾನು ಕ್ರೀಡೆಯೊಂದಿಗೆ ನನ್ನನ್ನು ತೊಡಗಿಸಿಕೊಂಡಿದ್ದೇನೆ. ಕ್ರಿಕೆಟ್ ಬಗ್ಗೆ ನನಗೂ, ನಮ್ಮ ತಂಡಕ್ಕೂ ಅಪಾರ ಆಸಕ್ತಿ ಹಾಗೂ ಪ್ರೀತಿ ಇದೆ. ಕೆಎಸ್‌ಸಿಎಯನ್ನು ಮುನ್ನಡೆಸಲು ನಾವು ಸಮರ್ಥರಿದ್ದೇವೆ' ಎಂದರು.

ಕಾರ್ಯದರ್ಶಿ ಹುದ್ದೆಗೆ ಸ್ಪರ್ಧೆ ಮಾಡುತ್ತಿರುವ ಮಾಜಿ ಖಜಾಂಚಿ ಇ.ಎಸ್.ಜಯರಾಂ, ಖಜಾಂಚಿ ಹುದ್ದೆಗೆ ಸ್ಪರ್ಧಿಸುತ್ತಿರುವ ಹಂಗಾಮಿ ಕಾರ್ಯದರ್ಶಿ ಎಂ.ಎಸ್.ವಿನಯ್, ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಅಂಪೈರ್ ಬಿ.ಕೆ.ರವಿ ಮಾತನಾಡಿದರು. ಮಾಜಿ ಕ್ರಿಕೆಟಿಗರಾದ ಸುಧಾಕರ್ ರಾವ್, ಜೆ.ಅಭಿರಾಂ ಸೇರಿ ಹಲವರು ಟೀಂ ಬ್ರಿಜೇಶ್‌ಗೆ ಬೆಂಬಲ ಸೂಚಿಸಲು ಆಗಮಿಸಿದ್ದರು.

ಬಳ್ಳಾರಿಯಲ್ಲಿನ ಜೀನ್ಸ್ ಉದ್ಯಮಕ್ಕೆ ಮರುಜೀವ

36 ವಾಷಿಂಗ್ ಯುನಿಟ್ ಬಂದ್ ಆದೇಶ ತೆರವಿಗೆ ಸಿಎಂ ಸಿದ್ದರಾಮಯ್ಯ ಸೂಚನೆ

ಬಳ್ಳಾರಿ: ಪರಿಸರಕ್ಕೆ ಹಾನಿ ನೆಪವೊಡ್ಡಿ 36 ವಾಷಿಂಗ್ ಯುನಿಟ್‌ಗಳ ಬಂದ್‌ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇತ್ತೀಚೆಗೆ ನೀಡಿದ್ದ ನೋಟಿಸ್‌ನಿಂದ ಸಂಪೂರ್ಣ ಸ್ಥಗಿತದ ಭೀತಿ ಎದುರಿಸುತ್ತಿದ್ದ ಇಲ್ಲಿನ ಜೀನ್ಸ್ ಉದ್ಯಮಕ್ಕೆ ರಾಜ್ಯ ಸರಕಾರ ಮರುಜೀವ ನೀಡಿದೆ.

ಕಾಮನ್ ಅಫ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ (ಸಿಇಟಿಪಿ) ನಿರ್ಮಾಣಕ್ಕೆ ರಾಜ್ಯ ಸರಕಾರ ಹಸಿರು ನಿಶಾನೆ ತೋರಿರುವುದು ಉದ್ಯಮದ ಭವಿಷ್ಯವನ್ನು ಗಟ್ಟಿಗೊಳಿಸುವ ವಿಶ್ವಾಸ ಮೂಡಿಸಿದೆ. ಈ ಮೂಲಕ ವಾಷಿಂಗ್ ಯುನಿಟ್‌ಗಳಿಂದ ಹೊರಸೂಸುವ ತ್ಯಾಜ್ಯ ನೀರು ಸಂಸ್ಕರಣೆಗೆ ಪ್ರತ್ಯೇಕ ಪ್ಲಾಂಟ್ ಸ್ಥಾಪಿಸಬೇಕೆಂಬ ದಶಕಗಳ ಬೇಡಿಕೆ ಈಡೇರಿದಂತಾಗಿದೆ. ನಗರದಲ್ಲಿ 500ಕ್ಕೂ ಹೆಚ್ಚು ಜೀನ್ಸ್ ಸಿದ್ಧ ಉಡುಪು ತಯಾರಿಕೆ ಘಟಕಗಳಿವೆ. ಪ್ರತ್ಯಕ್ಷ, ಪರೋಕ್ಷವಾಗಿ 10 ಸಾವಿರಕ್ಕೂ ಅಧಿಕ ಕುಟುಂಬಗಳು ಜೀವನ ನಿರ್ವಹಿಸುತ್ತಿವೆ.

ಇದುವರೆಗೆ ಯೋಜನೆ ಮೂಲೆಗುಂಪು: ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿ ಜೀನ್ಸ್ ಉಡುಪುಗಳ ವಾಷಿಂಗ್‌ಗಾಗಿ 53 ವಾಷಿಂಗ್ ಯುನಿಟ್‌ಗಳನ್ನು ಅಳವಡಿಸಲಾಗಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ಸಮೂಹದಿಂದ ಉತ್ಪತ್ತಿಯಾಗುವ ಕೈಗಾರಿಕಾ ತ್ಯಾಜ್ಯ ನೀರನ್ನು ಸಂಗ್ರಹಿಸಲು, ಸಂಸ್ಕರಿಸಲು ಮತ್ತು ವಿಲೇವಾರಿ ಮಾಡಲು ಕೇಂದ್ರಿಕೃತ ವಾದ ಸಿಇಟಿಪಿ ಪ್ಲಾಂಟ್ ಸ್ಥಾಪನೆಗಾಗಿ 2010ರಲ್ಲಿಯೇ ಕೆಐಎಡಿಬಿಯಿಂದ ಕೈಗಾರಿಕಾ ಪ್ರದೇಶದ 4ನೇ ಹಂತದಲ್ಲಿ 4 ಎಕರೆ ಜಾಗ ನಿಗದಿಗೊಳಿಸಲಾಗಿತ್ತು. ಪ್ಲಾಂಟ್ ಸ್ಥಾಪಿಸಬೇಕೆಂದು ಹಲವು ಬಾರಿ ಆಡಳಿತಾರೂಢ ಸರಕಾರಗಳಿಗೆ ಉದ್ಯಮಿಗಳು ಮನವಿ ಸಲ್ಲಿಸಿದ್ದರು.

2022ರಲ್ಲಿ ಜೀನ್ಸ್ ಉದ್ಯಮಿಗಳ ಅಸೋಸಿಯೇಷನ್‌ನಿಂದಲೂ ಪ್ಲಾಂಟ್ ನಿರ್ಮಾಣಕ್ಕೆ ಸಂಬಂಧಿಸಿದಂತೆ 24 ಕೋಟಿ ರು. ವೆಚ್ಚದ ಡಿಪಿಆರ್ ಸಹ ಸಿದ್ಧಪಡಿಸಿ ಜಿಲ್ಲಾಡಳಿತಕ್ಕೆ ಸಲ್ಲಿಸಲಾಗಿತ್ತು. ಆದರೂ ಅನುದಾನ ಕೊರತೆ ಸೇರಿ ನಾನಾ ಕಾರಣಗಳಿಂದ ಯೋಜನೆ ಮೂಲೆಗುಂಪಾ ಗಿತ್ತು. ಇದೀಗ ರಾಜ್ಯ ಸರಕಾರ ಉದ್ಯಮಿಗಳ ಬೇಡಿಕೆಗೆ ಸ್ಪಂದಿಸಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)ಯಿಂದ 11 ಕೋಟಿ ರು. ಮತ್ತು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಯಿಂದ 11 ಕೋಟಿ ರು. ಸೇರಿ ಒಟ್ಟು 22 ಕೋಟಿ ರು. ವೆಚ್ಚದಲ್ಲಿ ಸಿಇಟಿಪಿ ನಿರ್ಮಾಣಕ್ಕೆ ಮುಂದಾಗಿದೆ.

ವರ್ಷದೊಳಗೆ ಸಿಇಟಿಪಿ ನಿರ್ಮಾಣ

ಸಿಇಟಿಪಿ ಪ್ಲಾಂಟ್ ಕಾಮಗಾರಿ ಪೂರ್ಣಗೊಳ್ಳಲು ಕನಿಷ್ಠ 6 ತಿಂಗಳಿಂದ 1 ವರ್ಷ ಅವಧಿ ಬೇಕಾಗಬಹುದು ಎನ್ನಲಾಗುತ್ತಿದೆ. ಸರಕಾರದಿಂದ ದಾಖಲೆಗಳ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅನುದಾನ ಬಿಡುಗಡೆಯಾಗಲಿದೆ. ನಂತರ ತಾಂತ್ರಿಕ ಒಪ್ಪಿಗೆ, ಸ್ಥಳ ಪರಿಶೀಲನೆ, ಡಿಪಿಆರ್ ತಯಾರಿಕೆ, ಟೆಂಡರ್ ಸೇರಿ ನಾನಾ ಪ್ರಕ್ರಿಯೆಗಳು ನಡೆಯಲಿವೆ. ಇದಾದ ಬಳಿಕ ಹಾಲಿ ವಾಷಿಂಗ್ ಯುನಿಟ್‌ಗಳ ಸಂಖ್ಯೆ ಆಧಾರದಲ್ಲಿ ಎಷ್ಟು ಎಂಎಲ್‌ಡಿ ಸಾಮರ್ಥ್ಯದ ಪ್ಲಾಂಟ್ ನಿರ್ಮಿಸಬೇಕೆಂಬ ನಿರ್ಧಾರ ಕೈಗೊಳ್ಳಬೇಕಿದೆ.

ಏನಿದು ಸಿಇಟಿಪಿ ಮತ್ತು ಇಟಿಪಿ ಪ್ಲಾಂಟ್?

ಜೀನ್ಸ್ ಉದ್ಯಮದ ವಾಷಿಂಗ್ ಯುನಿಟ್‌ಗಳಿಂದ ಹೊರಬರುವ ತ್ಯಾಜ್ಯ ನೀರಿನಿಂದ ಪರಿಸರಕ್ಕೆ ಹಾನಿಯಾಗಬಾರದು ಎನ್ನುವ ಉದ್ದೇಶದೊಂದಿಗೆ ಪ್ರತಿ ಯುನಿಟ್‌ನಲ್ಲಿ ಅಫ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ (ಇಟಿಪಿ) ಸ್ಥಾಪಿಸಲಾಗುತ್ತದೆ. ಇದಕ್ಕಾಗಿ 15-20 ಲಕ್ಷ ರು. ವ್ಯಯಿಸಬೇಕಿದೆ. 25ಕ್ಕೂ ಹೆಚ್ಚು ಯುನಿಟ್‌ಗಳು ಈಗಾಗಲೇ ಸ್ವಂತ ಖರ್ಚಿನಲ್ಲಿ ಇಟಿಪಿ ಅಳವಡಿಸಿಕೊಂಡಿವೆ. ಆದರೆ ಇದರ ನಿರ್ವಹಣೆ ವೆಚ್ಚ ಹೆಚ್ಚಾಗುವುದರಿಂದ ಎಲ್ಲ ಯುನಿಟ್‌ಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಿಇಟಿಪಿ ನಿರ್ಮಿಸಲು ಯೋಜಿಸಲಾಗಿದೆ. ಎಲ್ಲ ಯುನಿಟ್‌ಗಳಿಂದ ಹೊರಬರುವ ತ್ಯಾಜ್ಯ ನೀರನ್ನು ಒಂದೆಡೆ ಸಂಗ್ರಹಿಸಿ ಸಂಸ್ಕರಿಸಲಾಗುತ್ತದೆ. ನಂತರ ಈ ನೀರಿನ ಮರುಬಳಕೆ, ವಿಲೇವಾರಿ ಮಾಡಲಾಗುತ್ತದೆ. ಇದರು ಜೀನ್ಸ್ ಉದ್ಯಮಕ್ಕೆ ಕಾಡುವ ನೀರಿನ ಸಮಸ್ಯೆಗೂ ದೊರಕಿಸುವ ಭರವಸೆ ನೀಡಿದೆ.

ವಿಶ್ವದಲ್ಲಿರುವ 7 ಖಂಡಗಳಲ್ಲಿ ಅಂಟಾರ್ಟಿಕ ಹೊರತುಪಡಿಸಿ ಇನ್ನುಳಿದ ಆರು ಖಂಡಗಳಲ್ಲಿ ಕನ್ನಡ ಒಕ್ಕೂಟಗಳಿರುವುದು ಕನ್ನಡಿಗರ ಶಕ್ತಿಯನ್ನು ತೋರಿಸುತ್ತದೆ. ಅಮೆರಿಕ, ಆಸ್ಟ್ರೇಲಿಯಾ, ಆಫ್ರಿಕಾ ಖಂಡದಲ್ಲಿರುವ ಕನ್ನಡ ಸಂಘಟನೆಗಳ ಪರಿಚಯವಾಗಿದ್ದು, ಇದೀಗ ಏಷ್ಯಾದಲ್ಲಿರುವ ಕನ್ನಡ ಸಂಘಟನೆಗಳ ಸರಣಿ ಆರಂಭವಾಗಲಿದೆ. 70ನೇ ಕರ್ನಾಟಕ ರಾಜ್ಯೋತ್ಸವದ ಈ ಸಮಯದಲ್ಲಿ ವಿದೇಶಿ ನೆಲದಲ್ಲಿ ಕನ್ನಡ ಸೇವೆಯಲ್ಲಿ ತೊಡಗಿರುವ ಸಂಘಟನೆಗಳ ಮಾಹಿತಿ ಇಲ್ಲಿದೆ.

ಸುವರ್ಣ ಕನ್ನಡ ಸಂಘ, ಇಂಡೋನೇಷ್ಯಾ

ಬೆಂಕಿ ಬಸಣ್ಣ
ನ್ಯೂಯಾರ್ಕ್

ಕರ್ನಾಟಕದಿಂದ ಬಂದಿರುವ ಮತ್ತು ಸುವರ್ಣ ಕನ್ನಡ ಸಂಘ ಇಂಡೋನೇಷಿಯಾ ಎಂದು ಹೆಸರಿಸಲಾದ ಭಾರತೀಯ ವಲಸಿಗರನ್ನು ಒಳಗೊಂಡಿರುವ ಸಂಘದ ಭಾಗವಾಗಿದ್ದೇವೆ. ಅಧಿಕೃತವಾಗಿ ಚಾರಿಟಬಲ್ ಸಂಸ್ಥೆಯಾಗಿ ಅಥವಾ ಯಯಾಸನ್ ಆಗಿ 'ಯಯಾಸನ್ ಕರ್ನಾಟಕ ಮಿತ್ರನು ಸಂತರಾ' ಹೆಸರಿನಲ್ಲಿ ನೋಂದಾಯಿಸಲಾಗಿದೆ.

ಇಂಡೋನೇಷ್ಯಾದಲ್ಲಿ ಸುಮಾರು ಮೂರು ದಶಕಗಳಿಂದ ಎಸ್‌ಕೆಎಸ್ ನಿರಂತರ ಅಸ್ತಿತ್ವದಲ್ಲಿದೆ. ವರ್ಷಗಳಲ್ಲಿ ಅನೇಕ ದತ್ತಿ ಮತ್ತು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡಂತೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ವಾರ್ಷಿಕ ಎಸ್‌ಕೆಎಸ್ 4-5 ಈವೆಂಟ್‌ಗಳನ್ನು ನಡೆಸುತ್ತದೆ. ಮಕರ ಸಂಕ್ರಾಂತಿ, ಯುಗಾದಿ, ದೀಪಾವಳಿ ಮತ್ತು ಕನ್ನಡ ರಾಜ್ಯೋತ್ಸವ, ಕ್ರಿಕೆಟ್ ಪ್ರೀಮಿಯರ್ ಲೀಗ್ ಒಳಾಂಗಣ ಕ್ರೀಡೆಗಳು, ಕನ್ನಡ ಚಲನಚಿತ್ರ ಪ್ರದರ್ಶನ, ಮಕ್ಕಳಿಗೆ ಕನ್ನಡ ತರಗತಿಗಳು ಇಂತಹ ಹಲವಾರು ಚಟುವಟಿಕೆಗಳನ್ನು ನಡೆಸುತ್ತಿದ್ದೇವೆ.

ಕೋವಿಡ್-19 ಸಮಯದಲ್ಲಿ ಭಾರತೀಯ ವಲಸಿಗರಿಗೆ ಸಹಾಯ ಮಾಡಲು ಜಕಾರ್ತಾ-ಬೆಂಗಳೂರು ನಡುವೆ ಎರಡು ವಾಪಸಾತಿ ವಿಮಾನಗಳನ್ನು ಆಯೋಜಿಸಿದೆ. ಸೂಪರ್ ಹಿಟ್ ಕಾಂತಾರ ಚಲನಚಿತ್ರ ನಾವು ಜಕಾರ್ತಾ ಮತ್ತು ಬಾಟಮ್‌ನಲ್ಲಿ ನಾಲ್ಕು ಶೋಗಳನ್ನು ಪ್ರದರ್ಶನ ಮಾಡಲಾಗಿದೆ. ವಿಜಯ ಪ್ರಕಾಶ್ ಮತ್ತು ಅವರ ತಂಡದಿಂದ ನಮ್ಮ ಮೆಗಾ ಸಕ್ಸಸ್ ಸಂಗೀತ ಶೋ ವಿಜಯೋತ್ಸವ ಏರ್ಪಡಿಸಲಾಗಿತ್ತು. ಚಿಯಾಂಜೂರು ಭೂಕಂಪದ ಸಮಯದಲ್ಲಿ ಪರಿಹಾರ ನಿಧಿ ಸಂಗ್ರಹಿಸಿ ಅಗತ್ಯವಿರುವವರಿಗೆ ನೀಡುವ ಕಾರ್ಯ ಮಾಡಿದೆ. ಅದೇ ರೀತಿ ಅನಾಥಾಶ್ರಮಕ್ಕೆ ದಾನ ಮಾಡುತ್ತಿದ್ದೆವು. ಕರ್ನಾಟಕ ತಂಡಗಳು ಇಂಡೋನೇಷ್ಯಾದಲ್ಲಿ ನಡೆದ ಅಂತಾರಾಜ್ಯ ಪಂದ್ಯಾವಳಿಗಳಲ್ಲಿ ಭಾಗವಹಿಸಿ ವಿಜಯಿಗಳಾಗಿದ್ದಾರೆ.

ಮಲೇಷಿಯಾ ಕನ್ನಡ ಸಂಘ, ಕೌಲಾಲಂಪುರ

ಜಾಗತಿಕ ಪೌರತ್ವದ ಈ ಯುಗದಲ್ಲಿ ಉನ್ನತ ಶಿಕ್ಷಣವನ್ನು ಪಡೆಯುವುದಕ್ಕಾಗಿಯೋ ಅಥವಾ ಉದ್ಯೋಗಕ್ಕಾಗಿ ಜಗತ್ತಿನ ಮೂಲೆ ಮೂಲೆಗಳಲ್ಲಿ ಕನ್ನಡಿಗರು ವಾಸವಾಗಿದ್ದಾರೆ. ತಾವಿದ್ದ ದೇಶಗಳಲ್ಲಿ ಕನ್ನಡ ಸಂಘಗಳನ್ನು ಕಟ್ಟಿಕೊಂಡು ಆ ಮೂಲಕ ಕನ್ನಡ ನಾಡು, ಸಂಸ್ಕೃತಿ, ಸಂಪ್ರದಾಯ, ಭಾಷೆ ಮತ್ತು ಸಮುದಾಯಗಳೊಡನೆ ಸಂಪರ್ಕದಲ್ಲಿರಲು ಅನೇಕ ಸೃಜನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ನಿಜಕ್ಕೂ ಪ್ರಶಂಸನೀಯ ಸಂಗತಿ. ಇಂಥ ಕ್ರಿಯಾಶೀಲ ಸಂಘಟನೆಗಳಲ್ಲಿ ಕೌಲಾಲಂಪುರಿನಲ್ಲಿರುವ ಮಲೇಷಿಯ ಕನ್ನಡ ಸಂಘವೂ ಒಂದು!

2004ರಲ್ಲಿ ಸಂಘಟನೆಗೊಂಡ ಮಲೇಷಿಯ ಕನ್ನಡ ಸಂಘ ಇದುವರೆಗೆ ನಡೆದು ಬಂದ ದಾರಿ ಗಮನಾರ್ಹವಾಗಿದೆ. ಶುರುವಾತಿನಲ್ಲಿ ಸಂಘ ಮಲೇಷಿಯಾಕ್ಕೆ ನೌಕರಿಗಾಗಿ ಬರುವ ಕನ್ನಡಿಗರಿಗೆ ಉದ್ಯೋಗಾವಕಾಶ, ವಸತಿ ಮುಂತಾದದವುಗಳ ಬಗ್ಗೆ ಮಾಹಿತಿ ಒದಗಿಸುವುದು ಮತ್ತು ಮುಖ್ಯವಾಗಿ ಮಲೇಷಿಯಾದಲ್ಲಿ ನೆಲೆಸಿರುವ ಕನ್ನಡಿಗರೊಂದಿಗೆ ಸಂಪರ್ಕ ಬೆಳೆಸಿಕೊಳ್ಳಲು ಅನುಕೂಲ ಮಾಡಿಕೊಡುವ ಉದ್ದೇಶವನ್ನು ಇಟ್ಟುಕೊಂಡಿತ್ತು. ವರ್ಷದಿಂದ ವರ್ಷಕ್ಕೆ ಮಲೇಷಿಯದಲ್ಲಿ ನೆಲೆಸಿರುವ ಕನ್ನಡಿಗರ ಸಂಖ್ಯೆ ಗಣನೀಯವಾದಂತೆ, ಈ ಎಲ್ಲ ಕನ್ನಡಿಗರ ಕುಟುಂಬಗಳಿಗೆ ಸರ್ವತೋಮುಖ ಬೆಂಬಲ ಮತ್ತು ಕಲ್ಪಿಸಲು ಈ ಸಂಘವು ಪ್ರತಿ ವರ್ಷ ರಾಜ್ಯೋತ್ಸವ, ಯುಗಾದಿ ಹಬ್ಬಗಳ ಆಚರಣೆಯ ಅಂಗವಾಗಿ ಸಾಂಸ್ಕೃತಿಕ ಕಾರ್ಯಾಗಾರಗಳನ್ನು, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಕ್ರಿಕೆಟ್ ಮತ್ತು ಕೇರಮ್ ಪಂದ್ಯಾವಳಿಗಳನ್ನು, ಪರ್ವತಾರೋಹಣ, ಚಾರಣ, ಪ್ರತಿಭಾ ಪ್ರದರ್ಶನ, ಮಕ್ಕಳಿಗಾಗಿ ಸಾಂಸ್ಕೃತಿಕ, ಶೈಕ್ಷಣಿಕ ಸ್ಪರ್ಧೆಗಳನ್ನು ಆಯೋಜಿಸುತ್ತ ಬಂದಿದೆ.

2023 ಮಾರ್ಚ 30ರಂದು ರಾಮನವಮಿಯ ಶುಭದಿನದಂದು ಮಲೇಷಿಯದ ಬೇರೆ ಬೇರೆ ರಾಜ್ಯಗಳಲ್ಲಿ ವಾಸವಾಗಿರುವ 75ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಕುಟುಂಬಗಳ ಸದಸ್ಯತ್ವವನ್ನು ಹೊಂದಿರುವ ಸಂಘಕ್ಕೆ ಅಧಿಕೃತ ನೊಂದಾವಣೆಯ ಸ್ಥಾನಮಾನ ದೊರೆತಿದ್ದು, ಡಾ. ಚಂದ್ರಶೇಖರ ಹೊಸಪೇಟರ ಅಧ್ಯಕ್ಷತೆಯಲ್ಲಿ ಪೂರ್ಣ ಪ್ರಮಾಣದ ಸಂಘವಾಗಿ ಮಾರ್ಪಟ್ಟಿತು.

ಪ್ರತಿ ವರ್ಷದಂತೆ ಈ ವರ್ಷವೂ ನವೆಂಬರಿನಲ್ಲಿ ಮಲೇಷಿಯಾ ಕನ್ನಡ ಸಂಘವು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ರಾಜಧಾನಿ ಕೌಲಾಲಂಪುರಿನಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಅತ್ಯಂತ ಉತ್ಸಾಹ ಮತ್ತು ಸಂಭ್ರಮದಿಂದ ಆಚರಿಸುವ ಸಿದ್ಧತೆಯಲ್ಲಿದೆ! ರಾಜ್ಯೋತ್ಸವದ ಆಚರಣೆಯ ಮೂಲಕ ಉತ್ತಮ ಅಭಿರುಚಿಯುಳ್ಳ ಮತ್ತು ಉನ್ನತ ಗುಣಮಟ್ಟವುಳ್ಳ ಹೊಸ ಪ್ರಯೋಗಗಳನ್ನು ಕನ್ನಡಿಗರ ಸಮುದಾಯಕ್ಕೆ ಪ್ರಸ್ತುತಪಡಿಸುಲು ಬದ್ಧವಾಗಿರುವ ಸಂಘ, 2023ರಲ್ಲಿ ರಸಪ್ರಶ್ನೆ ಮಾಸ್ಟರ್, ದೂರದರ್ಶನ ನಿರೂಪಕ ಮತ್ತು ಬರಹಗಾರ ಡಾ. ನಾ ಸೋಮೇಶ್ವರ, ಅವರ ಪತ್ನಿ ರುಕುಮಾವತಿ ಹಾಗೂ ಮಲೇಷ್ಯಾದಲ್ಲಿರುವ ಭಾರತದ ಹೈಕಮಿಷನರ್‌ಬಿ.ಎನ್. ರೆಡ್ಡಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

40 ವರ್ಷಗಳ ಸೇವೆ: ಕುವೈತ್ ಕನ್ನಡ ಕೂಟ

ಕುವೈತ್ ಕನ್ನಡ ಕೂಟ 1984ರಲ್ಲಿ ತನ್ನ ಆರಂಭವನ್ನು ಕಂಡಿದ್ದು, ಕುವೈತ್‌ನಲ್ಲಿ ನೆಲೆಸಿರುವ ಕನ್ನಡಿಗರಿಗಾಗಿ ಒಂದು ಪ್ರಮುಖ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘಟನೆಯಾಗಿ ಹೊರಹೊಮ್ಮಿದೆ. ಈ 40 ವರ್ಷಗಳ ದೀರ್ಘ ಅವಧಿಯಲ್ಲಿ, ಕೂಟವು ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವುದರೊಂದಿಗೆ, ಸಮಾಜದಲ್ಲಿ ವಿಭಿನ್ನ ಸಾಂಸ್ಕೃತಿಕ ಹಬ್ಬ, ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಕುವೈತ್‌ನಲ್ಲಿ ನೆಲೆಸಿರುವ ಕನ್ನಡಿಗರು ತಮ್ಮದೇ ಆದ ನಾಡು-ನುಡಿಯಿಂದ ದೂರವಿದ್ದರೂ, ಕುವೈತ್ ಕನ್ನಡ ಕೂಟವು ಇವರಿಗೆ ತಮ್ಮ ಸಂಸ್ಕೃತಿ, ಭಾಷೆಯೊಂದಿಗೆ ತೊಡಗಿಕೊಂಡಿರುವುದಕ್ಕಾಗಿ ಒಂದು ಸಂಘವಾಗಿದೆ. ಈ ಸಂಘಟನೆಯು, ಕನ್ನಡಿಗರಿಗೆ ಒಂದು ಒಕ್ಕೂಟದಂತೆ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ಎಲ್ಲರೂ ಒಂದು ಕುಟುಂಬದಂತೆ ಒಂದಾಗಿದ್ದಾರೆ. ಇದರಿಂದಾಗಿ, ಕನ್ನಡಿಗರು ತಮ್ಮ ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಗುರುತನ್ನು ಕಾಪಾಡಿ ಕೊಳ್ಳಲು, ಕುವೈತ್ ಕನ್ನಡ ಕೂಟವು ಪ್ರಾಮುಖ್ಯತೆಯ ಸಂಸ್ಥೆಯಾಗಿದೆ.

ಕುವೈತ್ ಕನ್ನಡ ಕೂಟವು ಕನ್ನಡಿಗರಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿದೆ. ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುವುದು ಈ ಸಂಸ್ಥೆಯ ಪ್ರಧಾನ ಕಾರ್ಯಕ್ರಮಗಳಲ್ಲಿ ಒಂದು. ಪ್ರತಿ ವರ್ಷದಂತೆ ಕನ್ನಡ ನಾಡಿನ ಕನ್ನಡ ರಾಜ್ಯೋತ್ಸವದ ಸುತ್ತ ಕನ್ನಡ ಭಾಷೆ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳು ನಡೆದಿರುತ್ತವೆ. 2024ರಲ್ಲಿ, ಕನ್ನಡ ರಾಜ್ಯೋತ್ಸವದ 40ನೇ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಕೂಟವು ಸಿದ್ಧತೆಯಲ್ಲಿದೆ. ಕುವೈತ್ ಕನ್ನಡ ಕೂಟವು ಚಿಗುರು ಬಳ್ಳಿ ಎಂಬ ಕನ್ನಡ ಕಲಿಕಾ ಕಾರ್ಯಕ್ರಮವು ಕನ್ನಡ ಕಲಿಕೆಯ ಮಹತ್ವವನ್ನು ಮನಗಾಣಿಸುವ ಮತ್ತು ಮಕ್ಕಳಲ್ಲಿ ಕನ್ನಡ ಭಾಷೆ ಬಗ್ಗೆ ಪ್ರೀತಿಬೆಳೆಸುವ ಪ್ರಯತ್ನವಾಗಿದೆ. ಚಿಗುರು ಬಳ್ಳಿನಲ್ಲಿ ಮಕ್ಕಳು ಕನ್ನಡ ಓದಲು, ಬರೆಯಲು ಮತ್ತು ಮಾತನಾಡಲು ತರಬೇತಿ ಪಡೆಯುತ್ತಿದ್ದಾರೆ. ಕನ್ನಡಿಗರ ಮಕ್ಕಳಿಗೆ ತಮ್ಮ ತಾಯುಡಿ ಭಾಷೆಯನ್ನು ಸಮರ್ಥವಾಗಿ ಅರಿತುಕೊಳ್ಳಲು ಈ ತರಗತಿಗಳು ಒಂದು ಶ್ರೇಷ್ಠ ವೇದಿಕೆಯಾಗಿದ್ದು, ಮಕ್ಕಳು ಕನ್ನಡ ಭಾಷೆಯೊಂದಿಗೆ ಆಳವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ.

ಕುವೈತ್ ಕನ್ನಡ ಕೂಟದ ಪ್ರಮುಖ ಉದ್ದೇಶ ಕನ್ನಡಿಗರಿಗೆ ಮತ್ತು ಅವರ ಮುಂದಿನ ಪೀಳಿಗೆಗಳಿಗೆ ಕನ್ನಡದ ಪರಂಪರೆ. ಸಂಸ್ಕೃತಿ, ಮತ್ತು ಭಾಷೆಯನ್ನು ಉಳಿಸಿ ಬೆಳಸುವುದಾಗಿದೆ. ಸಂಸ್ಥೆಯು ಕನ್ನಡ ಭಾಷೆ, ಕಲೆ ಮತ್ತು ಸಾಹಿತ್ಯದ ಬಗ್ಗೆ ಹೊಸ ಪೀಳಿಗೆಯ ಗಮನ ಸೆಳೆಯಲು ನಿರಂತರ ಪ್ರಯತ್ನಿಸುತ್ತಿದೆ. ಈ ಎಲ್ಲಾ ಚಟುವಟಿಕೆಗಳು ಕೇವಲ ಮನೋರಂಜನೆಗೆ ಸೀಮಿತವಲ್ಲ; ಅದನ್ನು ಕನ್ನಡ ನಾಡು, ನುಡಿ, ಮತ್ತು ಪರಂಪರೆಯ ಸ್ಮರಣಾರ್ಥವೆಂದು ಕುವೈತ್ ಕನ್ನಡ ಕೂಟವು ಪರಿಗಣಿಸುತ್ತದೆ. ಕನ್ನಡಿಗರಿಗೆ ಹೆಮ್ಮೆಪಡುವ ವೇದಿಕೆಯನ್ನು ಒದಗಿಸುವ ಮೂಲಕ, ನಮ್ಮ ಸಂಸ್ಕೃತಿಯ ಅಮೃತವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಮಹತ್ವದ ಕೆಲಸದಲ್ಲಿ ಈ ಸಂಸ್ಥೆ ನಿರಂತರವಾಗಿ ತೊಡಗಿಸಿಕೊಂಡಿದೆ.

ಕುವೈತ್ ಕನ್ನಡ ಕೂಟವು ಕುವೈತ್‌ನಲ್ಲಿರುವ ಕನ್ನಡಿಗರಿಗೆ ತಮ್ಮ ಕಲೆ, ಸಂಸ್ಕೃತಿ ಮತ್ತು ಭಾಷೆಯೊಂದಿಗೆ ಅವಿನಾಭಾವ ಸಂಬಂಧವಿರುವಂತಹ ಜೀವನ ಶೈಲಿಯನ್ನು ಮುಂದುವರಿಸುವುದಲ್ಲದೆ, ಕುವೈತ್ ಕನ್ನಡ ಕೂಟ ಕ್ಷೇಮಾಭಿವೃದ್ಧಿ ಸಂಘದ ಮೂಲಕ ಕನ್ನಡ ನಾಡಿಗೆ ಮರಳಿದ ಕುವೈತ್ ಕನ್ನಡಿಗರ ಸದಸ್ಯರ ಸಾಮಾಜಿಕ ಕಲ್ಯಾಣ ಮತ್ತು ಯೋಗಕ್ಷೇಮವನ್ನು ಬೆಂಬಲಿಸುವತ್ತ ಗಮನ ಹರಿಸಿದೆ. ಸಂಘವು ಆಗಾಗ್ಗೆ ಅಗತ್ಯವಿರುವವರಿಗೆ ಆರ್ಥಿಕ, ಉದ್ಯೋಗ ಮತ್ತು ವೈದ್ಯಕೀಯ ಸಹಾಯಹಸ್ತವನ್ನು ನೀಡುತ್ತದೆ. ಕರುನಾಡಿನ ಹಿಂದುಳಿದ ಪ್ರದೇಶಗಳಲ್ಲಿ ಕನ್ನಡ ಶಾಲೆಗಳನ್ನು ದತ್ತುಪಡೆದುಕೊಂಡು ಮೂಲಭೂತ ಸೌಕರ್ಯ, ಬೋಧನಾ ಸಾಧನಗಳು ಮತ್ತು ಸಲಕರಣೆಗಳನ್ನು 10ಕ್ಕೂ ಹೆಚ್ಚು ಶಾಲೆಗಳಿಗೆ ನೀಡುತ್ತಾ ಬಂದಿದೆ.

ಆರಾಮ

ವಿಶ್ವವಾಣಿ
@vishwavaninews
22-11-2025
ಶನಿವಾರ

ಚಿತ್ತವಿಹಾರ

ಬದುಕಿನ ಸೀಳುನೋಟ

• ಅರವಿಂದ ಜಿ. ಜೋಷಿ, ಮೈಸೂರು

ನಮ್ಮ ಈ ಬದುಕನು–
ನೀಲ ಬಾನು ತುಂಬ
ಹರಡಿದ ಕರಿಮೋಡದಂಚಿನ
ಬೆಳ್ಳಿಗೆರೆ ಎಂತೆಂದಾದರೂ ಸರಿ...

ತಾಳದ ಬಿರುಬಿಸಿಲಿನ ತಾಪದೊಳು
ಬೀಸಿ ಬಂದ ತಂಗಾಳಿ ಎಂದರೂ ಸರಿ...

ಕಡಿದು ಧರೆಗುರುಳಿದ ಮರದ
ಕೊರಡಿನ ಕೊನರು ಎಂದರೂ ಸರಿ...

ಹಸಿದು, ಬಳಲಿ ಬೆಂಡಾಗಿ
ಕುಸಿವವಗೆ ನೀಡಿದ ಅನ್ನ ಎಂದರೂ ಸರಿ...

ಎಂದೋ, ಎತ್ತಲೋ ನೆಲ ಸೇರಿದ
ಬಿತ್ತ ಮೊಳೆತಿದೆ ಎಂದರೂ ಸರಿ...

ತಮದೆದುರು ತೇಜದಂತೆ
ಏರಿನ ಮುಂದೆ ಇಳಿವು ಎಂದರೂ ಸರಿ...

ಅಂತೂ ಬದುಕು–
ಬಗೆ ಬಗೆಯ ಬಯಕೆ ಬವಣೆ
ಭ್ರಮಿಕೆಗಳ ಬಂಧುರ ಮಿಶ್ರಣ!

ಪುಟ್ಟ ಕಥೆಗಳು

• ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಸ್ವಾರ್ಥ

ಕೂಡು ಕುಟುಂಬದಲ್ಲಿ ಬೆಳೆದ ಬಡವರ ಮನೆಯ ಹೆಣ್ಣು ಮಗಳು ಆಕೆ. ಅವಳನ್ನು ಮದುವೆ ಮಾಡಿಕೊಡಲು ಹೆತ್ತವರು, ಅತ್ತೆ-ಮಾವ ಇಲ್ಲದ ಶ್ರೀಮಂತರ ಮನೆಯ ಹುಡುಗನನ್ನು ಹುಡುಕುತ್ತಿದ್ದರಂತೆ..

ಕನಸು

ಬೆಳಗಿನಿಂದ ಸಂಜೆಯವರೆಗೆ ದುಡಿದರೂ ಮಾಡಿದ ಸಾಲ ತೀರಿಸಲಾಗದ ಯುವಕನೊಬ್ಬ ತನ್ನ ತಂದೆ-ತಾಯಿಯನ್ನು ವಿಮಾನದಲ್ಲೊಮ್ಮೆ ಕರೆದೊಯ್ಯಬೇಕೆಂಬ ಕನಸು ಕಾಣುತ್ತಿದ್ದನಂತೆ!

ಆಸೆ

ಡಿಗ್ರಿ ಓದಿ ನೌಕರಿ ಇದ್ದರೂ ಹೆಣ್ಣು ಸಿಗದು ಎಂಬ ಈಗಿನ ಕಾಲದಲ್ಲಿ ಅಲ್ಲೊಬ್ಬ ಎಸ್ಸೆಸ್ಸೆಲ್ಸಿಯಲ್ಲಿ ಫೇಲಾಗಿ ತಂದೆ-ತಾಯಿಯ ಜತೆ ವ್ಯವಸಾಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ. ವಯಸ್ಸಾದ ಅವ್ವ-ಅಪ್ಪನಿಗೆ ತಾವು ಸಾಯುವುದರೊಳಗೆ ಮಗನ ಮದುವೆ ಮಾಡಬೇಕೆಂಬ ಆಸೆ...

ಸೋರುತಿಹುದು ಮನೆಯ ಮಾಳಿಗಿ

ಬರಿದಾಗುತ್ತಿರುವ ಮನಸ್ಸುಗಳು, ಕರಗುತ್ತಿರುವ ಬಂಧಗಳು

ನಮ್ಮ ಹಳೆಯ ಕುಟುಂಬ ವ್ಯವಸ್ಥೆ ನಶಿಸಿಹೋಗುತ್ತಿರುವುದು ಕೇವಲ ಒಂದು ಸಾಮಾಜಿಕ ಬದಲಾವಣೆ ಮಾತ್ರವಲ್ಲ, ಮನೆಯಲ್ಲಿನ ಗೋಡೆಗಳು ಇಟ್ಟಿಗೆ-ಸಿಮೆಂಟ್‌ನಿಂದಷ್ಟೇ ಮಾಡಲ್ಪಟ್ಟಿಲ್ಲ, ಅವು ಈಗ ನಮ್ಮ ವೈಯಕ್ತಿಕ ಗಡಿಗಳು ಮತ್ತು ಮೌನದ ಪರದೆಗಳಿಂದ ನಿರ್ಮಾಣವಾಗಿವೆ.

• ಲೀನಾ ಕಾಮತ ಜೋಶಿ, ಬೆಂಗಳೂರು

ಆಧುನಿಕ ನಗರ ಜೀವನದಲ್ಲಿ ನಾವು ಏನನ್ನು ಗಳಿಸಿದ್ದೇವೆ ಮತ್ತು ಕಳೆದುಕೊಂಡಿದ್ದೇವೆ ಎಂಬ ಪ್ರಶ್ನೆಗೆ ಉತ್ತರ ಹುಡುಕಹೊರಟರೆ, ನಮ್ಮ ಮನಸ್ಸು ತಕ್ಷಣವೇ ಐಷಾರಾಮಿ ಮನೆಗಳು, ಉತ್ತಮ ಸೌಕರ್ಯಗಳು ಮತ್ತು ಸುಧಾರಿತ ತಂತ್ರಜ್ಞಾನದ ಕಡೆಗೆ ಬೆರಳು ತೋರುತ್ತದೆ. ಆದರೆ, ಈ ಹೊಳೆಯುವ ಮುಖವಾಡದ ಹಿಂದೆ, ನಮ್ಮ ಅತ್ಯಂತ ಪ್ರೀತಿಯ ಆಸ್ತಿಯಾದ 'ಪಾರಿವಾರಿಕ ಬಂಧ' ಸದ್ದಿಲ್ಲದೆ ಸಾಯುತ್ತಿದೆ. ಇಂದಿನ 3 ಬಿಎಚ್‌ಕೆ, 4 ಬಿಎಚ್‌ಕೆ ಮನೆಗಳು ಹೊರನೋಟಕ್ಕೆ ಎಷ್ಟು ಸುಂದರವಾಗಿ, ಭವ್ಯವಾಗಿ ಕಾಣುತ್ತವೆಯೋ, ಒಳನೋಟಕ್ಕೆ ಅಷ್ಟೇ ಬರಿದಾಗಿ, ಮೌನ ಮತ್ತು ವೈಯಕ್ತಿಕ ಪ್ರಪಂಚಗಳಿಂದ ತುಂಬಿವೆ. ವೇಗದ ನಗರೀಕರಣ ಮತ್ತು ಬದಲಾಗುತ್ತಿರುವ ಜೀವನಶೈಲಿಯು ನಮ್ಮ ಕೌಟುಂಬಿಕ ಬಂಧಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತಿದೆ. ದೊಡ್ಡ ದೊಡ್ಡ ಅಪಾರ್ಟ್ಮೆಂಟ್‌ಗಳಲ್ಲಿ, ಐಷಾರಾಮಿ ಮನೆಗಳಲ್ಲಿ ವಾಸಿಸುತ್ತಿದ್ದರೂ, ಕುಟುಂಬ ಸದಸ್ಯರ ನಡುವಿನ ಭಾವನಾತ್ಮಕ ಅಂತರವು ಬೆಳೆಯುತ್ತಿದೆ. ವೈಯಕ್ತಿಕ ಸೌಕರ್ಯ, ಖಾಸಗಿತನದ ಹೆಸರಿನಲ್ಲಿ ನಾವು ಸೃಷ್ಟಿಸಿಕೊಂಡಿರುವ ಭೌಗೋಳಿಕ ಅಂತರವು ನಮ್ಮ ಸಾಂಸ್ಕೃತಿಕ ಮತ್ತು ಮಾನಸಿಕ ಬಂಧವನ್ನು ನಿಧಾನವಾಗಿ ತಿಂದುಹಾಕುತ್ತಿದೆ.

20-30 ವರ್ಷಗಳ ಹಿಂದೆ ಅವಿಭಕ್ತ ಕುಟುಂಬದ ವ್ಯವಸ್ಥೆಯಿತ್ತು. ಒಂದು ಮನೆಯೊಳಗೆ ದೊಡ್ಡಪ್ಪ, ಚಿಕ್ಕಪ್ಪ, ಅಜ್ಜಿ, ತಾತ ಮತ್ತು ಅವರ ಮಕ್ಕಳೆಲ್ಲಾ ಒಟ್ಟಿಗೆ ಇರುತ್ತಿದ್ದರು. ಆಗ ಮಕ್ಕಳಿಗೆ ಪ್ರತ್ಯೇಕ ಕೊಠಡಿ ಎನ್ನುವುದು ಒಂದು ದೊಡ್ಡ ಕನಸಾಗಿತ್ತು, ಒಂದೇ ಕೋಣೆಯಲ್ಲಿ ಇಬ್ಬರು, ಮೂವರು ಮಕ್ಕಳು ಮಲಗುತ್ತಿದ್ದರು. ದಿನದ ಕೊನೆಯಲ್ಲಿ ಹಾಸಿಗೆಯ ಮೇಲೆ ನಡೆದ ಆ ಹರಟೆಗಳು, ಬೆಳಗ್ಗೆ ಎದ್ದಾಗ ಅಕ್ಕಪಕ್ಕ ಮಲಗಿದ್ದ ಸಹೋದರ/ಸಹೋದರಿಯ ಮುಖ ನೋಡಿದಾಗ ಸಿಗುತ್ತಿದ್ದ ಭದ್ರತೆಯ ಭಾವನೆ-ಇವೆಲ್ಲವೂ ಈಗಿನ ತಲೆಮಾರಿಗೆ ಅನ್ಯವಾಗಿವೆ. ಆ ಹಂಚಿಕೊಂಡ ಜಾಗದಲ್ಲಿ ಪ್ರೀತಿ ಮಾತ್ರವಲ್ಲ, ಜಗಳಗಳೂ ಇದ್ದವು, ಆದರೆ ಮುಖ್ಯವಾಗಿ 'ಸಂವಹನ' ನಿರಂತರವಾಗಿತ್ತು. ಯಾರಾದರೂ ಕೋಣೆಯೊಳಗೆ ಬಂದರೆ, ಅದು ಎಲ್ಲರಿಗೂ ಸೇರಿದ ಜಾಗವಾಗಿರುವುದರಿಂದ, ಕದ್ದು ಮುಚ್ಚಿ ಏನನ್ನೂ ಮಾಡುವ ಅವಕಾಶ ಇರುತ್ತಿರಲಿಲ್ಲ. ಇದರಿಂದ ಮಕ್ಕಳ ಬೆಳವಣಿಗೆ ಒಂದು ಪಾರದರ್ಶಕ ವಾತಾವರಣದಲ್ಲಿ ನಡೆಯುತ್ತಿತ್ತು. ಶಿಸ್ತು ಮತ್ತು ಒಗ್ಗಟ್ಟಿನ ಪಾಠಗಳು ಮನೆಯ ನೆಲದಿಂದಲೇ ಆರಂಭವಾಗಿದ್ದವು. ಊಟದ ಪದ್ಧತಿಯೇ ಅದಕ್ಕೆ ಸಾಕ್ಷಿ. ಹಿಂದಿನ ದಿನಗಳಲ್ಲಿ, ಮನೆಯಲ್ಲಿ ಸಾಮೂಹಿಕ ಭೋಜನವು ಕಡ್ಡಾಯವಾಗಿತ್ತು. ಮೊದಲು ಮಕ್ಕಳು ಊಟ ಮುಗಿಸಬೇಕು, ನಂತರ ಪುರುಷರು, ಕೊನೆಯಲ್ಲಿ ಮನೆಯ ಹೆಂಗಸರು ಆರಾಮವಾಗಿ ಊಟ ಮಾಡುತ್ತಿದ್ದರು. ಈ ಪದ್ಧತಿಯಿಂದ ಶಿಸ್ತು, ಕಾಯುವಿಕೆ ಮತ್ತು ಹಿರಿಯರಿಗೆ ಗೌರವ ಎಂಬ ಮೌಲ್ಯಗಳು ಮಕ್ಕಳಿಗೆ ತನ್ನಿಂದ ತಾನೇ ಒಳಸೇರುತ್ತಿದ್ದವು. ಮಕ್ಕಳು ಊಟ ಮಾಡುತ್ತಿರುವಾಗ ದೊಡ್ಡವರು ಅವರ ಪಾಠ, ಆಟ, ದಿನಚರಿಯ ಬಗ್ಗೆ ಪ್ರೀತಿಯಿಂದ ವಿಚಾರಿಸುತ್ತಿದ್ದರು. ಊಟದ ಜತೆಗೆ ನಗು, ಕಥೆ, ಸಲಹೆ-ಸೂಚನೆಗಳ ವಿನಿಮಯವಾಗುತ್ತಿತ್ತು. ಅದು ಕೇವಲ ಹೊಟ್ಟೆಯ ಹಸಿವನ್ನು ನೀಗಿಸುವ ಪ್ರಕ್ರಿಯೆಯಾಗಿರದೆ, ಮನಸ್ಸುಗಳ, ಬಾಂಧವ್ಯದ ಹಸಿವನ್ನು ನೀಗಿಸುತ್ತಿದ್ದ ಪವಿತ್ರ ಸಮಯವಾಗಿತ್ತು. ಇಡೀ ಕುಟುಂಬ ಒಂದೇ ಕೋಣೆಯಲ್ಲಿ ಮಲಗುವುದರಿಂದ, ಕಥೆಗಳು, ಪಿಸುಮಾತುಗಳು, ಅಜ್ಜಿಯ ಉಪದೇಶಗಳು ಎಲ್ಲವೂ ಬೆರೆತು ಬಾಂಧವ್ಯ ಗಟ್ಟಿಯಾಗಲು ನೆರವಾಗುತ್ತಿದ್ದವು. ಆ ಮನೆಗಳು ಚಿಕ್ಕದಿರಬಹುದು, ಆದರೆ ಅಲ್ಲಿ ಸಂಬಂಧಗಳ ಮಹಾಪೂರವಿತ್ತು. ಈಗಿನಂತೆ ಪ್ರತಿಯೊಬ್ಬರಿಗೂ 'ಖಾಸಗಿ ಸ್ಥಳ' ಎಂಬ ಪರಿಕಲ್ಪನೆ ಇರಲಿಲ್ಲ.

ಆದರೆ ಇಂದು, ಪರಿಸ್ಥಿತಿ ಬದಲಾಗಿದೆ. ವಿಭಕ್ತ ಕುಟುಂಬ ಪದ್ಧತಿಯಲ್ಲಿ ಪ್ರತಿ ಮಗುವಿಗೂ, ವಿಶೇಷವಾಗಿ ಹದಿಹರೆಯದವರಿಗೆ, ಪ್ರತ್ಯೇಕ ಕೊಠಡಿಗಳನ್ನು ಒದಗಿಸುವುದು ಪೋಷಕರ ಹೆಗ್ಗುರುತಾಗಿದೆ. 3 ಬಿಎಚ್‌ಕೆ ಮನೆಯಲ್ಲಿ ಇಬ್ಬರು ಮಕ್ಕಳಿಗೆ 2 ಕೊಠಡಿ, ಪೋಷಕರಿಗೆ 1 ಕೊಠಡಿ. ಇದು ಒಂದು ರೀತಿಯ ಸ್ಥಾನಮಾನದ ಸಂಕೇತವಾಗಿ ಬೆಳೆದಿದೆ. ಈ ಪ್ರತ್ಯೇಕ ಕೋಣೆಗಳು ಮೇಲ್ನೋಟಕ್ಕೆ ಒಳ್ಳೆಯದಾಗಿ ಕಂಡರೂ, ವಾಸ್ತವದಲ್ಲಿ ಅವು ಮಕ್ಕಳನ್ನು ಏಕಾಂತತೆಯ ಕೋಟೆಗಳನ್ನಾಗಿ ಪರಿವರ್ತಿಸುತ್ತಿವೆ. ಹದಿಹರೆಯದವರಿಗೆ ಪ್ರತ್ಯೇಕ ಕೊಠಡಿ ಸಿಕ್ಕಾಗ, ಅದು ಕೇವಲ ನಾಲ್ಕು ಗೋಡೆಗಳಿರುವ ಕೋಣೆಯಾಗಿ ಉಳಿಯುವುದಿಲ್ಲ, ಬದಲಾಗಿ ಪೋಷಕರಿಗೆ ಪ್ರವೇಶವಿಲ್ಲದ 'ಗುಪ್ತ ಜಗತ್ತು' ಆಗಿ ಪರಿಣಮಿಸುತ್ತದೆ. ಈ ಪ್ರತ್ಯೇಕತೆಯು ಮಕ್ಕಳಲ್ಲಿ ಮತ್ತು ಪೋಷಕರಲ್ಲಿ ದ್ವೀಪಗಳಂಥ ಮನಸ್ಥಿತಿಯನ್ನು ಸೃಷ್ಟಿಸುತ್ತಿದೆ. ಇಂಥ ಮನೆಗಳು ಹೊರನೋಟಕ್ಕೆ ಸುಂದರವಾಗಿ ಕಾಣಿಸಬಹುದು, ಆದರೆ ಅದರೊಳಗೆ ಬಂಧುತ್ವದ ಕೊರತೆ ಎದ್ದು ಕಾಣುತ್ತದೆ.

ನಮ್ಮ ಬಾಲ್ಯದಲ್ಲಿ, ಹೆಚ್ಚಿನ ಅವಿಭಕ್ತ ಕುಟುಂಬಗಳಲ್ಲಿ, ಮಕ್ಕಳಿಗೆ ರಾತ್ರಿ ಊಟವಾದ ತಕ್ಷಣ ಮಲಗುವ ಸಮಯ ನಿಗದಿಯಾಗುತ್ತಿತ್ತು. ಶಾಲೆಯ ಹೋಮ್‌ವರ್ಕ್ ಮುಗಿದ ನಂತರ ಆಟವಾಡಿ, ಬೇಗನೆ ಊಟ ಮುಗಿಸಿ ಮಲಗುತ್ತಿದ್ದರು. ಇದಕ್ಕೆ ಮುಖ್ಯ ಕಾರಣ, ಮನೆಯ ಉಳಿದ ಹಿರಿಯರ ದಿನಚರಿ ಮತ್ತು ಎಲ್ಲರೂ ಒಂದೇ ಜಾಗದಲ್ಲಿ ಮಲಗುತ್ತಿದ್ದುದರಿಂದ, ಶಿಸ್ತು ಮತ್ತು ದಿನಚರಿ ಸ್ವಯಂಚಾಲಿತವಾಗಿ ಜಾರಿಯಾಗುತ್ತಿತ್ತು. ಈಗ, ಪ್ರತ್ಯೇಕ ಕೊಠಡಿಗಳು ರಾತ್ರಿಯ ಸಮಯವನ್ನು 'ನನ್ನ ಸಮಯ' ಎಂದು ಪರಿವರ್ತಿಸಿವೆ. ಪೋಷಕರು ನಿದ್ರೆಗೆ ಜಾರಿದ ನಂತರವೂ ಮಕ್ಕಳು ತಮ್ಮ ಜಗತ್ತಿನಲ್ಲಿ ಮುಳುಗುತ್ತಾರೆ. ಇದು ಕೇವಲ ನಿದ್ರೆಯ ಕೊರತೆಗಷ್ಟೇ ಕಾರಣವಾಗದೆ, ಪೋಷಕರು-ಮಕ್ಕಳ ನಡುವಿನ ಪ್ರೀತಿಯ ಮಾತುಕತೆಯನ್ನು, ಬಾಂಧವ್ಯದ ಸಮಯವನ್ನೂ ಕಸಿದುಕೊಳ್ಳುತ್ತದೆ.

ಹಿಂದೆ ಒಂದೇ ರೀತಿಯ ಆಹಾರವನ್ನು, ಒಂದೇ ಸ್ಥಳದಲ್ಲಿ, ಒಂದೇ ಸಮಯದಲ್ಲಿ ತಿನ್ನುತ್ತಿದ್ದರು! ಇಂದು ಮನೆಯ ಸದಸ್ಯರ ನಡುವೆ ರುಚಿಗಳ ವ್ಯತ್ಯಾಸ ದೊಡ್ಡ ಗೋಡೆಯಾಗಿದೆ. ಪ್ರತಿಯೊಬ್ಬರಿಗೂ ಅವರವರ ಸಮಯ ಮತ್ತು ಅವರವರ 'ವಿಶೇಷ' ಆಹಾರ ಬೇಕು. ಹದಿಹರೆಯದವರಿಗೆ ಪಾಲಕರ 'ಸಾಂಪ್ರದಾಯಿಕ' ಆಹಾರಕ್ಕಿಂತ, ಫಾಸ್ಟ್ ಫುಡ್, ಪಿಜ್ಜಾ ಅಥವಾ ತಮ್ಮದೇ ಆದ ವಿಭಿನ್ನ ಖಾದ್ಯಗಳು ಬೇಕು. ಅಪ್ಪ-ಅಮ್ಮ ಒಂದೆಡೆ ಸಾರನ್ನೋ, ಪಲ್ಯವನ್ನೋ ತಿನ್ನುತ್ತಿದ್ದರೆ, ಮಕ್ಕಳು ತಮ್ಮ ಕೋಣೆಯಲ್ಲಿ ಯಾವುದೋ ಡೆಲಿವರಿ ಆ್ಯಪ್ ಮೂಲಕ ಬಂದ ಊಟವನ್ನು ತಿನ್ನುತ್ತಿರುತ್ತಾರೆ. ಊಟ ಎನ್ನುವುದು ಕೇವಲ ಹೊಟ್ಟೆ ತುಂಬಿಸುವ ಕ್ರಿಯೆಯಾಗಿ ಉಳಿದಿದೆಯೇ ವಿನಾ, ಕುಟುಂಬದ ಸಂಸ್ಕಾರವಾಗಿ ಅಲ್ಲ. ಊಟವು ಇಡೀ ಕುಟುಂಬವನ್ನು ಒಗ್ಗೂಡಿಸುವ ಬದಲು, ಪ್ರತ್ಯೇಕ ಭೋಜನಗಳಾಗಿ ವಿಭಜನೆಗೊಂಡಿದೆ. ಮಕ್ಕಳು ಟಿವಿಯ ಮುಂದೆಯೋ, ಮೊಬೈಲ್ ನೋಡುತ್ತಲೋ ತಮ್ಮ ಕೋಣೆಯಲ್ಲಿ ಊಟ ಮುಗಿಸುತ್ತಾರೆ. 'ಇವತ್ತು ದಿನವೆಲ್ಲಾ ಹೇಗಿತ್ತು?' ಎಂಬ ಸರಳ ಪ್ರಶ್ನೆಯನ್ನು ಕೇಳಲು ಕೂಡ ಪೋಷಕರಿಗೆ ಸಮಯ ಸಿಗುವುದಿಲ್ಲ ಅಥವಾ ಆ ಅವಕಾಶವೇ ತಪ್ಪಿ ಹೋಗುತ್ತದೆ. ಬಾಂಧವ್ಯದ ಬಹುಮುಖ್ಯ ವೇದಿಕೆಯಾಗಿದ್ದ ಊಟದ ಸಮಯ, ವೈಯಕ್ತಿಕ ಆಯ್ಕೆಯ ಅನಿವಾರ್ಯತೆಯಾಗಿ ಬದಲಾಗಿದೆ.

ಈ ಸೌಲಭ್ಯಗಳ ಯುಗದಲ್ಲಿ, ಮನೆಯ ಪ್ರತಿಯೊಂದು ಕೋಣೆಗೆ 'ಅಟ್ಯಾಚ್ಡ್ ಬಾತ್ರೂಮ್' ಸಾಮಾನ್ಯವಾಗಿದೆ. ಇದು ಕೇವಲ ಒಂದು ವಾಸ್ತುಶಿಲ್ಪದ ವೈಶಿಷ್ಟ್ಯವಲ್ಲ, ಬದಲಿಗೆ ಕುಟುಂಬಿಕರ ಪರಸ್ಪರ ಅವಲಂಬನೆಯನ್ನು ಕೊಲ್ಲುವ ಸಾಧನವಾಗಿದೆ. ಹಿಂದೆ, ಒಬ್ಬ ವ್ಯಕ್ತಿ ಸ್ನಾನಕ್ಕೆ ಅಥವಾ ಶೌಚಕ್ಕೆ ಹೋಗಲು ಸಾಮಾನ್ಯ ಜಾಗವನ್ನು ಬಳಸಬೇಕಿತ್ತು. ಈಗ, ತಮ್ಮ ಕೋಣೆಯ ಒಳಗೆಯೇ ಸಮಸ್ತ ಸೌಲಭ್ಯಗಳೂ ಲಭ್ಯವಿರುವುದರಿಂದ, ಹದಿಹರೆಯದವರು ಇಡೀ ದಿನ ಕೋಣೆಯಿಂದ ಹೊರಬರುವ ಅಗತ್ಯವೇ ಇಲ್ಲ. ಬಾಹ್ಯ ಪ್ರಪಂಚದ ಮತ್ತು ಮನೆಯ ಇತರ ಸದಸ್ಯರ ಅರಿವು ಸಂಪೂರ್ಣ ಕ್ಷೀಣಿಸುತ್ತದೆ.

ಹಿಂದೆ ಇಡೀ ಕುಟುಂಬಿಕರು ಸಾಯಂಕಾಲ ಒಂದು ನಿರ್ದಿಷ್ಟ ಸಮಯದಲ್ಲಿ ಡ್ರಾಯಿಂಗ್ ರೂಮಿನಲ್ಲಿ ಕುಳಿತು ಟಿವಿ ನೋಡುತ್ತಿದ್ದರು. ಅದರಲ್ಲಿನ ಕಾರ್ಯಕ್ರಮಗಳ ಬಗ್ಗೆ ಅಭಿಪ್ರಾಯ ವಿನಿಮಯ ನಡೆಯುತ್ತಿತ್ತು. ಅದು ಒಂದು 'ಒಟ್ಟಿಗೆ ಸಮಯ ಕಳೆಯುವ ಪದ್ಧತಿ'ಯಾಗಿತ್ತು. ಈಗ ಪ್ರತಿಯೊಂದು ಕೋಣೆಯಲ್ಲಿ ಟಿವಿ ಇದೆ ಅಥವಾ ಪ್ರತಿಯೊಬ್ಬರ ಕೈಯಲ್ಲಿ ಮೊಬೈಲ್ ಇದೆ, ಹೀಗಾಗಿ ಹೆಡ್‌ಫೋನ್ ಹಾಕಿಕೊಂಡು ತಮ್ಮದೇ ಜಗತ್ತಿನಲ್ಲಿ ಮುಳುಗಿರುತ್ತಾರೆ. ಒಟ್ಟಿಗೆ ಕುಳಿತರೂ, ಪ್ರತ್ಯೇಕ ಜಗತ್ತಿನಲ್ಲಿರುತ್ತಾರೆ. ಗ್ಯಾಜೆಟ್‌ಗಳು ಮತ್ತು ಪ್ರತ್ಯೇಕತೆ ಬೆಳೆಯುತ್ತಿದ್ದಂತೆ, ಮಕ್ಕಳಲ್ಲಿ ಭಾವನಾತ್ಮಕ ಸ್ಥಿರತೆ ಕಡಿಮೆಯಾಗುತ್ತಿದೆ. ಅವರು ತಮ್ಮ ಸಮಸ್ಯೆಗಳನ್ನು ತಾವೇ ಎದುರಿಸಲು ಯತ್ನಿಸುತ್ತಾರೆ, ಪೋಷಕರಿಂದ ದೂರ ಉಳಿಯುತ್ತಾರೆ. ಪೋಷಕರಿಗೂ, 'ನಾನು ನನ್ನ ಜವಾಬ್ದಾರಿಯನ್ನು ಪೂರೈಸಿದ್ದೇನೆ, ಉತ್ತಮ ಕೋಣೆ-ಸೌಲಭ್ಯಗಳನ್ನು ನೀಡಿದ್ದೇನೆ' ಎಂಬ ತಪ್ಪು ಭಾವನೆ ಮೂಡುತ್ತದೆ. ನಮ್ಮ ಹಳೆಯ ಕುಟುಂಬ ವ್ಯವಸ್ಥೆ ನಶಿಸಿಹೋಗುತ್ತಿರುವುದು ಕೇವಲ ಒಂದು ಸಾಮಾಜಿಕ ಬದಲಾವಣೆ ಮಾತ್ರವಲ್ಲ, ಮನೆಯಲ್ಲಿನ ಗೋಡೆಗಳು ಇಟ್ಟಿಗೆ-ಸಿಮೆಂಟ್‌ನಿಂದಷ್ಟೇ ಮಾಡಲ್ಪಟ್ಟಿಲ್ಲ, ಅವು ಈಗ ನಮ್ಮ ವೈಯಕ್ತಿಕ ಗಡಿಗಳು ಮತ್ತು ಮೌನದ ಪರದೆಗಳಿಂದ ನಿರ್ಮಾಣ ವಾಗಿವೆ. ನಾವು ಮನೆಗಳನ್ನು ದೊಡ್ಡದು ಮಾಡುತ್ತಿದ್ದೇವೆ, ಆದರೆ ಹೃದಯಗಳನ್ನು, ಸಂಬಂಧಗಳ ವ್ಯಾಪ್ತಿಯನ್ನು ಕಿರಿದುಗೊಳಿಸುತ್ತಿದ್ದೇವೆ. ಪ್ರತ್ಯೇಕ ಕೊಠಡಿಗಳು ಇರಲಿ. ಆದರೆ, ಊಟದ ಮೇಜು ಮಾತ್ರ ಒಂದೇ ಇರಲಿ. ದಿನಕ್ಕೆ ಒಂದು ಗಂಟೆಯಾದರೂ ಇಡೀ ಕುಟುಂಬ ಪರದೆಗಳಿಂದ ದೂರ ಉಳಿದು, ಪರಸ್ಪರ ಮುಖ ನೋಡಿ ಮಾತಾಡುವ ಸಂಪ್ರದಾಯ ವನ್ನು ಮರುಸ್ಥಾಪಿಸುವುದು ಅತ್ಯಗತ್ಯ. ಇಲ್ಲವಾದರೆ, ನಮ್ಮ ಈ ಸುಂದರ ಮನೆಗಳು ಶೀಘ್ರದಲ್ಲೇ ಸಂಬಂಧಗಳ ಸಮಾಧಿಗಳಾಗಬಹುದು....

ಸಮಸ್ಯೆಗಳು ಒಂದೆರಡಲ್ಲ

ಇಂದಿನ ಹದಿಹರೆಯದವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಶಾಲೆಯ ಒತ್ತಡ, ಸಾಮಾಜಿಕ ಮಾಧ್ಯಮದ ಪ್ರಭಾವ, ಮತ್ತು ಹೊರಗಿನ ಪ್ರಪಂಚದ ನಕಾರಾತ್ಮಕ ಅಂಶಗಳನ್ನು ಅವರು ನಿಭಾಯಿಸಬೇಕಿದೆ. ಹೀಗಾಗಿ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳುವ ಬದಲು ಅವರು ತಮ್ಮ ಪ್ರತ್ಯೇಕ ಕೋಣೆಯೊಳಗೆ ಅವಿತುಕೊಳ್ಳುತ್ತಾರೆ. ರಾತ್ರಿಯಿಡೀ ಮೊಬೈಲ್/ಲ್ಯಾಪ್‌ಟಾಪ್‌ನ ಸಾಂಗತ್ಯದಲ್ಲಿರುವುದು, ನಿದ್ರೆಯ ಮಾದರಿ ಸಂಪೂರ್ಣವಾಗಿ ಬದಲಾಗುವುದು ಮತ್ತು ಬೆಳಗ್ಗೆ ತಡವಾಗಿ ಏಳುವುದು ಸಾಮಾನ್ಯವಾಗಿದೆ. ಇದರಿಂದ ಶಾರೀರಿಕ-ಮಾನಸಿಕ ಆರೋಗ್ಯ ಹಾಳಾಗುವುದರ ಜತೆಗೆ, ಪಾಲಕರೊಂದಿಗಿನ ಸಂಪರ್ಕವೂ ಕಡಿತಗೊಳ್ಳುತ್ತದೆ. ಪಾಲಕರು ಕೋಣೆಯ ಬಾಗಿಲು ತಟ್ಟುವ ವೇಳೆಗೆ ಹಲವು ಸಮಸ್ಯೆಗಳು ಈಗಾಗಲೇ ಗಂಭೀರ ಸ್ವರೂಪ ಪಡೆದಿರುತ್ತವೆ. ಪಾಲಕರು ಈ 'ಪ್ರತ್ಯೇಕತೆಯ ನಡವಳಿಕೆ' ಬಗ್ಗೆ ಪ್ರಶ್ನಿಸಿದಾಗ, ಮಕ್ಕಳು ಅದನ್ನು ತಮ್ಮ 'ಖಾಸಗಿತನದ ಉಲ್ಲಂಘನೆ' ಎಂದು ವಾದಿಸುತ್ತಾರೆ. ಪರಿಣಾಮ? ಕುಟುಂಬದಲ್ಲಿ ಭೌತಿಕವಾಗಿ ಹತ್ತಿರವಿದ್ದರೂ, ಭಾವನಾತ್ಮಕವಾಗಿ ಭಾರಿ ಅಂತರ ನಿರ್ಮಾಣವಾಗುತ್ತದೆ.

ಕೇಳುವ ಕಿವಿಯಿರಲು ನೋಡುವ ಕಣ್ಣಿರಲು

ಎಲ್ಲೆಲ್ಲೂ ಸಂಗೀತವೇ, ಎಲ್ಲೆಲ್ಲೂ ಸೌಂದರ್ಯವೇ

• ಮಾಯಾ ಬಾಲಚಂದ್ರ

ಸಮದಿತೇನಾದೇಜಗತ್ಕಾರಣಂ', 'ಬಿಂದೋರ್ನಾದಸಮುದ್ಭವಃ'- ಅಂದರೆ, ನಾದದಿಂದಲೇ ಜಗತ್ತು, ಓಂಕಾರದ ನಾದ ಬಿಂದುವಿನಿಂದಲೇ ಜಗತ್ ಸೃಷ್ಟಿ. ಶಾರ್ಙ್ಗದೇವ ಹೇಳಿದ ''ನಾದೇನವ್ಯಜ್ಯತೇವರ್ಣಃಪದಂ, ವರ್ಣಾತ್ಪದಾದ್ವಚಃ, ವಚಸೋವ್ಯವಹಾರೋಽಯಂನಾದಾದೀನಮತೋಜಗತ್''- ಅಂದರೆ, ನಾದದಿಂದ ವರ್ಣ, ವರ್ಣದಿಂದ ಪದ, ಪದಗಳಿಂದ ವಾಕ್, ವಾಕ್‌ನಿಂದ ಲೋಕ ವ್ಯವಹಾರವೆಲ್ಲ ನಡೆಯುವುದು ಎಂದಾದ ಮೇಲೆ, ನಾದವೇ ಬ್ರಹ್ಮಸ್ವರೂಪ. ಬ್ರಹ್ಮಸ್ವರೂಪ ಎಂದ ಮೇಲೆ, ನಾದವು ಸಕಲ ಚರಾಚರಗಳಲ್ಲೂ ವ್ಯಕ್ತಾವ್ಯಕ್ತವಾಗಿ ಇರಲೇಬೇಕು.

ಮಾನವ ತನ್ನ ವಿಕಸನದ ಪಥದಲ್ಲಿ, ಬ್ರಹ್ಮ ಸಾಕ್ಷಾತ್ಕಾರ ಪಡೆಯಲು ಎಡೆಬಿಡದೆ ಉದ್ಯುಕ್ತನಾಗಿಯೇ ಇದ್ದಾನೆ. ಸಂಗೀತ, ಸಾಹಿತ್ಯ, ನೃತ್ಯ, ನಾಟಕ, ಚಿತ್ರಕಲೆಗಳಂಥ ಸೃಜನಾತ್ಮಕ ಹಾದಿಗಳಲ್ಲಿ, ಸತ್ಯ ಸಾಕ್ಷಾತ್ಕಾರಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡವರು ಇದ್ದಾರೆ. ಹೀಗೆ, ಲಲಿತ ಕಲೆಗಳ ಸಾಧನಾ ಪಥದಲ್ಲಿ ನಡೆದವರು, ಕಲಾ ರಸೋತ್ಪತ್ತಿಯಿಂದ ಕಲಾನುಭವ ಪಡೆದು, ಮಾನವೀಯತೆಯ ಸಂಸ್ಕಾರ ಪಡೆಯುತ್ತಾರೆ. ಚಿತ್ತಶುದ್ಧಿಯಾಗಿ, ವಿಶ್ವ ಮಾನವತೆಯ ನೆಲೆಯಲ್ಲಿ ನಿಲ್ಲುತ್ತಾರೆ. 'ಕಲಾ ರತ್ನ ಗಾನಂ' ಎನ್ನುವಂತೆ, ಲಲಿತ ಕಲೆಗಳಲ್ಲಿ ರತ್ನಪ್ರಾಯವಾದ ಸಂಗೀತ ಕಲೆಯು, ಪ್ರಾಚೀನದಿಂದ ನಡೆದ ಮಾನವನ ಹುಡುಕಾಟವಾದ ಸಾಕ್ಷಾತ್ಕಾರ ಹೊಂದಲು ಮಹೋನ್ನತ ಸಾಧನವೆನಿಸಿದೆ. ಅಣು ರೇಣು ತೃಣ ಕಾಷ್ಠಗಳಲ್ಲಿ ಲೀನವಾಗಿರುವನಾದ ಬ್ರಹ್ಮಸ್ವರೂಪವು, ಸಾಧಕರ ನಿಷ್ಠೆ, ಶ್ರದ್ಧೆ, ಪರಿಶ್ರಮಗಳಿಗೆ ಅನುಗುಣವಾಗಿ, ನಾದ ಸುಧೆಯ ಬೆಳಕನ್ನು ಚೆಲ್ಲಬಲ್ಲದು. ಆ ಬೆಳಕನ್ನೇ ದಾರಿ ದೀವಿಗೆಯನ್ನಾಗಿಸಿಕೊಂಡು, ಆ ದಾರಿಯಲ್ಲಿ ಸತತ ಶ್ರಮವಹಿಸುತ್ತಾ ಸಾಗಿದಾಗ, ನಾದಬ್ರಹ್ಮನ ಸಾಕ್ಷಾತ್ಕಾರ ಸಾಧ್ಯ ಎನ್ನುವುದು ಭಾರತೀಯ ಪರಂಪರೆ ಹೇಳುವ ಸಂಗೀತ ಸಾಧನಾ ಮಾರ್ಗ. ಈ ಮಾರ್ಗ ಕಠಿಣವೆನಿಸಿದರೂ, ರಸಭರಿತವಾ ಗಿರುವುದರಿಂದ, ಮನೋಲ್ಲಾಸಕ್ಕೂ ಕಾರಣವಾಗಿ, ಸದ್ಭಾವದ ಔನ್ನತ್ಯಕ್ಕೆ ಕೊಂಡೊಯ್ಯಬಲ್ಲ, ಹೃದಯಂಗಮವಾದ ಭಾವಮಾರ್ಗ ಎನಿಸಿದೆ. ಇದೇ ಕಾರಣಕ್ಕಾಗಿ ಹಲವಾರು ಮಹಾಮಹಿಮರು ಈ ಕಲಾ ಸಾಧನ ಮಾರ್ಗವನ್ನು, ಪೋಷಿಸಿ, ಬೆಳೆಸಿ, ಸಂಪತ್ಭರಿತವಾಗಿಸಿದ್ದಾರೆ.

ಬ್ರಹ್ಮಾಂಡವನ್ನು ಆವರಿಸಿ, ಎಲ್ಲೆಡೆಯೂ ಸೇರಿರುವ ನಾದವು, ಸಮಾನ ಸ್ಥಿತಿಯ ಕಂಪನ ಅಥವಾ ಸ್ಪಂದನಗಳಿಂದ ಅವಿಚ್ಛಿನ್ನವಾಗಿ ಹೊರಡುವ, ಸುಶ್ರಾವ್ಯವಾದ ಅಥವಾ ಶ್ರವಣ ಯೋಗ್ಯವಾದ ಶಬ್ದ ಅಥವಾ ಧ್ವನಿ. 'ನಾದಾದೀನಂ ಜಗತ್ಸರ್ವಂ' ಎನ್ನುವಂತೆ ಸರ್ವ ದೇಶ, ಸರ್ವಕಾಲಗಳಲ್ಲೂ, ಸರ್ವಾಕರ್ಷಕವಾಗಿ, ಸರ್ವಾದರಣೀಯವಾಗಿದೆ ನಾದ. ಸಂಗೀತವು, ಸ್ಥಳೀಯತೆಗೆ ಅನುಗುಣವಾಗಿ, ವಿಕಸನ ಹೊಂದುತ್ತಾ, ಜಗತ್ತಿನ ವಿಭಿನ್ನ ಸ್ಥಿತಿಗತಿಗಳಲ್ಲಿ, ನಿರ್ವಿಕಾರವಾಗಿ ಭಾಗಿಯಾಗಿ, ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿ ಇದೆ. ಈ ಸಂಗೀತವು ಪ್ರತಿ ಮನದ ಭಾವವಾಗಿ, ಸುಧಾಸ್ವಾದನಕ್ಕೆ ಕಾರಣವಾಗಿ, ನೆಮ್ಮದಿಯ ಸೆಲೆಯಾಗಿ, ಪರಿಪೂರ್ಣ ಕಲೆ ಎನಿಸಿದೆ. 'ಕಲೆ ಇಲ್ಲದ ಬದುಕು ಬರಡು' ಎನ್ನುವುದು ಕಲಾವಿದರ, ಕಲಾಭಿಮಾನಿಗಳೆಲ್ಲರ ಒಮ್ಮತದ ನಿಲುವು. ವಿಶ್ವದೆಲ್ಲೆಡೆಯೂ ಸಂಗೀತ ಅನುರಣಿಸುತ್ತಿದ್ದರೂ, ಭಾರತೀಯ ಸಂಗೀತವು ಜಾಗತಿಕ ಮಟ್ಟದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಭಾರತದಲ್ಲಿ ಸಂಗೀತವು ಎಂದಿಗೂ ಕೇವಲ ಮನರಂಜನೆಯ ಸಾಮಗ್ರಿ ಆಗಲಿಲ್ಲ. ಇಲ್ಲಿ, ಸಂಗೀತವು, ಸತ್ಯದರ್ಶನಕ್ಕಾಗಿ ನಡೆದ ಆವಿಷ್ಕಾರದ ಪಥವೆನಿಸಿ, ಅಧ್ಯಾತ್ಮದ ಬೆಳಕನ್ನು ಹೊಮ್ಮಿಸುತ್ತಿದೆ. ಜತೆಗೆ, ರಾಷ್ಟ್ರೀಯ ಏಕತೆಗೂ ಕಾರಣವಾಗಿ, ರಾಷ್ಟ್ರದ ಅಸ್ಮಿತೆಯನ್ನು ಸಾರುವಲ್ಲಿ ಮಹತ್ತರ ಪಾತ್ರವಹಿಸಿದೆ. ಒಂದು ರಾಷ್ಟ್ರವು ವಿಶ್ವ ಮಟ್ಟದಲ್ಲಿ ಗುರುತಿಸಿಕೊಳ್ಳುವಾಗ, ಅದಕ್ಕೆ ಹಲವಾರು ಅಂಶಗಳು ಒತ್ತಾಸೆಯಾಗಿ ನಿಲ್ಲುತ್ತವೆ. ಆ ರಾಷ್ಟ್ರದ ನೆಲ, ಜಲ, ಸಂಸ್ಕೃತಿ, ಸಾಮಾಜಿಕ ಸ್ಥಿತಿಗತಿಗಳು, ರಾಜಕೀಯ ಪರಿಸ್ಥಿತಿಗಳು, ಇನ್ನೂ ಹಲವಾರು ಅಂಶಗಳು ಪಾತ್ರವಹಿಸುತ್ತವೆ. ಇವೆಲ್ಲವುಗಳಲ್ಲಿ, ರಾಷ್ಟ್ರವೊಂದು ವೈಶಿಷ್ಟ್ಯದಿಂದ ಕಂಗೊಳಿಸಬೇಕಾದರೆ, ಮುಖ್ಯವಾಗಿ, ಅಲ್ಲಿನ ಸಂಸ್ಕೃತಿ ಸಂಪತ್ಭರಿತವಾಗಿರಬೇಕು. ಭಾರತೀಯ ಸಂಸ್ಕೃತಿಯನ್ನು, ಜಾಗತಿಕವಾಗಿ ಉನ್ನತ ಮಟ್ಟದಲ್ಲಿ ನಿಲ್ಲಿಸಿರುವುದು ಇಲ್ಲಿನ ಲಲಿತ ಕಲೆಗಳೇ. ಅದರಲ್ಲೂ ಸಂಗೀತ ಅತ್ಯಂತ ಮಹತ್ವದ ಪಾತ್ರ ವಹಿಸಿದೆ. ಭಾರತೀಯ ಸಂಗೀತದಲ್ಲಿ ಅಡಗಿರುವ ಜ್ಞಾನ-ವಿಜ್ಞಾನಗಳು, ವಿಶ್ವ ಮಟ್ಟದಲ್ಲಿ ಕಲಾಸಕ್ತರನ್ನು ಆಕರ್ಷಿಸಿರುವುದು ಆಶ್ಚರ್ಯವೇನಲ್ಲ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಯಾರಿಗೂ ಬೇಡವಾಗಿರುವ ಹಳೆಯ ವಿಚಾರ (5)
5. ಸರದ ನಡುವಿರುವ ಸಂಭ್ರಮ (4)
6. ಭಯಪಡು ಅಥವಾ ಹಿಂಜರಿ (3)
7. ಮಕ್ಕಳು ಪಾಠ ಕೇಳುವ ಕಕ್ಷೆ (4)
11. ನಾಟ್ಯಶಾಸ್ತ್ರ ಬರೆದ ಮುನಿ (3)
13. ಅಂಕೆ, ಕಡಿವಾಣ (3)
14. ಮರವೇರಿದೆ ಭ್ರಮರ (3)
17. ಒಟ್ಟುಗೂಡಿಸುವುದು ಎಂದರ್ಥ (3)
19. ಪಣತೊಟ್ಟು ಮಾಡಿದ ಅಳತೆ (4)
21. ತೀಕ್ಷ್ಣವಾದ ದೃಷ್ಟಿಯನ್ನು ಹೀಗೆ ಹೇಳಬಹುದು (5)

ಮೇಲಿಂದ ಕೆಳಕ್ಕೆ

2. ಒಂದೆಡೆಯಿಂದ ಮತ್ತೊಂದೆಡೆಗೆ ಹೋಗು (3)
3. ಬಾವಿಯಿಂದ ನೀರೆತ್ತುವ ಸಾಧನ (2)
4. ತಲೆಗೆ ಸುತ್ತಿಕೊಳ್ಳುವ ರುಮಾಲು (3)
5. ಸುಲಭ ಅಥವಾ ಸಲೀಸು (3)
6. ಸಂಭವಿಸಲು ಸಾಧ್ಯವಿಲ್ಲದ್ದು (4)
8. ಬಟ್ಟೆ ಒಗೆದು ಶುಚಿ ಮಾಡುವವನು (3)
9. ಎರಡಕ್ಷರದ ಎಳ್ಳು (2)
10. ಗುಂಪು ಅಥವಾ ಸಮೂಹ (4)
12. ಕತ್ತಲೆಯೂ ಆಗಬಲ್ಲ ಅಜ್ಞಾನ (2)
15. ಜನರ ಗುಂಪಿನ ಮುಖಂಡ (3)
16. ವಿಜ್ಞಾಪನೆ ಅಥವಾ ಬಿನ್ನಹ (3)
18. ಗಾಂಧೀಜಿ ನೂಲು ತೆಗೆದದ್ದು ಇದರ ನೆರವಿನಿಂದ (3)
20. ಆನೆ, ಕುದುರೆಗಳ ಮಲ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1.ಸಂಪ್ರದಾಯ 5.ಸಡಗರ 6.ಅಂಜಿಕೆ 7.ತರಗತಿ 11.ಭರತ 13.ಲಗಾಮು 14.ಜೇನುಹುಳ 17.ಸಂಕಲನ 19.ಬಡ್ಡಿದರ 21.ಹದ್ದಿನಕಣ್ಣು

ಮೇಲಿಂದ ಕೆಳಕ್ಕೆ: 2.ಸಂಚರಿಸು 3.ರಾಟೆ 4.ಪೇಟ 5.ಸರಳ 6.ಅಸಾಧ್ಯ 8.ಅಗಸ 9.ಎಳು 10.ಸಮುದಾಯ 12.ತಮ 15.ನಾಯಕ 16.ಮನವಿ 18.ಚರಕ 20.ಲದ್ದಿ

ಕರ್ಮ ಮರಳಿ ಬರುತ್ತದೆ, ಮರೆಯದಿರಿ...

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ

ಒಂದು ಬೆಟ್ಟದ ತಪ್ಪಲಿನಲ್ಲಿ ಒಬ್ಬ ಗುರು ತನ್ನ ಶಿಷ್ಯನೊಂದಿಗೆ ಜೀವಿಸುತ್ತಿದ್ದನು. ಗುರು-ಶಿಷ್ಯರು ಕಾಡಿನಲ್ಲಿರುವ ಹಣ್ಣು- ಹಂಪಲು, ಗೆಡ್ಡೆ-ಗೆಣಸುಗಳನ್ನು ತಿಂದುಕೊಂಡು ಸ್ನಾನ-ಪೂಜೆ-ಧ್ಯಾನದಲ್ಲಿ ನಿರತರಾಗಿದ್ದರು. ಗುರುಗಳು ಮಹಾಜ್ಞಾನಿಗಳು, ಅವರಲ್ಲಿ ಭೂತ ಭವಿಷ್ಯತ್ ಜ್ಞಾನವಿತ್ತು, ಒಂದು ವಿಶೇಷ ಶಕ್ತಿಯೂ ಇತ್ತು. ಅವರು ಧ್ಯಾನದಲ್ಲಿ ಕುಳಿತಾಗ ಮುಂದೇನಾಗುತ್ತದೆ ಎಂಬ ಭವಿಷ್ಯ ಗೊತ್ತಾಗುತ್ತಿತ್ತು. ಒಮ್ಮೆ ಧ್ಯಾನದಲ್ಲಿ ನಿರತರಾಗಿದ್ದಾಗ, ಇನ್ನು ಎಂಟು ದಿನಕ್ಕೆ ಸರಿಯಾಗಿ ತಮ್ಮ ಶಿಷ್ಯ ಮರಣ ಹೊಂದುತ್ತಾನೆ ಎಂದು ಅವರಿಗೆ ತಿಳಿಯಿತು.



ಇದರಿಂದ ಗುರುಗಳಿಗೆ ಬಹಳ ದುಃಖವಾಯಿತು. ಆತ ಅವರ ಪ್ರೀತಿಯ ಶಿಷ್ಯ, ಅವನಿಗೆ ಸಾವು ಬರುತ್ತದೆ ಎಂದಲ್ಲ; ಆತನದು ಇನ್ನೂ ಆಡುವ ವಯಸ್ಸು, ಅದಾಗಲೇ ಸಾವು ಬಂದಿ ತಲ್ಲ ಎಂಬ ಕಾರಣಕ್ಕೆ. ಹೀಗಾಗಿ ಅವರು ಶಿಷ್ಯ ನನ್ನು ಕರೆದು, ''ಮಗು, ನೀನು ನಿನ್ನ ಹುಟ್ಟೂ ರಿಗೆ ಹೋಗಿ ತಂದೆ-ತಾಯಿ, ಒಡಹುಟ್ಟಿದವರೊಂದಿಗೆ ಎಂಟು ದಿನ ಕಳೆದು ಬಾ'' ಎಂದರು.

ಇದರಿಂದ ಶಿಷ್ಯನಿಗೆ ಖುಷಿಯಾಗಿ, ''ಗುರುಗಳೇ, ನಾನೇ ಈ ವಿಚಾರವನ್ನು ಕೇಳಬೇಕೆಂದುಕೊಂಡಿದ್ದೆ. ನನಗೆ ನನ್ನ ಅಪ್ಪ-ಅಮ್ಮ, ಸಹೋದರರನ್ನು ನೋಡಬೇಕೆಂದು ತುಂಬಾ ಆಸೆಯಾಗಿತ್ತು. ಹಾಗಾದರೆ ಹೋಗಿ ಬರುತ್ತೇನೆ ಗುರುಗಳೇ'' ಎಂದು ಗುರುಗಳ ಕಾಲಿಗೆ ನಮಸ್ಕರಿಸಿ ಹೊರಟನು. ಗುರುಗಳು, ''ಹೋಗಿ ಬಾ ಮಗು, ಎಂಟನೇ ದಿನ ಸೂರ್ಯಾಸ್ತವಾಗುವುದರೊಳಗೆ ಇಲ್ಲಿರಬೇಕು'' ಎಂದರು. ''ಆಯ್ತು ಗುರುಗಳೇ, ನೀವು ನಿಮ್ಮ ಆರೋಗ್ಯವನ್ನು ನೋಡಿಕೊಳ್ಳಿ, ನಿಮಗೆ ವಯಸ್ಸಾಗಿದೆ. ನಿಮ್ಮ ಕೈಯಲ್ಲಿ ಎಷ್ಟು ಆಗುತ್ತೋ ಅಷ್ಟೇ ಕೆಲಸಗಳನ್ನು ಮಾಡಿ, ಉಳಿದ ಕೆಲಸಗಳನ್ನು ನಾನು ಬಂದ ಮೇಲೆ ಮಾಡುತ್ತೇನೆ'' ಎಂದು ಗುರುಗಳ ಅನುಮತಿ ಪಡೆದು ಊರಿಗೆ ಹೊರಟನು ಶಿಷ್ಯ.

ಊರಿಗೆ ಹೋಗುವ ನಡುವೆ ಒಂದು ನದಿ ಅಡ್ಡ ಬರುತ್ತದೆ, ಅದನ್ನು ದಾಟಿ ಹೋಗಬೇಕಿತ್ತು. ಶಿಷ್ಯ ನದಿಯ ಸಮೀಪ ಬಂದನು. ನದಿ ದಡದಲ್ಲಿ ಮಣ್ಣಿನ ಹುತ್ತವಿದ್ದು ಅದರೊಳಗೆ ಲಕ್ಷಾಂತರ ಇರುವೆಗಳು ಹರಿದಾಡುತ್ತಿದ್ದವು. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಸಾಲಾಗಿ ಓಡಾಡುತ್ತಿದ್ದ ಇರುವೆಗಳ ಗೂಡಿನ ತುಂಬಾ ಇರುವೆಗಳು ತುಂಬಿರುವುದನ್ನು ನೋಡಿದ. ಅವುಗಳನ್ನು ನೋಡಿ ಅವನಿಗೆ ಖುಷಿಯಾಯಿತು. ಸದಾ ಚಟುವಟಿಕೆಯಿಂದ ಇರುತ್ತವೆ ಎಂದುಕೊಳ್ಳುತ್ತಾ ನದಿಯ ಕಡೆ ನೋಡುತ್ತಾನೆ. ನದಿಯ ನೀರು ಏರುತ್ತಿದೆ. ಲಕ್ಷಾಂತರ ಇರುವೆಗಳು ಗೂಡು ಸಮೇತ ನೀರಿನಲ್ಲಿ ತೇಲಿ ಹೋಗುತ್ತವೆ, ಏನು ಮಾಡುವುದೆಂದು ಯೋಚಿಸಿ, ತಕ್ಷಣ ತಾನು ಉಟ್ಟಿದ ಪಂಚೆಯನ್ನು ಬಿಚ್ಚಿದನು. ಅದನ್ನು ಮಡಚಿ ಇರುವೆ ಗೂಡಿನ ಸುತ್ತ ಸುತ್ತಿ ಗೂಡನ್ನು ಮುಚ್ಚಿಬಿಟ್ಟನು. ಪಂಚೆ ಹಾರಿಹೋಗದಂತೆ ಅದರ ಮೇಲೆ ಸುತ್ತಲೂ ಕಲ್ಲುಗಳನ್ನು ಒಂದರ ಪಕ್ಕ ಒಂದು ಜೋಡಿಸಿಟ್ಟನು. ಒಳಗೆ ನೀರು ಸೇರಿದರೆ ಹೊರಹೋಗಲು ಒಂದು ಸಣ್ಣ ತೂತು ಮಾಡಿದನು. ನದಿ ರಭಸದಿಂದ ಏರುತ್ತಾ ಗೂಡಿನ ಸುತ್ತ ಬಂದಿತು. ಗೂಡೊಳಗೆ ಬರಲಿಲ್ಲ, ಹೀಗಾಗಿ ಸಮಾಧಾನದಿಂದ ಮನೆ ಸೇರಿದನು.

ಮನೆಯಲ್ಲಿ ತಂದೆ-ತಾಯಿ, ಒಡಹುಟ್ಟಿದವರ ಜತೆ ಹಾಯಾಗಿ ಎಂಟು ದಿನ ಕಳೆದನು. ಆಶ್ರಮಕ್ಕೆ ಮರಳಬೇಕೆಂಬುದು ಅವನಿಗೆ ನೆನಪಾಯಿತು. ಈ ಕಡೆ ಗುರುಗಳು ಎಂಟನೇ ದಿನವೂ ಆಶ್ರಮಕ್ಕೆ ಶಿಷ್ಯ ಬಾರದಿರುವುದನ್ನು ನೋಡಿ ಅವನು ಸತ್ತುಹೋಗಿರಬಹುದು ಅಂದುಕೊಂಡರು. ಶಿಷ್ಯನ ಅಂತಿಮ ದರ್ಶನವನ್ನು ಮಾಡಲಾಗಲಿಲ್ಲ ಎಂದು ಚಿಂತೆಯಿಂದ ಆಶ್ರಮದಿಂದ ನದಿಯ ಕಡೆಗೆ ಹೊರಟಿದ್ದರು. ಮುಸ್ಸಂಜೆ ಹೊತ್ತಲ್ಲಿ ದೂರದಿಂದ ಯಾರೋ ಬರುವುದು ಕಂಡಿತು. ಗುರುಗಳು ಕೈಯನ್ನು ಹಣೆಗೆ ಅಡ್ಡ ಕೊಟ್ಟು ಕಣ್ಣು ಕಿರಿದಾಗಿಸಿ ನೋಡಿದರು. ಓಡುವ ರೀತಿಯಲ್ಲೇ ನಡೆದುಕೊಂಡು ಬಂದ ಶಿಷ್ಯನನ್ನು ಆಪಾದಮಸ್ತಕ ನೋಡಿ ಬಿಗಿಯಾಗಿ ತಬ್ಬಿಕೊಂಡರು. ಸ್ವಲ್ಪ ಸುಧಾರಿಸಿಕೊಂಡ ಮೇಲೆ ಶಿಷ್ಯನಿಂದ ನಡೆದದ್ದೆಲ್ಲವನ್ನೂ ತಿಳಿದುಕೊಂಡರು. ತಮ್ಮ ಶಿಷ್ಯ ಲಕ್ಷಾಂತರ ಇರುವೆಗಳ ಜೀವವನ್ನು ಉಳಿಸಿದ್ದಾನೆ. ಈ ಪುಣ್ಯಕರ್ಮ ಫಲದಿಂದ ಶಿಷ್ಯನಿಗೆ ದೀರ್ಘಾಯುಷ್ಯ ಸಿಕ್ಕಿತು ಎಂದವರಿಗೆ ಅರ್ಥವಾಗಿತ್ತು.

ನಾವು ಮಾಡುವ ಪ್ರತಿಯೊಂದು ಒಳ್ಳೆಯ ಕೆಲಸಕ್ಕೆ ಒಳ್ಳೆಯ ಪ್ರತಿಫಲ ಸಿಕ್ಕೇ ಸಿಗುತ್ತದೆ. ಅಂತೆಯೇ ಕೆಟ್ಟ ಕೆಲಸಗಳಿಗೂ ಅದರದ್ದೇ ಆದ ಕರ್ಮ ತಟ್ಟದೆ ಬಿಡುವುದಿಲ್ಲ. ನಿಧಾನವಾಗಿಯಾದರೂ, ಕೆಲವೊಮ್ಮೆ ಜನ್ಮಾಂತರಗಳಾದರೂ ಸರಿ, ಕರ್ಮ ಮರಳಿ ಬರುತ್ತದೆ. ಆದ್ದರಿಂದ, ಮಾಡುವ ಪ್ರತಿ ಯೋಚನೆ ಮತ್ತು ಕೆಲಸದ ಬಗ್ಗೆಯೂ ಜಾಗೃತರಾಗಿರೋಣ...

ಸಂಬಂಧಗಳ ಕೊಂಡಿ ಕಳಚದಿರಲಿ

• ರಂಗನಾಥ್ ಗುಡಿಮನಿ

ಈ ಬದುಕು ಒಂದು ಒಗಟಿನಂತೆ. ಒಗಟು ಬಿಡಿಸುತ್ತಾ ಹೋದಂತೆ ಮತ್ತಷ್ಟು ಸುಂದರ, ಸುಮಧುರ. ಪ್ರೀತಿ, ಸ್ನೇಹ, ನಂಬಿಕೆ, ವಿಶ್ವಾಸ ಹಾಗೂ ಸಂಬಂಧಗಳೆಂಬ ಎಳೆಗಳಿಂದ ಬದುಕೆಂಬ ಗೂಡನ್ನು ನೇಯಲಾಗಿದೆ. ನಮ್ಮೆಲ್ಲರ ನಿಜವಾದ ಆಸ್ತಿ ಎಂದರೆ ಸಂಬಂಧಗಳು. ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ನಡುವಿನ ನಂಟಿಗೆ ಸಂಬಂಧ ಎನ್ನುವರು. ಇವುಗಳು ಇರದೇ ಹೋದರೆ ಒಮ್ಮೊಮ್ಮೆ ಬದುಕೇ ಶೂನ್ಯ ಎನಿಸಿ, ಜುಗುಪ್ಸೆಯ ಮಡಿಲು ಸೇರಿಕೊಂಡು ಬಿಡುತ್ತೇವೆ. ಅಂದರೆ ಇಷ್ಟೇ ಅರ್ಥ- ಸಂಬಂಧಗಳು ಸರ್ವರಿಗೂ ಮುಖ್ಯವಾಗಿ ಬೇಕೇ ಬೇಕು. ಸಮಾಜದಲ್ಲಿ ಸಂಬಂಧಗಳನ್ನು ಉಳಿಸಿ, ಬಳಸಿ, ಬೆಳೆಸಿಕೊಂಡು ಹೋಗದಿದ್ದರೆ ಸೊಬಗಿನ ಸಮಾಜವೇ ಸ್ಮಶಾನದಂತೆ ಭಾಸವಾಗುವುದು. ಸಂಬಂಧಗಳಿಂದಲೇ ನಾವು, ನೀವೆಲ್ಲ, ಅವರು, ಇವರೆಲ್ಲ.

ಸಂಬಂಧ ಎನ್ನುವುದು ನಮ್ಮ ನಿಮ್ಮ ನಡುವೆ ಸೊಂಪಾಗಿ ಅರಳಿ ನಿಂತ ಕೆಂಗುಲಾಬಿ. ತಾಯಿ-ಮಗು, ಅಣ್ಣ-ತಂಗಿ, ಅಣ್ಣ-ತಮ್ಮ, ಅಕ್ಕ-ತಮ್ಮ, ಪತಿ-ಪತ್ನಿ, ಗುರು-ಶಿಷ್ಯರು ಇಂಥ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಸಂಬಂಧಗಳಲ್ಲಿ ವಿಷ ತುಂಬಿಕೊಂಡು ನಮ್ಮ ಭವ್ಯ ಬದುಕಿಗೆ ನಾವೇ ಚರಮಗೀತೆ ಹಾಡುತ್ತಿದ್ದೇವೆ. ಇಂದಿನ ಸಂಬಂಧಗಳು ತಾತ್ಕಾಲಿಕ ಹಾಗೂ ಯಾಂತ್ರಿಕವಾಗಿದ್ದು ಅಲ್ಪ ಕಾಲದವಾಗಿವೆ. ಮಾನವೀಯ ಸಂಬಂಧಗಳು ಭದ್ರವಾಗಿದ್ದರೆ ಬದುಕು ಸುಭದ್ರವಾಗಿರಲು ಸಾಧ್ಯ.

ಪ್ರಸ್ತುತ ಹೆಚ್ಚುತ್ತಿರುವ ವೃದ್ಧಾಶ್ರಮ, ಅನಾಥಾಶ್ರಮಗಳೇ ಸಂಬಂಧಗಳ ಕುಸಿತಕ್ಕೆ ದೊಡ್ಡ ನಿದರ್ಶನ. ಈಗಿನ ಮಕ್ಕಳು ಕೂಡ ಶೈಕ್ಷಣಿಕವಾಗಿ ಎಷ್ಟೇ ಮುಂದೆ ಇದ್ದರೂ, ಸಂಬಂಧಗಳ ವಿಷಯಗಳಲ್ಲಿ ಹಿಂದೆ ಬಿದ್ದಿದ್ದಾರೆ. ಸಂಬಂಧಗಳು ಸಲೀಸಾಗಿ ಹೊಸೆದು, ಬೆಸೆದ ಮೇಲೂ ಅವುಗಳಿಗೆ ಕಿಂಚಿತ್ತೂ ಚ್ಯುತಿ ಬಾರದಂತೆ ಕಾಪಿಟ್ಟುಕೊಳ್ಳುವುದರಲ್ಲಿ ಎಡವುತ್ತಿದ್ದೇವೆ. ಇದೇ ರೀತಿ ದಿನದಿಂದ ದಿನಕ್ಕೆ ಸಂಬಂಧಗಳು ಕ್ಷೀಣಿಸುತ್ತಾ, ಹಳಸುತ್ತಾ ಹೋದರೆ ಮುಂದೆ ಒಂದಲ್ಲಾ ಒಂದು ದಿನ ಅದರ ಪ್ರತಿಫಲದ ಪಶ್ಚಾತ್ತಾಪವನ್ನು ಅನುಭವಿಸಬೇಕಾಗುತ್ತದೆ. ಇನ್ನಾದರೂ ಎಚ್ಚೆತ್ತುಕೊಂಡು ಸಂಬಂಧಗಳನ್ನು ಬೆಳೆಸಿ, ಗಟ್ಟಿಗೊಳಿಸಲು ಮನಸ್ಸು ಮಾಡೋಣ. ಎಲ್ಲ ಸಂಬಂಧಗಳಿಗೂ ನಾಂದಿ ಹಾಡಿ ಬದ್ಧವಾಗಿರೋಣ....

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಲಕ್ಷ್ಯಸೇನ್ ಸೆಮಿಫೈನಲ್‌ಗೆ



ಸಿಡ್ನಿ: ವಿಶ್ವ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತ ಶಟ್ಲರ್ ಲಕ್ಷ್ಯ ಸೇನ್ ಶುಕ್ರವಾರ ಇಲ್ಲಿ ನಡೆದ ಆಸ್ಟ್ರೇಲಿಯಾ ಓಪನ್ ಸೂಪರ್ 500 ಟೂರ್ನಮೆಂಟ್‌ನಲ್ಲಿ ಪುರುಷರ ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಕ್ವಾರ್ಟರ್ ಫೈನಲ್‌ನಲ್ಲಿ ಸೇನ್ ಭಾರತದವರೇ ಆದ ಆಯುಷ್ ಶೆಟ್ಟಿ ಅವರನ್ನು ನೇರ ಗೇಮ್‌ಗಳಲ್ಲಿ ಸೋಲಿಸಿದರು. ಈ ವರ್ಷದ ಆರಂಭದಲ್ಲಿ ಹಾಂಕಾಂಗ್ ಓಪನ್‌ನಲ್ಲಿ 20 ವರ್ಷದ ಶೆಟ್ಟಿ ಅವರನ್ನು ಸೋಲಿಸಿದ್ದ ಏಳನೇ ಶ್ರೇಯಾಂಕಿತ ಆಟಗಾರ, 23-21, 21-11 ಅಂತರದಲ್ಲಿ ಗೆದ್ದು ಎರಡನೇ ಬಾರಿ ಗೆಲುವು ಸಾಧಿಸಿದರು. ಸೇನ್ ಮುಂದಿನ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಚೀನಾ-ತೈಪೆಯ ಚೌ ಟಿಯೆನ್ ಚೆನ್ ವಿರುದ್ಧ ಸೆಣಸಲಿದ್ದಾರೆ. ಭಾರತದ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ, ಸೆಮಿಫೈನಲ್‌ನಲ್ಲಿ ಸ್ಥಾನ ಪಡೆಯುವ ಭರವಸೆಯಲ್ಲಿ ಐದನೇ ಶ್ರೇಯಾಂಕದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ಶೋಹಿಬುಲ್ ಫಿಕ್ರಿ ಅವರನ್ನು ಎದುರಿಸಲಿದ್ದಾರೆ.

ನ.27ಕ್ಕೆ ಡಬ್ಲ್ಯುಪಿಎಲ್ ಹರಾಜು ಪ್ರಕ್ರಿಯೆ

ದೆಹಲಿ: ಬಹುನಿರೀಕ್ಷಿತ ನಾಲ್ಕನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್ ಹೊರಬಿದ್ದಿದ್ದು, 73 ಸ್ಥಾನಗಳಿಗೆ 277 ಆಟಗಾರ್ತಿಯರು ಸ್ಪರ್ಧಿಸುತ್ತಿದ್ದು, ನವೆಂಬರ್ 27ರಂದು ದೆಹಲಿಯಲ್ಲಿ ಹರಾಜು ನಡೆಯಲಿದೆ. ಹರಾಜು ಪಟ್ಟಿಯಲ್ಲಿ 194 ಭಾರತೀಯ ಆಟಗಾರ್ತಿಯರು ಸೇರಿದ್ದಾರೆ. ಇದರಲ್ಲಿ 52 ಕ್ಯಾಪ್ಡ್ ಮತ್ತು 142 ಅನ್‌ಕ್ಯಾಪ್ಡ್ ಆಟಗಾರ್ತಿಯರಿದ್ದಾರೆ. 66 ವಿದೇಶಿ ಆಟಗಾರ್ತಿಯರ ಪೈಕಿ 17 ಅನ್‌ಕ್ಯಾಪ್ಡ್ ಆಟಗಾರ್ತಿಯರಿದ್ದಾರೆ. ಹತ್ತೊಂಬತ್ತು ಆಟಗಾರ್ತಿಯರು ಗರಿಷ್ಠ ಮೂಲ ಬೆಲೆ 50 ಲಕ್ಷ ರೂ.ಗಳ ಪಟ್ಟಿಯಲ್ಲಿದ್ದಾರೆ. ಉಳಿದಂತೆ 11 ಆಟಗಾರ್ತಿಯರು 40 ಲಕ್ಷ ರೂ.ಗಳ ವಿಭಾಗದಲ್ಲಿ ಮತ್ತು 88 ಆಟಗಾರ್ತಿಯರು 30 ಲಕ್ಷ ರೂ.ಗಳ ಗುಂಪಿನಲ್ಲಿ ಸ್ಥಾನ ಪಡೆದಿದ್ದಾರೆ. ಮಧ್ಯಾಹ್ನ 3:30 ಕ್ಕೆ ಪ್ರಾರಂಭವಾಗಲಿರುವ ಹರಾಜು, ವಿಶ್ವದ ಎಂಟು ಅಗ್ರ ಮಹಿಳಾ ಕ್ರಿಕೆಟಿಗರನ್ನು ಒಳಗೊಂಡ ಉನ್ನತ ಮಟ್ಟದ ಗುಂಪಿನೊಂದಿಗೆ ಪ್ರಾರಂಭವಾಗಲಿದೆ. ಈ ಪಟ್ಟಿಯಲ್ಲಿ ಭಾರತದ ದೀಪ್ತಿ ಶರ್ಮಾ ಮತ್ತು ರೇಣುಕಾ ಸಿಂಗ್, ನ್ಯೂಜಿಲೆಂಡ್ ತಾರೆಯರಾದ ಸೋಫಿ ಡಿವೈನ್ ಮತ್ತು ಅಮೆಲಿಯಾ ಕೆರ್, ಇಂಗ್ಲೆಂಡ್‌ನ ಪ್ರಮುಖ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್, ಆಸ್ಟ್ರೇಲಿಯಾದ ಅನುಭವಿ ಜೋಡಿ ಅಲಿಸಾ ಹೀಲಿ ಮತ್ತು ಮೆಗ್ ಲ್ಯಾನಿಂಗ್, ದಕ್ಷಿಣ ಆಫ್ರಿಕಾದ ಆರಂಭಿಕ ಆಟಗಾರ್ತಿ ಲಾರಾ ವೋಲ್ವಾರ್ಡ್ಟ್ ಸೇರಿದ್ದಾರೆ.

ಇಂದಿನಿಂದ 2ನೇ ಟೆಸ್ಟ್: ಸರಣಿ ಗೆಲುವಿನತ್ತ ದ.ಆಫ್ರಿಕಾ ಚಿತ್ತ

ರಿಷಬ್ ಬಳಗಕ್ಕೆ ಗೆಲ್ಲೋ ಸವಾಲು

ಗುವಾಹಟಿ: ಕೋಲ್ಕತಾದ ಈಡನ್ ಗಾರ್ಡನ್ ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಅನಿರೀಕ್ಷಿತ ಸೋಲು ಕಂಡ ಭಾರತ ತಂಡ ಗುವಾಹಟಿಯಲ್ಲಿ ಇಂದಿನಿಂದ (ನವೆಂಬರ್ 22) ಪ್ರಾರಂಭ ಆಗಲಿ ರುವ ಫ್ರೀಡಂ ಟ್ರೋಫಿ ಟೆಸ್ಟ್ ಸರಣಿಯ ಎರಡನೇ ಮತ್ತು ಅಂತಿಮ ಪಂದ್ಯದಲ್ಲಿ ಪ್ರವಾಸಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲು ಸಜ್ಜಾಗಿದೆ. ಗಾಯಾಳು ನಾಯಕ ಶುಭಮನ್ ಗಿಲ್ ಪಂದ್ಯದಿಂದ ಹೊರಗುಳಿಯಲಿದ್ದು ವಿಕೆಟ್ ಕೀಪರ್ ಬ್ಯಾಟರ್ ರಿಷಬ್ ಪಂತ್ ಅವರು ತಂಡದ ನಾಯಕತ್ವವನ್ನು ವಹಿಸಲಿದ್ದಾರೆ.

ಮೊದಲ ಪಂದ್ಯವನ್ನು 30 ರನ್‌ಗಳ ಅಂತರದಿಂದ ಗೆದ್ದ ದಕ್ಷಿಣ ಆಫ್ರಿಕಾ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿದ್ದು, ಎರಡನೇ ಪಂದ್ಯವನ್ನೂ ಗೆದ್ದು ಇತಿಹಾಸ ನಿರ್ಮಿಸುವ ಇರಾದೆ ಹೊಂದಿದೆ. ಒಂದು ವೇಳೆ ಟೆಂಬಾ ಬವುಮಾ ಬಳಗ ಈ ಪಂದ್ಯವನ್ನು ಡ್ರಾದಲ್ಲಿ ಕೊನೆಗೊಳಿಸಿದರೂ ಸರಣಿ ಗೆಲ್ಲಲಿದೆ. ಆದರೆ ಭಾರತ ತಂಡಕ್ಕೆ ಸರಣಿ ಸಮಬಲಗೊಳಿಸಲು ಈ ಪಂದ್ಯವನ್ನು ಗೆಲ್ಲುವುದು ಅನಿವಾರ್ಯ.

ನಾಯಕ ಶುಭಮನ್ ಗಿಲ್ ಅವರು ಕುತ್ತಿಗೆ ನೋವಿನಿಂದ ಹೊರಗುಳಿದಿರುವುದು ಟೀಮ್ ಇಂಡಿಯಾಕ್ಕೆ ದೊಡ್ಡ ಹಿನ್ನಡೆಯಾಗಿದೆ. ಅವರ ಬದಲಿಗೆ ಅಗ್ರ ಕ್ರಮಾಂಕದ ಎಡಗೈ ಬ್ಯಾಟರ್ ಸಾಯಿ ಸುದರ್ಶನ್ ಅವರು ಕಣಕ್ಕಿಳಿಯಲಿದ್ದಾರೆ. ದಕ್ಷಿಣ ಆಫ್ರಿಕಾ ತಂಡದಲ್ಲೂ ಗಾಯದ ಸಮಸ್ಯೆಗಳು ಹೇರಳವಾಗಿದೆ. ಪ್ರಮುಖ ವೇಗದ ಬೌಲರ್ ಕಗಿಸೊ ರಬಾಡ ಅವರು ತಾಲೀಮಿನ ವೇಳೆ ಉಂಟಾಗಿರುವ ಪಕ್ಕೆಲುಬಿನ ಗಾಯದಿಂದ ಚೇತರಿಸಿಕೊಳ್ಳದ ಕಾರಣ ಪಂದ್ಯದಿಂದ ಹೊರಗುಳಿದಿದ್ದಾರೆ.

ಹೇಗಿದೆ ಗುವಾಹಟಿ ಪಿಚ್?: ಗುವಾಹಟಿಯ ಬಾರಸಾಪಾರಾ ಕ್ರೀಡಾಂಗಣದ ಪಿಚ್ ಸಾಮಾನ್ಯ ವಾಗಿ ಬ್ಯಾಟಿಂಗ್‌ಗೆ ಅನುಕೂಲಕರವಾಗಿದ್ದು ಇಲ್ಲಿ ಉತ್ತಮ ಮೊತ್ತ ಬರಬಹುದು ಎಂಬ ನಿರೀಕ್ಷೆಯಿದೆ. ಆದಾಗ್ಯೂ, ಬೆಳಗಿನ ಜಾವದ ವಾತಾವರಣದಲ್ಲಿ ತೇವಾಂಶ ಮತ್ತು ಚಳಿಯ ವಾತಾವರಣ ವೇಗದ ಬೌಲರ್‌ಗಳಿಗೆ ಸ್ವಿಂಗ್ ನೀಡುವ ಸಾಧ್ಯತೆಯಿದೆ. ಹೀಗಾಗಿ ಮೊದಲ ಅವಧಿಯಲ್ಲಿ ವೇಗದ ಬೌಲರ್ ಗಳನ್ನು ಎದುರಿಸು ವುದು ಬ್ಯಾಟರ್‌ಗಳಿಗೆ ಸಮಸ್ಯೆ ಯಾಗಬಹುದು. ಆದರೆ ಹೊತ್ತು ಹೋದಂತೆ ಪಿಚ್ ಬ್ಯಾಟರ್ ಗಳಿಗೆ ಅನುಕೂಲ ಆಗುವ ಸಾಧ್ಯತೆಗಳು ಹೆಚ್ಚು ಎಂದು ಹೇಳಲಾಗಿದೆ.

ಸಮಯದಲ್ಲಿ ಬದಲಾವಣೆ: ಈಶಾನ್ಯ ರಾಜ್ಯದಲ್ಲಿ ಸಂಜೆ ಬೇಗ ಕತ್ತಲಾಗುವುದರಿಂದ ಈ ಪಂದ್ಯವನ್ನು ಅರ್ಧ ಗಂಟೆ ಬೇಗ ಪ್ರಾರಂಭಿಸಿ ಬೇಗ ಮುಗಿಸು ವಂತೆ ವೇಳಾಪಟ್ಟಿ ತಯಾರಿಸಲಾಗಿದೆ. ಹೀಗಾಗಿ ಮೊದಲ ಸೆಷನ್ ಬೆಳಿಗ್ಗೆ 9 ರಿಂದ 11 ಗಂಟೆ ತನಕ ನಡೆಯಲಿದೆ. ಬಳಿಕ 11 ರಿಂದ 11:20 ರವರೆಗೆ ಚಹಾ ವಿರಾಮ ಇರುತ್ತದೆ. ಎರಡನೇ ಸೆಷನ್ 11:20ರಿಂದ ಮಧ್ಯಾಹ್ನ 1:20 ರವರೆಗೆ ನಡೆಯಲಿದ್ದು, 1:20 ರಿಂದ 2:00 ರವರೆಗೆ ಊಟದ ವಿರಾಮ ಇರುತ್ತದೆ. ಮೂರನೇ ಸೆಷನ್ ಮಧ್ಯಾಹ್ನ 2 ರಿಂದ 4 ರವರೆಗೆ ನಡೆಯಲಿದೆ.

ದ.ಆಫ್ರಿಕಾ ಸಂಭಾವ್ಯ ಇಲೆವೆನ್

ಏಡನ್ ಮಾರ್ಕ್ರಮ್, ರ್‍ಯಾನ್ ರಿಕೆಲ್ಟನ್, ವಿಯಾನ್ ಮುಲ್ಡರ್, ಟೋನಿ ಡಿ ಜೋರ್ಜಿ, ಟೆಂಬಾ ಬವುಮಾ (ನಾಯಕ), ಡೆವಾಲ್ಡ್ ಬ್ರೆವಿಸ್, ಟ್ರಿಸ್ಟಾನ್ ಸ್ಟಬ್ಸ್, ಕೈಲ್ ವೆರೈನ್ (ವಿಕೆಟ್ ಕೀಪರ್), ಕೇಶವ್ ಮಹಾರಾಜ್, ಸೈಮನ್ ಹಾರ್ಮರ್, ಮಾರ್ಕೊ ಜಾನ್ಸೆನ್.

ಭಾರತ ಸಂಭಾವ್ಯ ಇಲೆವೆನ್

ರಿಷಭ್ ಪಂತ್ (ನಾಯಕ ಮತ್ತು ವಿಕೆಟ್ ಕೀಪರ್), ಯಶಸ್ವಿ ಜೈಸ್ವಾಲ್, ಕೆಎಲ್ ರಾಹುಲ್, ಸಾಯಿ ಸುದರ್ಶನ್, ರವೀಂದ್ರ ಜಡೇಜಾ, ಧ್ರುವ ಜುರೆಲ್, ವಾಷಿಂಗ್ಟನ್ ಸುಂದರ್, ನಿತೀಶ್ ರಾಣಾ, ಕುಲದೀಪ್ ಯಾದವ್, ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್.

ಸ್ಥಳ : ಗುವಾಹಟಿಯ ಬಾರಸಾಪಾರಾ ಕ್ರೀಡಾಂಗಣ
ಸಮಯ : ಬೆಳಗ್ಗೆ 9 ಗಂಟೆ
ನೇರ ಪ್ರಸಾರ : ಸ್ಟಾರ್ ಸ್ಪೋರ್ಟ್ಸ್ ಚಾನಲ್, ಜಿಯೋ ಹಾಟ್ ಸ್ಟಾರ್ ಆ್ಯಪ್

ಸುದರ್ಶನ್ ಇನ್

ಗಿಲ್ ಅವರ ಅನುಪಸ್ಥಿತಿಯಲ್ಲಿ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವನ್ನು ವಿಕೆಟ್ ಕೀಪರ್ -ಬ್ಯಾಟರ್ ರಿಷಭ್ ಪಂತ್ ಮುನ್ನಡೆಸಲಿದ್ದಾರೆ. ಗಾಯಾಳು ನಾಯಕ ಶುಭಮನ್ ಗಿಲ್ ಅವರನ್ನು ಗುವಾಹಟಿ ಯಲ್ಲಿ ನಡೆಯಲಿರುವ ಎರಡನೇ ಟೆಸ್ಟ್ ಪಂದ್ಯದಿಂದ ಹೊರಗಿಡಲಾಗಿದೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವ ಜಿತ್ ಸೈಕಿಯಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮುಂಬರುವ ಏಕದಿನ ಸರಣಿಯಿಂದಲೂ ಗಿಲ್ ಹೊರಗುಳಿಯುವರೇ ಎಂಬ ಪ್ರಶ್ನೆ ಈಗ ಎದುರಾಗಿದೆ. ದ. ಆಫ್ರಿಕಾ ಪರ ಗಾಯಾಳು ಕಗಿಸೋ ರಬಾಡಾ ಬದಲು ಮತ್ತೋರ್ವ ಅನುಭವಿ ವೇಗಿ ಲುಂಗಿ ಎನ್‌ಗಿಡಿಯನ್ನು ಸೇರಿಸಿಕೊಳ್ಳಲಾಗಿದೆ.

ವಿಶ್ವ ಬಾಕ್ಸಿಂಗ್ ಕಪ್ ಭಾರತದ್ದೇ ಪಾರಮ್ಯ

ದೆಹಲಿ: ಜಾಗತಿಕ ಬಾಕ್ಸಿಂಗ್ ವೇದಿಕೆಯಲ್ಲಿ ಭಾರತ ತನ್ನ ಅತ್ಯುತ್ತಮ ಪ್ರದರ್ಶನವನ್ನು ತೋರಿದೆ. ಶಹೀದ್ ವಿಜಯ್ ಸಿಂಗ್ ಪಥಿಕ್ ಕ್ರೀಡಾ ಸಂಕೀರ್ಣದಲ್ಲಿ ನಡೆದ 2025ರ ವಿಶ್ವ ಬಾಕ್ಸಿಂಗ್ ಕಪ್ ಫೈನಲ್ಸ್‌ನ ಐತಿಹಾಸಿಕ ಅಂತಿಮ ದಿನದಂದು, ಭಾರತೀಯ ಕ್ರೀಡಾಪಟುಗಳು ಒಂಬತ್ತು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಒಲಿಂಪಿಕ್ ಕ್ಲಾಸ್ ಎಲೈಟ್ ವಿಭಾಗಗಳಲ್ಲಿ ಪ್ರಾಬಲ್ಯ ಸಾಧಿಸಿದ ಭಾರತದ ಮಹಿಳೆಯರು ಐತಿಹಾಸಿಕ ವಿಜಯಗಳೊಂದಿಗೆ ಮುನ್ನಡೆ ಸಾಧಿಸಿದ್ದಾರೆ. ಪುರುಷರ ವಿಭಾಗದಲ್ಲಿ ಎರಡು ಚಿನ್ನದ ಪದಕಗಳು ಆತಿಥೇಯ ರಾಷ್ಟ್ರಕ್ಕೆ ಮಹತ್ವದ ಸಾಧನೆಯಾಗಿದೆ. ಭಾರತವು ಒಂಬತ್ತು ಚಿನ್ನ, ಆರು ಬೆಳ್ಳಿ ಮತ್ತು ಐದು ಕಂಚಿನ ಪದಕಗಳೊಂದಿಗೆ ಟೂರ್ನಿಯ ಅಭಿಯಾನವನ್ನು ಮುಗಿಸಿದೆ. ಭಾಗವಹಿಸಿದ 20 ಬಾಕ್ಸರ್‌ಗಳಲ್ಲಿ ಪ್ರತಿಯೊಬ್ಬರೂ ಪೋಡಿಯಂ ಏರಿದ್ದಾರೆ.

ಜಾಸ್ಮಿನ್ ಲಂಬೋರಿಯಾ

ಮೀನಾಕ್ಷಿ (48 ಕೆಜಿ), ಪ್ರೀತಿ (54 ಕೆಜಿ), ಅರುಂಧತಿ ಚೌಧರಿ (70 ಕೆಜಿ) ಮತ್ತು ನೂಪುರ್ (80+ ಕೆಜಿ) ನಿಖತ್ ಜರೀನ್ (51 ಕೆಜಿ), ಜಾಸ್ಮಿನ್ ಲಂಬೋರಿಯಾ (57 ಕೆಜಿ) ಮತ್ತು ಪರ್ವೀನ್ (60 ಕೆಜಿ) ಚಿನ್ನ ಗೆದ್ದು ಸಂಭ್ರಮಿಸಿದರು.

ಪುರುಷರಿಗೆ ಎರಡು ಚಿನ್ನ: ಸಚಿನ್ (60 ಕೆಜಿ) ಕಿರ್ಗಿಸ್ತಾನ್‌ನ ಮುನಾರ್ಬೆಕ್ ಉಲು ಸೆಯಿತ್‌ಬೆಕ್ ಅವರನ್ನು 5-0 ಅಂತರದಿಂದ ಸೋಲಿಸಿದರು. ಹಿತೇಶ್ (70 ಕೆಜಿ) ಕಝಕಿಸ್ತಾನ್‌ನ ನೂರ್ಬೆಕ್ ಮುರ್ಸಲ್ ಅವರನ್ನು 3-2 ಅಂತರದಿಂದ ರೋಮಾಂಚಕ ಸ್ಪರ್ಧೆಯಲ್ಲಿ ಸೋಲಿಸಿದರು.

ಇಂಗ್ಲೆಂಡ್‌ಗೆ ಸ್ಟಾರ್ಕ್ ಶಾಕ್, ಆಸ್ಟ್ರೇಲಿಯಾಗೆ ಸ್ಟೋಕ್ಸ್ ಸ್ಟ್ರೋಕ್

ಆ್ಯಶಸ್ ಟೆಸ್ಟ್: ಮೊದಲ ದಿನ 19 ವಿಕೆಟ್ ಪತನ

ಪರ್ತ್: ಇಲ್ಲಿ ನಡೆಯುತ್ತಿರುವ ಆ್ಯಶಸ್ ಟೆಸ್ಟ್ ಸರಣಿ ಮೊದಲ ಪಂದ್ಯದಲ್ಲಿ ಉಭಯ ತಂಡದ ಬೌಲರ್ ಗಳು ಪಾರಮ್ಯ ಸಾಧಿಸಿದ್ದು, ಆಸೀಸ್ ಬೌಲರ್‌ಗಳು ಇಂಗ್ಲೆಂಡ್ ತಂಡವನ್ನು ಕೇವಲ 172ಕ್ಕೆ ಆಲೌಟ್ ಮಾಡಿದ್ದಾರೆ. ಇದಕ್ಕೆ ತಕ್ಕ ತಿರುಗೇಟು ನೀಡಿರುವ ಇಂಗ್ಲೆಂಡ್ ಬೌಲರ್ಸ್ ಮೊದಲ ದಿನದಾಟದ ಅಂತ್ಯದ ವೇಳೆಗೆ 123 ರನ್‌ಗಳಿಗೆ ಆಸ್ಟ್ರೇಲಿಯಾ ತಂಡದ 9 ವಿಕೆಟ್ ಕಿತ್ತು ಮೊದಲ ಇನ್ನಿಂಗ್ಸ್ ಮುನ್ನಡೆಯತ್ತ ಹೆಜ್ಜೆ ಇಟ್ಟಿದ್ದಾರೆ.

ಮಿಚೆಲ್ ಸ್ಟಾರ್ಕ್ ಮಾರಕ ದಾಳಿ: ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ಮೊದಲ ಓವರ್‌ನಲ್ಲೇ ವಿಕೆಟ್ ಕಳೆದುಕೊಂಡಿತು. ಜಾಕ್ ಕ್ರಾಲೆ ಖಾತೆ ತೆರೆಯದೇ ಮಿಚೆಲ್ ಸ್ಟಾರ್ಕ್ ಬೌಲಿಂಗ್ ಔಟ್ ಆಗಿ ನಿರ್ಗಮಿಸಿದರು. ನಂತರ 2ನೇ ವಿಕೆಟ್‌ಗೆ ಒಂದಾದ ಬೆನ್ ಡಕೆಟ್ ಹಾಗೂ ಒಲ್ಲಿ ಪೋಪ್ 33 ರನ್‌ಗಳ ಜೊತೆಯಾಟ ನೀಡಿದರು. ಬೆನ್ ಡಕೆಟ್ ಎಸೆತಗಳಲ್ಲಿ 4 ಬೌಂಡರಿಗಳ ಸಹಿತ 21 ರನ್ ಗಳಿಸಿ ಸ್ಟಾರ್ಕ್‌ಗೆ 2ನೇ ಬಲಿಯಾದರು. ಸ್ಟಾರ್ಕ್ ಮತ್ತೆ ತಮ್ಮ ಮುಂದಿನ ಓವರ್‌ನಲ್ಲಿ ಉತ್ತಮ ಫಾರ್ಮ್‌ನಲ್ಲಿರುವ ಜೋ ರೂಟ್ ಅವರನ್ನು ಶೂನ್ಯಕ್ಕೆ ಔಟ್ ಮಾಡಿ ಸಂಭ್ರಮಿಸಿದರು. ಈ ಮೂಲಕ ಆಸೀಸ್ ನೆಲದಲ್ಲಿ ರೂಟ್ ಅವರ ಶತಕದ ಬರ ಮುಂದುವರಿಯಿತು.

ಆಂಗ್ಲರಿಗೆ ನೆರವಾದ ಬ್ರೂಕ್ ಅರ್ಧಶತಕ: ರೂಟ್ ವಿಕೆಟ್ ನಂತರ ಮೈದಾನಕ್ಕೆ ಬಂದ ಉಪನಾಯಕ ಹ್ಯಾರಿ ಬ್ರೂಕ್ ಹಾಗೂ ಪೋಪ್ 4ನೇ ವಿಕೆಟ್ ಜೊತೆಯಾಟದಲ್ಲಿ 67 ಎಸೆತಗಳಲ್ಲಿ 55 ರನ್ ಸೇರಿಸಿದರು. ಪೋಪ್ 58 ಎಸೆತಗಳಲ್ಲಿ 4 ಬೌಂಡರಿಗಳ ಸಹಿತ 46 ರನ್ ಗಳಿಸಿ ಕ್ಯಾಮರಾನ್ ಗ್ರೀನ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ನಾಯಕ ಬೆನ್ ಸ್ಟೋಕ್ಸ್ ಕೇವಲ 6 ರನ್ ಗಳಿಸಿ ನಿರ್ಗಮಿಸಿರು. ನಂತರ ಬ್ರೂಕ್- ಜೇಮೀ ಸ್ಮಿತ್ ಕೇವಲ 31 ಎಸೆತಗಳಲ್ಲಿ 45 ರನ್ ಸೇರಿಸಿದರು. ವೇಗವಾಗಿ ರನ್ ಗಳಿಸಲು ಹೋಗಿ ಬ್ರೂಕ್ ಕೂಡ ವಿಕೆಟ್ ಒಪ್ಪಿಸಿದರು. 61 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 52 ರನ್ ಗಳಿಸಿ ಇಂಗ್ಲೆಂಡ್ ಉಪನಾಯಕ ಔಟ್ ಆದರು. ಬ್ರೂಕ್ ಔಟ್ ಆಗುವ ವೇಳೆ 160ಕ್ಕೆ 6 ವಿಕೆಟ್ ಕಳೆದುಕೊಂಡಿದ್ದ ಇಂಗ್ಲೆಂಡ್ ಮುಂದಿನ 12 ರನ್ ಗಳಿಸುವಷ್ಟರಲ್ಲಿ ಉಳಿದ 4 ವಿಕೆಟ್‌ಗಳನ್ನ ಕಳೆದುಕೊಂಡಿತು. ಜೇಮೀ ಸ್ಮಿತ್ 22 ಎಸೆತಗಳಲ್ಲಿ 33 ರನ್ ಗಳಿಸಿ ತಂಡದ 3ನೇ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಗಸ್ ಅಟ್ಕಿನ್ಸನ್ (1), ಮಾರ್ಕ್‌ವುಡ್ (0), ಬ್ರೈಡನ್ ಕಾರ್ಸ್(6) ಒಂದಂಕಿ ಮೊತ್ತಕ್ಕೆ ವಿಕೆಟ್ ಒಪ್ಪಿಸಿದರು.

7 ವಿಕೆಟ್ ಪಡೆದ ಸ್ಟಾರ್ಕ್: ಆಸ್ಟ್ರೇಲಿಯಾ ತಂಡದ ಪರ ಮಿಚೆಲ್ ಸ್ಟಾರ್ಕ್ 58 ರನ್ ನೀಡಿ 7 ವಿಕೆಟ್ ಪಡೆದರು. ಬ್ರೆಂಡನ್ ಡಗ್ಗೆಟ್ 27ಕ್ಕೆ 2 ಹಾಗೂ ಕ್ಯಾಮರಾನ್ ಗ್ರೀನ್ 1 ವಿಕೆಟ್ ಪಡೆದರು.

ಬೆನ್ ಸ್ಟೋಕ್ಸ್ ಎದಿರೇಟು: ಇಂಗ್ಲೆಂಡ್ ತಂಡದ 172 ರನ್‌ಗಳಿಗೆ ಉತ್ತರವಾಗಿ ಮೊದಲ ಇನ್ನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾ ಮೊದಲ ಓವರ್‌ನಲ್ಲೇ ಖಾತೆ ತೆರೆಯುವ ಮುನ್ನವೇ ವಿಕೆಟ್ ಕಳೆದುಕೊಂಡಿತು. ಇನ್ನಿಂಗ್ಸ್‌ನ 2ನೇ ಎಸೆತದಲ್ಲೇ ಆರಂಭಿಕ ಜೇಕ್ ವೆದರ್ಲ್ಯಾಂಡ್ ಆರ್ಚರ್ ಬೌಲಿಂಗ್‌ನಲ್ಲಿ ಡಕ್ ಔಟ್ ಆದರು. ಆರಂಭಿಕನಾಗಿ ಬಡ್ತಿ ಪಡೆದಿದ್ದ ಲಾಬುಶೇನ್ ಹಾಗೂ ಸ್ಟೀವ್ ಸ್ಮಿತ್ 28 ರನ್ ಸೇರಿಸಿ ಚೇತರಿಕೆ ನೀಡುವ ಮುನ್ಸೂಚನೆ ನೀಡಿದ್ದರು. ಆದರೆ ಆರ್ಚರ್ 41 ಎಸೆತಗಳಲ್ಲಿ 9 ರನ್ ಗಳಿಸಿದ್ದ ಲಾಬುಶೇನ್‌ರನ್ನು ಬೌಲ್ಡ್ ಮಾಡಿದರು.

ಮಧ್ಯಮ ಕ್ರಮಾಂಕ ದೂಳಿಪಟ: ನಂತರ ದಾಳಿಗೆ ಇಳಿದ ಬ್ರೈಡನ್ ಕಾರ್ಸ್ ತಮ್ಮ ಬ್ಯಾಕ್ ಟು ಬ್ಯಾಕ್ ಓವರ್‌ಗಳಲ್ಲಿ ಆಸೀಸ್ ನಾಯಕ ಸ್ಟೀವ್ ಸ್ಮಿತ್(49 ಎಸೆತಗಳಲ್ಲಿ 17) ಹಾಗೂ ಉಸ್ಮಾನ್ ಖವಾಜ (2) ವಿಕೆಟ್ ಉರುಳಿಸಿ ಅತಿಥೇಯ ತಂಡಕ್ಕೆ ಆಘಾತ ನೀಡಿದರು. ನಂತರ ದಾಳಿಗಿಳಿದ ನಾಯಕ ಬೆನ್ ಸ್ಟೋಕ್ಸ್ ಆಸೀಸ್ ಮಧ್ಯಮ ಕ್ರಮಾಂಕವನ್ನ ದೂಳಿಪಟ ಮಾಡಿದರು. 5ನೇ ವಿಕೆಟ್‌ಗೆ 45 ರನ್‌ಗಳ ಜೊತೆಯಾಟ ನೀಡಿ ಇದಿರೇಟು ನೀಡಿದ ಟ್ರಾವಿಸ್ ಹೆಡ್ (21) ಹಾಗೂ ಕ್ಯಾಮರಾನ್ ಗ್ರೀನ್ (24) ಕೂಡ ಸ್ಟೋಕ್ಸ್ ಗೆ ಬಲಿಯಾದರು. ಅಲೆಕ್ಸ್ ಕ್ಯಾರಿ ಹಾಗೂ ಮಿಚೆಲ್ ಸ್ಟಾರ್ಕ್ 7ನೇ ವಿಕೆಟ್ ಜೊತೆಯಾಟದಲ್ಲಿ 35 ರನ್ ಸೇರಿಸಿ ತಂಡದ ಮೊತ್ತವನ್ನ 100ರ ಗಡಿ ದಾಟಿಸಿದರು. ಆದರೆ ಸ್ಟೋಕ್ಸ್ ಕೇವಲ ಮೂರು ರನ್‌ಗಳ ಅಂತರದಲ್ಲಿ 12 ರನ್ ಗಳಿಸಿದ್ದ ಸ್ಟಾರ್ಕ್, 26 ರನ್ ಸಿಡಿಸಿ ಪಾಯಕಾರಿಯಾಗುತ್ತಿದ್ದ ಅಲೆಕ್ಸ್ ಕ್ಯಾರಿ ಹಾಗೂ ಸ್ಕಾಟ್ ಬೋಲ್ಯಾಂಡ್(0) ಮೂವರ ವಿಕೆಟ್ ಪಡೆದು ತಮ್ಮ 5 ವಿಕೆಟ್‌ಗಳ ಗೊಂಚಲು ಪೂರ್ಣಗೊಳಿಸಿದರು.

ತೀರ್ಥರೂಪದ ಹೊಸ ಹಾಡು

ಅಪ್ಪಟ ಕನ್ನಡದ ಶೀರ್ಷಿಕೆಯಿಂದಲೇ ಗಮನಸೆಳೆಯುತ್ತಿರುವ ತೀರ್ಥರೂಪ ತಂದೆಯವರಿಗೆ ಚಿತ್ರ ಹಾಡುಗಳ ಮೂಲಕವೂ ಸಿನಿಪ್ರಿಯರ ಮನಗೆಲ್ಲುತ್ತಿದೆ. ಈ ಹಿಂದೆ ಹೊಂದಿಸಿ ಬರೆಯಿರಿ ಕಥೆ ಹೇಳಿದ್ದ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಈಗಾಗಲೇ ತೀರ್ಥರೂಪ ತಂದೆಯವರಿಗೆ ಚಿತ್ರದ ನನದೇ ಜಗದಲಿ.. ಎಂಬ ಹಾಡು ಬಿಡುಗಡೆಯಾಗಿ ಪ್ರೇಕ್ಷಕರ ಮೆಚ್ಚುಗೆ ಪಡೆದಿದೆ. ಈಗ ಚಿತ್ರದ ಎರಡನೇ ಹಾಡು ಬಿಡುಗಡೆಯಾಗಿದೆ. ನೀ ನನ್ನವಳೇ.. ಎಂಬ ಮೆಲೋಡಿ ಗೀತೆ ಇದಾ ಗಿದ್ದು, ನಾಗಾರ್ಜುನ್ ಶರ್ಮ ಸಾಹಿತ್ಯದ ಈ ಗೀತೆಗೆ ರಜತ್ ಹೆಗ್ಡೆ, ಈಶಾ ಸುಚಿ ದನಿ ಯಾಗಿದ್ದು, ಜೋ ಕೋಸ್ಟ್ ಸಂಗೀತ ನಿರ್ದೇಶನ ಮಾಡಿದ್ದಾರೆ. ನಾಯಕ ನಿಹಾರ್ ಮುಖೇಶ್ ಹಾಗೂ ನಾಯಕಿ ರಚನಾ ಇಂದರ್ ಹಾಡಿನಲ್ಲಿ ಮಿಂಚಿದ್ದಾರೆ. ಇದು ಅಪ್ಪ ಮಗನ ಬಾಂಧವ್ಯದ ಕಥೆಯನ್ನು ಹೊತ್ತುಬರುತ್ತಿದ್ದು, ಇದರ ಜತೆಗೆ ಮನಸೆಳೆಯುವ ಪ್ರೇಮಕಥೆಯೂ ಸಿನಿಮಾದಲ್ಲಿದೆ. ರಾಜೇಶ್ ನಟರಂಗ, ಬಹುಭಾಷಾ ನಟಿ ಸಿತಾರಾ, ರವೀಂದ್ರ ವಿಜಯ್, ಅಜಿತ್ ಹಂಡೆ, ಅಶ್ವಿತಾ ಹೆಗಡೆ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ರಾಮೇನಹಳ್ಳಿ ಜಗನ್ನಾಥ ಅವರೇ ಕಥೆ ಬರೆದು ನಿರ್ದೇಶನ ಮಾಡಿದ್ದು, ಜೈ ಚಾಮುಂಡೇಶ್ವರಿ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ದೀಪಕ್ ಯರಗೇರಾ ಛಾಯಾಗ್ರಹಣ, ಸುರೇಶ್ ಆರ್ಮುಗಂ ಸಂಕಲನ ಈ ಚಿತ್ರಕ್ಕಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿರುವ ಚಿತ್ರತಂಡ ಶೀಘ್ರದಲ್ಲೇ ಬಿಡುಗಡೆಯ ದಿನಾಂಕ ವನ್ನು ಘೋಷಣೆ ಮಾಡಲಿದೆ.

ತ್ರಿಕೋನ ಪ್ರೇಮ ಕಥೆ

ತ್ರಿಕೋನ ಪ್ರೇಮ ಕಥೆಗಳು ಪ್ರೇಕ್ಷಕರ ಮನಸೂರೆಗೊಳ್ಳುತ್ತವೆ. ಈ ವಾರ ತೆರೆಗೆ ಬಂದ ಫುಲ್ ಮೀಲ್ಸ್ ಕೂಡ ತ್ರಿಕೋನಾ ಪ್ರೇಮ ಕಥೆಯನ್ನು ಹೊತ್ತುಬಂದಿದೆ. ಆತ ಲಕ್ಕಿ, ಹೆಸರು ಲಕ್ಕಿ ಅಂತಿದ್ದರೂ ಜೀವನದಲ್ಲಿ ಆತ ಅನ್ ಲಕ್ಕಿ ಯಾಗಿರುತ್ತಾನೆ. ಬಯಸಿದ್ದು ಸಿಗೋದೇ ಈತನಿಗೆ ಕಷ್ಟ. ಮಾವನ ಮನೆಯಲ್ಲಿಯೇ ಬೆಳೆದ ಈತನಿಗೆ ಮಾವನೇ ಗಾಡ್ ಫಾದರ್. ಹೊಟ್ಟೆ ಪಾಡಿಗಾಗಿ ಫೋಟೋ ಗ್ರಾಫರ್ ವೃತ್ತಿ ಮಾಡುತ್ತಿರುತ್ತಾನೆ. ಅದರಲ್ಲಿ ಬರೋ ಹಣ ಯಾವುದಕ್ಕೂ ಸಾಕೋಗೋದಿಲ್ಲ. ಈ ನಡುವೆ, ಲಕ್ಕಿಯ ಗೆಳತಿ ಮೇಕಪ್ ಆರ್ಟಿಸ್ಟ್ ಆಗಿ ಕೆಲಸ ಮಾಡುತ್ತಿರುತ್ತಾಳೆ. ಹಾಗೋ ಹೀಗೋ ಒಂದು ಮದುವೆಯ ಫೋಟೋ ತೆಗೆಯಲು ಲಕ್ಕಿಗೆ ಅವಕಾಶ ಸಿಗುತ್ತದೆ. ಮೇಕಪ್ ಆರ್ಟಿಸ್ಟ್ ಆಗಿದ್ದ ನಾಯಕಿಗೆ ಲಕ್ಕಿಯ ಮೇಲೆ ಪ್ರೀತಿ ಮೂಡುತ್ತದೆ. ಹೀಗೆ ಪ್ರೀ ವೆಡ್ಡಿಂಗ್ ಫೋಟೋ ಶೂಟ್ ಮಾಡುವಾಗ ಲಕ್ಕಿಯನ್ನು ನೋಡಿದ ಮದುಮಗಳಿಗೂ ಆತನ ಮೇಲೆ ಮನಸಾಗುತ್ತದೆ. ತನ್ನ ಪ್ರೀತಿಯನ್ನು ನಿವೇಧಿಸಿಕೊಳ್ಳುತ್ತಾಳೆ. ಆದರೆ ಲಕ್ಕಿಗೆ ಇದು ಸರಿ ಅಲ್ಲ ಅಂತ ತಿಳಿದು ಪ್ರೀತಿ ಯನ್ನು ನಿರಾಕರಿಸುತ್ತಾನೆ. ಈ ನಡುವೆ ನಡೆ ಯುವ ಒಂದು ಘಟನೆ ಇಬ್ಬರನ್ನು ಒಂದಾಗು ವಂತೆ ಮಾಡುತ್ತದೆ. ಅಷ್ಟಕ್ಕೂ ಆ ಘಟನೆ ಏನು, ಲಕ್ಕಿ ಯಾರನ್ನು ವರಿಸುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.ಇದು ಹಳೆಯ ಕಥೆಯಾದರೂ ಅದರಲ್ಲಿ ಹೊಸನವಿದೆ. ನಿರ್ದೇಶಕ ಎನ್.ವಿನಾಯಕ ಇಂದಿನ ಟ್ರೆಂಡ್‌ಗೆ ಹೊಂದುವಂತೆ ಚಿತ್ರವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಲಿಖಿತ್ ಶೆಟ್ಟಿ, ಖುಷಿ ಮೆಚ್ಚುವ ಅಭಿನಯ ತೋರಿದ್ದಾರೆ. ರಂಗಾಯಣ ರಘು, ರಾಜೇಶ್ ನಟರಂಗ ತಮ್ಮ ಪಾತ್ರದಲ್ಲಿ ಜೀವಿಸಿದ್ದಾರೆ. ಚಿತ್ರದ ಸಂಗೀತ ಮನಮುಟ್ಟುತ್ತದೆ. ರೊಮ್ಯಾಂಟಿಕ್ ಕಾಮಿಡಿ ಕಥೆಯ ಫುಲ್ ಮೀಲ್ಸ್ ಚಿತ್ರವನ್ನು ಎಲ್ಲರೂ ನೋಡಿ ಆನಂದಿಸಬಹುದು.

ಸೋಷಿಯಲ್ ಮೀಡಿಯಾ ಎಚ್ಚರ ತಪ್ಪಿದರೆ ಅನಾಹುತ

ಇಂದು ಸೋಷಿಯಲ್ ಮೀಡಿಯಾದ ಬಳಿಕೆ ಹೆಚ್ಚಾಗಿದೆ. ಇದರಿಂದ ಎಷ್ಟು ಅನುಕೂಲವಿದೆಯೋ ಅದಕ್ಕಿಂತ ಹೆಚ್ಚೇ ಅಪಾಯವೂ ಇದೆ. ಅದು ಹೇಗೆ ಏನು ಎಂಬುದನ್ನು ಮಾರುತ ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡಲಾಗಿದೆ. ಆತ ಈಶ ಮಲೆನಾಡಿನಿಂದ ಮಾಯಾನಗರಿಗೆ ಬಂದ ಹುಡುಗ. ಅವರ ಅಪ್ಪ ಅಮ್ಮನಿಗೆ ತಮ್ಮ ಮಗ ಇಂಜಿನಿಯರ್ ಆಗಬೇಕು ಎಂಬ ಆಸೆ, ಅದಕ್ಕಾಗಿ ಕಷ್ಟಪಟ್ಟು ಮಗನನ್ನು ಓದಿಸುತ್ತಿರುತ್ತಾರೆ. ಆದರೆ ಇಲ್ಲಿ ಈಶ ತನ್ನ ಅಪ್ಪ ಅಮ್ಮನ ಆಸೆಯನ್ನು ಬದಿಗೊತ್ತಿ, ತಾನು ನಿರ್ದೇಶಕನಾಗಬೇಕು ಎಂದು ಆಸೆಯಿಟ್ಟುಕೊಂಡು ಓಡಾಡುತ್ತಿರುತ್ತಾನೆ. ಅದೂ ಈತನಿಗೆ ಕೈಗೂಡುವುದಿಲ್ಲ. ಸೋಷಿಯಲ್ ಮೀಡಿಯಾದಲ್ಲಿ ಬ್ಯುಸಿಯಾಗಿರುವ ನಾಯಕನಿಗೆ ಅನನ್ಯಾ ಪರಿಚಯವಾಗುತ್ತಾಳೆ. ಅಲ್ಲಿಂದ ಆತನ ಬದುಕೇ ಬದಲಾಗುತ್ತದೆ. ಈ ನಡುವೆಯೇ ನಗರದಲ್ಲಿ ಒಂದಷ್ಟು ಹುಡುಗಿಯರು ಕಾಣೆಯಾಗುತ್ತಿರುತ್ತಾರೆ. ಅವರು ಹೀಗೆ ಏಕಾ ಏಕಿ ಕಾಣೆಯಾಗುತ್ತಿರುವುದು ಯಾಕೆ, ಹೆಚ್ಚಾಗಿ ಸೋಷಿಯಲ್ ಮೀಡಿಯಾ ಬಳಸುವವರೇ ಯಾಕೆ ನಾಪತ್ತೆಯಾಗುತ್ತಿರುತ್ತಾರೆ ಎಂಬುದೇ ನಿಗೂಢವಾಗಿರುತ್ತದೆ. ಅದನ್ನು ಭೇದಿಸಲು ಪೊಲೀಸ್ ಅಧಿಕಾರಿಯೊಬ್ಬರು ಬರುತ್ತಾರೆ. ಅಷ್ಟಕ್ಕೂ ಹುಡುಗಿಯರು ಕಾಣೆಯಾಗುತ್ತಿರುವುದು ಯಾಕೆ, ಹುಡುಗಿಯರ ನಾಪತ್ತೆಗೂ ಸೋಷಿಯಲ್ ಮೀಡಿಯಾಗೂ ಏನು ಸಂಬಂಧ. ಈಶ ಮತ್ತು ಅನನ್ಯಾ ಪಾಡೇನು ಇದೆಲ್ಲವನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಇದು ಹಳೆಯ ಕಥೆಯಾದರೂ ಇತ್ತೀಚಿನ ಸೋಷಿಯಲ್ ಮೀಡಿಯಾ ಬಳಕೆದಾರರಿಗೆ ಒಂದು ಎಚ್ಚರಿಕೆಯ ಸಂದೇಶವೂ ಇದೆ. ಅದನ್ನು ನಿರ್ದೇಶಕ ಎಸ್. ನಾರಾಯಣ್ ಪ್ರಸ್ತುತ ಕಾಲಘಟ್ಟಕ್ಕೆ ಹೊಂದುವಂತೆ ಕಟ್ಟಿಕೊಟ್ಟಿದ್ದರೆ. ದುನಿಯಾ ವಿಜಯ್ ಪೊಲೀಸ್ ಅಧಿಕಾರಿಯಾಗಿ ಮಾರುತದಂತೆ ಅಬ್ಬರಿಸಿದ್ದಾರೆ. ಶ್ರೇಯಸ್ ಮಂಜು ಹುಡುಗಾಟದ ಹುಡುಗನಾಗಿ ಗಮನಸೆಳೆಯುತ್ತಾರೆ. ಬೃಂದಾ ಪಾತ್ರಕ್ಕೆ ಅಷ್ಟಾಗಿ ಒತ್ತಿಲ್ಲದಿದ್ದರೂ ತಮಗೆ ನೀಡಿದ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಸಾಧುಕೋಕಿಲ ಚಿತ್ರದಲ್ಲಿದ್ದರೂ ಅಷ್ಟಾಗಿ ಕಾಮಿಡಿ ಕಚಗುಳಿ ಇಡುವುದಿಲ್ಲ. ಶರತ್ ಲೋಹಿತಾಶ್ವ, ತಾರಾ ತಮ್ಮ ಪಾತ್ರಗಳಿಗೆ ಜಿವತುಂಬಿದ್ದಾರೆ. ಚಿತ್ರದ ಹಾಡು ಹಾಗೂ ಸಂಗೀತಕ್ಕೆ ಇನ್ನೂ ಒಂದಷ್ಟು ಒತ್ತು ನೀಡಬೇಕು ಅನ್ನಿಸುತ್ತದೆ. ಒಟ್ಟಾರೆ ಸಾಮಾಜಿಕ ಸಂದೇಶ ಸಾರುವ ಮಾರುತವನ್ನು ಮನೆಮಂದಿಯೆಲ್ಲಾ ಕುಳಿತು ನೋಡಬಹುದು.

ಚಿತ್ರ: ಮಾರುತ
ಚಿತ್ರ : ನಿರ್ದೇಶನ : ಎಸ್.ನಾರಾಯಣ್
ನಿರ್ಮಾಣ :ಕೆ.ಮಂಜು, ರಮೇಶ್ ಯಾದವ್
ತಾರಾಗಣ : ದುನಿಯಾ ವಿಜಯ್, ಶ್ರೇಯಸ್ ಮಂಜು, ಬೃಂದಾ, ತಾರಾ, ಸಾಧುಕೋಕಿಲ, ಮುಂತಾದವರು
ರೇಟಿಂಗ್ : ★★★

ಒಂದು ದಿನ ಮೊದಲೇ ಡೆವಿಲ್ ದರ್ಶನ

ದರ್ಶನ್ ನಟನೆಯ ದಿ ಡೆವಿಲ್ ಎಲ್ಲಾ ಅಂದುಕೊಂಡಂತೆ ಆಗಿದ್ದರೆ ಡಿಸೆಂಬರ್ 12 ರಂದು ವಿಶ್ವಾದ್ಯಂತ ತೆರೆಕಾಣಬೇಕಿತ್ತು. ಆದರೆ ಚಿತ್ರತಂಡ ಇದೀಗ ಬಿಡುಗಡೆ ದಿನಾಂಕವನ್ನು ಕೊಂಚ ಬದಲಿಸಿದೆ. ದರ್ಶನ್ ಅಭಿಮಾನಿಗಳ ಒತ್ತಡಕ್ಕೆ ಮಣಿದು ಚಿತ್ರತಂಡ ಈ ನಿರ್ಧಾರಕ್ಕೆ ಬಂದಿದೆ. ಹಾಗಂತ ಡೆವಿಲ್ ಬಿಡುಗಡೆಯ ದಿನಾಂಕ ಮುಂದಕ್ಕೆ ಹೋಗಿಲ್ಲ, ಬದಲಾಗಿ ಒಂದು ದಿನ ಮೊದಲೇ ರಿಲೀಸ್ ಆಗಲಿದೆ. ಡಿಸೆಂಬರ್ 11 ರಂದು ವಿಶ್ವಾದ್ಯಂತ ಡೆವಿಲ್ ದರ್ಶನವಾಗಲಿದೆ. ಡೆವಿಲ್ ಚಿತ್ರತಂಡದ ಜತೆ ದರ್ಶನ್ ಪರವಾಗಿ ಅವರ ಪತ್ನಿ ವಿಜಯಲಕ್ಷ್ಮಿ ಹಾಜರಿದ್ದು, ಅಭಿಮಾನಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ. ಜತೆಗೆ ಈ ಸಿನಿಮಾ ಪ್ರಚಾರದ ಜವಾಬ್ದಾರಿಯನ್ನು ವಿಜಯಲಕ್ಷ್ಮಿ ಹೊತ್ತುಕೊಂಡಿದ್ದಾರೆ. ಡೆವಿಲ್ ಆ್ಯಕ್ಷನ್ ಥ್ರಿಲ್ಲರ್ ಸಿನಿಮಾವಾಗಿದ್ದು, ದರ್ಶನ್ ಈ ಚಿತ್ರದಲ್ಲಿ ವಿಭಿನ್ನ ಗೆಟಪ್‌ನಲ್ಲಿ ಕಂಗೊಳಿಸಿದ್ದಾರೆ. ರಚನಾ ರೈ ನಾಯಕಿಯಾಗಿ ಬಣ್ಣಹಚ್ಚಿದ್ದು, ಉಳಿದಂತೆ ತುಳಸಿ, ಅಚ್ಯುತ್ ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸ ಪ್ರಭು, ಶೋಭರಾಜ್ ಈ ಚಿತ್ರದ ತಾರಾಗಣದಲ್ಲಿದ್ದಾರೆ. ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದು, ಶ್ರೀಜೈ ಮಾತಾ ಕಂಬೈನ್ಸ್ ಲಾಂಛನದಲ್ಲಿ ಜೆ.ಜಯಮ್ಮ ಹಾಗೂ ಸರೇಗಮ ಜಂಟಿಯಾಗಿ ಚಿತ್ರ ನಿರ್ಮಿಸಿದ್ದಾರೆ.

ಇಬ್ಬರ ನಡುವೆ ಮುದ್ದಿನ ಆಟ

ಒಬ್ಬ ಹುಡುಗ ಒಬ್ಬಳನ್ನೇ ಪ್ರೀತಿಸದರೆ ಆತನ ಜೀವನ ಸುಖಮಯ, ಅದೇ ಹುಡುಗ ಇಬ್ಬರನ್ನು ಪ್ರೀತಿಸದರೆ ಆತನ ಸಂದಿ ಗ್ಧತೆ ಹೇಳತೀರದು. ಇದೇ ಕಥೆ ಕಂಗ್ರಾಜು ಲೇಷನ್ಸ್ ಬ್ರದರ್ ಚಿತ್ರದಲ್ಲಿ ಬೆರೆತಿದೆ. ನಾಯಕ ತುಂಟಾಟದ ಹುಡುಗ, ಹುಡುಗಿಯರನ್ನು ಸೆಳೆಯುವ ನೋಟ ಆತನದು. ಹೀಗೆ ಒಬ್ಬರಲ್ಲ ಇಬ್ಬರನ್ನು ಪ್ರೀತಿಸುತ್ತಾನೆ. ಆದರೆ ಈ ಪ್ರೀತಿಯ ವಿಚಾರವನ್ನು ಬಲು ಗುಪ್ತವಾಗಿ ಇಟ್ಟಿರುತ್ತಾನೆ. ಇಬ್ಬರು ನಾಯಕಿಯರು ಒಟ್ಟಿಗೆ ಸಿಕ್ಕಾಗಲಂತೂ ನಾಯಕನ ಪರಿಸ್ಥಿತಿ ಹೇಳತೀರದು. ಹೀಗೆ ಪ್ರೀತಿ ಮಾಡಿ ಇಕ್ಕಟ್ಟಿಗೆ ಸಿಲುಕುವ ನಾಯಕ ಯಾರನ್ನು ವರಿಸುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯ ಬೇಕು. ಲವ್ ಸ್ಟೋರಿಯ ಜತೆಗೆ ಕಾಮಿಡಿಯೂ ಬೆರೆತ ಈ ಚಿತ್ರವನ್ನು ಅಳೆದು ತೂಗಿ ಕಟ್ಟಿಕೊಟ್ಟಿ ದ್ದಾರೆ ನಿರ್ದೇಶಕ ಪ್ರತಾಪ್ ಗಂಧರ್ವ. ಲವ್ ಸ್ಟೋರಿಯ ಜತೆಗೆ ಕಾಮಿಡಿಯೂ ಇಲ್ಲಿ ಬೆರೆತ್ತಿದ್ದು, ಪ್ರೇಕ್ಷಕರನ್ನು ನಗಿಸುತ್ತಾ ಸಾಗುತ್ತದೆ. ಒಮ್ಮೊಮ್ಮೆ ಪ್ರೇಕ್ಷಕರು ಸಿನಿಮಾದ ಜತೆಯೇ ಸಾಗುತ್ತಾರೆ. ಅಲ್ಲಲ್ಲಿ ಕಥೆ ಹಾದಿ ತಪ್ಪುತ್ತದೆ ಎಂದೆನಿಸುವಾಗ ನಿರ್ದೇಶಕರು ಅದನ್ನು ಹಳಿಗೆ ತಂದು ಮೆಚ್ಚುವಂತೆ ಕಟ್ಟಿಕೊಡ ವಲ್ಲಿ ಯಶಸ್ವಿಯಾಗಿದ್ದಾರೆ. ಇಬ್ಬರ ನಡುವೆ ಒದ್ದಾಡುವ ನಾಯಕನಾಗಿ ರಕ್ಷಿತ್ ನಾಗ್ ನಟಿಸಿದ್ದು, ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ. ಸಂಜನಾ ದಾಸ್ ಹಾಗೂ ಅನುಷಾ ಚಿತ್ರದುದ್ದಕ್ಕೂ ಮುದ್ದಾಗಿ ಕಂಗೊಳಿಸಿದ್ದಾರೆ. ಈಗಿನ ಯುವ ಸಮೂಹಕ್ಕೆ ಹೇಳಿ ಮಾಡಿಸಿದ ಕಥೆ ಇದಾಗಿದ್ದು ಎಲ್ಲರೂ ಕುಳಿತು ನೋಡ ಬಹುದಾಗಿದೆ.

ಚಿತ್ರ: ಕಂಗ್ರಾಜುಲೇಷನ್ಸ್ ಬ್ರದರ್
ನಿರ್ದೇಶನ: ಪ್ರತಾಪ್ ಗಂಧರ್ವ
ನಿರ್ಮಾಣ: ಪ್ರಶಾಂತ್ ಕಲ್ಲೂರು
ತಾರಾಗಣ: ರಕ್ಷಿತ್ ನಾಗ್, ಸಂಜನಾ ದಾಸ್, ಅನುಷಾ ಶಶಿಕುಮಾರ್, ಚೇತನ್ ದುರ್ಗ ಮುಂತಾದವರು.
ರೇಟಿಂಗ್ಸ್: ★★★